ಮಾನವಿಕ ಕರ್ಣಾಟಕ

ಸಂಪುಟ ೯ ಸಂಚಿಕೆ ೨

ಮೈಸೂರು

ಮೈಸೂರು ವಿಶ್ವವಿದ್ಯಾನಿಲಯ

೧೯೭೯

ಲೇಖಕರಿಗೆ ಸೂಚನೆಗಳು

೧ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಸ್ವತಂತ್ರ ಅಥವಾ ಅನುವಾದಿತ ಲೇಖನಗಳನ್ನು 'ಮಾನವಿಕ ಕರ್ಣಾಟಕ'ದಲ್ಲಿ ಪ್ರಕಟಿಸಲಾಗುವುದು. ಲೇಖನ ಅನುವಾದವಾಗಿದ್ದರೆ ಮೂಲ ಲೇಖಕರ ಮತ್ತು ಲೇಖನದ ಹೆಸರುಗಳನ್ನೂ ಲೇಖನದ ಆಕರವನ್ನೂ ಸೂಚಿಸಬೇಕಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಸಮ್ಮತಿಯನ್ನೂ ಲೇಖನದೊಂದಿಗೆ ಕಳುಹಿಸಬೇಕು.

೨ ಲೇಖನವನ್ನು ಕಾಗದದ ಒಂದೇ ಬದಿಯಲ್ಲಿ ಸ್ಪಷ್ಟವಾಗಿ ಬರೆದಿರಬೇಕು; ಅಥವಾ ಟೈಪು ಮಾಡಿರಬೇಕು. ಲೇಖಕರು ತಮ್ಮ ಲೇಖನದೊಂದಿಗೆ ತಮ್ಮ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಿಕೊಡಬೇಕು.

೩ ಲೇಖನಕ್ಕೆ ಆವಶ್ಯಕವಾದ ಚಿತ್ರಗಳಿದ್ದರೆ ಅವನ್ನು ಚಿತ್ರಕಾರರಿಂದ ಇಂಡಿಯನ್ ಇಂಕಿನಲ್ಲಿ ಬರೆಸಿ ಕಳುಹಿಸಿಕೊಡಬೇಕು. ಇದು ಸಾಧ್ಯವಾಗದಿದ್ದರೆ ಯಾವುದಾದರೂ ಪ್ರಕಟಿತ ಪುಸ್ತಕದಲ್ಲಿರುವ ಚಿತ್ರಗಳನ್ನು ಸೂಚಿಸಬಹುದು; ಅವುಗಳಲ್ಲಿ ಬದಲಾವಣೆಗಳೇನಾದರೂ ಅವಶ್ಯವಿದ್ದರೆ ಅವನ್ನೂ ಸೂಚಿಸಬೇಕು.

೪ ಸ್ವೀಕೃತವಾಗದ ಲೇಖನವನ್ನು ಹಿಂದಕ್ಕೆ ಪಡೆಯಬಯಸುವವರು ಈ ಬಗ್ಗೆ ತಿಳಿಸಬೇಕಲ್ಲದೆ ಇದಕ್ಕೆ ಸಾಕಷ್ಟು ಅಂಚೆ ಚೀಟಿ ಕಳುಹಿಸಿಕೊಡಬೇಕು.

೫ ಅಚ್ಚಾದ ಲೇಖನದ ೨೫ ಪ್ರತಿಗಳನ್ನು ಅದರ ಲೇಖಕರಿಗೆ ಒದಗಿಸಲಾಗುವುದು. ಹೆಚ್ಚು ಪ್ರತಿಗಳು ಬೇಕಾಗಿದ್ದರೆ ಮೊದಲೇ ತಿಳಿಸಬೇಕು. ಅದಕ್ಕೆ ತಗಲುವ ವೆಚ್ಚವನ್ನು ಲೇಖಕರೇ ವಹಿಸಿಕೊಳ್ಳಬೇಕು.

೬ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಿಗೆ ಸಂಬಂಧಿಸಿದಂತೆ ವಾಚಕರಿಂದ ಬರುವ ವಿಚಾರಪ್ರಚೋದಕವಾದ ಪತ್ರಗಳಿಗೆ ಸ್ವಾಗತವುಂಟು. ಇವುಗಳನ್ನು ಪ್ರಕಟಿಸುವ, ಬಿಡುವ ಅಥವಾ ಸೂಕ್ತ ಬದಲಾವಣೆಯೊಂದಿಗೆ ಪ್ರಕಟಿಸುವ ಸ್ವಾತಂತ್ರ್ಯ ಸಂಪಾದಕರಿಗೆ ಸೇರಿದೆ.

೭ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಕನ್ನಡ ಅಥವಾ ಇಂಗ್ಲಿಷ್ ಪುಸ್ತಕಗಳನ್ನು ವಿಮರ್ಶೆಗಾಗಿ ಕಳುಹಿಸಬಯಸುವವರು ಅವುಗಳ ಎರಡೆರಡು ಪ್ರತಿ ಕಳುಹಿಸಿಕೊಡಬೇಕು.

೮ ಲೇಖನಗಳನ್ನೂ ವಿಮರ್ಶೆಗಾಗಿ ಪುಸ್ತಕಗಳನ್ನೂ ಕಳುಹಿಸುವವರು ಸಂಪಾದಕರು, ಮಾನವಿಕ ಕರ್ಣಾಟಕ, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು–೫೭೦೦೦೬ ಎಂಬ ವಿಳಾಸಕ್ಕೆ ಕಳುಹಿಸಬೇಕು.

ಮಾನವಿಕ ಕರ್ಣಾಟಕ

ಸಂಪುಟ ೯ ಸಂಚಿಕೆ ೨

೩೪

ಫೆಬ್ರುವರಿ ಸಂಚಿಕೆ

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೭೯

MANAVIKA KARNATAKA, Kannada Quarterly (Humanities) of the University of Mysore, Volume 9, Number 2, February 1979. Edited by Dr. B. R. Gopal and Dr. B. S. Srikantaradhya.

ಪ್ರಧಾನ ಸಂಪಾದಕರು

ಡಾ. ಹಾ. ಮಾ. ನಾಯಕ

ಸಂಪಾದಕರು

ಡಾ. ಬಾ. ರಾ. ಗೋಪಾಲ್

ಡಾ. ಬಿ. ಎಸ್. ಶ್ರೀಕಂಠಾರಾಧ್ಯ

ಪ್ರಕಾಶಕರು : ಡೈರೆಕ್ಟರ್, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ-570 012

ಮುದ್ರಕರು : ಹರ್ಷ ಪ್ರಿಂಟರ್ಸ್, ವಿದ್ಯಾರಣ್ಯಪುರಂ, ಮೈಸೂರು-570 008

ವಿಷಯ ಸೂಚಿ

ಈ ಸಂಚಿಕೆಯ ಲೇಖಕರು

೧. ವಿ. ಎನ್. ಶೇಷಗಿರಿರಾವ್ — ಅಧ್ಯಾಪಕರು, ತತ್ತ್ವಶಾಸ್ತ್ರ ವಿಭಾಗ, ಮಾನಸ ಗಂಗೋತ್ರಿ, ಮೈಸೂರು–೫೭೦ ೦೦೬

೨. ವಿ. ಎನ್. ಭಟ್ಟ — ಸಂಶೋಧಕರು, ಕನ್ನಡ ವಿಭಾಗ, ಮಧುರೈ ವಿಶ್ವವಿದ್ಯಾನಿಲಯ, ಮಧುರೆ

೩. ಕೆ. ಎಸ್. ಸದಾಶಿವಯ್ಯ — ಅಧ್ಯಾಪಕರು, ಶಿಕ್ಷಣ ವಿಭಾಗ, ಮಾನಸ ಗಂಗೋತ್ರಿ, ಮೈಸೂರು–೫೭೦ ೦೦೬

೪. ಕಂಠೀರಾವ್ — ಭಾಷಾಂತರ ನಿರ್ದೇಶಕರು, ನಂ. ೩೪/೨, ೨ನೇ ಮಹಡಿ, ಹರಿರಾಮ್ ಕಾಂಪ್ಲೆಕ್ಸ್, ಕೆಂಪೇಗೌಡ ರಸ್ತೆ, ಬೆಂಗಳೂರು–೫೬೦ ೦೦೯

೫. ಜಿ. ಎನ್. ಕುರ್ಡಿ — ಅಡ್ವೊಕೇಟ್, ನಂ. ೬೭/B, ಸರಸ್ವತೀಪುರಂ ಹೊಸ ಬಡಾವಣೆ, ಮೈಸೂರು–೫೭೦ ೦೦೯

೬. ಕೃಷ್ಣವೇಣಿ — ಶಾಸನ ಸಹಾಯಕರು, ಎಪಿಗ್ರಾಫಿಯ ಕರ್ನಾಟಿಕ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು–೫೭೦ ೦೦೬

೭. ಕೆ. ವಿ. ನಾಗರಾಜ್ — ಅಧ್ಯಾಪಕರು, ಪತ್ರಿಕೋದ್ಯಮ ವಿಭಾಗ, ಮಾನಸಗಂಗೋತ್ರಿ, ಮೈಸೂರು–೫೭೦ ೦೦೬

೮. ಕೆ. ಮೊಹಮ್ಮದ್ ಶರೀಫ್ — ಶಾಸನ ಸಹಾಯಕರು, ಎಪಿಗ್ರಾಫಿಯ ಕರ್ನಾಟಿಕ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು–೫೭೦ ೦೦೬

೯. ಎಚ್. ಎಸ್. ಸುಜಾತಾ — ಸಂಶೋಧನಾ ವಿದ್ಯಾರ್ಥಿನಿ, ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು–೫೭೦ ೦೦೬

ವಿ. ಎನ್. ಶೇಷಗಿರಿರಾವ್

ಆಧುನಿಕ ಭಾರತೀಯ ತಾತ್ತ್ವಿಕ ಚಿಂತನೆ

(ಒಂದು ಸ್ಥೂಲ ವಿವೇಚನೆ)

೧

ಆಧುನಿಕ ಭಾರತೀಯ ತಾತ್ತ್ವಿಕ ಚಿಂತನೆಯ ಸ್ವರೂಪ, ರಚನೆ, ಅದು ನಡೆದು ಬಂದ ಜಾಡು, ಅದರ ಮಹತ್ತ್ವ—ಇವುಗಳನ್ನು ಗುರುತಿಸುವುದು ಈ ಲೇಖನದ ಉದ್ದೇಶ. ಪುರಾತನ ಭಾರತ ತತ್ತ್ವಶಾಸ್ತ್ರದ ಗಣಿ ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ; ಆಧುನಿಕ ಭಾರತೀಯ ಚಿಂತನೆಯಿಂದ ಅದು ಹೇಗೆ ಭಿನ್ನವಾಗಿದೆ ಎಂಬುದನ್ನೂ ಇಲ್ಲಿ ಸ್ಪಷ್ಟಪಡಿಸಲಾಗಿದೆ.

ಆಧುನಿಕ ಭಾರತೀಯ ತಾತ್ತ್ವಿಕ ಚಿಂತನೆ ಸರಿಯಾಗಿ ಪ್ರಾರಂಭವಾಗುವುದು ಹದಿನೆಂಟ ನೆಯ ಶತಮಾನದ ಉತ್ತರಾರ್ಧದಲ್ಲಿ. ಇದರ ಪ್ರಮುಖ ಚಿಂತಕರು ರಾಜಾರಾಮಮೋಹನ ರಾಯ್, ದೇವೇಂದ್ರನಾಥ ಟಾಗೋರ್, ಕೇಶವಚಂದ್ರಸೇನ್, ದಯಾನಂದ ಸರಸ್ವತಿ, ರಾಮಕೃಷ್ಣ ಪರಮಹಂಸ, ರಾನಡೆ, ತಿಲಕ್, ಅನ್ನಿಬೆಸೆಂಟ್, ಸ್ವಾಮಿ ವಿವೇಕಾನಂದ, ಮಹಾತ್ಮ ಗಾಂಧಿ, ರವೀಂದ್ರನಾಥ ಟಾಗೂರ್, ಅರಬಿಂದೊ, ಕೃಷ್ಣಚಂದ್ರಭಟ್ಟಾಚಾರ್ಯ, ರಾಧಾಕೃಷ್ಣನ್, ಇಕ್ಬಾಲ್, ಆನಂದಕುಮಾರಸ್ವಾಮಿ ಇತ್ಯಾದಿ. ತಾತ್ತ್ವಿಕ ಚಿಂತನೆ ಆಧುನಿಕ ಕಾಲದಲ್ಲಿ ತನ್ನ ಅಳವನ್ನು ಕಂಡುಕೊಂಡಿದೆ ಎಂಬುದೂ ಇಲ್ಲಿ ಗಮನಿಸಬೇಕಾದ ಅಂಶ.

ಈಗ ಆಧುನಿಕ ಭಾರತೀಯ ಚಿಂತನೆಯ ಬೆಳವಣಿಗೆಯನ್ನು ಸ್ಪಷ್ಟವಾಗಿ ಗ್ರಹಿಸಲು ಅದಕ್ಕೆ ಹಿನ್ನಲೆಯಾಗಿದ್ದ ಪುರಾತನ ಭಾರತೀಯ ತತ್ತ್ವಶಾಸ್ತ್ರದ ಸಿಂಹಾವಲೋಕನ ಮಾಡು ವುದು ಅತ್ಯಾವಶ್ಯಕ. ಪುರಾತನ ಭಾರತೀಯ ತಾತ್ತ್ವಿಕ ಚಿಂತನೆಯ ಪಕ್ಷಿನೋಟವನ್ನು ಸರಿ ಸುಮಾರಾಗಿ ಹೀಗೆ ಕಾಣಿಸಬಹುದು :[1] ೧. ವೇದಗಳ ಕಾಲದ ತಾತ್ತ್ವಿಕ ಚಿಂತನೆ (ಸುಮಾರು ಕ್ರಿ.ಪೂ ೨೦೦೦ – ಕ್ರಿ ಪೂ ೫೦೦) ೨. ಸೂತ್ರಗಳ ಕಾಲದ ತಾತ್ತ್ವಿಕ ಚಿಂತನೆ (ಸುಮಾರು ಕ್ರಿ.ಪೂ ೫೦೦–ಕ್ರಿ.ಪೂ ೨೦೦) ೩. ಮಹಾಕಾವ್ಯಗಳ ಕಾಲದ ತಾತ್ತ್ವಿಕ ಚಿಂತನೆ (ಸುಮಾರು ಕ್ರಿ.ಪೂ. ೨೦೦– ಕ್ರಿ.ಶ. ೩೦೦) ೪. ಷಡ್ದರ್ಶನಗಳ ಮತ್ತು ಪುರಾಣಗಳ ಕಾಲದ ತಾತ್ತ್ವಿಕ ಚಿಂತನೆ (ಸುಮಾರು ಕ್ರಿ.ಶ. ೩೦೦–ಕ್ರಿ.ಶ. ೭೫೦) ೫. ಅನಂತರದ ದರ್ಶನ ಕಾಲ (ಸುಮಾರು ಕ್ರಿ.ಶ. ೭೫೦–ಕ್ರಿ.ಶ. ೧೦೦೦) ೬. ಮಧ್ಯಕಾಲದ ಹಿಂದೂ ತಾತ್ತ್ವಿಕ ಚಿಂತನೆ (ಸುಮಾರು ಕ್ರಿ.ಶ. ೧೦೦೦–ಕ್ರಿ.ಶ. ೧೪೦೦) (ಅ) (ದಕ್ಷಿಣ ಭಾರತದ ಭಕ್ತಿಪಂಥಗಳು) (ಆ) (ಉತ್ತರ ಭಾರತದ ಭಕ್ತಿಪಂಥಗಳು) (ಸುಮಾರು ಕ್ರಿ.ಶ. ೧೪೦೦–ಕ್ರಿ.ಶ. ೧೮೦೦) ೭. ಆಧುನಿಕ ಕಾಲದ ತಾತ್ತ್ವಿಕ ಚಿಂತನೆ (ಸುಮಾರು ಕ್ರಿ.ಶ. ೧೮೦೦–ಕ್ರಿ.ಶ. ೧೯೫೦)

ಪ್ರಕೃತಿ ಪೂಜೆಯಿಂದ ಆರಂಭವಾದ ವೇದಗಳ ಕಾಲದ ತಾತ್ತ್ವಿಕ ಚಿಂತನೆ, 'ಅನೇಕ

ದೇವತಾವಾದ', 'ದೇವಾಧಿದೇವವಾದ' 'ಏಕದೇವವಾದ' ಮುಂತಾದ ಹಂತಗಳನ್ನು ಹಾಯ್ದು ಕೊನೆಗೆ, 'ಆ ಒಂದು' (ತದೇಕಂ) ತತ್ತ್ವದ ಅನ್ವೇಷಣೆಯನ್ನು ಮಾಡಿ 'ಏಕವಾದ'ದಲ್ಲಿ (Monism) ಸಾರ್ಥಕ್ಯವನ್ನು ಪಡೆಯಿತು.

ಅನಂತರ ಸೂತ್ರಗಳ ಕಾಲ ಪ್ರಾರಂಭವಾಗುತ್ತದೆ. ಅಗಾಧ ತಾತ್ತ್ವಿಕ ಚಿಂತನೆಯನ್ನು ಸೂಕ್ಷ್ಮವೂ ಅಸಂದಿಗ್ಧವೂ ಆದ ಸೂತ್ರಗಳಲ್ಲಿ ಸೆರೆಹಿಡಿಯುವ ಪ್ರಯತ್ನವನ್ನು ಈ ಕಾಲದಲ್ಲಿ ಮಾಡಲಾಯಿತು. ಕಲ್ಪಸೂತ್ರಗಳು ಈ ಕಾಲದ ಬಹು ಮುಖ್ಯ ತಾತ್ತ್ವಿಕ ಬರಹಗಳು. ಕಲ್ಪಸೂತ್ರಗಳಲ್ಲಿ ಮೂರು ಭಾಗಗಳುಂಟು : (೧) ಶ್ರೌತ ಸೂತ್ರಗಳು (೨) ಗೃಹ್ಯಸೂತ್ರಗಳು ಮತ್ತು (೩) ಧರ್ಮಸೂತ್ರಗಳು. ಶ್ರುತಿಗಳ ಕೈಪಿಡಿಯೇ ಶ್ರೌತ ಸೂತ್ರಗಳು, ಗೃಹ್ಯ ಸೂತ್ರಗಳು, ಗಾರ್ಹಸ್ಥ್ಯ ಮತ್ತು ಧಾರ್ಮಿಕ ಸಂಸ್ಕಾರ ಆಚರಣೆಗಳ ಬಗ್ಗೆ ಚರ್ಚಿಸುತ್ತವೆ; ಧರ್ಮಸೂತ್ರಗಳು ನೈತಿಕ ಆಚರಣೆಗಳು, ಅವುಗಳ ಸಮಸ್ಯೆ ಪರಿಹಾರಗಳ ಬಗ್ಗೆ ಆಳವಾಗಿ ಅಧ್ಯಯನ ಮಾಡುತ್ತವೆ. ಒಟ್ಟಿನಲ್ಲಿ ಇವು ವೇದಗಳ ಕಾಲದ ಬ್ರಾಹ್ಮಣ ಭಾಗಗಳ 'ಕರ್ಮ ಪದ್ಧತಿ'ಯನ್ನೇ (ritualism) ಪುನರುಚ್ಚರಿಸುತ್ತವೆ. ಇದೇ ಕಾಲದ ಇನ್ನೊಂದು ಬಹುಮುಖ್ಯ ಧಾರ್ಮಿಕ ಸಾಹಿತ್ಯವೆಂದರೆ ಪುರಾತನ ಬೌದ್ಧ ಮತ್ತು ಜೈನ ದರ್ಶನಗಳಿಗೆ ಸಂಬಂಧಿಸಿದ್ದು.

ಅನಂತರ ಬಂದ ಮಹಾಕಾವ್ಯಗಳಾದ ರಾಮಾಯಣ, ಮಹಾಭಾರತಗಳು, ಕ್ಲಿಷ್ಟ ತಾತ್ತ್ವಿಕ ಸತ್ಯಗಳನ್ನು ಸಾಹಿತ್ಯ ಮಾಧ್ಯಮದ ಮೂಲಕ ಜನಪ್ರಿಯಗೊಳಿಸಲು ಮಗ್ನವಾದವು. ಇಲ್ಲಿ ಬಹುಮುಖ್ಯ ಸ್ಥಾನವನ್ನು ಆಕ್ರಮಿಸಿರುವ ಭಗವದ್ಗೀತೆಯನ್ನು ತಪ್ಪದೇ ಹೇಳಬೇಕು. ವೇದೋಪನಿಷತ್ತುಗಳ ಸಾರಸರ್ವಸ್ವವನ್ನು ತನ್ನಲ್ಲೆ ಹಿಂಡಿ ಹಿಡಿದಿರುವ ಭಗವದ್ಗೀತೆ ಈ ಕಾಲದ ಅತ್ಯಂತ ಪ್ರಭಾವಯುತವಾದ ಮಹದ್ಗ್ರಂಥ. ಮನುಸ್ಮೃತಿ, ಯಾಜ್ಞವಲ್ಕ್ಯ ಸ್ಮೃತಿ ಮುಂತಾದ ಧರ್ಮಶಾಸ್ತ್ರಗಳೂ ಮಹಾಯಾನ ಬೌದ್ಧಶಾಸ್ತ್ರವೂ ಈ ಕಾಲದಲ್ಲಿ ಕಂಡುಬರುತ್ತವೆ.

ಅನಂತರ (ಸುಮಾರು ಕ್ರಿ.ಶ. ೩೦೦ ರಿಂದ ಕ್ರಿ.ಶ. ೭೫೦ರವರೆಗೆ) ಪುರಾಣಗಳು ಮತ್ತು ಹಿಂದೂ ಷಡ್ದರ್ಶನಗಳು ತಲೆಯೆತ್ತುತ್ತವೆ. ಅತಿ ಗಹನವಾದ ತಾತ್ತ್ವಿಕ ತತ್ತ್ವಗಳನ್ನು ಕಥೆ, ಉಪಕಥೆ, ದಂತಕಥೆ ಮುಂತಾದವುಗಳ ಮನಮೋಹಕ ಶೈಲಿಯಲ್ಲಿ, ಅತಿ ಸರಳ ರೀತಿಯಲ್ಲಿ ಜನಮನದಲ್ಲಿ ನಾಟುವಂತೆ ಮಾಡುವಲ್ಲಿ ಪುರಾಣಗಳು ಯಶಸ್ವಿಯಾಗಿವೆ. ಈ ಕಾಲದಲ್ಲಿಯೇ ಹಿಂದೂ ಷಡ್ದರ್ಶನಗಳೆಂದು ಕರೆಯಿಸಿಕೊಳ್ಳುವ, ನ್ಯಾಯ-ವೈಶೇಷಿಕ, ಸಾಂಖ್ಯಯೋಗ, ಪೂರ್ವಮೀಮಾಂಸ ಮತ್ತು ಉತ್ತರ ಮೀಮಾಂಸ (ವೇದಾಂತ)ಗಳು ಪ್ರಾರಂಭವಾದವು. ಗೌತಮರ 'ನ್ಯಾಯ ಸೂತ್ರಗಳು', ಕಣಾದರ 'ವೈಶೇಷಿಕ ಸೂತ್ರಗಳು', ಪತಂಜಲಿ ಋಷಿಗಳ 'ಯೋಗ ಸೂತ್ರಗಳು' ಜೈಮಿನಿ ಋಷಿಗಳ 'ಪೂರ್ವ ಮೀಮಾಂಸ ಸೂತ್ರಗಳು' ಕಡೆಯವಾಗಿ ಬಾದರಾಯಣರ 'ಬ್ರಹ್ಮಸೂತ್ರಗಳು' (ವೇದಾಂತ ಸೂತ್ರಗಳು) ಈ ಕಾಲದಲ್ಲಿ ಬರೆಯಲ್ಪಟ್ಟವು.

ಅನಂತರ (ಸುಮಾರು ಕ್ರಿ.ಶ. ೭೫೦ ರಿಂದ ಕ್ರಿ.ಶ. ೧೦೦೦ ರವರೆಗೆ) ವೇದಾಂತ ದರ್ಶನದ ವಿವಿಧ ಶಾಖೆಗಳ ವ್ಯವಸ್ಥಾಬದ್ಧ ವಿವರಣೆ ಮೊದಲುಗೊಂಡಿತು. ವ್ಯವಸ್ಥಾಬದ್ಧವಾಗಿ ಅದ್ವೈತ ದರ್ಶನ ಬೆಳೆದು ಪ್ರಬುದ್ಧಮಾನಕ್ಕೆ ಬಂದಿತು.

ಅನಂತರ ವಿಶಿಷ್ಟಾದ್ವೈತ, ದ್ವೈತಾದ್ವೈತ, ದ್ವೈತ, ಶುದ್ಧ ಅದ್ವೈತ ದರ್ಶನಗಳು ಅನುಕ್ರಮವಾಗಿ ರಾಮಾನುಜಾಚಾರ್ಯ, ನಿಂಬಾರ್ಕ, ಮಧ್ವಾಚಾರ್ಯ ಮತ್ತು ವಲ್ಲಭಾಚಾರ್ಯರಿಂದ ಕ್ರಮಬದ್ಧವಾಗಿ ನಿರೂಪಿಸಲ್ಪಟ್ಟವು. ಹದಿನಾಲ್ಕನೇ ಶತಮಾನದಲ್ಲಿ ದಕ್ಷಿಣ ಭಾರತದಲ್ಲಿ ಭಕ್ತಿ ಪಂಥಗಳು ಜನ್ಮತಾಳಿ ಭಕ್ತಿರಸವನ್ನು ಎಲ್ಲೆಡೆ ಹರಡಿದವು. ಇವುಗಳಲ್ಲಿ ಮುಖ್ಯವಾದವು

ಕರ್ನಾಟಕದ 'ಹರಿದಾಸ ಭಕ್ತಿಪಂಥ', 'ಶಿವಶರಣ ಭಕ್ತಿ ಪಂಥ' ಇತ್ಯಾದಿ. ಇದೇ ಕಾಲದಲ್ಲಿ
ಉತ್ತರಭಾರತದಲ್ಲಿ 'ರಮಾನಂದ ಭಕ್ತಿ ಪಂಥ'ವೂ ಅಸ್ತಿತ್ವವನ್ನು ಪಡೆದಿತ್ತು. ಹದಿನೈದು ಮತ್ತು
ಹದಿನಾರನೆಯ ಶತಮಾನಗಳಲ್ಲಿ ಉತ್ತರ ಭಾರತದಲ್ಲಿ ಚೈತನ್ಯ ಭಕ್ತಿಪಂಥ (ಬಂಗಾಳ) ಮೀರಾ
ದೇವಿ, ಚಂಡಿದಾಸ, ನರಸಿಂಗ್ ಮೆಹತ, ವಿದ್ಯಾಪತಿ, ಮುಂತಾದವರುಗಳ ಕಬೀರ್, ನಾನಕ್–
ಭಕ್ತಿಪಂಥಗಳು ತಲೆಎತ್ತಿ ಹದಿನೆಂಟನೆಯ ಶತಮಾನದವರೆಗೂ ಮುಂದುವರಿದವು. ದೈವಭಕ್ತಿ
ಮಾನವ ಪ್ರೇಮವಾಗಿ ರೂಪುಗೊಳ್ಳಬೇಕೆಂದೂ, ತನ್ಮೂಲಕ ಮಾನವೋದ್ಧಾರವಾಗಬೇಕೆಂದೂ
ಈ ಭಕ್ತಿಪಂಥಗಳು ಬೋಧಿಸಿದವು. ಇದು ಆಧುನಿಕ ಭಾರತೀಯ ಚಿಂತನೆಯ ಹಿನ್ನಲೆ.

೨

ಆಧುನಿಕ ಭಾರತೀಯ ತಾತ್ತ್ವಿಕ ಚಿಂತನೆಯ ಬೆಳವಣಿಗೆಯನ್ನು ವಿಶ್ಲೇಷಿಸುವುದಕ್ಕೆ
ಮುನ್ನ ಅದರ ಬಗ್ಗೆ ಕೆಲವು ಪಾಶ್ಚಾತ್ಯರ ನಿಲುವು ಏನೆಂಬುದನ್ನು ಸ್ಪಷ್ಟ ಪಡಿಸಬೇಕು. ಆಧುನಿಕ
ಭಾರತೀಯ ಚಿಂತನೆ ಎಂಬುದೊಂದು ಇದೆಯೇ ಎಂದು ಕೆಲವು ಪಾಶ್ಚಾತ್ಯ ವಿಮರ್ಶಕರು ಹುಬ್ಬು
ಗಂಟಿಕ್ಕುತ್ತಾರೆ; ಅದರ ಬಗ್ಗೆ ಒಂದು ಬಗೆಯ ಉದಾಸೀನತೆಯನ್ನು, ಅಸಡ್ಡೆಯನ್ನು ತೋರಿಸು
ತ್ತಾರೆ. ಅವರ ಅಭಿಪ್ರಾಯದಲ್ಲಿ, ಆಧುನಿಕ ಭಾರತೀಯ ಚಿಂತನೆ 'ತಾತ್ತ್ವಿಕ'ವಲ್ಲ. ಯಾವುದೇ
ಚಿಂತನೆ, 'ತಾತ್ತ್ವಿಕ ಚಿಂತನೆ' ಎಂದು ಕರೆಯಿಸಿಕೊಳ್ಳಬೇಕಾದರೆ, ಅದು ವ್ಯವಸ್ಥಾಬದ್ಧವಾಗಿರ
ಬೇಕು; ತಾರ್ಕಿಕವಾಗಿ ಸಂಗತವಾಗಿರಬೇಕು; ಪುರಾತನ ಭಾರತೀಯ ದರ್ಶನಗಳು, ಅದರಲ್ಲೂ
ಷಡ್ದರ್ಶನಗಳು, ನಿಜವಾಗಿಯೂ 'ತಾತ್ತ್ವಿಕ'ವಾದವು; ಈ ದರ್ಶನಗಳಲ್ಲಿ 'ತಾತ್ತ್ವಿಕ' ಎಂಬ
ಪದವನ್ನು ಸರಿಯಾದ ಅರ್ಥದಲ್ಲಿ ಉಪಯೋಗಿಸಲಾಗಿದೆ; ಆದರೆ ಇಂತಹ ದರ್ಶನಗಳ ರಚನೆ
ಹನ್ನೊಂದನೇ ಶತಮಾನಕ್ಕೇ ಕೊನೆಗೊಂಡಿತು; ಅದು ಬೇರೆ ಮಾತು. ಆಧುನಿಕ ಭಾರತೀಯ
ತಾತ್ತ್ವಿಕ ಚಿಂತಕರೆನಿಸಿಕೊಂಡಿರುವ ಗಾಂಧೀಜಿ, ಶ್ರೀರಾಮಕೃಷ್ಣ ಮುಂತಾದವರ ಚಿಂತನೆ
ವ್ಯವಸ್ಥಾಬದ್ಧವಾಗಿಲ್ಲ; ಅವರು 'ಬಿಡಿಯಾದ' (loose) ಮತ್ತು 'ಅನಿರ್ದಿಷ್ಟ' (vague)
ಭಾವನೆಗಳನ್ನು ಕೊಡುವಲ್ಲಿ ಮಾತ್ರ ಯಶಸ್ವಿಯಾಗಿದ್ದಾರೆ. ತಾರ್ಕಿಕ ವಿಶ್ಲೇಷಣೆ, ಈ ದರ್ಶನ
ಗಳಲ್ಲಿ ತೀರ ವಿರಳವಾಗುತ್ತದೆ; ಪರಸ್ಪರ ಸಂಬಂಧವುಳ್ಳ ತತ್ತ್ವಗಳ 'ಕ್ರಮಬದ್ಧ ಶಿಲ್ಪಿ'ಗಳಂತೂ
(system builders) ಅವರು ಅಲ್ಲವೇ ಅಲ್ಲ; ಆದುದರಿಂದ ಅವರು ತತ್ತ್ವಜ್ಞಾನಿಗಳೆನಿಸಿ
ಕೊಳ್ಳಲು ಅರ್ಹರಲ್ಲ; ಇನ್ನೂ ಮುಂದುವರಿದು ಹೇಳುವುದಾದರೆ, ಗಾಂಧೀಜಿಯವರನ್ನು ಒಬ್ಬ
ದೊಡ್ಡ ಸಮಾಜ ಸುಧಾರಕರೆಂದೂ, ರಾಜಕೀಯ ಮುಂದಾಳೆಂದೂ ರಾಮಕೃಷ್ಣ ವಿವೇಕಾನಂದ
ರನ್ನು ಧಾರ್ಮಿಕ ಮಹಾಪುರುಷರೆಂದೂ ರವೀಂದ್ರರನ್ನು ಮಹಾ ಕವಿಶ್ರೇಷ್ಠರೆಂದೂ ಕರೆಯ
ಬಹುದು, ಅಷ್ಟೇ; ಅವರೆಂದೂ ಪಾಶ್ಚಾತ್ಯ ಅರ್ಥದಲ್ಲಿ 'ತಾತ್ತ್ವಿಕ'ರಲ್ಲ ಇದು ಕೆಲವು ಪಾಶ್ಚಾತ್ಯ
ವಿಮರ್ಶಕರ ಸ್ಪಷ್ಟ ಅಭಿಪ್ರಾಯ.[2]

ಆಧುನಿಕ ಭಾರತೀಯ ಚಿಂತಕರು ಪಾಶ್ಚಾತ್ಯರು 'ತತ್ತ್ವಶಾಸ್ತ್ರ' ಎಂಬ ಪದವನ್ನು
ಮೇಲೆ ಹೇಳಿದ ಅರ್ಥದಲ್ಲಿ ಉಪಯೋಗಿಸುವುದನ್ನು ಆಕ್ಷೇಪಿಸುತ್ತಾರೆ. ಪಾಶ್ಚಾತ್ಯರು 'ತತ್ತ್ವ
ಶಾಸ್ತ್ರ' ಪದಕ್ಕೆ ಕೊಟ್ಟಿರುವ ಅರ್ಥ ಬಹಳ 'ಬಿಗಿಯಾದುದು' (strict) ಮತ್ತು ಮಿತವಾದದ್ದೆಂದು
(limited) ಭಾರತೀಯ ಚಿಂತಕರ ಅಭಿಪ್ರಾಯ; ತತ್ತ್ವಶಾಸ್ತ್ರ ಕೇವಲ 'ತಾರ್ಕಿಕವಿಶ್ಲೇ
ಷಣೆಯಷ್ಟೇ ಅಲ್ಲ; ಅದು 'ಪ್ರಕ್ರಮ ಪದ್ಧತಿ'ಯೂ (system building) ಅಲ್ಲ; ಜೀವನ
ತರ್ಕದ ಬಗೆಗೆ ಸಿಕ್ಕಿದಷ್ಟು ನಿಗೂಢವೂ ವಿಶಾಲವೂ ಅಹುದು; ಜೀವನಾನುಭವಗಳನ್ನು ತರ್ಕ
ವಿಶ್ಲೇಷಿಸಬೇಕೆಂಬುದು ಸರಿ; ಆದರೆ ತರ್ಕದ ಹಿಡಿತಕ್ಕೆ, ಪರಿಮಿತಿಗೆ ಸಿಗದ ಜೀವನದ ನಾನಾ

ಅಂಗಗಳುಂಟು ; ಈ ಎಲ್ಲಾ ಅಂಗಗಳನ್ನು ತತ್ತ್ವಶಾಸ್ತ್ರ ಒಳಗೊಳ್ಳಬೇಕು. ಹೀಗೆ ಜೀವನದ ಎಲ್ಲಾ ಅಂಗಗಳಿಗೂ ಸ್ಥಾನ ಒದಗಿಸಬೇಕಾಗಿ ಬಂದಾಗ ಕೆಲವು ತಾರ್ಕಿಕ ವಿರೋಧಗಳುಂಟಾಗುತ್ತವೆ ; ವ್ಯವಸ್ಥಾಬದ್ಧತೆಯಲ್ಲೂ ಲೋಪದೋಷಗಳುಂಟಾಗುತ್ತವೆ ; ಆದರೂ ಅದನ್ನು ತತ್ತ್ವವೆಂದೇ ಕರೆಯಬೇಕು. ಒಬ್ಬನ ತತ್ತ್ವಜ್ಞಾನ ಸರಿಯೋ ತಪ್ಪೋ ಎಂದು ಕೇಳುವುದಕ್ಕೆ ಬದಲು ಆತನು ನಮ್ಮನ್ನು ಎಂತಹ ದಿವ್ಯಾನಂದದಲ್ಲಿ ಮುಳುಗಿಸುತ್ತಾನೆ, ಎಂತಹ ಎತ್ತರಕ್ಕೆ ಕೊಂಡೊಯ್ಯುತ್ತಾನೆ, ಎಂತಹ ಹರ್ಷದಾಯಕ ತಿಳುವಳಿಕೆಯನ್ನು (joy of understanding) ನೀಡುತ್ತಾನೆ ಎಂದು ಕೇಳುವುದು ಸಮಂಜಸ. ಆತನು ಎಷ್ಟರ ಮಟ್ಟಿಗೆ ಜ್ಞಾನವನ್ನು (wisdom) ಆರಾಧಿಸುತ್ತಾನೆ, ಎಷ್ಟರಮಟ್ಟಿಗೆ ಸರಳತೆ, ಸ್ವಾತಂತ್ರ್ಯ, ಉದಾರತೆ (magnanimity) ಮತ್ತು ನಂಬಿಕೆಯನ್ನು ತನ್ನ ಜೀವನಕ್ಕೆ ಅನ್ವಯಿಸಿಕೊಳ್ಳುತ್ತಾನೆ ಎಂಬುದು ಬಹು ಮುಖ್ಯ ; ಕೇವಲ ವ್ಯವಸ್ಥಾಬದ್ಧತೆ ಮತ್ತು ತಾರ್ಕಿಕ ಸಾಂಗತ್ಯಗಳಷ್ಟೇ ಅಲ್ಲ, ಎಂದು ಆಧುನಿಕ ಭಾರತೀಯ ಚಿಂತಕರೂ ಆ ಚಿಂತನೆಯಿಂದ ಪ್ರಭಾವಿತಗೊಂಡ ಪ್ರಸಿದ್ಧ ಪಾಶ್ಚಾತ್ಯ ವಿದ್ವಾಂಸನಾದ ಥೋರಿಯೋ ಅಭಿಪ್ರಾಯ ಪಡುತ್ತಾರೆ.

ಇದೇ ಅಭಿಪ್ರಾಯವನ್ನು ತಾತ್ತ್ವಿಕ ಬರಹಗಾರನಾದ ವಿಲ್‌ಡುರೆಂಟ್ ಅತ್ಯಂತ ಪ್ರಬಲವಾಗಿ ತನ್ನ Story of Philosophy ಯಲ್ಲಿ ಪ್ರತಿಪಾದಿಸುತ್ತಾನೆ. 'ವಿಚಾರವಾದಿಗಳ ಅಧಿಪತಿ' ಎನಿಸಿದ್ದ ಪ್ಲೇಟೋ ತಾತ್ತ್ವಿಕ ಚಿಂತನೆಯನ್ನು 'ಆದಿವ್ಯ ಅನಾವ' (That dear delight) ಎಂದೂ, ಪೈಥಾಗೊರಸ್ 'ಗಾನಾತ್ಮಕ' (Highest Music) ಎಂದೂ ಪರಿಗಣಿಸಿದ್ದರೆಂಬುದನ್ನು ಇಲ್ಲಿ ನೆನೆದುಕೊಳ್ಳುವುದು ಬಹಳ ಸಮಂಜಸವೆನಿಸುತ್ತದೆ. 'ತತ್ತ್ವಶಾಸ್ತ್ರ' ಎಂಬ ಪದವನ್ನು ಅದರ ಕೇವಲ ಬಾಹ್ಯಾರ್ಥದಲ್ಲಿ (ಅಂದರೆ 'ತಾರ್ಕಿಕ ವಿಶ್ಲೇಷಣೆ' ಮತ್ತು 'ವಸ್ತು ವಿಷಯ ವಿಂಗಡನೆ') ತೆಗೆದುಕೊಳ್ಳಲಾಗದು ; ಅದರ ವಿಶಾಲಾರ್ಥದಲ್ಲಿ (ಅಂದರೆ ಕ್ರಿಯಾತ್ಮಕ–dynamic –ಜೀವನದ ಅಂತರಾರ್ಥಗಳನ್ನೂ ಒಳಗೊಳ್ಳುವಂತೆ) ಉಪಯೋಗಿಸಬೇಕು ; ಆಗ ಆಧುನಿಕ ಭಾರತೀಯ ಚಿಂತನೆ 'ತಾತ್ತ್ವಿಕ'ವೆಂಬುದರಲ್ಲಿ ಎರಡು ಅಭಿಪ್ರಾಯಗಳಿಲ್ಲ ಎಂದು ಆಧುನಿಕ ಭಾರತೀಯ ಚಿಂತಕರು ಪಾಶ್ಚಾತ್ಯ ವಿಮರ್ಶಕರಿಗೆ ಉತ್ತರ ಹೇಳುತ್ತಾರೆ.

ಆಧುನಿಕ ಭಾರತೀಯ ತಾತ್ತ್ವಿಕ ಚಿಂತನೆಯ ಬಗ್ಗೆ ಪಾಶ್ಚಾತ್ಯರ ಇನ್ನೊಂದು ತಪ್ಪುಗ್ರಹಿಕೆ ಎಂದರೆ ಇದು. ಹನ್ನೊಂದನೇ ಶತಮಾನದಲ್ಲಿ ವಿಶಿಷ್ಟಾದ್ವೈತದರ್ಶನ ರೂಪುಗೊಂಡ ಮೇಲೆ ಭಾರತೀಯ ಚಿಂತನೆ ನಿಂತುಹೋಯಿತು ; ಅದು ಪುನಃ ಪ್ರಾರಂಭವಾದುದು, ಪುನಶ್ಚೇತನಗೊಂಡುದು, ಹದಿನೆಂಟನೆಯ ಶತಮಾನದ ಉತ್ತರಾರ್ಧದಲ್ಲಿ ; ಹನ್ನೊಂದು ಮತ್ತು ಹತ್ತೊಂಬತ್ತನೆಯ ಶತಮಾನಗಳ ನಡುವಿನ ಅಂತರದಲ್ಲಿ. ಅಂದರೆ ಸುಮಾರು 800 ವರ್ಷಗಳತನಕ ಭಾರತೀಯ ಚಿಂತನೆ ಯಾವ ಬೆಳವಣಿಗೆಯನ್ನು ಹೊಂದದೆ ನಿಂತಲ್ಲಿಯೇ ನಿಂತಿತ್ತು.

ಇದು ಸಾಧುವಾದ ಅಭಿಪ್ರಾಯವಲ್ಲ. ಮೇಲೆ ಹೇಳಿದ ಅವಧಿಯಲ್ಲಿ ದಕ್ಷಿಣ ಮತ್ತು ಉತ್ತರ ಭಾರತದಲ್ಲಿ ಭಕ್ತಿಪಂಥಗಳು ಜನ್ಮತಾಳಿ ಆಯಾಯಾ ಪ್ರಾಂತ್ಯಗಳ ಮಾತೃಭಾಷೆಗಳಲ್ಲಿ ಭಕ್ತಿ ಸಾಹಿತ್ಯವನ್ನು ರಚಿಸಿ, ಶುಷ್ಕ ತರ್ಕ ಪಾಂಡಿತ್ಯಕ್ಕೆ ಬೆನ್ನು ತಿರುಗಿಸಿ, ದೈವೀ ಭಕ್ತಿಯ ಮೇಲೆ ತಮ್ಮ ಗಮನವನ್ನೆಲ್ಲಾ ಕೇಂದ್ರೀಕರಿಸಿ ಜಾತಿ, ಲಿಂಗ, ಮತಭೇದಗಳಿಲ್ಲದೆ ಭಕ್ತಿಸುಧಾರಸವನ್ನು ಜನಸಾಮಾನ್ಯರೆಲ್ಲರಿಗೂ ಉಣಬಡಿಸಿದವು. ಈ ಕಾಲದಲ್ಲಿ ಈ ಭಕ್ತಿ ಪಂಥಗಳು ವಹಿಸಿದ ಪಾತ್ರ ಭಾರತೀಯ ಇತಿಹಾಸದಲ್ಲಿ ಇಂದಿಗೂ ಚಿರಸ್ಮರಣೀಯ. ವಸ್ತುಸ್ಥಿತಿ ಹೀಗಿರುವಾಗ 11ನೇ ಮತ್ತು 19ನೇ ಶತಮಾನಗಳ ನಡುವಿನ ಕಾಲ, 'ಭಾರತೀಯ ಚಿಂತನೆಯ ಕರಾಳ ಕಾಲ' ಎಂಬ ಕೆಲವು ಪಾಶ್ಚಾತ್ಯರ ಅಭಿಪ್ರಾಯವನ್ನು 'ತಪ್ಪುಗ್ರಹಿಕೆ' ಎಂದು ಬೇರೆ ಹೇಳಬೇಕಾಗಿಲ್ಲ.[3]

ಅಷ್ಟೇ ಅಲ್ಲ. ವಿಶಿಷ್ಟಾದ್ವೈತದರ್ಶನ ರೂಪುಗೊಂಡಮೇಲೆ ಭಾರತಕ್ಕೆ 12ನೇ ಶತಮಾನದಲ್ಲಿ ಕಾಲಿರಿಸಿದ ಇಸ್ಲಾಂಧರ್ಮಕ್ಕೂ ಹಿಂದೂಧರ್ಮಕ್ಕೂ ಒಂದು ರೀತಿಯ ತಿಕ್ಕಾಟ ಮತ್ತು ಘರ್ಷಣೆಗಳು ಉಂಟಾದುವೆಂದೂ ಆಧುನಿಕ ಭಾರತೀಯ ತಾತ್ತ್ವಿಕ ಚಿಂತನೆಗೆ ಇಸ್ಲಾಂಧರ್ಮದ ಕೊಡುಗೆ ಶೂನ್ಯವೆಂದೂ ಕೆಲವು ಪಾಶ್ಚಾತ್ಯ ವಿಮರ್ಶಕರು ಅಭಿಪ್ರಾಯ ಪಡುತ್ತಾರೆ. ಈ ಅಭಿಪ್ರಾಯವೂ ದೋಷಪೂರಿತವಾದುದು ಆಧುನಿಕ ಭಾರತೀಯ ಚಿಂತನೆಯನ್ನು ರೂಪಿಸುವಲ್ಲಿ ಇಸ್ಲಾಂ ಧರ್ಮದ ಪಾಲು ಕಡಿಮೆಯೇನಲ್ಲ. ವಿಶ್ವಭ್ರಾತೃತ್ವ, ಸಮಾನತೆ, ಏಕತೆ, ದಯೆ ಮುಂತಾದ ಸದ್ಗುಣಗಳ ಬಗ್ಗೆ ಒತ್ತಿ ಹೇಳುವ ಇಸ್ಲಾಂಧರ್ಮದ ಪ್ರಭಾವತೆಕ್ಕೆಯಿಂದ ಆಧುನಿಕ ಚಿಂತಕರಾದ ರಾಜಾರಾಮಮೋಹನರಾಯ್, ಕೇಶವಚಂದ್ರಸೇನ ಮುಂತಾದವರು ಬಿಡಿಸಿಕೊಳ್ಳಲು ಅಸಮರ್ಥರಾಗಿದ್ದರು. 14ನೇ ಶತಮಾನದ ಪ್ರಾರಂಭದಿಂದಲೇ ಧರ್ಮದಲ್ಲಿ ನವಜಾಗೃತಿಯನ್ನುಂಟುಮಾಡಿದ, ಹಿಂದೂಧರ್ಮದ ಭಕ್ತಿಪಂಥಗಳ ಜೊತೆಜೊತೆಯಲ್ಲಿಯೇ, ಇಸ್ಲಾಂ ಧರ್ಮದ 'ಸೂಫಿ' ಭಕ್ತಿಪಂಥವೂ ಆಧುನಿಕ ಭಾರತೀಯ ಚಿಂತನೆಗೆ ಹೊಸ ತಿರುವನ್ನೇ ಕೊಟ್ಟಿತು. ಹೀಗೆ ಹಿಂದೂ ಧರ್ಮವನ್ನು ಸಂಧಿಸಿದ ಇಸ್ಲಾಂಧರ್ಮ, ತನ್ನಲ್ಲಿ ಅಭಾವವಿದ್ದ ಒಳ್ಳೆಯ ಅಂಶಗಳನ್ನು ಹಿಂದೂಧರ್ಮದಿಂದಲೂ, ಅದಕ್ಕೆ ಪ್ರತಿಯಾಗಿ ಹಿಂದೂಧರ್ಮ ತನ್ನಲ್ಲಿ ಅಭಾವವಿದ್ದ ಒಳ್ಳೆಯ ಅಂಶಗಳನ್ನು ಇಸ್ಲಾಂಧರ್ಮದಿಂದಲೂ ಪಡೆದವು. ಹೀಗೆ ಈ ಎರಡು ಧರ್ಮಗಳು ತಮ್ಮ ತಮ್ಮ ಲೋಪದೋಷಗಳನ್ನು ನಿವಾರಿಸಿಕೊಳ್ಳಲಾರಂಭಿಸಿದವು. ಮೊಗಲ್ ಚಕ್ರವರ್ತಿಯಾದ ಅಕ್ಬರನ ಕಾಲದಲ್ಲಿ ಪ್ರತಿಷ್ಠಾಪನೆಗೊಂಡ 'ದೀನ್-ಇ-ಇಲಾಹಿ' ಬೇರೆ ಬೇರೆ ಧರ್ಮಗಳನ್ನು ಸಮನ್ವಯ ದೃಷ್ಟಿಯಿಂದ (synthetic) ನೋಡಲುಪಕ್ರಮಿಸಿ 'ವಿಶ್ವಧರ್ಮ'ವನ್ನು ಸ್ಥಾಪಿಸುವುದರಲ್ಲಿ ಯಶಸ್ವಿಯಾಯಿತು. ಆಧುನಿಕ ಭಾರತೀಯ ಚಿಂತನೆಯನ್ನು ರೂಪಿಸುವಲ್ಲಿ ಇಸ್ಲಾಂಧರ್ಮದ ಪ್ರಭಾವ ಶೂನ್ಯವೆಂದಾಗಲಿ ಅವುಗಳ ನಡುವಿನ ಸಾಮರಸ್ಯಕ್ಕಿಂತ ಘರ್ಷಣೆಯೇ ಹೆಚ್ಚಾಗಿತ್ತೆಂದಾಗಲೀ ಅಭಿಪ್ರಾಯಪಡುವುದು ವಸ್ತುಸಂಗತಿಗೆ ವಿರೋಧವಾದುದೆಂದು ಇಲ್ಲಿ ಗೋಚರಿಸದೆ ಇರದು.

೩

ಆಧುನಿಕ ಭಾರತೀಯ ಚಿಂತನೆಯ ಕಾಲ ಪುನರುಜ್ಜೀವನದ ಕಾಲ. ಅದು ಪುರಾತನ ಪರಿಕಲ್ಪನೆಗಳು (concepts), ಮೌಲ್ಯಗಳು ಇವುಗಳ ವಿಕಾಸ ಮತ್ತು ಸಮನ್ವಯವನ್ನು (synthesis) ಪ್ರತಿನಿಧಿಸುತ್ತದೆ. ಅದು ಪುರಾತನ ಹಿಂದೂ ಚಿಂತನೆಯ ಕೇವಲ ಪುನರುಜ್ಜೀವನವಷ್ಟೇ ಅಲ್ಲ; ಅದು ನೂರಾರು ಚಿಂತನೆಗಳ ಸಮ್ಮಿಲನದ ಸಂಕೀರ್ಣ ಕಾಲ; ಆಧುನಿಕ ಭಾರತೀಯ ಚಿಂತಕರು ಆಧುನಿಕ ಪಾಶ್ಚಾತ್ಯ ತತ್ತ್ವಶಾಸ್ತ್ರದಲ್ಲಿ ಪ್ರವೀಣರಷ್ಟೇ ಅಲ್ಲ; ಅದರ ಮೂಲಕ ಪುರಾತನ ಭಾರತೀಯ ಚಿಂತನೆಯನ್ನು ಬಿಂಬಿಸಲು ಶ್ರಮಿಸಿದ್ದಾರೆ. ಶ್ರೀ ರಾಮಕೃಷ್ಣರನ್ನುಳಿದು ಉಳಿದೆಲ್ಲ ಭಾರತೀಯ ಆಧುನಿಕ ಚಿಂತಕರು ಆಧುನಿಕ ಪಾಶ್ಚಾತ್ಯ ತತ್ತ್ವಶಾಸ್ತ್ರವನ್ನು ಕರತಲಾಮಲಕ ಮಾಡಿಕೊಂಡಿದ್ದರು. ಉದಾಹರಣೆಗೆ, ಸ್ವಾಮಿ ವಿವೇಕಾನಂದರು ಸ್ಪೆನ್ಸರ್, ಕಾಂಟ್, ಹೆಗಲ್, ಫ್ರಾನ್ಸಿನ ಮಹಾಕ್ರಾಂತಿಯ ಚಿಂತಕರು—ಇವರ ಬಗ್ಗೆ ಅಧಿಕಾರಯುತವಾಗಿ ಮಾತನಾಡಬಲ್ಲವರಾಗಿದ್ದರು. ತಮ್ಮ ವಿಶೇಷ ಕ್ಷೇತ್ರ ಭಾರತೀಯ ತತ್ತ್ವಶಾಸ್ತ್ರವಾದರೂ, ಪಾಶ್ಚಾತ್ಯ ತತ್ತ್ವಶಾಸ್ತ್ರದಮೇಲೆ—ಅದು ಇತ್ತೀಚಿನ ದಿನಗಳಲ್ಲಿ ತೆಗೆದುಕೊಂಡ ನಿಲುವನ್ನು ಒಳಗೊಂಡಂತೆ—ಡಾ|| ರಾಧಾಕೃಷ್ಣನ್ ಅವರಿಗಿದ್ದ ಪ್ರಭುತ್ವ ವರ್ಣಿಸಲಸದಳ.

ಆಧುನಿಕ ಭಾರತೀಯ ಚಿಂತನೆ ಮತ್ತು ಪುರಾತನ ಭಾರತೀಯ ಚಿಂತನೆಗಳ ನಡುವೆ ಅನೇಕ ವ್ಯತ್ಯಾಸಗಳಿವೆ. ಆತ್ಯಂತಿಕ ತತ್ತ್ವಗಳು ಆಗಲೇ ವೇದೋಪನಿಷತ್ತುಗಳಲ್ಲಿ ಅಡಗಿವೆ

ಯಾದುದರಿಂದ 'ಹೊಸ ತತ್ತ್ವಕ್ಕೆ' ಅಲ್ಲಿ ಸ್ಥಳವೇ ಇಲ್ಲ ; ಅಷ್ಟೇಕೆ ತತ್ತ್ವದಲ್ಲಿ 'ಹೊಸದು' ಎಂಬುದಿಲ್ಲ ; ಈ ತತ್ತ್ವಗಳನ್ನು ಜಾಗರೂಕತೆಯಿಂದ ಕಾಪಾಡುವುದು ತಮ್ಮ ಕರ್ತವ್ಯವೆಂದು ಪುರಾತನರು ನಂಬಿದ್ದರು. ಪುರಾತನ ಭಾರತೀಯ ಚಿಂತನೆ ಹೊರಗಿನ ಯಾವುದೇ ಪ್ರಭಾವವನ್ನೂ ನಿರೋಧಿಸಿತು. ಸಾಹಸಪೂರ್ಣ ಯೋಚನಾತರಂಗಗಳನ್ನು ಅದು ಪ್ರೋತ್ಸಾಹಿಸಲಿಲ್ಲ; ಅದು ಒಂದು ರೀತಿಯ 'ಜಡತೆ' (stagnant) ಯನ್ನು ಹೊಂದಿತ್ತು. ಪುರಾತನ ಹಿಂದೂಗಳೂ, ಸಂಸ್ಕಾರಗಳು, ಜಾತಿ ಕುಲಗಳೆಂಬ ನಾಲ್ಕು ಗೋಡೆಗಳ ನಡುವೆ ವಾಸಮಾಡುತ್ತಿದ್ದರು. ಒಟ್ಟಿನಲ್ಲಿ ಪುರಾತನ ಭಾರತೀಯ ಚಿಂತನೆ ಮುಕ್ತವಾಗಿರಲಿಲ್ಲ (not openminded).

ಪುರಾತನ ಭಾರತೀಯ ಚಿಂತನೆಗೆ ಮೂಲವಾಗಿ ಆಯಾಯಾ ಚಿಂತನೆಯ ಸ್ಥಾಪಕರು ಬರೆದ ಗ್ರಂಥಗಳು ಇದ್ದರೆ, ಆಧುನಿಕ ಭಾರತೀಯ ಚಿಂತನೆಯನ್ನು ಪರಿಗಣಿಸುವಾಗ ಆಯಾಯಾ ಚಿಂತಕರ ಪತ್ರವ್ಯವಹಾರಗಳು, "ಜೀವನಸ್ಮೃತಿಗಳು" (memoirs), ಭಾಷಣಗಳು, 'ಸಂಭಾಷಣೆಗಳು' (conversations) 'ದಂತಕತೆಗಳು' (anecdotes) ಇತ್ಯಾದಿಗಳನ್ನು ಗಮನಕ್ಕೆ ತೆಗೆದುಕೊಳ್ಳಬೇಕು.

೪

ಈಗ ಆಧುನಿಕ ಭಾರತೀಯ ಚಿಂತನೆಯ ಮೇಲೆ ಆದ ಮುಖ್ಯ ಪ್ರಭಾವಗಳನ್ನು ಚರ್ಚಿಸೋಣ. ಅವುಗಳೆಂದರೆ : 1. ಪಾಶ್ಚಾತ್ಯ ವಿಜ್ಞಾನದ ಪ್ರಭಾವ 2. ಧರ್ಮದ ಪ್ರಭಾವ.

ಆಧುನಿಕ ಭಾರತೀಯ ಚಿಂತನೆಯ ಮೇಲೆ ಆದ ವಿಜ್ಞಾನದ ಪ್ರಭಾವ ಸಹಜವಾದುದೇ. ಗಾಂಧೀಜಿಯವರನ್ನುಳಿದು ಮಿಕ್ಕೆಲ್ಲ ಭಾರತೀಯ ಚಿಂತಕರು, ಒಂದಲ್ಲ ಒಂದು ವಿಧದಲ್ಲಿ ವಿಜ್ಞಾನದಿಂದ ಪ್ರಭಾವಿತಗೊಂಡವರೇ. ಆಧುನಿಕ ವಿಜ್ಞಾನದಿಂದ ಸ್ಫೂರ್ತಿಗೊಂಡ ರಾಜಾರಾಮ ಮೋಹನ್‌ರಾಯ್, ಭಾರತೀಯ ಶಾಲಾಕಾಲೇಜುಗಳಲ್ಲಿ ವಿಜ್ಞಾನವನ್ನೂ, ಪಾಶ್ಚಿಮಾತ್ಯ ಶಿಕ್ಷಣ ಪದ್ಧತಿಯನ್ನೂ ಎಡೆಬಿಡದೆ ಅಭ್ಯಸಿಸಬೇಕೆಂದೂ, ದೇಶಾದ್ಯಂತ ವೈಜ್ಞಾನಿಕ ಪ್ರಯೋಗ ಶಾಲೆ ಸ್ಥಾಪಿಸಬೇಕೆಂದೂ ಒತ್ತಾಯಿಸಿದರು. ಕೇಶವಚಂದ್ರಸೇನರು, ವಿಜ್ಞಾನಕ್ಕೆ ವೇದ ಮತ್ತು ಬೈಬಲ್ ಗಳಿಗಿಂತ ಹೆಚ್ಚಿನ ಮಹತ್ವವನ್ನು ನೀಡಬೇಕೆಂದೂ, ವೈಜ್ಞಾನಿಕ ವಿಚಾರದ ಜಾಡನ್ನು ತುಳಿಯಬೇಕೆಂದೂ ಸಾರಿದರು : ದಯಾನಂದ ಸರಸ್ವತಿಯವರು ವೇದಗಳಲ್ಲಿ ವೈಜ್ಞಾನಿಕ ಸತ್ಯಗಳು ಹೇಗೆ ಅಡಗಿವೆ ಎಂದು ತೋರಿಸಲು ಪ್ರಯತ್ನಪಟ್ಟರು : ರವೀಂದ್ರರು ತಮ್ಮ ವಿದ್ಯಾರ್ಥಿಗಳಿಗೆ ವಿಜ್ಞಾನದ ಮಹತ್ವವನ್ನು ಮನದಟ್ಟು ಮಾಡಿಕೊಡಲು ರಾಸಾಯನಶಾಸ್ತ್ರ, ಭೌತಶಾಸ್ತ್ರ ಮುಂತಾದುವುಗಳ ಬಗ್ಗೆ ಪುಸ್ತಕಗಳನ್ನು ಬರೆದರು : ವಿವೇಕಾನಂದರು ತಾತ್ತ್ವಿಕ ಸಂಗತಿಗಳನ್ನು ವೈಜ್ಞಾನಿಕ 'ರೂಪಕ' (metaphors) ಗಳ ಮೂಲಕ ಹೇಳಲುಪಕ್ರಮಿಸಿದರು : ಗಣಿತ ಮತ್ತು ಖಗೋಳ ಶಾಸ್ತ್ರ (Astronomy) ಗಳ ಆಳವನ್ನು ಕಂಡೇ ತೀರಬೇಕೆಂದು ತಿಲಕರು ಕಾರ್ಯಮಗ್ನರಾಗಿದ್ದರು ; ವಿಜ್ಞಾನದ ಕೇಂದ್ರವಾದ ಪಾಶ್ಚಾತ್ಯ ನಾಗರಿಕತೆಯನ್ನು ಎಡೆಬಿಡದೆ ಖಂಡಿಸಿದ ಆನಂದ ಕುಮಾರಸ್ವಾಮಿಯವರು ಆಧುನಿಕ ಭಾರತೀಯ ಚಿಂತನೆಯಲ್ಲಿ ಪಾದಾರ್ಪಣೆ ಮಾಡಿದ್ದು ಪ್ರಸಿದ್ಧ ಭೂವಿಜ್ಞಾನಿಗಳಾಗಿ : ಜೀವ ವಿಕಾಸವಾದಕ್ಕೆ ವೇದಗಳಲ್ಲಿ ಪ್ರಾಮಾಣ್ಯವಿದೆ ಎಂದು ತೋರಿಸಲು ಅರವಿಂದರು ನಿರತರಾದರು. ಹೀಗೆ ಆಧುನಿಕ ಚಿಂತಕರು ವಿಜ್ಞಾನದ ವೈಚಾರಿಕತೆಯ ಪ್ರಭಾವಕ್ಕೆ ಒಳಗಾಗಿ ಭಾರತೀಯ ಚಿಂತನೆಯನ್ನು ಮುಂದುವರಿಸಿದರು.

ಆದರೆ ಇಲ್ಲಿ ಒಂದು ಅಂಶವನ್ನು ತಪ್ಪದೆ ಗಮನಿಸಬೇಕು. ಆಧುನಿಕ ಭಾರತೀಯ ಚಿಂತಕರು ತುಂಬು ಮನಸ್ಸಿನಿಂದ ವಿಜ್ಞಾನವನ್ನು ಸ್ವಾಗತಿಸಿದರೂ, ಅದರ ಸಂಗಾತಿಯಾದ ಭೌತ

ವಾದಕ್ಕೆ (materialism) ಎಳ್ಳಷ್ಟೂ ಎಡೆಕೊಡಲಿಲ್ಲ : ಭೌತವಾದವನ್ನು ಧಿಕ್ಕರಿಸುವಲ್ಲಿ ಎಲ್ಲಾ ಆಧುನಿಕ ಭಾರತೀಯ ಚಿಂತಕರೂ ಕೈಕುಲುಕುತ್ತಾರೆ. ಈ ಅರ್ಥದಲ್ಲಿಯೇ ಆಧುನಿಕ ಭಾರತೀಯ ತಾತ್ತ್ವಿಕ ಚಿಂತನೆ ಧ್ಯೇಯಾತ್ಮಕವಾದುದು (idealistic) ಎಂದು ಹೇಳುವುದು.

ಆಧುನಿಕ ಭಾರತೀಯ ತಾತ್ತ್ವಿಕ ಚಿಂತನೆಯ ಮೇಲೆ ಆದ ಮತ್ತೊಂದು ಪ್ರಮುಖ ಪ್ರಭಾವವೆಂದರೆ, ಧರ್ಮ (Religion). ಆಧುನಿಕ ಭಾರತೀಯ ತಾತ್ತ್ವಿಕ ಚಿಂತನೆ, ಧರ್ಮವನ್ನು, ಅದರ ಮಹತ್ತ್ವವನ್ನು ಎಂದೂ ಕಡೆಗಣಿಸಿರಲಿಲ್ಲ. ಪಾಶ್ಚಾತ್ಯ ದೇಶಗಳಲ್ಲಿ ಆಧುನಿಕ ವೈಚಾರಿಕ ಕ್ರಾಂತಿ, ಧರ್ಮಕ್ಕೆ ವಿರುದ್ಧವಾಗಿ ನಡೆದಿದ್ದರೆ, ಭಾರತದಲ್ಲಿ ಅದು ಎಂದಿಗೂ ಧರ್ಮಕ್ಕೆ ವಿರುದ್ಧವಾಗಿ ನಡೆದಿರಲಿಲ್ಲ. ಆಧುನಿಕ ಭಾರತೀಯ ಚಿಂತನೆಯ ಆದ್ಯಪ್ರವರ್ತಕರಾದ ರಾಜಾರಾಮ ಮೋಹನ್‌ರಾಯ್ ಅವರಿಂದ ಹಿಡಿದು ದೇವೇಂದ್ರನಾಥ ಟಾಗೋರ್, ಕೇಶವಚಂದ್ರಸೇನ, ದಯಾನಂದ ಸರಸ್ವತಿ, ಶ್ರೀ ರಾಮಕೃಷ್ಣ, ವಿವೇಕಾನಂದ, ಈಶ್ವರಚಂದ್ರ ವಿದ್ಯಾಸಾಗರ, ರಾನಡೆ, ತಿಲಕ್, ರವೀಂದ್ರನಾಥ ಟಾಗೋರ್, ಗಾಂಧೀಜಿ, ಅರಬಿಂದೋ, ರಾಧಾಕೃಷ್ಣನ್–ಇವರೆಲ್ಲರು ಧರ್ಮದ ಅವಶ್ಯಕತೆಯನ್ನು ಅನಿವಾರ್ಯತೆಯನ್ನು ಎಲ್ಲಿಲ್ಲದ ಹುರುಪು ಮತ್ತು ಶ್ರದ್ಧೆಯಿಂದ ಬೋಧಿಸಿ, ಅದನ್ನು ತಮ್ಮ ಜೀವನದಲ್ಲಿಯೇ ಅನುಷ್ಠಾನ ಮಾಡಿ ಶಿಖರಪ್ರಾಯರಾಗಿ, ಈವರೆಗೂ ಇನ್ನೂ ಜನಮನವನ್ನು ಆಕರ್ಷಿಸುತ್ತಿದ್ದಾರೆ.

ಆದರೆ ಇಲ್ಲಿ ಧರ್ಮ ಎಂದರೆ ಏನು ಎಂಬುದನ್ನು ಖಚಿತವಾಗಿ ತಿಳಿಯಬೇಕು. ಆಧುನಿಕ ಭಾರತೀಯ ಚಿಂತನೆಯಲ್ಲಿ 'ಧರ್ಮ' ಎಂಬ ಪದವನ್ನು ವಿಶಾಲಾರ್ಥದಲ್ಲಿ ಉಪಯೋಗಿಸಲಾಗಿದೆ. ಇಲ್ಲಿ ಧರ್ಮ ಎಂದರೆ ಯಾವುದೋ ಒಂದು ನಿರ್ದಿಷ್ಟ ಪ್ರತ್ಯೇಕ ಧರ್ಮ (ಉದಾ : ಹಿಂದೂಧರ್ಮ, ಇಸ್ಲಾಂಧರ್ಮ, ಕ್ರೈಸ್ತಧರ್ಮ, ಬೌದ್ಧಧರ್ಮ ಇತ್ಯಾದಿ) ಎಂದು ಊಹಿಸಬಾರದು. ಕೆಲವು ಬಾಹ್ಯ ಕಟ್ಟುಪಾಡುಗಳು, ಸಂಸ್ಕಾರಗಳು, ಪೂಜಾಪದ್ಧತಿಗಳು–ಇವುಗಳಿಗೆ ಅನುಗುಣವಾಗಿ ನಡೆಯುವುದೂ 'ಧರ್ಮ'ವಲ್ಲ. ಇಲ್ಲಿ ಧರ್ಮ ಎಂದರೆ ನಿಷ್ಕಲ್ಮಷ ಪರಿಶುದ್ಧ ಹೃದಯವನ್ನು ಹೊಂದಿರುವಿಕೆ ಎಂದು ಅರ್ಥ. ಧರ್ಮದ ಬಾಹ್ಯಾಚರಣೆಗಳು ಕೇವಲ ತೊಗಟೆ ; ಇವು ಇಷ್ಟೇ ಧರ್ಮವಲ್ಲ ; ಇವೆಲ್ಲವನ್ನು ಮೀರಿ ನಿಂತಿರುವ ಮಾನವತೆ (humanity), ಮಾನವೀಯ ಅನುಕಂಪ, ಶುದ್ಧ ನೈತಿಕ ಜೀವನ. ವಿಶಾಲ ಮನೋಭಾವ–ಈ ಕಲ್ಯಾಣ ಗುಣಗಳು. ಈ ಗುಣಗಳನ್ನು ಯಾರು ಹೊಂದಿರುತ್ತಾರೆಯೋ ಅಥವಾ ಹೊಂದಲು ಸತತ ಪ್ರಯತ್ನ ಪಡುತ್ತಿರುತ್ತಾರೋ ಅವರೇ ಪ್ರಾಮಾಣಿಕರಾದ ಧರ್ಮನಿಷ್ಠರು– ಅವರು ಯಾವುದೇ ಪ್ರತ್ಯೇಕ ಧರ್ಮದ ಬಾಹ್ಯಾಚರಣೆಗಳನ್ನು ಅನುಸರಿಸದಿದ್ದರೂ, ಅಷ್ಟೇಕೆ ದೇವರಲ್ಲಿ ನಂಬಿಕೆ ಇಡದಿದ್ದರೂ ಸಹ. ಧರ್ಮ ಆಕಾಶ ಮತ್ತು ವಾಯುಗಳಿದ್ದಂತೆ ; ಯಾರೂ ಅವುಗಳಿಂದ ತಪ್ಪಿಸಿಕೊಳ್ಳಲಾರರು ; ಶ್ರೇಯ, ಜ್ಞಾನ ಆನಂದ, ಪ್ರೇಮ–ಇವುಗಳಿಗೆ ಇನ್ನೊಂದು ಹೆಸರೇ 'ದೇವರು'. ಶ್ರೇಯ, ಜ್ಞಾನ, ಆನಂದ ಪ್ರೇಮ ಇವುಗಳಲ್ಲಿ ನಂಬಿಕೆ ಇಡದವರಾರು ? ಎಂದು ಧರ್ಮದ ವಿಶಾಲಾರ್ಥವನ್ನು ಅದರ ಅವಶ್ಯಕತೆಯನ್ನು ಆಧುನಿಕ ಭಾರತೀಯ ಚಿಂತಕರು ಸ್ಪಷ್ಟಪಡಿಸಿದ್ದಾರೆ. ಹೀಗೆ ಆಧುನಿಕ ಭಾರತೀಯ ಚಿಂತನೆಯನ್ನು ರೂಪಿಸುವಲ್ಲಿ ಧರ್ಮ ಮತ್ತು ವಿಜ್ಞಾನಗಳೆರಡರ ವ್ಯಾಪಕ ಪ್ರಭಾವವನ್ನು ಕಾಣಬಹುದು.

೫

ಈಗ ಆಧುನಿಕ ಭಾರತೀಯ ಚಿಂತನೆ, ಸಂಪ್ರದಾಯವಾದಿಯೋ ಅಥವಾ ಸಂಪ್ರದಾಯವಿರೋಧಿಯೋ ಎಂಬುದನ್ನು ಚರ್ಚಿಸೋಣ. ಸಂಪ್ರದಾಯ (Tradition) ಅಂದರೆ ಏನು ?

ಅದೊಂದು ಮಹೋನ್ನತ ವಿಶ್ವಶಕ್ತಿ ; ವ್ಯಕ್ತಿಗತ ಪ್ರತಿಭೆಯನ್ನು ಅದು ಅಷ್ಟಾಗಿ ಲೆಕ್ಕಿಸುವುದಿಲ್ಲ. ಇದನ್ನು ನಾವು ಸಂಪ್ರದಾಯವೆಂದು ಕರೆದರೆ, ಆಧುನಿಕ ಭಾರತೀಯ ಚಿಂತನೆ ಸಂಪ್ರದಾಯ ವಾದಿಯೆಂದೇ ಹೇಳಬೇಕು ; ಈ ಅರ್ಥದಲ್ಲಿ ಅದು ಎಂದೂ ಸಂಪ್ರದಾಯವನ್ನು ಧಿಕ್ಕರಿಸಿಲ್ಲ. ಅದಕ್ಕೆ ಬದಲಾಗಿ ಸಂಪ್ರದಾಯವನ್ನು ಶಿಷ್ಟ ಸಂಪ್ರದಾಯ ದುಷ್ಟ ಸಂಪ್ರದಾಯ ಎಂದು ವಿಂಗಡಿಸಿ ದುಷ್ಟ ಸಂಪ್ರದಾಯವನ್ನು ನಿರ್ದಾಕ್ಷಿಣ್ಯವಾಗಿ ಬೇರು ಸಹಿತ ಕಿತ್ತೊಗೆಯಬೇಕು ಎಂದು ಭಾರತೀಯ ಚಿಂತನೆ ಪ್ರತಿಪಾದಿಸುತ್ತದೆ : ಅದು ಎಲ್ಲಾ ಸಂಪ್ರದಾಯವನ್ನು ಹಾಡಿ ಹೊಗಳುವುದಿಲ್ಲ : ಸಕಾರಣವಿಲ್ಲದೆ ಸಂಪ್ರದಾಯವನ್ನು ಎಂದೂ ತೆಗಳುವುದೂ ಇಲ್ಲ.

ಈಗ ಆಧುನಿಕ ಭಾರತೀಯ ಚಿಂತನೆಯಲ್ಲಿ ಹೊಸದೆಷ್ಟು ಹಳೆಯದೆಷ್ಟು ಎಂಬುದನ್ನು ವಿಚಾರಿಸೋಣ. ಆಧುನಿಕ ಭಾರತೀಯ ಚಿಂತಕರು ಸಂಪ್ರದಾಯವನ್ನು ಆಲದ ವೃಕ್ಷಕ್ಕೆ ಹೋಲಿ ಸುತ್ತಾರೆ: ಆಲದ ವೃಕ್ಷ ಬೆಳೆದು ಬೇರುಬಿಟ್ಟು, ಈ ಬೇರುಗಳೇ ಪುನಃ ಬೆಳೆದು ವೃಕ್ಷವಾಗಿ ಪುನಃ ಬೇರು ಬಿಡುತ್ತವೆ. ಇದು ಒಂದು ನಿರಂತರ ಬೆಳವಣಿಗೆ. ಇಲ್ಲಿ ಹಳೆಯದು ಹೊಸದಾಗಿ ಬೆಳೆಯು ತ್ತದೆ; ಹಳೆಯದು ಮತ್ತು ಹೊಸದು ಇವುಗಳ ನಡುವೆ ಕೂಡಿಸಲಾಗದ ಯಾವ ಕಂದಕವೂ ಇಲ್ಲ; ಹಳೆಯದು ಹಳೆಯದಾಗಿ ಸರಿಸಿಹೋಗುವುದಿಲ್ಲ: ಅದು ವರ್ತಮಾನ ಮತ್ತು ಭವಿಷ್ಯವಾಗಿ ಬೆಳೆದು ರೂಪಗೊಳ್ಳುತ್ತದೆ. ಎಂಬ ಪಾಶ್ಚಾತ್ಯ ತಾತ್ತ್ವಿಕನಾದ ಬರ್ಗ್‌ಸನ್‌ನ ಅಭಿಪ್ರಾಯವನ್ನು ಆಧು ನಿಕ ಭಾರತೀಯ ಚಿಂತಕರು ಸ್ವಾಗತಿಸುತ್ತಾರೆ. ವಸ್ತುಸ್ಥಿತಿ ಹೀಗಿರುವುದರಿಂದ ಆಧುನಿಕ ಭಾರ ತೀಯ ಚಿಂತನೆಯಲ್ಲಿ ಹೊಸದೆಷ್ಟು ಹಳೆಯದೆಷ್ಟು ಎಂಬ ಪ್ರಶ್ನೆ, ಇಲ್ಲಿ ಪ್ರಶ್ನೆಯಾಗಿ ಉಳಿಯು ವುದಿಲ್ಲ.

ಆಧುನಿಕ ಕಾಲದಲ್ಲಿ ಭಾರತೀಯ ಚಿಂತನೆ ನವಜಾಗೃತಿಯನ್ನುಂಟು ಮಾಡಿತು. ಈ ಬದಲಾವಣೆಯನ್ನು ವಿವರಿಸಲು ಸಾಮಾನ್ಯವಾಗಿ ಉಪಯೋಗಿಸುವ ಪದ Renaissance. ಈ ಪದಕ್ಕೆ ವಿವಿಧಾರ್ಥಗಳಿವೆ. 'ಒಂದಾನೊಂದು ಕಾಲದಲ್ಲಿ ಸ್ವಯಂ ಪರಿಪೂರ್ಣವೂ ಪ್ರೌಢವೂ ಆಗಿದ್ದು, ಕಾಲಾಂತರದಲ್ಲಿ ಕ್ಷೀಣಗೊಂಡ ಚಿಂತನೆಗೆ ಈಗ ಪುನಃ ಜೀವ ತುಂಬುವುದು' ಎಂದು ಒಂದು ಅರ್ಥ. ಹಳೆಯದನ್ನು (ಹಿಂದಿನದನ್ನು) ಸಂಪೂರ್ಣವಾಗಿ ತ್ಯಜಿಸಿ, ಅದರ ಸೋಂಕು ಲವ ಲೇಶವೂ ಇಲ್ಲದಂತೆ ಜಾಗರೂಕತೆವಹಿಸಿ ಹೊಸದಾಗಿ ಚಿಂತನೆಯನ್ನು ಪ್ರಾರಂಭಿಸುವುದು ಎಂದು Rena ssance ಪದಕ್ಕೆ ಇನ್ನೊಂದು ಅರ್ಥ ವಿವರಣೆಯಿದೆ. ಈ ಅರ್ಥದಲ್ಲಿಯೇRenai ssanceನ್ನು 'ಭವಿಷ್ಯ ಜೀವನದೆಡೆಗೆ ಕ್ರಾಂತಿಕಾರಿ ಒತ್ತಾಯ' ಎಂದು ಕರೆಯುವುದು. ಆಧುನಿಕ ಭಾರತದಲ್ಲಿ ಆದ Renaissance , ಮೊದಲನೆಯ ಅರ್ಥದ್ದು : ಅದು ಹಿಂದಿನ ಆದರೆ ಕಾಲಾಂತರದಲ್ಲಿ ಕ್ಷೀಣಗೊಂಡ, ಪ್ರೌಢಚಿಂತನೆಯ ಪುನರುಜ್ಜೀವನವೇ ಹೊರತು, ಹಿಂದಿನದೆಲ್ಲ ವನ್ನೂ ಸಂಪೂರ್ಣವಾಗಿ ತಳ್ಳಿಹಾಕುವುದೆಂದಲ್ಲ.

೬

ಈಗ ಆಧುನಿಕ ಭಾರತೀಯ ತಾತ್ತ್ವಿಕ ಚಿಂತನೆ, ತನ್ನ ಪ್ರಾರಂಭದಲ್ಲಿ ನಡೆದು ಬಂದ ದಾರಿಯನ್ನು ಗುರುತಿಸೋಣ. ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವಕ್ಕೊಳಗಾದ ಆಧುನಿಕ ಭಾರತ ತನ್ನ ಪ್ರತಿಕ್ರಿಯೆಯನ್ನು ನಾಲ್ಕೈದು ಪ್ರಮುಖ ಸಂಘಟನೆಗಳ (movements) ಮೂಲಕ ವ್ಯಕ್ತಪಡಿಸಿತು. ಇವುಗಳೆಂದರೆ : 1. ಬ್ರಹ್ಮಸಮಾಜ, 2. ಪ್ರಾರ್ಥನಾಸಮಾಜ, 3. ಆರ್ಯ ಸಮಾಜ 4. ರಾಮಕೃಷ್ಣ ಮಿಷನ್ ಸಂಸ್ಥೆ, 5. ಥಿಯೋಸಾಫಿಕಲ್ ಸೊಸೈಟಿ ಇತ್ಯಾದಿ.

ರಾಜಾರಾಮಮೋಹನರಾಯ್ ಅವರಿಂದ ಪ್ರಾರಂಭವಾದ ಈ ಪ್ರತಿಕ್ರಿಯೆ ತನ್ನ ಸಾಫಲ್ಯತೆಯನ್ನು ಕಂಡುಕೊಳ್ಳುವುದು ಗಾಂಧೀ ದರ್ಶನದಲ್ಲಿ.

ರಾಜಾರಾಮ್ ಮೋಹನರಾಯ್ (1772–1833) ಆಧುನಿಕ ಭಾರತೀಯ ಅಗ್ರಗಣ್ಯ ಚಿಂತಕ. ಜಗತ್ತಿನ ಎಲ್ಲಾ ಧರ್ಮಗಳ ಸಾರವನ್ನೂ ಅತ್ಯಂತ ಆಶ್ಚರ್ಯಕರ ರೀತಿಯಲ್ಲಿ ಹಿಂಡಿ ಹಿಡಿದಿಟ್ಟುಕೊಂಡು ಅವುಗಳ ಬಗ್ಗೆ ಸಂಶೋಧನೆಯನ್ನು ಮುಂದುವರಿಸಿದ ಅನೇಕ ಭಾಷಾ ತಜ್ಞ; ಮೇಲಾಗಿ ಆಧುನಿಕ ಭಾರತದ ಬಹುದೊಡ್ಡ ಸಮಾಜ ಸುಧಾರಕ, ಶಿಕ್ಷಣ ತಜ್ಞ ಮತ್ತು ಮೇಧಾವಿ. ಅಂದಿನ ಸಮಾಜದ ದುಷ್ಟಾಚಾರ, ಪಾಶವೀ ಕೃತ್ಯಗಳಾದ ಸತಿ ಸಹಗಮನ ಪದ್ಧತಿ, ಬಾಲ್ಯವಿವಾಹ, ವಿಧವಾ ವಿವಾಹದ ಕಡುದ್ವೇಷ, ಮುಂತಾದವುಗಳ ಮರ್ದನಕ್ಕೆ ತನ್ನ ಜೀವನವನ್ನೇ ಮುಡಿಪಾಗಿಟ್ಟ ತ್ಯಾಗಿ. ತನ್ನ ರಚನಾತ್ಮಕ ಕಾರ್ಯಕ್ರಮಗಳ ಮೂಲಕ, 'ಭಾರತೀಯ ಪ್ರಜ್ಞೆ'ಯನ್ನು ಎಲ್ಲಡೆ ಪಸರಿಸುವಂತೆ ಮಾಡಿದ ಕರ್ಮಯೋಗಿ; ಬ್ರಹ್ಮ ಸಮಾಜದ ಸಂಸ್ಥಾಪಕ, ದೇವೇಂದ್ರನಾಥ ಟಾಗೋರ್ ಮತ್ತು ಕೇಶವಚಂದ್ರಸೇನರ ಗುರು ಮತ್ತು ಮಾರ್ಗದರ್ಶಿ.

ಎಲ್ಲಾ ಧರ್ಮಗಳ ಅನುಯಾಯಿಗಳೊಡನೆ ಸಮನ್ವಯ, ಐಕ್ಯ ಭಾವವನ್ನು ಬೆಸೆಯುವುದೇ ಬ್ರಹ್ಮಸಮಾಜದ ಪ್ರಮುಖ ಗುರಿಯಾಗಿತ್ತು. ರಾಜಾರಾಮಮೋಹನ ರಾಯ್ ಅವರ ಪ್ರಕಾರ ಬ್ರಹ್ಮ ತತ್ತ್ವವೆ ಈ ಪ್ರಪಂಚದ ಮೂಲಕಾರಣ. ಈ ಬ್ರಹ್ಮತತ್ತ್ವ ಯಾರ ಸಂಗವೂ ಇಲ್ಲದೆ ತಾನೇ ತಾನಾಗಿರುತ್ತದೆ ಎಂಬ ಪ್ರಾಚೀನ ಭಾರತೀಯ ಚಿಂತನೆಯ ಒಂದು ವಿವರಣೆಯನ್ನು ಇವರು ಖಂಡಿಸುತ್ತಾರೆ; ಅದೊಂದು ವಿಧದ 'ನಿಶ್ಚಲ ಪರತತ್ತ್ವ'ವಾದ (Static Absolutlism); ಮೂರ್ತಿಪೂಜೆ ಅನಾವಶ್ಯಕ; 'ಕರ್ಮಪದ್ಧತಿ' (ritualism) ಮುಂತಾದವುಗಳನ್ನು ಖಂಡಿಸಿದರು. ಪರಿಶುದ್ಧ ಬ್ರಹ್ಮೋಪಾಸನೆ ಮತ್ತು ಮಾನವ ಸೇವೆಯೇ, ಜೀವನದ ಗುರಿಯಾದ ಆನಂದದ ರಾಜಮಾರ್ಗ ಎಂದು ಹೇಳಿದ ಅವರು ತಮ್ಮನ್ನು ಹೊಸದಾದ ಯಾವ ಧರ್ಮದ ಸ್ಥಾಪಕರೆಂದೂ ಕರೆದುಕೊಳ್ಳಲಿಲ್ಲ. ಪುರಾತನ ಹಿಂದೂಧರ್ಮವನ್ನು ಅದರ ಮೂಲ ಪರಿಶುದ್ಧ ಸ್ಥಿತಿಗೆ ಕೊಂಡೊಯ್ಯಬೇಕೆಂಬುದೇ ಅವರ ಗುರಿಯಾಗಿತ್ತು.

ಅನಂತರ ಬಂದ ಮಹರ್ಷಿ ದೇವೇಂದ್ರನಾಥ ಟಾಗೋರರು (1817–1905) 'ಬಾಹ್ಯ ಕರ್ಮಪದ್ಧತಿ' (ritualism) ಯನ್ನು ಖಂಡಿಸಿದರು; ದೇವಸ್ಥಾನಗಳೂ ಪ್ರತ್ಯೇಕ ಪೂಜಾ ವ್ಯವಸ್ಥೆಗಳೂ ಅನಾವಶ್ಯಕ; ದೇವರು ವ್ಯಕ್ತಿ ಸ್ವರೂಪ (personal); ಅವನು ಅವತಾರಗಳನ್ನು ಹೊಂದುವುದಿಲ್ಲ; ಅವನನ್ನು ಆಧ್ಯಾತ್ಮ ರೀತಿಯಲ್ಲಿ ಮಾತ್ರ ಆರಾಧಿಸಬೇಕು; ಪಶ್ಚಾತ್ತಾಪ ಮತ್ತು ಪಾಪಕೃತ್ಯಗಳನ್ನು ನಿಲ್ಲಿಸುವುದು–ಇವುಗಳೇ ಮೋಕ್ಷಕ್ಕೆ ದಾರಿ; ಯಾವುದೇ ಗ್ರಂಥವೂ ಅಧಿಕಾರಯುತವಾದುದಲ್ಲ (authoritative); ದೇವರ ಮೇಲಿನ ಪ್ರೀತಿ ಮಾನವತೆಯ ಪ್ರೀತಿಯಾಗಿ ಪರಿವರ್ತಿತವಾಗಬೇಕು ಎಂದು ಅವರು ಬೋಧಿಸಿದರು.

ದೇವೇಂದ್ರನಾಥ ಟಾಗೋರರ ಸಮವರ್ತಿಯಾದ ಕೇಶವಚಂದ್ರಸೇನ (1838–1884) ಹಿಂದೂ ಸಮಾಜವನ್ನು ಪೂರ್ಣವಾಗಿ ಸುಧಾರಣೆ ಮಾಡಲು ಹೊರಟರು. ದೇವರು, ಸತ್ಯವನ್ನು ಪ್ರತಿಭಾನ (intuition), ಬುದ್ಧಿ ಮತ್ತು ಸ್ಫೂರ್ತಿಗಳ ಮೂಲಕ ಪ್ರಕಾಶಪಡಿಸುತ್ತಾನೆ; ಎಲ್ಲಾ ಧರ್ಮಗಳಲ್ಲಿಯೂ ದೇವರು ಪ್ರಕಾಶಪಡಿಸಿದ ಸತ್ಯವನ್ನು ಕಾಣಬಹುದು ಎಂದು ಅವರು ಬೋಧಿಸಿದರು. ಜಾಗತಿಕ ಧರ್ಮವನ್ನು ಸ್ಥಾಪಿಸುವುದು ಅವರ ಬಹುಮುಖ್ಯ ಗುರಿಯಾಗಿತ್ತು. ಈ ಪ್ರಯತ್ನ ಇವರ ಕಾಲದ ಅನಂತರವೂ ಮುಂದುವರಿದು ಶಿತಾನಾಥ ತತ್ತ್ವಭೂಷಣರ ಕೈಯಲ್ಲಿ ಇನ್ನೂ ಬಲಗೊಂಡಿತು. ಒಟ್ಟಿನಲ್ಲಿ ಬ್ರಹ್ಮ ಸಮಾಜ ಜಾತಿ ಕುಲ ಮತ ಭೇದಗಳನ್ನೂ ಅನೇಕದೇವತಾವಾದವನ್ನೂ ಖಂಡಿಸಿತು.

ಬಂಗಾಳದ ಬ್ರಹ್ಮಸಮಾಜದಿಂದ ಸ್ಫೂರ್ತಿಗೊಂಡ, ರಾನಡೆ ಮತ್ತಿತರರು ಮುಂಬಯಿಯಲ್ಲಿ "ಪ್ರಾರ್ಥನಾ ಸಮಾಜ" ಎಂಬ ಸಂಸ್ಥೆಯನ್ನು ಸ್ಥಾಪಿಸಿ (1867) ಮಹಾರಾಷ್ಟ್ರದ ಜ್ಞಾನದೇವ, ಚಾಂಗದೇವ, ನಾಮದೇವ, ಏಕನಾಥ, ರಾಮದಾಸ್, ತುಕಾರಾಂ, ಜನಾರ್ಧನ ಪಂತ್, ಮೋರೋಪಂತ್ ಮುಂತಾದ ಭಕ್ತಿ ಪಂಥಗಳ ಬೋಧನೆಗಳನ್ನು ಕೇಂದ್ರವಾಗಿಟ್ಟುಕೊಂಡು ಅನೇಕವಾದ ಮತ್ತು ಏಕದೇವತಾವಾದಗಳೆರಡನ್ನೂ ಸಮನ್ವಯಗೊಳಿಸುವಲ್ಲಿ ಮುಂದುವರೆಯಿತು. ಸ್ವಾಮಿ ದಯಾನಂದ ಸರಸ್ವತಿಯವರು (1824–1883) ಹಿಂದೂ ಸಮಾಜ ಸುಧಾರಣೆಯ ಮತ್ತೊಬ್ಬ ಪ್ರಮುಖರು. ಇವರು ಮೊದಮೊದಲು ಬ್ರಹ್ಮಸಮಾಜದ ದಾರಿಯನ್ನು ತುಳಿದರೂ ಕೊನೆಯಲ್ಲಿ ಅದರಿಂದ ದೂರವಾದರು. ಪಾಶ್ಚಾತ್ಯ ನವನಾಗರಿಕತೆಯನ್ನು ಸ್ವೀಕರಿಸಿ ಹಿಂದೂ ಧರ್ಮದಲ್ಲಿ ಮಿಲನಗೊಳಿಸಲು ಹೊರಟ ಬ್ರಹ್ಮಸಮಾಜದ ನಿಲುವನ್ನು ಅವರು ಅತ್ಯಂತ ಪ್ರಬಲವಾಗಿ ವಿರೋಧಿಸಿದರು; ವೇದಗಳ ಅಪೌರುಷೇಯತ್ವವನ್ನೂ ಅವುಗಳ ಮಹತ್ವವನ್ನು ಜನಮನದಲ್ಲಿ ನಾಟುವಂತೆ ಮಾಡಿದರು. ಇಡೀ ಜಗತ್ತಿಗೇ ಕಲ್ಯಾಣವಾಗಬೇಕು, ಅದಕ್ಕಾಗಿ ಸರ್ವರೂ ಶ್ರಮಿಸಬೇಕು: ಸರ್ವರನ್ನೂ ಪ್ರೀತಿ, ವಾತ್ಸಲ್ಯ, ನ್ಯಾಯಯುತವಾದ ಗೌರವದಿಂದ ನೋಡಬೇಕು: ಅಜ್ಞಾನವನ್ನು ಕಿತ್ತೊಗೆಯಬೇಕು: ಇದಕ್ಕೆ ಸಾಧನೆಯಾಗಿ ಎಲ್ಲಾ ನೈಜ ಜ್ಞಾನವನ್ನೂ ಒಳಗೊಂಡಿರುವ ನಾಲ್ಕು ವೇದಗಳ ಅಧ್ಯಯನ ಅತ್ಯಾವಶ್ಯಕ: ಜಾತಿ ಮತ ಕುಲ ಭೇದಗಳು, ಬಾಲ್ಯವಿವಾಹ, ಸತಿಸಹಗಮನ ಪದ್ಧತಿ ಮೂರ್ತಿಪೂಜೆ–ಇವುಗಳನ್ನು ವರ್ಜಿಸಬೇಕು: ಸ್ತ್ರೀ ವಿದ್ಯಾಭ್ಯಾಸ, ವಿಧವಾ ವಿವಾಹ, ವೇದಾಧ್ಯಯನ, ಇವುಗಳನ್ನು ಪುರಸ್ಕರಿಸಬೇಕು ಎಂದು ತಮ್ಮ "ಸತ್ಯಾರ್ಥಪ್ರಕಾಶ" ಗ್ರಂಥದಲ್ಲಿ, ತಾವು ಸ್ಥಾಪಿಸಿದ "ಆರ್ಯಸಮಾಜ"ದ ಮುಖ್ಯ ಗುರಿಗಳನ್ನು ಪ್ರತಿಪಾದಿಸಿದ್ದಾರೆ.

ಬ್ರಹ್ಮ ಇಡೀ ಜಗತ್ತನ್ನು ಆವರಿಸಿದೆ. ಅದು ಅನಂತ, ರೂಪವಿಲ್ಲದ್ದು, ಅಜ, ಸರ್ವವ್ಯಾಪಿ. ಅದೇ ಪ್ರಪಂಚದ ಕರ್ತೃ, ಜೀವ, ಬ್ರಹ್ಮದಿಂದ ಸ್ವಭಾವದಲ್ಲಿ ಬೇರೆಯಾದರೂ ಬ್ರಹ್ಮದಿಂದ ಅದನ್ನು ಬೇರ್ಪಡಿಸಲಾಗುವುದಿಲ್ಲ: ಬ್ರಹ್ಮ, ಜಗತ್ತು, ಜೀವ–ಇವು ಮೂರೂ ಅನಾದಿ; ಧರ್ಮಕಾರ್ಯಗಳ ಅನುಷ್ಠಾನ. ತಾತ್ತ್ವಿಕ ಜ್ಞಾನ ಸಂಪಾದನೆ ಬ್ರಹ್ಮಚರ್ಯ ಇವುಗಳು ಬ್ರಹ್ಮದೆಡೆಗೆ ಮಾನವನನ್ನು ಕರೆದೊಯ್ಯುತ್ತವೆ ಎಂದು ಅವರು ಬೋಧಿಸಿದರು. ದೇಹ ಮತ್ತು ಮನಸ್ಸುಗಳ ಮೇಲೆ ಅಗಾಧ ಸತ್ಪರಿಣಾಮ ನೀಡುವ ಕೆಲವು ಸಂಸ್ಕಾರಗಳನ್ನು ಆಚರಿಸಬೇಕೆಂದೂ ಅವರು ಸಾರಿದರು. ಹೀಗೆ ಆರ್ಯ ಸಮಾಜದ ತಾತ್ತ್ವಿಕ ಚಿಂತನೆ ಪುನಃ ವೇದಗಳ ಕಡೆಗೆ ಹಿಂತಿರುಗುತ್ತದೆ; ಜನಮನದ ಮೇಲೆ ಅದು ಬೀರಿದ ಪ್ರಭಾವ ಬ್ರಹ್ಮ ಸಮಾಜಕ್ಕಿಂತಲೂ ಅಧಿಕವೆಂದೇ ಹೇಳಬೇಕು. ಥಿಯಾಸಫಿಕಲ್ ಸೊಸೈಟಿ 19ನೇ ಶತಮಾನದ ಉತ್ತರಾರ್ಧದಲ್ಲಿ ಹಿಂದೂ ಧರ್ಮದ ಪುನರುಜ್ಜೀವನವನ್ನು ಕೈಕೊಂಡಿತು. ಇದರ ಸ್ಥಾಪಕರು ಮೇಡಂ ಬ್ಲಾವಟ್ಸ್ಕಿ. ಇವರ ಪ್ರಮುಖ ನಾಯಕಿ ಅನಿಬೆಸೆಂಟ್. ಉಪನಿಷತ್ತು ಗೀತೆಗಳಿಂದಷ್ಟೇ ಅಲ್ಲದೆ ಮಹಾಕಾವ್ಯಗಳು, ಪುರಾಣಗಳು, ಸ್ಮೃತಿಗಳು, ಮುಂತಾದವುಗಳಿಂದಲೂ ಸ್ಫೂರ್ತಿ ಪಡೆದರು. ಹಿಂದೂಧರ್ಮ, ಅವರ ಜೀವನದ ಉಸಿರಾಗಿತ್ತು.

ಆಧುನಿಕ ಭಾರತೀಯ ತಾತ್ತ್ವಿಕ ಚಿಂತನೆ ತನ್ನ ಅತ್ಯುಚ್ಚಮಟ್ಟವನ್ನು ಮುಟ್ಟಿದ್ದು ಶ್ರೀ ರಾಮಕೃಷ್ಣರ ಸರ್ವಧರ್ಮ ಸಮನ್ವಯ ದೃಷ್ಟಿಯಲ್ಲಿ. ಆಧುನಿಕ ಅರ್ಥದಲ್ಲಿ 'ವಿದ್ಯಾವಂತ'ರೆನಿಸದಿದ್ದರೂ 'ಆತ್ಮವಿದ್ಯೆ'ಯಲ್ಲಿ ಅವರ ಅನುಷ್ಠಾನದಲ್ಲಿ ಅವರು ಪ್ರಚಂಡ ಸಾಧಕರಾಗಿದ್ದರು. ಸರ್ವಧರ್ಮಗಳ ಸಾಧನೆಗಳನ್ನೂ ಅನುಷ್ಠಾನ ಮಾಡಿ, ಎಲ್ಲಾ ಧರ್ಮಗಳೂ ದೈವ ಸಾಕ್ಷಾತ್ಕಾರ ಎಂಬ ಗುರಿಯೆಡೆಗೆ ಕೊಂಡೊಯ್ಯುತ್ತವೆ: ಯಾವ ಧರ್ಮವೂ ಮೇಲಲ್ಲ: ಯಾವ ಧರ್ಮವೂ ಕೀಳಲ್ಲ: ಬೇರೆ ಬೇರೆ ಧರ್ಮಗಳು ಒಂದೇ ಸ್ಥಳಕ್ಕೆ (ದೇವರು) ಕರೆದೊಯ್ಯುವ

ವಿವಿಧ ಮಾರ್ಗಗಳು; ಪ್ರತಿಯೊಬ್ಬರೂ ದೇವರಿಗಾಗಿ ಹಂಬಲಿಸಬೇಕು; ದೇವರ ಅಸ್ತಿತ್ವ ಮಾನ
ವನ ಅಸ್ತಿತ್ವದಷ್ಟೇ ಖಂಡಿತವಾದುದು; ಸ್ವಯಂಸಿದ್ಧ ತತ್ತ್ವವಾದ ಅದರ ಅಸ್ತಿತ್ವವನ್ನು ತರ್ಕ
ದಿಂದ ಸ್ಥಾಪನೆಮಾಡುವ ಪ್ರಯತ್ನ ನಗೆಪಾಟಲಾದೀತು; ಮೂರ್ತಿಪೂಜೆಯಲ್ಲಿ ತಪ್ಪೇನೂ ಇಲ್ಲ;
ಸರ್ವವ್ಯಾಪಿಯಾದ ದೇವರು 'ಮೂರ್ತಿ'ಯಲ್ಲಿಯೂ ಇದ್ದಾನೆ ಎಂದರೆ ತಪ್ಪು ಹೇಗಾಗುತ್ತದೆ ?;
'ಮೂರ್ತಿ', ಸಾಧಕನ ಪ್ರಾರಂಭದ ದಿನಗಳಲ್ಲಿ ಮನಸ್ಸನ್ನು ಧ್ಯಾನ ವಸ್ತುವಿನಲ್ಲಿ ಕೇಂದ್ರೀಕರಿ
ಸಲು ಸಹಾಯ ಮಾಡುವ ಒಂದು ಮಾರ್ಗ; ಮೂರ್ತಿಪೂಜೆಯಷ್ಟೇ ಧರ್ಮದ ಗುರಿಯಲ್ಲ;
ಮಾನವನದು ಎತ್ತರದ ಬಾಳು, ಬಿತ್ತರದ ಬದುಕು ಆಗಬೇಕು ಎಂದು ಬೋಧಿಸಿ ಆಚರಿಸಿ,
ಆ ಸಂದೇಶವನ್ನು ಎಲ್ಲೆಡೆ ಹರಡಲು ಸ್ವಾಮಿ ವಿವೇಕಾನಂದರನ್ನು ಹುರಿದುಂಬಿಸಿದರು. ಮೊದ
ಮೊದಲು ಶ್ರೀರಾಮಕೃಷ್ಣರನ್ನು ಸಂಶಯದೃಷ್ಟಿಯಿಂದ ನೋಡಲುಪಕ್ರಮಿಸಿದ್ದ ಅವರು,
ಸ್ವಾನುಭವದ ಒರೆಗಲ್ಲಿನಿಂದ ಶ್ರೀರಾಮಕೃಷ್ಣರ ಹೃದಯವನ್ನು ತಿಳಿದು, ಭಾರತೀಯ ಸಂಸ್ಕೃತಿ
ಯನ್ನು ಪಸರಿಸುವ ದೀಕ್ಷೆಯನ್ನು ಕೈಗೊಂಡು, ಐರೋಪ್ಯ ರಾಷ್ಟ್ರಗಳನ್ನು ಸಂದರ್ಶಿಸಿ,
'ಧರ್ಮ'ದ ಸಾರವನ್ನು ಒತ್ತಿ ಹೇಳಿದರು; 'ಜನ ಸೇವೆಯೇ ಜನಾರ್ಧನನ ಸೇವೆ' ಎಂದು ತಿಳಿದು
ಜೀವಂತ ದರಿದ್ರನಾರಾಯಣರನ್ನು ಸೇವಿಸಲು ಮಾನವರಿಗೆ ಕರೆಯಿತ್ತರು. ಆಧುನಿಕ
ಭಾರತೀಯ ಚಿಂತನೆ ಶಕ್ತಿಯುತವೂ, ಕ್ರಿಯಾತ್ಮಕವೂ ಆಗುವಂತೆ ಶ್ರಮಿಸಿದರು.

೭

ಈಗ ಆಧುನಿಕ ಭಾರತೀಯ ಚಿಂತನೆಯ ಪ್ರಮುಖ ಗುಣಲಕ್ಷಣಗಳನ್ನು ಚರ್ಚಿಸೋಣ.
ಅದರ ಪ್ರಮುಖ ಗುಣಲಕ್ಷಣಗಳನ್ನು ಹೀಗೆ ಪಟ್ಟಿಮಾಡಬಹುದು: (೧) ಪ್ರಪಂಚದ ಬಗ್ಗೆ
ವಾಸ್ತವ ದೃಷ್ಟಿ. (೨) ಮೋಕ್ಷ ಕಲ್ಪನೆಯ ಬಗ್ಗೆ ಹೊಸ ತಿರುವು. (೩) ವಿಶ್ವ ವಿಕಾಸ
ಆಧ್ಯಾತ್ಮಿಕ ಎಂಬ ನಿಲುವು. (೪) ಪ್ರಾಚ್ಯ ಮತ್ತು ಪಾಶ್ಚಾತ್ಯ ದರ್ಶನಗಳ ಸಮನ್ವಯ
ಪ್ರಯತ್ನ. (೫) ದೈವಾಸ್ತಿತ್ವವಾದ (Theism) ಮತ್ತು ನಿರಪೇಕ್ಷವಾದ (Absolutism)
ಗಳ ಸಮನ್ವಯ. (೬) ಅಧ್ಯಾತ್ಮ ಮತ್ತು ಲೌಕಿಕಗಳ ಸಮನ್ವಯ ಮತ್ತು ಸಂಯೋಗ ದೃಷ್ಟಿ.
(೭) ಜೀವಾತ್ಮ ಮುಕ್ತಿ ಕ್ರಿಯಾತ್ಮಕವೆಂಬ ವಾದ. (೮) ಮಾನವತಾ ಸಿದ್ಧಾಂತ.

(೧) ಆಧುನಿಕ ಭಾರತೀಯ ಚಿಂತನೆಯಲ್ಲಿ ವಿಶ್ವ (ಪ್ರಪಂಚ)ದ ಬಗ್ಗೆ ವಾಸ್ತವ ದೃಷ್ಟಿ
ಯನ್ನು ತಳೆಯಲಾಗಿದೆ. ಈ ವಿಶ್ವ, ಅದರ ಸಮಸ್ಯೆಗಳು ಅವಕ್ಕೆ ನೀಡಬಹುದಾದ ಪರಿಹಾರ
ಗಳು—ಇವು ಆಧುನಿಕ ಭಾರತೀಯ ಚಿಂತನೆಯ ಕೇಂದ್ರ ಬಿಂದುವನ್ನಾಕ್ರಮಿಸುತ್ತವೆ:[4] ಆಧುನಿಕ
ಭಾರತೀಯ ಚಿಂತನೆ ಈ ವಿಶ್ವ (ಪ್ರಪಂಚ)ದ ಬಗ್ಗೆ ಬಹಳ ಕಾಳಜಿ ವಹಿಸುತ್ತದೆ; ಪ್ರಪಂಚ
ಇಲ್ಲವೆಂದಾಗಲೀ ಅಥವಾ ಅದು ಸತ್ಯತೆಯಲ್ಲಿ ಕೀಳಾದುದೆಂದಾಗಲೀ ಅದು ಬಗೆಯುವುದಿಲ್ಲ.
ಈ ಪ್ರಪಂಚ ಮಿಥ್ಯೆ, ಮಾಯೆ: ಹುರುಳು ಇಲ್ಲದ್ದು, ಅಜ್ಞಾನ ಜನ್ಯ ಎಂಬ ಪುರಾತನ
ಭಾರತೀಯ ಚಿಂತನೆಯ, (ವಿಶೇಷವಾಗಿ ಅದ್ವೈತ, ಕೆಲವು ಉಪನಿಷತ್ತುಗಳು, ಬೌದ್ಧ ದರ್ಶನದ
ಎರಡು ಶಾಖೆಗಳಾದ ವಿಜ್ಞಾನವಾದ ಅಥವಾ ಯೋಗಾಚಾರ ಮತ್ತು ಶೂನ್ಯವಾದ ಅಥವಾ
ಮಾಧ್ಯಮಿಕ ವಾದಗಳ) ನಿಲುವನ್ನು ಆಧುನಿಕ ಭಾರತೀಯ ಚಿಂತನೆ ವಿಮರ್ಶಿಸಿ, ತಿರಸ್ಕರಿಸು
ತ್ತದೆ. ಈ ಅಂಶದಲ್ಲಿ ಆಧುನಿಕ ಭಾರತೀಯ ಚಿಂತನೆಯ ನಿಲುವು, ಪುರಾತನ ಭಾರತೀಯ
ಚಿಂತನೆಯ ನಿಲುವಿಗೆ ವಿರುದ್ಧವಾಗುತ್ತದೆ. ಅದಕ್ಕೆ ಬದಲಾಗಿ ಅದು 'ವಿಶ್ವದರ್ಶನ'ವನ್ನು
(World Philosophy) ಕಟ್ಟಲು ಶ್ರಮಿಸುತ್ತದೆ. ಪ್ರಪಂಚ ಒಂದು ಅನಿಷ್ಟವೆಂದೂ
ಅದು ತಿಳಿಯುವುದಿಲ್ಲ: ಪ್ರಪಂಚದಲ್ಲಿ ಅನಿಷ್ಟವಿರಬಹುದು; ಆದರೆ ಪ್ರಪಂಚವೇ ಅನಿಷ್ಟವಲ್ಲ.

ಪ್ರಪಂಚ ವಾಸಮಾಡಲು ಅತ್ಯಂತಯೋಗ್ಯವಾದುದು; ಜೀವಾತ್ಮಗಳ ಸಾಧನಭೂಮಿ; ಆಧ್ಯಾತ್ಮಿಕ ತರಬೇತೀ ಕೇಂದ್ರ; ಅದು ಸ್ವೀಕಾರ ಯೋಗ್ಯ, ತ್ಯಾಜ್ಯವಲ್ಲ; ಅದು ಮೂಲತಃ ಸತ್ಯದ ಪ್ರತೀಕವೇ; ಅದು ಚಿದಾತ್ಮಕ ಎಂದು ಆಧುನಿಕ ಭಾರತೀಯ ಚಿಂತನೆ ಸ್ಪಷ್ಟವಾಗಿ ಪ್ರತಿಪಾದಿಸುವುದರ ಮೂಲಕ, ಪ್ರಪಂಚದ ಬಗ್ಗೆ ಒಂದು ಬಗೆಯ ನಿರೋಧಾತ್ಮಕ ನಿಲುವನ್ನು ತಳೆದ ಪುರಾತನ ಭಾರತೀಯ ಚಿಂತನೆಯನ್ನು ತಿರಸ್ಕರಿಸುತ್ತದೆ. ಪ್ರಪಂಚದ ಬಗ್ಗೆ ವಾಸ್ತವ ದೃಷ್ಟಿಯನ್ನು ಹೊಂದುವಂತೆ ಮಾಡಲು ಸ್ವಾಮಿ ವಿವೇಕಾನಂದರು ತಮ್ಮ ಭಾಷಣ, ಬರಹಗಳಲ್ಲಿ ಬಹುವಾಗಿ ಶ್ರಮಿಸಿದ್ದಾರೆ.

ಈ ಪ್ರಪಂಚ ಮಾಯೆ ಎಂದು ತಿಳಿದ ಮೇಲೆ, ಮಾನವ ಅದರಿಂದ ಬಿಡುಗಡೆ ಹೊಂದಲು ಪ್ರಯತ್ನಿಸಬೇಕು; ಅವನ ನಿಜವಾದ ಸೌಖ್ಯ ಅದನ್ನು ಮೀರಿದುದರಿಂದಲೂ, ಪ್ರಪಂಚ ಸಾರ ರಹಿತವಾದುದರಿಂದಲೂ ಅದನ್ನು ಎಷ್ಟು ಬೇಗ ತ್ಯಜಿಸಿದರೆ, ಅದರಿಂದ ದೂರ ಹೋದರೆ, ಅಷ್ಟು ಬೇಗ ಒಳ್ಳೆಯದು; ಈ ದೃಷ್ಟಿಯಲ್ಲಿ ಸನ್ಯಾಸಾಶ್ರಮವೇ ಉಳಿದ ಆಶ್ರಮಗಳಿಗಿಂತ ಶ್ರೇಷ್ಠ ವಾದುದು ಎಂಬ ಪುರಾತನ ಭಾರತೀಯ ಚಿಂತನೆಯ ವಾದವನ್ನು ಆಧುನಿಕ ಚಿಂತನೆ ಒಪ್ಪುವು ದಿಲ್ಲ. ಪ್ರಪಂಚದ ಬಗ್ಗೆ ವಾಸ್ತವ ದೃಷ್ಟಿಯನ್ನು ತಳೆಯುವ ಅದು ಗೃಹಸ್ಥಾಶ್ರಮಕ್ಕೆ ಹೆಚ್ಚಿನ ಪ್ರಾಶಸ್ತ್ಯವನ್ನು ನೀಡುತ್ತದೆ. ಈ ನಿಲುವನ್ನು 'ರವೀಂದ್ರ ದರ್ಶನ'ದಲ್ಲಿ ಅತ್ಯಂತ ಪ್ರಬಲ ವಾಗಿ ಸಮರ್ಥಿಸಲಾಗಿದೆ; ಇಲ್ಲಿ ಜೀವನದ ಗುರಿಯಾದ ಮೋಕ್ಷವನ್ನು ಪಡೆಯುವುದೆಂದರೆ, ಪ್ರಪಂಚದಿಂದ ತಪ್ಪಿಸಿಕೊಂಡು ಬಹುದೂರ ಓಡಿಹೋಗುವುದೆಂದಲ್ಲ; ದೇವರ ಕ್ರೀಡಾರಂಗವಾದ ಈ ಪ್ರಪಂಚದಲ್ಲಿದ್ದುಕೊಂಡು, ಸ್ವಾರ್ಥ ಮನೋಭಾವವನ್ನು ತೊರೆದು, ಪರಮಾತ್ಮನ ಬಂಧನಕ್ಕೆ ಒಳಗಾಗಿ ಅವನ ಪ್ರಸಾದವಾದ ಪ್ರಕೃತಿಯೊಡನೆ ಬೆರೆತು ಸಾಯುಜ್ಯ ಸುಖವನ್ನು ಅನುಭವಿಸು ವುದು; ಈ ಪರಮಾನಂದವನ್ನು ತನ್ನ ಭ್ರಾತೃಗಳೂ ಹೊಂದುವಂತೆ, ಪರಿಶುದ್ಧ ಜೀವನವನ್ನು ನಡೆಸುವಂತೆ ಪ್ರೇರೇಪಿಸುವುದು. ಹೀಗೆ ಆಧುನಿಕ ಭಾರತೀಯ ಚಿಂತನೆ ರಚನಾತ್ಮಕ ಪ್ರಪಂಚ ದರ್ಶನವನ್ನು ನಮ್ಮ ಮುಂದಿಡುತ್ತದೆ.

(೨) ಮೋಕ್ಷ ಕಲ್ಪನೆಗೆ ಹೊಸ ತಿರುವನ್ನು ಕೊಡುವುದರ ಮೂಲಕ, ಆಧುನಿಕ ಚಿಂತನೆ, ಪುರಾತನ ಚಿಂತನೆಯಿಂದ ಭಿನ್ನವಾಗುತ್ತದೆ. ಪುರಾತನ ಭಾರತೀಯ ಚಿಂತನೆಯ ಪ್ರಕಾರ ಮೋಕ್ಷ ಎಂದರೆ ತಿರುಗುತ್ತಿರುವ ಹುಟ್ಟುಸಾವುಗಳ ನಿರಂತರ ಚಕ್ರದಿಂದ ಹೊರಬರುವುದು; ಪುನರ್ಜನ್ಮಕ್ಕೆ ಖಾಯಂ ನಿಲುಗಡೆಯನ್ನುಂಟುಮಾಡುವುದು. ಮೋಕ್ಷ ಕಲ್ಪನೆಯನ್ನು ಹೀಗೆ ಅರ್ಥೈಸುವಲ್ಲಿ ಎಲ್ಲಾ ಪುರಾತನ ಭಾರತೀಯ ದರ್ಶನಗಳೂ (ಚಾರ್ವಾಕದರ್ಶನವನ್ನುಳಿದು) ಒಪ್ಪುತ್ತವೆ. ಅಂದರೆ ಈ ದರ್ಶನಗಳ ಪ್ರಕಾರ ಮೋಕ್ಷಸ್ಥಿತಿಯಲ್ಲಿ ಜೀವಾತ್ಮ ಪ್ರಪಂಚ ಸಂಬಂಧವನ್ನು ಕಡಿದುಕೊಂಡು ತಾನೇತಾನಾಗುತ್ತದೆ; ಅಂದರೆ ಮೋಕ್ಷ, 'ಪ್ರತ್ಯೇಕ ಹಾಗೂ ಒಂಟಿ' ಸ್ಥಿತಿ (isolated state).

ಮೋಕ್ಷ ಕಲ್ಪನೆಯನ್ನು ಹೀಗೆ ಅರ್ಥೈಸುವುದನ್ನು ಆಧುನಿಕ ಭಾರತೀಯ ಚಿಂತನೆ ಒಪ್ಪು ವುದಿಲ್ಲ. ಅದರ ಪ್ರಕಾರ ಮೋಕ್ಷ ಎಂಬುದು ಪ್ರಪಂಚರಹಿತವಾದ, ಎಲ್ಲಾ ಸಂಬಂಧಗಳನ್ನು ಕಡಿದುಕೊಂಡ, ತಾನೇತಾನಾದ ಜೀವಾತ್ಮನ ಸ್ಥಿತಿಯಲ್ಲ; ಪುನರ್ಜನ್ಮದ ನಿಲುಗಡೆಯಂತು ಅಲ್ಲವೇ ಅಲ್ಲ; ಮೋಕ್ಷವೆಂದರೆ ಪ್ರಪಂಚದಲ್ಲಿದ್ದುಕೊಂಡೇ ಜೀವಾತ್ಮ ಹಂತ ಹಂತವಾಗಿ ಅಧ್ಯಾತ್ಮ ಶಕ್ತಿ ಯನ್ನು ಪಡೆಯುವುದು; ದೇವರ ಮೇಲೆ ತಾನೆಷ್ಟು ಅವಲಂಬಿತ ಎಂಬುದನ್ನು ವಿನಯಪೂರ್ವಕ ವಾಗಿ ಅರಿತು, ಅದಕ್ಕನುಗುಣವಾಗಿ ಪ್ರಪಂಚಕ್ಕೆ ಸೇವೆ ಸಲ್ಲಿಸುವುದು; ಈ ಸೇವೆ ಕೇವಲ ಒಂದು ಜನ್ಮದಲ್ಲಿ ಮಾಡಲು ಅಸಾಧ್ಯವಾದುದರಿಂದ, ಅನೇಕ ಜನ್ಮಗಳನ್ನು ತೆಗೆದುಕೊಳ್ಳಬೇಕು; ಹೀಗೆ

ಪುನಃ ಪುನಃ ಜನ್ಮಗಳನ್ನು ಪಡೆದು ವಿಶ್ವಸೇವೆಯಲ್ಲಿ ನಿರತವಾಗುವುದೇ ಮೋಕ್ಷ ಎಂದು ಪ್ರತಿಪಾದಿಸುವ ಆಧುನಿಕ ಚಿಂತನೆ ಪುರಾತನ ಚಿಂತನೆಯಿಂದ ಭಿನ್ನವೆನಿಸುತ್ತದೆ. ಮೋಕ್ಷ ಕಲ್ಪನೆಯ ಈ ತಿರುವು ರಬೀಂದ್ರ ಮತ್ತು ಅರವಿಂದ ದರ್ಶನಗಳಲ್ಲಿ ಕಾಣಿಸಿಕೊಂಡು ಗಾಂಧೀ ದರ್ಶನದಲ್ಲಿ ಅತ್ಯಂತ ಪ್ರಬಲವಾಗುತ್ತದೆ.

ಅಷ್ಟೇ ಅಲ್ಲ, ಮೋಕ್ಷವನ್ನು ಪಡೆದ ಜೀವಾತ್ಮನಿಗೆ ಪುನಃ ಜನ್ಮವಿಲ್ಲ ಎಂದರೆ, ಮೋಕ್ಷಕ್ಕೆ ಸಂಕುಚಿತ ಹಾಗೂ ಮಿತ ಅರ್ಥವನ್ನು ಕೊಟ್ಟಂತಾಗುತ್ತದೆ; ವಿಶ್ವಕ್ಕೆ ಸೇವೆಯನ್ನು ಸಲ್ಲಿಸುವ ಸುಯೋಗವನ್ನು ಜೀವಾತ್ಮ ಕಳೆದುಕೊಂಡಂತಾಗುತ್ತದೆ; ಆದುದರಿಂದ ಅದು, ಮೋಕ್ಷಸ್ಥಿತಿಯೇ ಅಲ್ಲ ಎಂದು ಆಧುನಿಕ ಭಾರತೀಯ ಚಿಂತನೆ ಅಭಿಪ್ರಾಯ ಪಡುತ್ತದೆ.

(೩) ವಿಶ್ವ ಮೂಲತಃ ಆಧ್ಯಾತ್ಮಿಕವಾದುದು ಎಂದು ಆಧುನಿಕ ಭಾರತೀಯ ಚಿಂತನೆ ಪ್ರತಿಪಾದಿಸುತ್ತದೆ. ಅದು ವ್ಯಕ್ತಿಗತವಾದ ವಿಕಾಸಕ್ಕಿಂತ ವಿಶ್ವ ವಿಕಾಸಕ್ಕೆ (cosmic evolution) ಹೆಚ್ಚು ಮಹತ್ವವನ್ನು ನೀಡುತ್ತದೆ. ಇಲ್ಲಿ ಜೀವಾತ್ಮ ಕ್ರಮಕ್ರಮೇಣ, ವಿಶ್ವದ ಜೊತೆಜೊತೆಯಲ್ಲೆ ಆಧ್ಯಾತ್ಮಿಕವಾಗಿ ವಿಕಾಸ ಹೊಂದುತ್ತಾ ಮುಂದುವರಿಯುತ್ತದೆ.

(೪) ಆಧುನಿಕ ಭಾರತೀಯ ಚಿಂತನೆಯಲ್ಲಿ ಪ್ರಾಚ್ಯ ಮತ್ತು ಪಾಶ್ಚಾತ್ಯ ದರ್ಶನಗಳ ಸಮನ್ವಯ ಪ್ರಯತ್ನವನ್ನು ಕಾಣುತ್ತೇವೆ: ಪಾಶ್ಚಾತ್ಯ ಸಂಪರ್ಕದ ಪರಿಸರದಲ್ಲಿ ಬೆಳೆದಿರುವ ಅದು, ಪುರಾತನ ಭಾರತೀಯ ಚಿಂತನೆಯ ತಾತ್ತ್ವಿಕ ಕಲ್ಪನೆಗಳು, ಧ್ಯೇಯಗಳು ಮುಂತಾದವುಗಳನ್ನು ಆ ಬೆಳಕಿನಲ್ಲಿ ತುಲನೆ ಮಾಡುತ್ತದೆ; ಅವುಗಳ ಬಗ್ಗೆ ಪುನರ್ಚಿಂತನೆಯನ್ನು ಮಾಡುತ್ತದೆ. ಪ್ರಾಚ್ಯ ಮತ್ತು ಪಾಶ್ಚಾತ್ಯ ಚಿಂತನೆಗಳು ಹೇಗೆ ಹತ್ತಿರ ಹತ್ತಿರ ಬರುತ್ತವೆ, ಹೇಗೆ ಅವುಗಳ ನಡುವೆ ಸಾದೃಶ್ಯ ಸಾಮರಸ್ಯಗಳಿವೆ ಎಂಬುದನ್ನು ಆಧುನಿಕ ಭಾರತೀಯ ಚಿಂತಕರು (ಉದಾ: ರಾಧಾಕೃಷ್ಣನ್, ಅರವಿಂದರು ಇತ್ಯಾದಿ) ಬಹಳ ಚೆನ್ನಾಗಿ ವಿಶ್ಲೇಷಿಸಿದ್ದಾರೆ. ಸಂಪರ್ಕಯಾನವನ್ನು ಅಷ್ಟಾಗಿ ಹೊಂದದೆ ಇದ್ದ ಪುರಾತನ ಭಾರತೀಯ ಚಿಂತನೆ ಈ ತೌಲನಿಕ ಅಧ್ಯಯನದಿಂದ ದೂರವಾಗಿತ್ತು; ಆ ಮೂಲಕ ಅದು ನಿಂತಲ್ಲಿಯೇ ನಿಂತಿತ್ತು (stagnant). ಮೇಲಾಗಿ ಆಧುನಿಕ ಭಾರತೀಯ ಚಿಂತನೆಯಲ್ಲಿ ವಾಸ್ತವವಾದ (Realism) ಧ್ಯೇಯವಾದ (Idealism) ಮುಂತಾದವುಗಳನ್ನು ಸಮನ್ವಯ ಮಾಡುವ ಪ್ರಯತ್ನವನ್ನೂ ಮಾಡಲಾಗಿದೆ.

(೫) ಆಧುನಿಕ ಭಾರತೀಯ ಚಿಂತನೆಯ ಮೇಲೆ ದೈವಾಸ್ತಿತ್ವವಾದದ (Theism) ಪ್ರಭಾವ ಪ್ರಬಲವಾದುದು. ಹೀಗೆಂದ ಮಾತ್ರಕ್ಕೆ ಅದು ನಿರಪೇಕ್ಷವಾದ (Absolutism) ವನ್ನು ಪೂರ್ಣವಾಗಿ ನಿರಾಕರಿಸುತ್ತದೆ ಎಂದು ಊಹಿಸಬಾರದು; ಇಲ್ಲಿ ಇವುಗಳೆರಡೂ ಅತ್ಯಂತ ಸಮರ್ಪಕ ರೀತಿಯಲ್ಲಿ ಸಮನ್ವಯಗೊಳಿಸಲ್ಪಡುತ್ತವೆ. ಉದಾಹರಣೆಗೆ ರಾಧಾಕೃಷ್ಣನ್ ಅವರ ತಾತ್ತ್ವಿಕ ಚಿಂತನೆಯಲ್ಲಿ ರಾಮಾನುಜರ ದೈವಾಸ್ತಿತ್ವವಾದವನ್ನೂ ಶಂಕರರ ನಿರಪೇಕ್ಷವಾದವನ್ನೂ (Absolutism) ಬಹಳ ಚೆನ್ನಾಗಿ ಸಮನ್ವಯಗೊಳಿಸಲಾಗಿದೆ. ಈ ರೀತಿಯ ಸಮನ್ವಯ ಇತರ ಆಧುನಿಕ ಭಾರತೀಯ ಚಿಂತಕರಾದ ಶ್ರೀರಾಮಕೃಷ್ಣ, ಗಾಂಧೀಜಿ, ರಬೀಂದ್ರರು–ಇವರ ದರ್ಶನಗಳಲ್ಲೂ ಕಂಡುಬರುತ್ತದೆ. ಹೀಗೆ ಆಧುನಿಕ ಭಾರತೀಯ ಚಿಂತನೆ ವಿಶೇಷವಾಗಿ ಸಮನ್ವಯ ಚಿಂತನೆಯಾಗಿದೆ.

(೬) ಆಧುನಿಕ ಭಾರತೀಯ ಚಿಂತನೆಯ ಇನ್ನೊಂದು ಪ್ರಮುಖ ಲಕ್ಷಣವೆಂದರೆ, ಅದು ಒಟ್ಟಾರೆ ಆಧ್ಯಾತ್ಮ ಏಕವಾದ (Spiritualistic monism). ಪುರಾತನ ಭಾರತೀಯ ಹಾಗೂ ಐರೋಪ್ಯ ದರ್ಶನಗಳಲ್ಲಿ ಪರಸ್ಪರ ವಿರುದ್ಧ ತತ್ತ್ವಗಳೆಂದು ಪರಿಗಣಿಸಿ ಮುಂದಿನ ತಾತ್ತ್ವಿಕ ಚಿಂತನೆಯ ಬೆಳವಣಿಗೆಗೆ ಒಂದು ವಿಧದ ಅಡ್ಡಿಯನ್ನುಂಟು ಮಾಡಿದ ಮನಸ್ಸು ಮತ್ತು ದೇಹ (Mind and Body) ಅಥವಾ ಚೈತನ್ಯ ಮತ್ತು ಜಡ (Spirit and

Matter) [ಉದಾ: ಸಾಂಖ್ಯದರ್ಶನ, ಅನಾಕ್ಸಗೋರಾಸ್‌ನ ತಾತ್ತ್ವಿಕ ಚಿಂತನೆ ಮತ್ತು ಆಧುನಿಕ ಕಾಲದಲ್ಲಿ ಡೇಕಾರ್ಟ್‌ನ ತಾತ್ತ್ವಿಕ ಚಿಂತನೆ ಇತ್ಯಾದಿ] ಇವುಗಳನ್ನು ಅತ್ಯಂತ ಶ್ಲಾಘನೀಯವಾದ ರೀತಿಯಲ್ಲಿ ಅರಬಿಂದೋ ದರ್ಶನದಲ್ಲಿಯೂ ರಾಧಾಕೃಷ್ಣನ್ ಅವರ ತಾತ್ತ್ವಿಕ ಚಿಂತನೆಯಲ್ಲಿಯೂ ನಿವಾರಿಸಲಾಗಿದೆ. ಜಡ ಮತ್ತು ಚೈತನ್ಯಗಳ ನಡುವೆ ಯಾವುದೇ ಕಠೋರ ಗಡಿರೇಖೆಯನ್ನು ತಾತ್ತ್ವಿಕವಾಗಿ ಎಳೆಯಲಾಗುವುದಿಲ್ಲ ಎಂದು ಈ ದರ್ಶನಗಳು ವಿವರಿಸುತ್ತವೆ; ಜಡ ತನ್ನ ಗರ್ಭದಲ್ಲಿ ಆಗಲೇ ಚೈತನ್ಯವನ್ನು ಅಡಗಿಸಿಕೊಂಡಿರುತ್ತದೆ; ಅದು ಕ್ರಮೇಣ ವಿಕಾಸವಾಗುತ್ತಾಗುತ್ತಾ ಚೈತನ್ಯದ ಅತ್ಯುಚ್ಚಮಟ್ಟವನ್ನು ಮುಟ್ಟಿ ಪುನಃ ತನ್ನ ಅನಂದಕ್ಕೋಸ್ಕರ ಜಡದ ಗರ್ಭವನ್ನು ಪ್ರವೇಶಿಸಿ, ಪುನಃ ವಿಕಾಸ ಹೊಂದುತ್ತದೆ. ಇದು ಒಂದು ನಿರಂತರ ಕ್ರಿಯೆ (process) ಎಂದು ಅರವಿಂದ ದರ್ಶನ ಸಾರುತ್ತದೆ. ಹೀಗೆ ಜಡ ಮತ್ತು ಚೈತನ್ಯಗಳಿಗಿರುವ ವ್ಯತ್ಯಾಸ ಕೇವಲ ಸಾಪೇಕ್ಷ; ಮೂಲಭೂತವಾದುದಲ್ಲ ಎಂದು ಆಧುನಿಕ ಭಾರತೀಯ ಚಿಂತನೆ ಅಭಿಪ್ರಾಯ ಪಡುತ್ತದೆ.

(೭) ಆಧುನಿಕ ಭಾರತೀಯ ಚಿಂತನೆಯ ಇನ್ನೊಂದು ವೈಶಿಷ್ಟ್ಯವೆಂದರೆ ಜೀವಾತ್ಮ ಸ್ವಭಾವದಲ್ಲಿ ಕ್ರಿಯಾತ್ಮಕ ಎಂಬ ನಿಲುವನ್ನು ಪ್ರತಿಪಾದಿಸುವುದು. ಪುರಾತನ ಭಾರತೀಯ ದರ್ಶನಗಳಾದ ನ್ಯಾಯ–ವೈಶೇಷಿಕ, ಸಾಂಖ್ಯ ಇತ್ಯಾದಿಗಳಲ್ಲಿ ಜೀವಾತ್ಮನನ್ನು ನಿಷ್ಕ್ರಿಯನೆಂದೂ ಉದಾಸೀನನೆಂದೂ ಕೇವಲ ಸಾಕ್ಷಿಯೆಂದೂ ಚಿತ್ರಿಸಲಾಗಿದೆ. ಜೀವಾತ್ಮನ ಈ ನಿಷ್ಕ್ರಿಯತೆಯನ್ನು ಆಧುನಿಕ ಭಾರತೀಯ ಚಿಂತನೆ ಆಕ್ಷೇಪಿಸುತ್ತದೆ. ಇಲ್ಲಿ ಜೀವಾತ್ಮ ನಿರಂತರವಾಗಿ ಮೇಲಕ್ಕೇರುತ್ತಿರುವ ತತ್ತ್ವ; ಅದು ಜ್ಞಾನದಲ್ಲಿ, ಧನ್ಯತೆಯಲ್ಲಿ, ದೈವಿಕತೆಯಲ್ಲಿ, ಶಕ್ತಿಯಲ್ಲಿ, ಅನಂತತೆಯಲ್ಲಿ ವೃದ್ಧಿ ಹೊಂದುತ್ತಾ ಇರುತ್ತದೆ; ಅದು ಎಂದಿಗೂ ನಿಷ್ಕ್ರಿಯವಾಗುವುದಾಗಲೀ ಜ್ಞಾನರಹಿತವಾಗುವುದಾಗಲೀ ಸಾಧ್ಯವೇ ಇಲ್ಲ ಎಂದು ಆಧುನಿಕ ಭಾರತೀಯ ಚಿಂತನೆ ಪ್ರತಿಪಾದಿಸುತ್ತದೆ.

(೮) ಆಧುನಿಕ ಭಾರತೀಯ ಚಿಂತನೆ ಮುಖ್ಯವಾಗಿ ಮಾನವತಾ ಸಿದ್ಧಾಂತವಾಗಿದೆ (Humanistic). ಜಾತಿ, ಮತ, ಕುಲ, ಗೋತ್ರ, ಅನಾವಶ್ಯಕ 'ಸಂಸ್ಕಾರ ಕರ್ಮ ಪದ್ಧತಿ' ಮುಂತಾದ ಪುರಾತನ ಹಿಂದೂ ಸಮಾಜದ ಕಟ್ಟುಪಾಡುಗಳನ್ನು ಅದು ವಿರೋಧಿಸುತ್ತದೆ; ಬೇರಾವ ಕಾರ್ಯಕ್ಕಿಂತಲೂ ಶೋಷಿತರು ಬಡವರು ಮುಂತಾದ ದರಿದ್ರ ನಾರಾಯಣರ ಸೇವೆ ಮುಖ್ಯ; ಮಾನವರ ನಡುವೆ ಪರಸ್ಪರ ಪ್ರೀತಿ, ವಿಶ್ವಾಸ, ಗೌರವ, ನ್ಯಾಯಶೀಲತೆ, ವಿಶಾಲಮನೋಭಾವ ಇವು ವೃದ್ಧಿಯಾಗಬೇಕೆಂದು ಪ್ರತಿಪಾದಿಸುವ ಅದು ತೆರೆದ ಮನಸ್ಸಿನ ಚಿಂತನೆಯಾಗಿ, ಮಾನವತಾವಾದವಾಗಿ ಮುಂದುವರಿಯುತ್ತಿದೆ.

ಅಡಿಟಿಪ್ಪಣಿಗಳು

1. D. S. Sarma: *Hinduism Through the Ages*, (Bharatiya Vidya Bhavan Publication, 1955) p. 2.

2. ಪಿ. ಎ. ಶಿಲ್ಪ್ ಎಂಬ ಪಾಶ್ಚಾತ್ಯ ವಿಮರ್ಶಕನ ಮುನ್ನುಡಿ: R. S. Srivatsava: *Contemporary Indian Philosophy* [Munshiram Manoharlal, 1965]

3. ಈ ಲೇಖನದ ಪುಟ ೨ನ್ನು ನೋಡಿ.

4. "In modern times then, ethical world and life affirmation in Hinduism becomes more and more significant." Albert Schwertzer, *Indian thought and its development*. [Adam and Charles Black, London 1951], p. 209

ವಿ. ಎಸ್. ಭಟ್ಟ

ಉತ್ತರ ಕನ್ನಡ ಜಿಲ್ಲೆಯಲ್ಲಿ ಯಕ್ಷಗಾನದ ಹುಟ್ಟು ಬೆಳವಣಿಗೆ :

ಭರತನಾಟ್ಯ ಪ್ರೌಢವಾದ ಶಾಸ್ತ್ರೀಯನಾಟ್ಯವಾಗಿ ಮುಖ್ಯವಾಗಿ ರಾಜಾಶ್ರಯದಲ್ಲಿ ಬೆಳೆದು ಬಂದಿತು. ಸಮಾಜದ ಉನ್ನತ ವರ್ಗದವರಿಗೆ ಅದು ಮೀಸಲಾಗಿದ್ದಿತೇ ಹೊರತು ಸಾಮಾನ್ಯ ಜನರಿಗೆ ಎಟುಕುವಂತಿರಲಿಲ್ಲ. ಜನ ಸಾಮಾನ್ಯರ ರಂಜನೆಗಾಗಿ ಇತರ ಅನೇಕ ಬಗೆಯ ನೃತ್ಯಗಳು ಬೆಳೆದು ಬಂದವು. ಕರ್ಣಾಟಕದಾದ್ಯಂತ ಒಂದಲ್ಲ ಒಂದು ವಿಧದ ಜಾನಪದ ನೃತ್ಯ ಪ್ರಕಾರಗಳನ್ನು ಕಾಣಬಹುದು. ನಾಗನೃತ್ಯ, ಭೂತನೃತ್ಯಗಳು, ಮಲೆಕುಡಿಯರ ನೃತ್ಯ, ಪರಾವಂತರ ಕುಣಿತ ಅಥವಾ ವೀರಭದ್ರ ಕುಣಿತ, ಎಲ್ಲಮ್ಮನ ಕುಣಿತ, ನಂದಿಕೋಲು ಕುಣಿತ, ಹಗಲು ವೇಷದ ಆಟ, ದಾಸರ ಆಟ, ಗೊಂಬೆಯ ಆಟ, ರೂಪಸಿಂಗನ ಆಟ, ಸಂಗ್ಯಾಬಾಳ್ಯಾ, ಇತ್ಯಾದಿ ಪ್ರಾದೇಶಿಕವಾದ ಅನೇಕ ಬಗೆಗಳಿವೆ. ಇದಲ್ಲದೆ ಕೋಲಾಟ, ಸುಗ್ಗಿಯ ಕುಣಿತ ಮೊದಲಾದ ಜಾನಪದ ಸಮನ್ವಿತವಾದ ಕುಣಿತಗಳಂತೂ ಎಲ್ಲೆಡೆ ವ್ಯಾಪಿಸಿವೆ.

ಯಕ್ಷಗಾನವೂ ಸಹ ಒಂದು ಜಾನಪದ ಹಳೆಯ ಹಿರಿಯ ಕಲೆ. ಭರತನು ಹೇಳಿದ ನಾಟ್ಯ ಸಂಪ್ರದಾಯದ ಹಿನ್ನೆಲೆಯುಳ್ಳವು. ನಾಟ್ಯದ ಜೊತೆಗೆ ಸಂಭಾಷಣೆಯನ್ನು ಬೆಳೆಸಿ ನಾಟಕದ ಬೆಳವಣಿಗೆಗೆ ಹಾದಿಯನ್ನು ಹಾಕಿ ಕೊಟ್ಟವೆನ್ನಬಹುದು.

ಯಕ್ಷಗಾನವು ಗಂಧರ್ವ ಗಾನದಂತೆಯೇ ಒಂದು ಗಾನ ಪ್ರಭೇದ. ಯಕ್ಷ ಜನಾಂಗಕ್ಕೇ ವಿಶಿಷ್ಟವಾಗಿರುವ ಗಾನವೆಂಬುದರಿಂದ ಅದಕ್ಕೆ ಆ ಹೆಸರು ಬಂದಿರಬೇಕೆಂದು ಕೆಲವರ ಎಣಿಕೆ. ಅದರಂತೆ ಗಂಧರ್ವರಿಗೇ ವಿಶಿಷ್ಟವಾಗಿರುವ ಗಾನಭೇದಕ್ಕೆ ಗಂಧರ್ವಗಾನವೆಂದು ಹೆಸರು. ಸಂಗೀತವು ಗೀತ, ವಾದ್ಯ, ನರ್ತನಗಳ ಕೂಟ. ಸಂಗೀತವು ಮಾರ್ಗ ಸಂಗೀತ, ದೇಶೀ ಸಂಗೀತ ಎಂದು ಇಬ್ಬಗೆಯಾಗಿದೆ. ದೇವಗಾನವು ಮಾರ್ಗ ಸಂಗೀತ. ಗಂಧರ್ವಗಾನ ಯಕ್ಷಗಾನಗಳು ದೇಶೀ ಸಂಗೀತ. ಸಂಗೀತದ ರಾಗ, ತಾಳ, ಲಯಗಳು ಗಂಧರ್ವ ಗಾನದಲ್ಲಿರುವಂತೆಯೇ ಯಕ್ಷ ಗಾನದಲ್ಲೂ ಇದೆ. ಯಕ್ಷಗಾನದ ಬಗ್ಗೆ ವಿವರಿಸುವ ಶಾಸ್ತ್ರೀಯ ಸಮಗ್ರಗ್ರಂಥವು ಇದುವರೆಗೂ ಉಪಲಬ್ಧವಾಗಿಲ್ಲ.

ಯಕ್ಷಗಾನದ ಬಗ್ಗೆ ಮೂಲ ಸಂಶೋಧನೆ ಇನ್ನೂ ನಡೆಯಬೇಕಾಗಿದೆ. ಯಕ್ಷಗಾನ ಎಂದರೆ ಯಾವುದು ? ಅಮರ ಸಿಂಹನ ನಿಘಂಟು "ಯಕ್ಷರಕ್ಷೋ ಗಂಧರ್ವ ಕಿನ್ನರಾಃ ಪಿಶಾಚೋ ಗುಹ್ಯಕಸ್ಸಿದ್ಧೋ ಭೂತೋಮಿ ದೇವಯೋನಯಃ" ಎಂದು ಯಕ್ಷರನ್ನು ದೇವಯೋನಿಯೊಳಗೆ ಒಂದು ವರ್ಗದವರನ್ನಾಗಿ ಸಾರುತ್ತಿದೆ. ಯಕ್ಷರ ಒಡೆಯನಾದ ಕುಬೇರನು ಲಂಕಾನಗರಾಧಿ ಪತಿಯಾಗಿದ್ದನೆಂದೂ ರಾವಣನಿಂದ ಪರಾಜಿತನಾಗಿ ಉತ್ತರದ ಕೈಲಾಸ ಪರ್ವತಕ್ಕೆ ಹೋದನೆಂದೂ

ಭಾಗವತರ ಮುಮ್ಮೇಳದ ಕೃತಿಗಳನ್ನು ಮತ್ತು ಸಂಗೀತಗಾರರ ಅವರ ಅರ್ಥವನ್ನು ಕೃತಿಯಲ್ಲಿ ತಿಳಿಸಿದ್ದಾರೆ. ಸಭೆಯ ತಿಂಗಳುಗಳ ಪ್ರಭಾವ ಅವರ ಅಭಿನಯ. ಎಂದು ಈ ಕೃತಿ ತಿಳಿಸಿದೆ.

ಯಕ್ಷಗಾನದಲ್ಲಿ ಭಾಗವತರು ಮಹತ್ವದ ಸ್ಥಾನವನ್ನು ಪಡೆಯುತ್ತಾರೆ. ಸಭಾಲಕ್ಷಣದಲ್ಲಿಯೂ ಬರುವ ಶ್ಲೋಕವು ಭಾಗವತ ಲಕ್ಷಣವನ್ನು ಹೀಗೆ ಹೇಳಿದೆ:

"ಭಕಾರೋ ಭಕ್ತಿಭಾವೇನ ಗಕಾರೋ ಗರ್ವವರ್ಜಿತಃ
ವಕಾರಃ ವಾಕ್ಯ ಚತುರ ತಕಾರಃ ತತ್ವಜ್ಞಾನವಾನ್ ।

ಎಂದು ತಿಳಿಸುತ್ತ ಭಾಗವತ ಪದದ ಭಾ–ಗ–ವ–ತ ಎಂಬ ಅಕ್ಷರಗಳ ಅರ್ಥ ತಿಳಿಸಿದೆ.

ಯಕ್ಷಗಾನದ ಪ್ರಾಚೀನತೆಯನ್ನು ಕುರಿತು ನಾವು ನಿರ್ದಿಷ್ಟವಾಗಿ ಏನನ್ನೂ ಹೇಳುವಂತಿಲ್ಲ. ಕ್ರಿ.ಶ. ೧೫ನೇ ಶತಮಾನದ ಹಿಂದೆ ಜನಪದ ಯಕ್ಷಗಾನದ ಹಿರಿಮೆ ಸ್ಪಷ್ಟವಾಗಿದೆ. ಇದು ಬಹು ಪ್ರಾಚೀನವಾದದ್ದು. ತಲೆತಲಾಂತರವಾಗಿ ನಡೆದು ಬಂದ ಕಲೆ. ಇದನ್ನು ದಕ್ಷಿಣ ಭಾರತದ ಕನ್ನಡ ನಾಡು, ಕೇರಳ, ಆಂಧ್ರ, ತಮಿಳುನಾಡುಗಳಲ್ಲಿ ಕಾಣಬಹುದು. ಅದರಲ್ಲೂ ಕನ್ನಡನಾಡಿನ ಉತ್ತರ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ವಿಶೇಷ ಪ್ರಚಾರದಲ್ಲಿದೆ. ಈ ಯಕ್ಷಗಾನವು ಜನಸಾಮಾನ್ಯರಿಗೂ ಸಂತೋಷದ ವಿರಾಮದಲ್ಲಿ ಮನಸ್ಸಿಗೆ ಶಾಂತಿಯನ್ನು, ಸಂತೋಷವನ್ನು ನೀಡಿ ಧಾರ್ಮಿಕ ಸಂಸ್ಕೃತಿಗಳನ್ನು ಬೋಧಿಸಬಲ್ಲುದಾಗಿದೆ.

ಯಕ್ಷಗಾನದಲ್ಲಿ ಮುಖ್ಯವಾಗಿ ಮೂರು ಭಾಗಗಳನ್ನು ಮಾಡಬಹುದು. ಪದ್ಯ ಹಾಡುವುದು, ಕುಣಿತ, ಅರ್ಥಗಾರಿಕೆಗಳೆಂದು. ಈ ರೀತಿ ನೃತ್ಯ ಸಂಗೀತ, ಸಾಹಿತ್ಯಗಳು ಕೂಡಿದ್ದೇ ಯಕ್ಷಗಾನವಾಗುತ್ತದೆ.

ಇದರಲ್ಲಿ ದಶಾವತಾರ ಆಟಗಳು ಅಥವಾ ಬಯಲಾಟ ಭಾಗವತರಾಟ ಮತ್ತು ತಾಳ ಮದ್ದಳೆ. ಇನ್ನು ಬಯಲು ಸೀಮೆಯ ಪ್ರದೇಶಗಳಲ್ಲಿ 'ಯಕ್ಷಗಾನ ದೊಡ್ಡಾಟ' ಎಂದೂ ಅನ್ನುತ್ತಾರೆ.

ಯಕ್ಷಗಾನವು ಪದ್ಯ ರೂಪದಲ್ಲಿದೆ. ಸಂಗೀತವು ಕರ್ಣಮಧುರವಾಗಿರುತ್ತದೆ. ಸಂಗೀತವನ್ನು 'ಮಾರ್ಗ', 'ದೇಶಿ' ಎಂದು ಎರಡು ಭಾಗವಾಗಿ ವಿಭಾಗ ಮಾಡಿದ್ದಾರೆ.

'ಮಾರ್ಗದೇಶೀವಿಭಾಗೇನ ಸಂಗೀತಂ ದ್ವಿವಿಧಂ ಸ್ಮೃತಂ
ನೃತ್ಯಂ ಗೀತಂ ತಥಾ ವಾದ್ಯಂ ತ್ರಯಂ ಸಂಗೀತಮುಚ್ಯತೇ ।

ನೃತ್ಯ (ಕುಣಿತ), ಗೀತ (ಹಾಡುವಿಕೆ), ವಾದ್ಯ (ಬಾರಿಸುವಿಕೆ) ಇವು ಮೂರೂ ಸಂಗೀತದ ಅಂಗಗಳು. ದೇವ ಗಾನವೇ ಮಾರ್ಗ ಸಂಗೀತ. ದೇಶೀ ಸಂಗೀತವು ಎರಡು ವಿಧ: 'ಗಂಧರ್ವಗಾನ', 'ಯಕ್ಷಗಾನ'. ಇದರ ಗಂಧರ್ವಗಾನವು ಬರೀ ಗಾನವಾಗಿ ಉಳಿಯಿತು. ಯಕ್ಷಗಾನವು ಸಾಹಿತ್ಯದಿಂದ ಕೂಡಿದ ಕಾರಣ ಯಕ್ಷಗಾನ ಸಾಹಿತ್ಯವಾಯಿತು. ತಾಳ ಮದ್ದಳೆ ಹಾಗೂ ದಶಾವತಾರ ಆಟಗಳೆರಡಕ್ಕೂ 'ಯಕ್ಷಗಾನ' ಎಂಬ ಒಂದೇ ಪದದಿಂದ ವ್ಯವಹರಿಸುವುದು ಈಗ ರೂಢಿಯಲ್ಲಿದೆ. ತಾಳಮದ್ದಳೆ ಆಟಗಳೆರಡರಲ್ಲೂ 'ಭಾಗವತರು' ಎಂದರೆ (ಹಾಡುಗಾರರು) ಹಾಡುತ್ತಾರೆ. ಭಾಗವತರು ಹಾಡುವ ಪದ್ಯಗಳಿಗೆ ಅರ್ಥಧಾರಿಗಳು ಸಂಭಾಷಣಾ ರೂಪದಲ್ಲಿ ರಸ, ಭಾವಾಭಿವ್ಯಕ್ತಿಯಾಗಿ ವ್ಯಾಖ್ಯಾನ ಮಾಡುತ್ತಾರೆ. ಈ ಯಕ್ಷಗಾನ ಪ್ರಸಂಗವು ದಶಾವತಾರ ಆಟ, ಭಾಗವತರ ಆಟ, ಎಂಬ ವಿಭಾಗದಿಂದ ಪ್ರೇಕ್ಷಕರಿಗೆ ಪ್ರಿಯವಾಗುತ್ತದೆ. ಬೀದಿ ನಾಟಕದಲ್ಲಿ ಹಾಡು, ಕುಣಿತಗಳು ಪ್ರಯೋಗಕ್ಕೆ [illegible] ಎಂದೂ ಕರೆದರೆ.

ಮೃದಂಗ ವಾದನ, ಚಂಡೆ ವಾದನಗಳಿವೆ. ತಾಳಮದ್ದಳೆಯ ಅರ್ಥಧಾರಿಗಳ ಬದಲಾಗಿ ಬಯಲಾಟದಲ್ಲಿ ವೇಷಭೂಷಣ ಸಜ್ಜಿತರಾದ ವೇಷಧಾರಿಗಳಿರುತ್ತಾರೆ. ವೇಷಧಾರಿಗಳು ಅರ್ಥಾಭಿವ್ಯಂಜಕವಾಗಿ ನರ್ತಿಸಿ ಭಾಗವತನ ಹಾಡನ್ನು ಸಂಭಾಷಣಾಮೂಲಕವಾಗಿ ಅಭಿನಯಿಸುತ್ತಾರೆ.

ಯಕ್ಷನ ಕೃತಿಗೆ ಪ್ರಸಂಗ ಎಂದು ಹೆಸರು. ಯಾವದಾದರೊಂದು ಪುರಾಣ ಪ್ರಸಿದ್ಧ ಕಥೆ ಪ್ರಸಂಗದ ವಸ್ತು. ಅದು ಪದ್ಯ ರೂಪದಲ್ಲಿರುವದು. ಪ್ರಸಂಗವು ಒಂದು ಇಡೀ ರಾತ್ರಿಯ ಪ್ರದರ್ಶನಕ್ಕೆ ಸಾಕಾಗುವಷ್ಟು ದೀರ್ಘವಾಗಿರಬೇಕು. ತಾಳಮದ್ದಳೆಗಳೂ ಬಯಲಾಟಗಳೂ ಸಾಮಾನ್ಯವಾಗಿ ರಾತ್ರಿಯೇ ನಡೆಯುತ್ತದೆ. ಇದು ಪುರಾತನ ಕಾಲದಿಂದ ನಡೆದು ಬಂದ ಪದ್ಧತಿ. ಯಕ್ಷಗಾನವು ಹಿಂದೂ ಸಂಸ್ಕೃತಿಯ ಕೈಗನ್ನಡಿ.

ಯಕ್ಷಗಾನದ ಸಂಪ್ರದಾಯವು ನಾಡಿನ ಎಲ್ಲೆಡೆಗಳಲ್ಲೂ ಏಕರೂಪವಾಗಿಲ್ಲ. ಘಟ್ಟದ ಮೇಲಣ ಸೀಮೆಯ ಸಂಪ್ರದಾಯಕ್ಕೆ 'ಮೂಡಲ ಪಾಯ' ಎಂದೂ ಉತ್ತರ ದಕ್ಷಿಣ ಜಿಲ್ಲೆಗಳ ಸಂಪ್ರದಾಯಕ್ಕೆ 'ಪಡುವಲ ಪಾಯ' ಎಂದೂ ಹೆಸರು. ಪಡುವಲ ಪಾಯದಲ್ಲಿ ಬಂಧ ಮತ್ತು ಪ್ರಯೋಗದ ರೀತಿ ಭೇದಗಳಿಗನುಗುಣವಾಗಿ 'ಬಡಗುಮಟ್ಟು' 'ತೆಂಕುಮಟ್ಟು' ಎಂಬ ಎರಡು ಭೇದಗಳಿವೆ.

ಗ್ರಾಮಾಂತರ ಪ್ರದೇಶಗಳ ಪಾಮರ ಜನತೆಯಲ್ಲಿ ಇಂದು ಹಿಂದೂ ಸಂಸ್ಕೃತಿಯೂ ಧರ್ಮನಿಷ್ಠೆಯೂ ಅಚ್ಚಳಿಯದೆ ಉಳಿದು ಬಂದಿದ್ದರೆ, ಅದಕ್ಕೆ ಬಹುತರವಾಗಿ ಯಕ್ಷಗಾನವೇ ಮೂಲ ಕಾರಣ. ಇದರಿಂದ ನಮ್ಮ ರೀತಿನೀತಿಗಳನ್ನು ಪರಿಷ್ಕರಿಸಿ, ನಯನೀತಿಗಳನ್ನು ಕುದುರಿಸಿಕೊಳ್ಳಲು ಅವು ನೆರವಾಗುತ್ತವೆ. ರಸಾನುಭವದ ಜತೆಗೆ ಆದರ್ಶ ಜೀವನದ ಕಲೆಯನ್ನು ಅವು ಕಲಿಸಿ ಕೊಡುತ್ತವೆ. "ಶಿವೇತರಕ್ಷತಿ"ಗೂ ಕಾರಣವಾಗುತ್ತದೆ. ನಮ್ಮ ಪೂರ್ವಜರು ನಿತ್ಯಜೀವನದಲ್ಲಿ ನಡೆಸಿಕೊಂಡು ಬಂದ ಧರ್ಮನಿಷ್ಠೆ, ಸತ್ಯಸಂಧತೆಗಳಿಂದ ಇಹ ಪರಲೋಕಗಳೆರಡರಲ್ಲೂ ಅವರಿಗೆ ಪ್ರಾಪ್ತವಾದ ಸುಖವ್ಯಾಪ್ತಿಯನ್ನು ವಿಸ್ತರಿಸುತ್ತವೆ. ಮೋಕ್ಷಸಾಧನೆ ದುಸ್ಸಾಧ್ಯವೇನೂ ಅಲ್ಲ. ಅದಕ್ಕೆ ಅಹರ್ನಿಶಿ ಪ್ರಾಣಾಯಾಮವೇ ಏಕೈಕ ಮಾರ್ಗವಲ್ಲ. ಮೋಕ್ಷಸಿದ್ಧಿಗೆ ನಿರ್ವಿಕಲ್ಪ ಭಗವದ್ಭಕ್ತಿಯೇ ಮೂಲ ಸಾಧನ. ಭಕ್ತಿಸಿದ್ಧಿಗೆ ತ್ಯಾಗಜೀವನವೇ ಸಾಧನ. ಪರರಿಗೆ ಒಳಿತನ್ನೆಸಗುವುದೇ ಪುಣ್ಯ. ಅನ್ಯರಿಗೆ ಕೆಡಗೆಸಗುವುದೇ ಪಾಪ. ಪಾಪಮಾರ್ಗವನ್ನು ಬಿಟ್ಟು ಪುಣ್ಯವನ್ನು ಬೆಳೆಸಿ ಕೊಳ್ಳಬೇಕೆಂಬುದೇ ಯಕ್ಷಗಾನ ಸಾಹಿತ್ಯದ ನೀತಿ ಬೋಧನೆ.

ಯಕ್ಷಗಾನವು ಜನಸಾಮಾನ್ಯರಿಗೆ ಸಂಬಂಧಪಟ್ಟ ಕಲೆಯೆಂದು ಪ್ರಸಿದ್ಧಿ ಪಡೆದುದರಿಂದ ಜಾನಪದ ಕಲೆಯೆಂದು ಕರೆಯುವದು ಯೋಗ್ಯವಾಗಿದೆ. ಯಕ್ಷಗಾನದಲ್ಲಿ ಉತ್ತರ, ದಕ್ಷಿಣ ಎಂಬೆರಡು ಪ್ರಾದೇಶಿಕ ಭೇದವಿದೆಯಷ್ಟೇ. ಆದರೆ ಇವೆರಡರಲ್ಲಿ ಯಾವುದು ಮೇಲು, ಯಾವುದು ಕೀಳು ಎಂದು ಹೇಳುವ ಹಾಗಿಲ್ಲ. ಕುಣಿತ ಹಾಗೂ ಹಾಡುವಿಕೆಯಲ್ಲಿ ಬದಲಾವಣೆ ಇದೆ ಅಷ್ಟೆ. ಕನ್ನಡದಲ್ಲಿ ಭಾಷೆ ಹೇಗೆ ಪ್ರಾಂತಭೇದವನ್ನು ಹೊಂದಿದೆಯೋ ಹಾಗೇ ಸ್ವಲ್ಪಮಟ್ಟಿಗೆ ಬದಲಾವಣೆ ಇದೆ.

ಉತ್ತರಕನ್ನಡದವರು ಉತ್ತರಾದಿಯಾಗಿ ಹಾಡು ಹಾಗೂ ಕುಣಿತವನ್ನು ಪ್ರಾರಂಭಿಸಿದರೆ ದಕ್ಷಿಣಕನ್ನಡದವರು ದಕ್ಷಿಣಾದಿಯಾಗಿ ಹಾಡು, ಕುಣಿತಗಳನ್ನು ಪ್ರಾರಂಭಿಸುತ್ತಾರೆ. ಉತ್ತರ ಕನ್ನಡದವರು ತಾಳವನ್ನು ಉಪಯೋಗಿಸಿದರೆ ದಕ್ಷಿಣದವರು ಜಾಗಟೆಯನ್ನು ಉಪಯೋಗಿಸುತ್ತಾರೆ. ಬರೇ ವೇಷ ಹಾಕಿ ಕುಣಿಯುವುದು ಮಾತ್ರ ಯಕ್ಷಗಾನವೆಂದು ಹೇಳಲಾಗುವದಿಲ್ಲ. ವೇಷ ಹಾಕದ ಕುಣಿತಗಳಿಂದ ಕೂಡಿದ ಯಕ್ಷಗಾನವೂ ಇದೆ. ವೇಷ ಕುಣಿತಗಳಿಲ್ಲದ ಯಕ್ಷಗಾನವೂ ಇದೆ. ಯಾವದೇ ರೂಪದ ಯಕ್ಷಗಾನವಿರಲಿ, ಅರ್ಥವಿವರಣೆ ಮುಖ್ಯವಾದದ್ದು.

ಯಕ್ಷಗಾನದಲ್ಲಿ 'ತಾಳಮದ್ದಳೆ', 'ಬಯಲಾಟ' ಎಂಬ ಎರಡು ವಿಧಗಳಲ್ಲಿ ಉತ್ಪತ್ತಿಗಳ ಬಗ್ಗೆ ಯಾವುದು ಮೊದಲು ಯಾವುದು ಕೊನೆಗೆ ಹುಟ್ಟಿದ್ದೆಂದು ಹೇಳುವಂತಿಲ್ಲ. ಎರಡೂ ಏಕಕಾಲದಲ್ಲಿ ಹುಟ್ಟಿದವೆಂದು ಹೇಳಬಹುದು. ಬೇಸಿಗೆಯಲ್ಲಿ ವೇಷಹಾಕಿ ಕುಣಿದು ಮಳೆಗಾಲದಲ್ಲಿ ಮನೆಗಳಲ್ಲೋ ದೇವಸ್ಥಾನಗಳಲ್ಲೋ ಇನ್ನಿತರ ಕಟ್ಟಡಗಳಲ್ಲೋ ತಾಳಮದ್ದಳೆ ಪ್ರಾರಂಭಿಸಿದ್ದರಿಂದ ಈ ಎರಡೂ ರೂಪಗಳು ಬಳಕೆಯಲ್ಲಿ ಬಂದಂತಿವೆ. ಬಯಲಾಟದಲ್ಲಿ ಕುಣಿತ, ಅರ್ಥ ಪ್ರಧಾನವಾದುದು. ತಾಳಮದ್ದಳೆಯಲ್ಲಿ ಅರ್ಥಗಾರಿಕೆ ಪ್ರಧಾನವಾದುದು. ಅವರ ಪ್ರಸಂಗಗಳು (ಕಥಾಭಾಗ) ಇವೆರಡಕ್ಕೂ ಒಂದೇ. ಹಾಡುವವರಿಗೆ ಭಾಗವತರೆಂದು ಹೆಸರು. (ಭಗವದ್ಭಕ್ತರು) ಎಂದರೆ ದೇವರ ಕಥೆಯನ್ನು ಹಾಡುವವರು.

"ಭಗವದಾರಾಧನಮೇವ ಪರಮೋಧರ್ಮಃ। ತದ್ವಿರುದ್ಧಃ ಸರ್ವೋಽಪಿ ಅಧರ್ಮಃ।" ಅಂದರೆ ಭಗವಂತನ ಸೇವೆಯೂ ಧರ್ಮ. ಅದರ ವಿರುದ್ಧವಾದುದೆಲ್ಲ ಅಧರ್ಮ ಎಂಬಂತೆ ದೇವರ ಕಥೆಯನ್ನೇ ಧರ್ಮದ ಸೇವಾರೂಪವಾಗಿ ಭಾಗವತರು ಹಾಡಿಕೊಂಡು ಬರುತ್ತಿದ್ದರು. ಅವುಗಳಿಗೆ ಪ್ರಸಂಗ ಎಂದು ಹೆಸರು. ಹಿಂದಿನಕಾಲದಲ್ಲಿ ಕಂಠಪಾಠಮಾಡಿ ತಂದೆಯಿಂದ ಮಗ, ಗುರುವಿನಿಂದ ಶಿಷ್ಯ ಹೀಗೆ ಪರಂಪರಾಗತವಾಗಿ ನಡೆಸಿಕೊಂಡು ಬರುತ್ತಿದ್ದರು. ಈಗ ಅವುಗಳೆಲ್ಲಾ ಅಚ್ಚಾಗಿವೆ.

ಭಾಗವತರು ಕಥಾವಸ್ತುವಾದ ಪ್ರಸಂಗದ ಪದ್ಯಗಳನ್ನು ಶಾಸ್ತ್ರೀಯವಾಗಿ ಹಾಡುತ್ತಾರೆ. ಅದರ ಜತೆಗೆ ತಾಳ, ಮದ್ದಳೆಗಳನ್ನು ಬಾರಿಸಲಾಗುತ್ತದೆ. ತಾಳ ಮದ್ದಳೆಗಳಲ್ಲಿ ಕುಳಿತುಕೊಂಡು ಅರ್ಥಧಾರಿಗಳು ಅರ್ಥ ಹೇಳುತ್ತಾರೆ. ದಶಾವತಾರ ಆಟಗಳಲ್ಲಿ ಪದ್ಯ, ಮೃದಂಗ, ಚಂಡೆ, ವೇಷ, ಕುಣಿತ, ತಾಳ, ಅರ್ಥ, ಇವೆಲ್ಲಾ ಮುಖ್ಯವಾದರೆ, 'ತಾಳಮದ್ದಳೆ'ಯಲ್ಲಿ ತಾಳ, ಪದ್ಯ, ಮೃದಂಗ, ಮತ್ತು ಅರ್ಥ ಇವುಗಳಿದ್ದರೆ ಸಾಕು. ಇನ್ನು ಯಕ್ಷಗಾನ ನಾಟಕಗಳೂ ಇವೆ. ಇವುಗಳಲ್ಲಿ ಕುಣಿತವಿಲ್ಲದ ಅಭಿನಯ ಮಾತ್ರ ಇರುತ್ತದೆ. ಬಯಲಾಟದ ಇತರ ಅಂಗಗಳೆಲ್ಲಾ ಯಕ್ಷಗಾನ ನಾಟಕಗಳಲ್ಲಿರುತ್ತವೆ.

ಯಕ್ಷಗಾನದಲ್ಲಿ 1. ಅರ್ಥವಿವರಣೆ 2. ಹಾಡುಗಾರಿಕೆ 3. ಮೃದಂಗ, ಚಂಡೆ, ತಾಳ, ಬಾರಿಸುವಿಕೆ 4. ವೇಷಗಾರಿಕೆ 5. ಕುಣಿತ–ಈ ರೀತಿಯಾಗಿ ವಿಭಾಗಿಸಬಹುದು.

ಇನ್ನು ಉತ್ತರ ಕನ್ನಡದ ಯಕ್ಷಗಾನದ ಬಗ್ಗೆ ಪರಿಚಯ ಮಾಡಬಯಸುತ್ತೇನೆ. ಇಲ್ಲಿ ಯಕ್ಷಗಾನವನ್ನು ಹವ್ಯಕರು, ನಾಡವರು (ನಾಯಕರು), ನಾಮಧಾರಿ ನಾಯಕರು, ಪಟಗಾರರು, ವಿಶೇಷವಾಗಿ ಆಡುವರು. ಯಕ್ಷಗಾನವು ಇಲ್ಲಿ ಅತಿ ಪುರಾತನ ಕಾಲದಿಂದಲೂ ಪ್ರಚಾರದಲ್ಲಿದ್ದು ಇಲ್ಲಿಯೇ ಹುಟ್ಟು ಆಯಿತೆಂದು ಬಹು ಜನರ ಅಭಿಪ್ರಾಯವಿದೆ. ಅಲ್ಲದೇ ಆಧಾರವಾಗಿ ಒಂದು ಕಥೆಯೂ ಈ ರೀತಿ ಇದೆ:

ಧಾರೇಶ್ವರದ ಸಮೀಪವಿರುವ ಅಗ್ರಹಾರ ಎಂಬ ಊರಲ್ಲಿ ಗಣಪತಿ ಸಭಾಹಿತನೆಂಬ ಮಹಾಪಂಡಿತ ಹಾಗೂ ಆಧ್ಯಾತ್ಮಜೀವಿ ಇದ್ದು ಆತ ಬಡತನದ ವ್ಯಾಧಿಯಿಂದ ಸಂಸಾರದಲ್ಲಿ ಜುಗುಪ್ಸೆ ಹುಟ್ಟಿ, ಸದಾ ಹರಿಕಥಾಶ್ರವಣ, ದೇವಚಿಂತನ, ಪೂಜೆ ಪುನಸ್ಕಾರಗಳಲ್ಲಿ ತತ್ಪರನಾಗಿದ್ದ. ಹೀಗೆ ಒಂದು ದಿನ ದೇವಧ್ಯಾನದಲ್ಲಿ ಮೈಮರೆತಾಗ, ಕಿವಿಯಲ್ಲಿ ಆತನ ಕುಲ ದೈವ ಇಡಗುಂಜಿ ಗಣೇಶನು ಬಂದು ನೀನು ಈ ಧರೆಯಲ್ಲಿ ಯಕ್ಷಗಾನವೆಂಬ ಮಹಾಕತೆಯನ್ನು ಕುಣಿದು, ಹಾಡಿ ಅದರ ವಿವರಣೆಯನ್ನು ಜನರಲ್ಲಿ ಅರುಹು ಎಂದು ಹೇಳಿ ಅದಕ್ಕೆ ತಕ್ಕ 64 ವಿಧ ನೃತ್ಯ, 16 ರಾಗಗಳನ್ನೂ ಹಾಡುವ ವಿಧಾನವನ್ನು ಸೂಚಿಸಿ, ಇದರಿಂದ ನಿನ್ನ ಇಷ್ಟಾರ್ಥ ಸಿದ್ಧಿಸುವದರ ಜೊತೆಗೆ ಈ ಲೋಕದಲ್ಲಿ ನೀನು ಕೀರ್ತಿಶಾಲಿಯಾಗುತ್ತೀಯ ಎಂದು ಹರಸಿ ಅದೃಶ್ಯನಾದನಂತೆ. ಈತ ಧ್ಯಾನವನ್ನು ಮುಗಿಸಿ ಕಣ್ತೆರೆದು ನೋಡಲಾಗಿ ಯಾರೂ ಕಾಣುತ್ತಿಲ್ಲ. ಇದು ನನ್ನ ಹಗಲ

ಗನಸೇ ಎಂದು ಮನದಲ್ಲೀ ಆಲೋಚಿಸಿ ಏನಿದ್ದರೂ ಇದು ದೈವಪ್ರೇರಣೆಯೆಂದು ಆತ ತನ್ನ ಸುಮಧುರ ಕಂಠದಿಂದ ಹಾಡಿ 64 ಬಗೆಯ ನೃತ್ಯಗಳಿಂದ ಕುಣಿಯಲು ಪ್ರಾರಂಭಿಸಿದಾಗ ಆತನಿಗೇ ಆಶ್ಚರ್ಯವಾಯ್ತಂತೆ. ಇನ್ನೊಂದೆಡೆ ಅತೀವ ಆನಂದ ತನ್ನ ಕನಸು ನನಸಾಯಿತಲ್ಲ ಎಂದು. ಆತ ಅದರಲ್ಲಿ ತಲ್ಲೀನನಾದಾಗ ಜನರಿಗೆಲ್ಲಾ ಆಶ್ಚರ್ಯವೂ ಕುತೂಹಲವೂ ಉಂಟಾಗಿ, ಅವನಲ್ಲಾದ ಅತೀವ ಬದಲಾವಣೆಯನ್ನು ನೆರೆದ ಜನರೆಲ್ಲಾ ನೋಡಿ ಮನದಣಿದರಂತೆ. ಆತನಿಗೆ ಎಚ್ಚರವಾದಾಗ ನೋಡುತ್ತಾನೆ, ತನ್ನ ಸುತ್ತಲೂ ಜನ ನೆರೆದಿದ್ದಾರೆ! ಅವರಿಗೆ ನಡೆದ ಸಂಗತಿಯನ್ನೆಲ್ಲಾ ವಿವರಿಸಿದನಂತೆ.

ಆತನಿಗೆ ಪುರಾಣದ ಕಥಾ ಭಾಗವೆಲ್ಲ ಮೊದಲೇ ಗೊತ್ತಿದ್ದರಿಂದ ಆತ ಪ್ರಸಂಗಗಳನ್ನು ರಚಿಸಿ ಅವನ್ನು ಪರರಿಗೆ ಬೋಧಿಸಲು ಪ್ರಾರಂಭಿಸಿದನಂತೆ. ಅದನ್ನು ತಾಡವಾಲೆಯಲ್ಲೂ ರಚಿಸಿದನಂತೆ. ನಂತರ ಒಂದು ಯಕ್ಷಗಾನ ಮೇಳವನ್ನು ರಚಿಸಿ ಭರತನಾಟ್ಯದ ಶೈಲಿಯಲ್ಲಿ ಅವರಿಗೆ ಕುಣಿತ ಹಾವಭಾವ ಸಂಭಾಷಣೆಯ ವಿಧಗಳನ್ನೆಲ್ಲ ತಿಳಿಸಿಹೇಳಿ, ಭಾಗವತಿಕೆಯನ್ನು ಸ್ವತಃ ಹಾಡಿ ಜನರಲ್ಲಿ ಹೆಚ್ಚು ಆಸಕ್ತಿ ಹುಟ್ಟುವಂತೆ ಮಾಡಿದನು.

ಈ ರೀತಿ ಇವನಿಂದ ಬೋಧಿಸಲ್ಪಟ್ಟ ಕಲೆಯು ಬಹುಬೇಗ ಉತ್ತರಕನ್ನಡ ಜಿಲ್ಲೆಯಲ್ಲೂ ಕರ್ನಾಟಕದ ಇತರೆಡೆಯಲ್ಲೂ ಹಬ್ಬಿ ಕನ್ನಡದ ಉಚ್ಚ ಸಂಸ್ಕೃತಿಯ ಪ್ರತೀಕವಾಗಿ ಜೀವಂತ ಕಲೆಯಾಗಿ ಉಳಿದಿದೆ. ಇದರಿಂದ ಇವನ ಮೂಲ ಉದ್ದೇಶ ಈಡೇರಿ ಇಹದಲ್ಲಿ ಸುಖ ಪರದಲ್ಲಿ ಮೋಕ್ಷ ಪಡೆದವನಾದನು. ಇದು 'ಸಭಾಹಿತತಿಟ್ಟು' ಎಂದು ಪ್ರಸಿದ್ಧವಾಗಿರುವುದನ್ನು ಇಂದೂ ಕಾಣಬಹುದು. ಇವರ ಕುಲ ದೈವ ಇಂದಿಗೂ ಇಡಗುಂಜಿ ಮಹಾಗಣಪತಿ.

ಈ ರೀತಿ ಗಣಪತಿ ಸಭಾಹಿತನು ಮೂಲಪುರುಷನಾಗಿ ಅವನಿಂದ ಮುಂದೆ ತಲೆತಲಾಂತರಗಳಿಂದ ನಡೆದುಬಂದಿದೆ ಈ ಯಕ್ಷಗಾನ ಕಲೆ.

ಕೆ ಎಸ್ ಸದಾಶಿವಯ್ಯ

ಬೋಧನೆ ಮತ್ತು ಕಲಿಕೆ

ಮಹರ್ಷಿ ಅರವಿಂದರು ಬೋಧನೆಯನ್ನು ಕುರಿತು ಅಮೂಲ್ಯವಾದ ಕ್ರಾಂತಿಕಾರಕವಾದ ಹೇಳಿಕೆಗಳನ್ನು ಇತ್ತು ನಮ್ಮ ಶಿಕ್ಷಣವೇತ್ತರ ಜಿಜ್ಞಾಸೆಗೆ ಯುಕ್ತ ಆಹಾರವನ್ನು ಒದಗಿಸಿದ್ದಾರೆ. "ನೈಜ ಬೋಧನೆಯ ಮೊದಲ ತತ್ತ್ವವೆಂದರೆ ಏನನ್ನೂ ಬೋಧಿಸದಿರುವುದು. ಉಪಾಧ್ಯಾಯನು ಬೋಧಕನಲ್ಲ, ಸಹಾಯಕ ಹಾಗೂ ಮಾರ್ಗದರ್ಶಕ. ಮಕ್ಕಳಿಗೆ ತರಬೇತಿ ಕೊಡುವುದು ಇವನ ಕೆಲಸವಲ್ಲ. ಜ್ಞಾನ ಸಾಧನಗಳನ್ನು ಪುರ್ರತಿಗೊಳಿಸುವುದು ಮುಖ್ಯ ಕರ್ತವ್ಯ. ಸಮಯೋಚಿತವಾಗಿ ಪ್ರೋತ್ಸಾಹಿಸಬೇಕು. ಜ್ಞಾನವನ್ನು ಒದಗಿಸುವುದು ಇವನ ಕಾರ್ಯವಲ್ಲ. ಆದರೆ ಮಕ್ಕಳಿಗೆ ತಮ್ಮಷ್ಟಕ್ಕೆ ತಾವೇ ಜ್ಞಾನವನ್ನು ಸಂಪಾದಿಸುವ ಮಾರ್ಗವನ್ನು ಸೂಚಿಸಬೇಕು.... ಅಧ್ಯಾಪಕನು ಮುಖ್ಯವಾಗಿ ಮಾಡಬೇಕಾದ ಕೆಲಸವೆಂದರೆ ಮಕ್ಕಳಲ್ಲಿನ ಶಕ್ತಿಯ ಪ್ರಮಾಣವನ್ನು ಗುರುತಿಸಿ ವೃದ್ಧಿಸುವುದು. ಶಿಕ್ಷಣದ ಮುಖ್ಯತಃ ಉದ್ದೇಶ ಬೆಳೆಯುತ್ತಿರುವ ಚೇತನಕ್ಕೆ ಮಾರ್ಗದರ್ಶನ ಒದಗಿಸಿ, ಅದರ ಆತ್ಮಶಕ್ತಿಯನ್ನು ಪ್ರಬುದ್ಧಗೊಳಿಸಿ ಸದ್ವಿನಿಯೋಗವಾಗುವಂತೆ ಮಾಡಬೇಕು....ಇಂದಿನ ಕೃತಕ ಬೋಧನದ ಬದಲಾಗಿ ಸ್ವಾಭಾವಿಕವೂ ಸಮುಚಿತವೂ ಆದ ಸ್ವಯಂ ಜ್ಞಾನಾರ್ಜನೆಗೆ ಅವಕಾಶ ಕಲ್ಪಿಸಬೇಕು....ಮಾನವನು ಮಕ್ಕಳಿಗೆ ಯುಕ್ತವಲ್ಲದ ಕೃತಕ ಶಿಕ್ಷಣ ಒದಗಿಸಿ ಅವರಲ್ಲಿ ಸುಪ್ತವಾಗಿರುವ ಶಕ್ತಿಗಳ ಬೆಳವಣಿಗೆಗೆ ಕಂಟಕಪ್ರಾಯವಾಗಿದ್ದಾನೆ.... ಇತ್ಯಾದಿ....ಇತ್ಯಾದಿ."

ಬೋಧನೆ ಅತ್ಯಂತ ಪ್ರಾಚೀನವಾದುದು. ಇಂದು ಅನೇಕ ಬೋಧನಕ್ರಮಗಳು ಚಾಲ್ತಿಯಲ್ಲಿವೆ. ಇವುಗಳಲ್ಲಿ ಇಂತಹದೇ ಉತ್ಕೃಷ್ಟವಾದುದು ಎಂದು ಹೇಳುವುದು ಕಷ್ಟವಾಗುತ್ತದೆ. ನಿರ್ದಿಷ್ಟ ಸಂದರ್ಭದಲ್ಲಿ, ಶಿಕ್ಷಕ ಇಂಥದೇ ವಿಧಾನವನ್ನು ಅನುಸರಿಸಬೇಕೆಂದು ವೈಜ್ಞಾನಿಕವಾಗಿ ಗೊತ್ತುಪಡಿಸಿಲ್ಲ. ಸಮಯೋಚಿತವಾಗಿ ಶಿಕ್ಷಕನೇ ಬೋಧನ ಕ್ರಮವನ್ನು ರೂಪಿಸಿಕೊಳ್ಳಬೇಕು. ಸಮಾಜದ ಅಭ್ಯುದಯಕ್ಕೆ ಶಿಕ್ಷಣ ಅತ್ಯಾವಶ್ಯಕವಾದುದರಿಂದ ಸಮಾಜತಜ್ಞರು, ಶಿಕ್ಷಣವೇತ್ತರು ಮತ್ತು ಮನೋವಿಜ್ಞಾನಿಗಳು ಶಿಕ್ಷಣ ವಿಧಾನದಲ್ಲಿ ಅಪಾರ ಸಂಶೋಧನೆಗಳನ್ನು ನಡೆಸಿ ಅದಕ್ಕೆ ಒಂದು ವೈಜ್ಞಾನಿಕ ಹಿನ್ನಲೆಯನ್ನು ಕೊಟ್ಟಿದ್ದಾರೆ. ತತ್ಫಲವಾಗಿ ಇಂದು ಅನೇಕ ಬೋಧನ ಸೂತ್ರಗಳು ಕಾಣಸಿಗುತ್ತವೆ. ತರಗತಿಯಲ್ಲಿ ತನ್ನದೇ ಆದ ಬೋಧನ ಮಾರ್ಗಗಳನ್ನು ರೂಪಿಸಿಕೊಳ್ಳಲು ಇಷ್ಟವುಳ್ಳ ಶಿಕ್ಷಕನಿಗೆ ಈ ಬೋಧನ ವಿಧಾನಗಳ ಮಾಹಿತಿ ಅಗತ್ಯವೆನಿಸುತ್ತದೆ.

ಹರ್ಬರ್ಟ್ ನಿರೂಪಿಸಿದ ಬೋಧನ ಸೂತ್ರಗಳು ವೈಜ್ಞಾನಿಕವಾಗಿದ್ದು ಅವನ ಸಮಕಾಲೀನ ಶಿಕ್ಷಣದ ಮೇಲೆ ಕ್ರಾಂತಿಕಾರಿ ಪ್ರಭಾವ ಬೀರಿದವಲ್ಲದೆ ಇಂದು ಕೂಡ ಅನೇಕ ದೇಶಗಳಲ್ಲಿ ಅನುಸರಿಸಲ್ಪಡುತ್ತಿವೆ. ಹರ್ಬರ್ಟ್‌ನ ಶಿಕ್ಷಣ ಸಂವಿಧಾನವನ್ನು ಯಶಸ್ವಿಯಾಗಿ ವಿವರಿಸಿದ ಮ್ಯಾಕ್‌ಮುರ್ರೆಸ್ ಮೂಲದಲ್ಲಿದ್ದ ನಾಲ್ಕು ಸೂತ್ರಗಳ ಜೊತೆಗೆ ಐದನೆಯದೊಂದನ್ನು ಸೇರಿಸಿದ್ದಾನೆ.[1] ಆ ಐದು ಸೂತ್ರಗಳು ಇಂತಿವೆ: 1. ಅಧ್ಯಯನಕ್ಕೆ ತರಗತಿಯನ್ನು ಸಜ್ಜುಗೊಳಿಸು

ವುದು. 2. ನೂತನ ವಿಷಯದ ನಿರೂಪಣೆ; ವಿಷಯದ ಪ್ರತಿಪಾದನೆ. 3. ನಿರೂಪಿತ ವಿಷಯದ ತುಲನಾತ್ಮಕ ವಿಮರ್ಶೆ ಮತ್ತು ಅದರ ಸಾರಗ್ರಹಣ. 4. ಸಾಮಾನ್ಯೀಕರಣ ಮತ್ತು 5 ಅನ್ವಯ.

ಪ್ರಚಲಿತದಲ್ಲಿರುವ ಬೋಧನ ಕ್ರಮಗಳಿವು: ಉಪನ್ಯಾಸ ಕ್ರಮ, ಪ್ರಾಯೋಗಾತ್ಮಕ ಬೋಧನ ಕ್ರಮ, ಚರ್ಚಾ ವಿಧಾನ, ಸ್ವಯಂಚಾಲಿತ ಶಿಕ್ಷಣ, ಸ್ವಯಂಬೋಧನ ವಿಧಾನ, ಸಮಾಲೋಚನ ಕ್ರಮ, ಹಿರೇಮಣಿ ಬೋಧನೆ, ಬಾಯಿಪಾಠ ಕ್ರಮ, ಶ್ರವ್ಯದೃಶ್ಯ ಶಿಕ್ಷಣ, ಪ್ರಕೃತಿ ಪರಿಚಯ ಮಾರ್ಗ. ಶ್ರೀ ವಿ. ಜಿ ಮಾರಿಹಾಳರು ತಮ್ಮ ಉದ್ಗ್ರಂಥ 'ಕಲಿಸುವ ಸಾಮಾನ್ಯ ಪದ್ಧತಿ'ಗಳಲ್ಲಿ ಸೂಚಿಸಿರುವ ಪದ್ಧತಿಗಳಿವು :[2]

1. ಅನ್ವಯದಿಂದ–ಸಮನ್ವಯದೆಡೆಗೆ; 2. ಗೊತ್ತಿರುವುದರಿಂದ–ಗೊತ್ತಿಲ್ಲದುದರ ಕಡೆಗೆ; 3. ಸರಳವಾದುದರಿಂದ–ಕಠಿಣದೆಡೆಗೆ; 4. ಅನಿಶ್ಚಿತದಿಂದ–ನಿಶ್ಚಿತದೆಡೆಗೆ; 5. ವಾಸ್ತವದಿಂದ–ಪ್ರಾತಿನಿಧಿಕದ ಕಡೆಗೆ; 6. ವ್ಯಷ್ಟಿಯಿಂದ – ಸಮಷ್ಟಿಯ ಕಡೆಗೆ 7. ಪ್ರಾಯೋಗದಿಂದ ನಿಷ್ಪೃಷ್ಟತೆಗೆ; 8. ಭಾಗಗಳಿಂದ– ಪೂರ್ಣದ ಕಡೆಗೆ; 9. ಮೂರ್ತದಿಂದ—ಅಮೂರ್ತದ ಕಡೆಗೆ; 10. ಮನೋವೈಜ್ಞಾನಿಕ ದೃಷ್ಟಿಯಿಂದ–ತರ್ಕಸೂತ್ರಬದ್ಧತೆಯ ಕಡೆಗೆ.

ಇವಿಷ್ಟೇ ಅಲ್ಲದೆ ಇತ್ತೀಚಿಗೆ ಅಮೆರಿಕೆಯಿಂದ ಭರ್ಜರಿಯಾಗಿ ಬೋಧನ ವಿಧಾನಗಳು ಭಾರತಕ್ಕೆ ಆಮದಾಗುತ್ತಿವೆ. ಅವುಗಳಲ್ಲಿ ಮುಖ್ಯ ಬೋಧನ ಕ್ರಮಗಳಿವು: ವ್ಯಕ್ತೀಕೃತಬೋಧನೆ, ಯಾಂತ್ರಿಕ ಬೋಧನೆ, ಪರಸ್ಪರ ಬೋಧನೆ, ಪೂರ್ವಯೋಜಿತ ಬೋಧನೆ, ರೇಡಿಯೊ ಪಾಠ, ಟೆಲಿವಿಷನ್ ಪಾಠ, ಧ್ವನಿಮುದ್ರಿಕೆಯ ಪಾಠ, ಚಿತ್ರಪ್ರದರ್ಶನ ಪಾಠ, ಸಮೂಹ ಬೋಧನೆ, ಸೂಕ್ಷ್ಮತಾ ಬೋಧನೆ, ಬೃಹತ್ ಬೋಧನೆ–ಹೀಗೆ ಹಲವಾರು ಬೋಧನಕ್ರಮಗಳು ಸೃಷ್ಟಿಗೊಂಡು ನಮ್ಮ ಅಧ್ಯಾಪಕರಿಗೆ ಸಮಸ್ಯೆಯಾಗಿ ಪರಿಣಮಿಸಿವೆ.

ಈ ಹಲವಾರು ಬೋಧನ ಕ್ರಮಗಳನ್ನು ಎರಡು ವಿಭಾಗಗಳಾಗಿ ವಿಂಗಡಿಸಬಹುದು. ಇವುಗಳಲ್ಲಿ ಮೊದಲನೆಯದು ಶಿಕ್ಷಕನನ್ನು ಕೇಂದ್ರವಾಗುಳ್ಳದ್ದು; ಎರಡನೆಯದು–ಮಕ್ಕಳನ್ನು ಕೇಂದ್ರವಾಗುಳ್ಳದ್ದು. ಮೊದಲನೆಯದು ಸಾಂಪ್ರದಾಯಿಕ ವಿಧಾನವೆಂದೂ ಎರಡನೆಯದು ಪ್ರಗತಿಪರವಾದ ಕ್ರಮವೆಂದೂ ಕರೆಯಲಾಗಿದೆ.

ಶ್ರೀ ಅರವಿಂದರ ಬೋಧನೆಯನ್ನು ಕುರಿತ ನಾಣ್ಣುಡಿಗಳ ಸತ್ಯಾಸತ್ಯತೆಯನ್ನು ಕಂಡುಕೊಳ್ಳುವ ಮೊದಲು ಈ ಮೇಲೆ ಹೇಳಿರುವ ಬೋಧನ ಕ್ರಮಗಳು ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಎಷ್ಟು ಪ್ರಭಾವಪೂರ್ಣವಾಗಿವೆ ಎಂಬುದನ್ನು ತಿಳಿಯಬೇಕಾಗುವುದು. ನಾವಿಂದು ಇಪ್ಪತ್ತನೆಯ ಶತಮಾನದ ಎಂಟನೆಯ ದಶಕದ ಕೊನೆಯ ಹಂತದಲ್ಲಿದ್ದೇವೆ. ಕಾಲಪುರುಷ ಮುನ್ನಡೆದಂತೆ ಜೀವನದ ಮೌಲ್ಯಗಳು, ಜನಜೀವನ ಶೈಲಿ, ಸಂಸ್ಕೃತಿ, ಜೀವನದ ಅವಶ್ಯಕತೆಗಳು, ಬೇಡಿಕೆಗಳು, ಜನಾಂಗಗಳ, ರಾಷ್ಟ್ರಗಳ ಪರಸ್ಪರಾನುಕ್ರಿಯೆಯಿಂದ ಪರಿವರ್ತನೆಗೆ ಒಳಗಾಗುವುದು ಯುಗಧರ್ಮ. ಈ ಯುಗಧರ್ಮಕ್ಕೆ ಅನುಗುಣವಾಗಿಯೇ ಜನತೆ ತಮ್ಮ ಮೌಲ್ಯಗಳನ್ನು ಬದಲಿಸುತ್ತಾ ಹೋಗುವುದು ಕಂಡುಬರುತ್ತದೆ. ಶಿಕ್ಷಣಕ್ಕೂ ಈ ಮಾತುಗಳು ಅನ್ವಯಿಸುತ್ತವೆ. ಪ್ರಾಚೀನ ಕಾಲದಿಂದ ಈ ಅರ್ವಾಚೀನ ಕಾಲದವರೆಗೂ ಅಂದರೆ 1854ರ ವರೆಗೂ ಶಿಕ್ಷಣ ಕೆಲವು ಉನ್ನತ ವರ್ಗದವರ ಸ್ವತ್ತಾಗಿತ್ತು ಎಂದರೆ ಯಾರೂ ಆಕ್ಷೇಪಿಸಲಾರರು. ಈ ಉನ್ನತ ವರ್ಗದವರಲ್ಲಿ ಕೆಲವರು (ಆಸಕ್ತಿಯುಳ್ಳವರು) ಮಾತ್ರ ಓದಿಗಾಗಿ ಪ್ರಚಲಿತದಲ್ಲಿದ್ದ ಶಿಕ್ಷಣ ಸಂಸ್ಥೆಗಳನ್ನು ಪ್ರವೇಶಿಸುತ್ತಿದ್ದರು. ಅಂದು ವಿದ್ಯೆಯ ಗುರಿ ಜ್ಞಾನಾರ್ಜನೆಯೇ ಹೊರತು ಸರಕಾರಿ ನೌಕರಿಯನ್ನು ಹೊಂದುವುದಾಗಿರಲಿಲ್ಲ. ಗುರುಸ್ಥಾನವನ್ನು ಸ್ವೀಕರಿಸುತ್ತಿದ್ದವರು ಕೂಡ ಸಮಾಜದ ಮೇಲಣ ದರ್ಜೆಯವರೇ. ಈ ಗುರುಕುಲದವರಿಗೆ ಜೀವನದಲ್ಲಿ ಅಂತಹ

ಆಕರ್ಷಣೆಗಳೇನೂ ಇರಲಿಲ್ಲ. ಇವರು ತಮ್ಮ ಜೀವಿತವನ್ನೆಲ್ಲಾ ಸಾರಸ್ವತ ಸಿದ್ಧಿಗಾಗಿ ಮುಡಿಪಿಟ್ಟು ವ್ಯಷ್ಟಿಸಿದ್ಧಿಯನಂತರ ಸಮಷ್ಟಿಸಿದ್ಧಿಗಾಗಿ ಗುರುಸ್ಥಾನವನ್ನು ಸ್ವೀಕರಿಸುತ್ತಿದ್ದವರು. ಈ ಗುರುಶ್ರೇಷ್ಠರಿಗೆ ಜೀವನಕ್ಕೆ ಅಗತ್ಯವಾದವುಗಳನ್ನು ಜನತೆ ಒದಗಿಸುತ್ತಿದ್ದುದರಿಂದ ಇವರು ತಮ್ಮ ಅಮೂಲ್ಯ ವೇಳೆಯನ್ನು ವಿದ್ಯಾರ್ಥಿಗಳ ಮೇಲ್ಮೆಗಾಗಿ ಅವರ ಸಾರಸ್ವತ ಸಿದ್ಧಿಗಾಗಿ ವಿನಿಯೋಗಿಸುತ್ತಿದ್ದರು. ಅಂದು ಶಿಕ್ಷಕರನ್ನು ಪಂಡಿತರನ್ನು ಹುಡುಕಿಕೊಂಡು ಹೋಗಿ ಶಿಷ್ಯವೃತ್ತಿಯನ್ನು ಅವಲಂಬಿಸುತ್ತಿದ್ದರು. ಈ ಕಾರಣದಿಂದ ಶಿಕ್ಷಕರು ತಮ್ಮ ವೃತ್ತಿಯ ನಿರ್ದಿಷ್ಟ ಗುರಿಗಳನ್ನು ಸ್ಪಷ್ಟವಾಗಿ ತಿಳಿದಿದ್ದರು. ವಿದ್ಯಾರ್ಥಿಗಳು ಕೂಡ ತಮ್ಮ ಪೂರ್ವಯೋಜಿತ ಉದ್ದೇಶಗಳನ್ನು ಅರಿತಿದ್ದರು. ಯಾರೂ ಯಾರ ಒತ್ತಾಯಕ್ಕೂ ಮಣಿಯದೆ ಸ್ವಂತ ಬುದ್ಧಿಯಿಂದಲೇ ಗುರುಕುಲವನ್ನು ಪ್ರವೇಶಿಸುತ್ತಿದ್ದರು. ಈ ನಿರ್ದಿಷ್ಟ ಉದ್ದೇಶದಿಂದ ಹಿಂದಣ ಶಿಕ್ಷಣ ಸಂಸ್ಥೆಗಳಲ್ಲಿ ಅಧ್ಯಾಪನೆ ಬೋಧನೆಗಳು ನಿರ್ವ್ಯಾಜವಾದ ರೀತಿಯಲ್ಲಿ ಪ್ರಾಮಾಣಿಕವಾಗಿ ಮುನ್ನಡೆಯುತ್ತಿದ್ದವು. ಅಂದು ಮನುಷ್ಯ ಕೊಂಚ ಮನುಷ್ಯನಾಗಿಯೇ ಇದ್ದನೆಂದು ಹೇಳಬಹುದು.

ಅಂದು ಇಂದು ಒಂದೇ ಅಲ್ಲ. ಕಾಲ ಪೂರ್ಣ ಬದಲಾಗಿದೆ. ಜನಜೀವನ ಮಹತ್ತರವಾದ ಬದಲಾವಣೆಗೆ ಪಕ್ಕಾಗಿದೆ. ಜೀವನ ಮೌಲ್ಯಗಳು ತಲಕೆಳಗಾಗಿವೆ. ಜೀವನದ ಬೇಡಿಕೆಗಳು ಮತ್ತು ಆವಶ್ಯಕತೆಗಳು ಅಂದು ಪರಿಮಿತವಾಗಿದ್ದವು. ಇಂದು ಜೀವನದಲ್ಲಿ ಭೋಗಲೋಲುಪತೆಗಳ ಹಾವಳಿ ವಿಪರೀತವಾಗಿದೆ. ಶಿಕ್ಷಣವು ಅಂದು ಹನಿರೂಪದಲ್ಲಿತ್ತು. ಇಂದು ಅದು ಸಾಗರೋಪಮವಾಗಿ ಬೆಳೆದಿದೆ. ಈ ಹೇಳಿಕೆಯನ್ನು ಸಮರ್ಥಿಸುವ ಅಂಕಿಅಂಶಗಳು ಇಂತಿವೆ :

ಕರ್ನಾಟಕದಲ್ಲಿ ಶೈಕ್ಷಣಿಕ ಮುನ್ನಡೆ[3]

	1947–48	1971–72
ಪ್ರಾಥಮಿಕ ಶಾಲೆಗಳು	9,285	32,692
ವಿದ್ಯಾರ್ಥಿಗಳು	5,19,556	38,60,472
ಶಿಕ್ಷಕರು	20,884	93,612
ಪ್ರೌಢಶಾಲೆಗಳು	227	2,060
ವಿದ್ಯಾರ್ಥಿಗಳು	32,736	5,48,682
ಶಿಕ್ಷಕರು	2,183	22,185
ಒಟ್ಟು ಶಿಕ್ಷಣ ವೆಚ್ಚ	2,14,97,000	56,69,89,000

ಈ ಮೇಲಣ ಸಂಖ್ಯಾಪಟ್ಟಿ ಕರ್ನಾಟಕದಲ್ಲಿ ಪ್ರಾಥಮಿಕ ಪ್ರೌಢಶಾಲೆಗಳು ಮತ್ತು ಶಿಕ್ಷಕ–ವಿದ್ಯಾರ್ಥಿಗಳ ಸಂಖ್ಯೆಯು ಹೇಗೆ ಕೈಮೀರಿ ಬೆಳೆಯುತ್ತಿವೆ ಎಂಬುದನ್ನು ತೋರಿಸುತ್ತದೆ. ಈ ಶಾಲೆಗಳಿಗೆ ಶಿಕ್ಷಕರನ್ನು ತರಬೇತಿಸಲು ಮುಪತ್ನಾಲ್ಕು ಶಿಕ್ಷಣ ಕಾಲೇಜುಗಳು ಮತ್ತು 102 ಶಿಕ್ಷಕರ ತರಬೇತಿ ಸಂಸ್ಥೆಗಳು ಸ್ಥಾಪಿತವಾಗಿವೆ. ಇವುಗಳಲ್ಲಿ ಮುಕ್ಕಾಲು ಪಾಲು ಸಂಸ್ಥೆಗಳು ಖಾಸಗಿಯವರಿಂದ ಸ್ಥಾಪಿತವಾಗಿವೆ. ಖಾಸಗಿ ಸಂಸ್ಥೆಗಳ ಮೂಲ ಉದ್ದೇಶ ಶೈಕ್ಷಣಿಕ ಸೇವೆ ಸಲ್ಲಿಸುವುದಲ್ಲ. ಈ ಖಾಸಗಿ ಸಂಸ್ಥೆಗಳ ಉದ್ದೇಶಗಳು ಅನೇಕ ಮುಖವಾಗಿರುತ್ತವೆ. ಕೆಲವು ವ್ಯವಹಾರದ ದೃಷ್ಟಿಯಿಂದಲೇ ಸ್ಥಾಪಿತವಾಗಿ ಹಣ ಗಳಿಸುವುದರಲ್ಲಿಯೇ ತೊಡಗಿರುತ್ತವೆ. ಕೆಲವು ಶಿಕ್ಷಣ ಕಾಲೇಜುಗಳು ಕೇರಳ ವಿದ್ಯಾರ್ಥಿಗಳಿಂದ ತಲಾ 3,000ರೂ.ಗಳಿಗಿಂತ ಹೆಚ್ಚು ಪಡೆದು, ಹಣ ಜಮಾಯಿಸುತ್ತಾ ನಡೆದಿವೆ. ಮತ್ತೆ ಕೆಲವು ಈ ಹಣಗಳಿಕೆಯ ಜೊತೆಗೆ

ತಮ್ಮ ತಮ್ಮವರಿಗೆ ಚಾಕರಿಯನ್ನು ಕೊಡುವ ಸಲುವಾಗಿ ಸ್ಥಾಪಿತವಾಗುತ್ತವೆ. ಮತ್ತೆ ಹಲವು ಕಾಲೇಜುಗಳು ಶಿಕ್ಷಕರಿಗೆ ಸರಕಾರದ ನಿಯಮದಂತೆ ವೇತನ ಪಾವತಿ ಮಾಡದೆ ಅವರನ್ನು ಅತೃಪ್ತ ಸ್ಥಿತಿಯಲ್ಲೇ ಮುನ್ನಡಸಿಕೊಂಡು ಹೋಗುತ್ತಿವೆ. ಈ ಸಂಸ್ಥೆಗಳು ಹಲವಾರು ಕೋಮಿಗೆ ಸೇರಿದ ಶಿಕ್ಷಕರಿಂದ ಕೂಡಿರುತ್ತವೆ. ಇವರ ಮುಖ್ಯ ಕೆಲಸ, ತಮ್ಮ ನಿತ್ಯವ್ಯವಹಾರದ ಮೂಲಕ ಜಾತೀಯತೆಯನ್ನು ಮುಂದುವರಿಸಿಕೊಂಡು ಹೋಗುವುದೇ ಆಗಿರುತ್ತದೆ. ಮತ್ತು ಈ ಕಾಲೇಜುಗಳ ಅಧ್ಯಾಪಕ ವೃಂದದವರಲ್ಲಿ ಐಕ್ಯತೆ ಇರುವುದಿಲ್ಲ, ಒಡೆದು ಆಳುವ ನೀತಿ ಆಡಳಿತದ ಮುಖ್ಯ ತತ್ತ್ವವಾಗಿರುವುದರಿಂದ. ಮೇಲಾಗಿ ಇಲ್ಲಿನ ಮೇಷ್ಟ್ರುಗಳು ಮೈಕ್ರೊ ಟೀಚಿಂಗ್ ತರಬೇತಿ ಶಾಲೆಗಳಿಗೆ, ದೆಹಲಿಯ ತರಬೇತಿ ಕಾರ್ಯಾಗಾರಗಳಿಗೆ, ಇಂದೂರು ಕೊಯಮುತ್ತೂರು, ಬೆಂಗಳೂರು, ಮಧುರೆ, ಮೈಸೂರು, ಶಿವಮೊಗ್ಗ, ಬೆಳಗಾವ್‌ಗಳಿಗೆ ಸಂಚರಿಸುತ್ತಲೇ ಇರುತ್ತಾರೆ. ಒಂದು ಕಡೆ ಹಾಯಾಗಿ ವಿತ್ತರಿಸುವ ಸ್ಥಿರಬುದ್ಧಿಯೇ ಇವರಿಗಿರುವುದಿಲ್ಲ. ಮೇಲಾಗಿ ಶಿಕ್ಷಣ ಕಾಲೇಜಿನ ಅಧ್ಯಾಪಕ ವರ್ಗದವರಿಗೆ ಬೆಳಗಿನಿಂದ ಸಂಜೆಯವರೆಗೂ ಒಂದಲ್ಲ ಒಂದು ಕೆಲಸವಿದ್ದೇ ಇರುತ್ತದೆ. ಈ ಕೆಲಸಗಳೊಡನೆ ಸಂಸಾರದ ಅದನ್ಯ ಸಮಸ್ಯೆಗಳನ್ನು ತೂಗಿಸಿಕೊಂಡು ಹೋಗುವುದರಲ್ಲಿಯೇ ಇವರ ಶಕ್ತಿ ಉಡುಗಿ ಹೋಗುತ್ತದೆ. ಅಂದಮೇಲೆ ಇವರು ಶೈಕ್ಷಣಿಕವಾಗಿ, ಬೌದ್ಧಿಕವಾಗಿ ಬೆಳೆಯಲು ಸಾಧ್ಯವೆ ? ವಿದ್ಯಾರ್ಥಿ ದೆಸೆಯಲ್ಲಿ ಮತ್ತು ಕೆಲಸಕ್ಕೆ ಸೇರಿದ ತರುಣದಲ್ಲಿ ಉತ್ಸಾಹದಿಂದ ಗಳಿಸಿದ ಶೈಕ್ಷಣಿಕ ಬಂಡವಾಳದ ಆಧಾರದಿಂದ ತಮ್ಮ ಇಡೀ ಜೀವನವನ್ನು ಕೊನೆಗೊಳಿಸುತ್ತಾರೆ.

ಸರಕಾರೀ ಶಿಕ್ಷಣ ಕಾಲೇಜುಗಳ ಜೀವನ ವೈಖರಿ ಮತ್ತೊಂದು ತೆರನಾದದ್ದು. ಇಲ್ಲಿ ಎಲ್ಲ ಸೌಲಭ್ಯಗಳು ಅಂದರೆ ತಿಂಗಳಿಗೆ ಸರಿಯಾಗಿ ಸಂಬಳ, ಕಟ್ಟಡ ವ್ಯವಸ್ಥೆ, ಪುಸ್ತಕಭಂಡಾರ ಮತ್ತು ಪ್ರಯೋಗಶಾಲೆಗಳು ಮತ್ತು ಕಚೇರಿ ಸಿಬ್ಬಂದಿವರ್ಗ ಮೊದಲಾದುವುಗಳು ಹೇರಳವಾಗಿರುತ್ತವೆ. ಆಡಳಿತ ಕ್ರಮ ಎಲ್ಲಿಸಂತೆಯೇ ಇಲ್ಲೂ.

ಉತ್ತಮ ದರ್ಜೆಯ ಆಡಳಿತ ಸಮ್ಮಿಲ್ಲಿ ಕಾಣಬರುವುದು ಅಪರೂಪವೆ. ಇಲ್ಲಿನ ಒಂದು ಕೊರತೆ ಎಂದರೆ ಶಿಕ್ಷಕ ವರ್ಗಕ್ಕೆ ಪ್ರಿನ್ಸಿಪಾಲರಿಂದ ಹಿಡಿದು ಕಿರಿಯ ಅಧ್ಯಾಪಕನವರೆಗೂ ಆಡಳಿತ ಸಂಸ್ಥೆಗಳಾದ ಉಪನಿರ್ದೇಶಕ ಮತ್ತು ತಾಲ್ಲೂಕು ಶಿಕ್ಷಣಾಧಿಕಾರಿಗಳ ಕಚೇರಿಗಳಿಂದ ವರ್ಗಾವಣೆಗಳಿರುತ್ತವೆ. ಇವರಿಗೆ ಆಡಳಿತ ವ್ಯವಹಾರದಲ್ಲಿ ಪರಿಶ್ರಮವಿರುತ್ತದೆಯೇ ಹೊರತು ಶೈಕ್ಷಣಿಕ ವಿಷಯಗಳಲ್ಲಿ ಆಸಕ್ತಿ ಇರುವುದಿಲ್ಲ. ಆಡಳಿತ ವ್ಯವಹಾರದಲ್ಲಿ ಅಷ್ಟು ನಿಪುಣರಲ್ಲದ ಅಥವಾ ಶುದ್ಧರು ಸಾತ್ವಿಕರಲ್ಲದವರನ್ನು ಸರಕಾರೀ ಶಿಕ್ಷಣ ಕಾಲೇಜುಗಳಿಗೆ ಪ್ರಾಚಾರ್ಯರಾಗಿ, ಪ್ರಾಧ್ಯಾಪಕರಾಗಿ, ಅಧ್ಯಾಪಕರಾಗಿ ನೇಮಿಸಲಾಗುತ್ತದೆ. ಆಡಳಿತ ಕ್ಷೇತ್ರದಲ್ಲಿನ ಸೌಲಭ್ಯಗಳನ್ನು ಕಾಲೇಜಿನಲ್ಲಿ ಕಾಣದ ಇವರು ತಳಬಡಿಸುತ್ತಾರೆ. ಮತ್ತೆ ಆಡಳಿತ ಸಂಸ್ಥೆಗಳಿಗೆ ಮರಳುವ ಪ್ರಯತ್ನದಲ್ಲಿ ಇರುತ್ತಾರೆ. ಇವರಲ್ಲಿ ಕೆಲವರಿಗೆ ತರಗತಿಯಲ್ಲಿ ವಿದ್ಯಾರ್ಥಿಗಳನ್ನು ಎದುರಿಸುವುದೇ ಸಮಸ್ಯೆಯಾಗುತ್ತದೆ. ಇಂಥ ಸರಕಾರಿ ಶಿಕ್ಷಣ ಕಾಲೇಜುಗಳು ತರಬೇತಿ ಕಾರ್ಯವನ್ನು ಎಂತು ಸಮರ್ಥವಾಗಿ ನಿರ್ವಹಿಸಬಲ್ಲವು ! ಈ ಕಾಲೇಜುಗಳಲ್ಲಿ ಶಿಕ್ಷಕರು ಆಗಾಗ್ಗೆ ವರ್ಗವಾಗಿ ಹೋಗುವುದರಿಂದ ಶೈಕ್ಷಣಿಕ ವಿಷಯಗಳಲ್ಲಿ ಶ್ರದ್ಧಾಸಕ್ತಿಗಳನ್ನು ಅದೆಂತು ತಳೆದಾರು ?

ಸ್ನಾತಕೋತ್ತರ ಶಿಕ್ಷಣ ವಿಭಾಗಗಳ ಸ್ಥಿತಿ ಈ ಮೇಲಣ ಕಾಲೇಜುಗಳಿಗಿಂತ ಹೊರತಾಗಿರುವುದಿಲ್ಲ. ಆದರೆ ಕೆಲ ವಿಷಯಗಳಲ್ಲಿ ಭಿನ್ನತೆ ಕಂಡುಬರುತ್ತದೆ. ಶೈಕ್ಷಣಿಕವಾದ ಪಥದಲ್ಲಿ ಮುನ್ನಡೆಯಲು ಅನೇಕ ಸೌಲಭ್ಯಗಳಿರುತ್ತವೆ. ಸಂಬಳಸಾರಿಗೆ, ಗ್ರಂಥಭಂಡಾರ, ಪ್ರಯೋಗಶಾಲೆಗಳು, ಪ್ರತ್ಯೇಕ ಕೊಠಡಿಗಳು, ದಿನಕ್ಕೆ ಒಂದೆರಡು ಘಂಟೆಗಳ ಕೆಲಸ, ಪ್ರತಿ ತರಗತಿಯಲ್ಲಿ ಪರಿಮಿತ ಸಂಖ್ಯೆಯ ವಿದ್ಯಾರ್ಥಿಗಳು–ನೂರುಮೂರಿ ಉಪನ್ಯಾಸ, ಸೆಮಿನ್ಸಾರ್ ಪದ್ಧತಿಯ ಪ್ರಯುಕ್ತ

ವಿದ್ಯಾರ್ಥಿಗಳ ಮೇಲಣ ಅಂಕೆ–ಮೊದಲಾದವುಗಳು ಶೈಕ್ಷಣಿಕವಾಗಿ ಬೆಳೆಯುವುದಕ್ಕೆ ಕಾರಣ ವಾಗುತ್ತವೆ. ಇಷ್ಟೆಲ್ಲ ಸೌಲಭ್ಯಗಳಿದ್ದಾಗ್ಯೂ ಬೋಧನೆಯ ಕೆಲಸ ಮಾತ್ರ ಅಲ್ಲಿನಂತೆಯೇ ಇಲ್ಲೂ. ಸಂಶೋಧನೆ ಶೂನ್ಯ. ಅಮಾನವಿಕವಾದ ಪೈಪೋಟಿ ತಾನೇ ತಾನಾಗಿ ವಿಜೃಂಭಿಸುತ್ತದೆ, ಪಡ ಪೋಸಿಗಳು ಇಲ್ಲಿ ತುಂಬಿರುವುದರಿಂದ. ಇಲ್ಲಿನ ಕೆಲವು ಶಿಕ್ಷಕ ವರ್ಗದವರಿಗೆ ಶಿಕ್ಷಣವನ್ನುಳಿದು ಮಿಕ್ಕಿದ್ದೆಲ್ಲವೂ ಪರಮ ಪ್ರಿಯವಾದವುಗಳು. ರಾಜಕೀಯ, ಗುಂಪುಗಾರಿಕೆ, ಜಾತೀಯತೆ, ಪಕ್ಷಪಾತ, ಮೇಲಣ ಅಧಿಕಾರಿಗಳನ್ನು ಮೂಸುವುದು, ತಮ್ಮ ಪದೋನ್ನತಿಗೆ ಯಾವ ನಿಕೃಷ್ಟ ಕೆಲಸಗಳನ್ನು ಮಾಡಲು ಹೇಸದಿರುವಿಕೆ, ಸಹಪಾಠಿಗಳ ಮೇಲೆ ಸೇಡು ತೀರಿಸಿಕೊಳ್ಳುವಿಕೆ, ತಮ್ಮ ವ್ಯಕ್ತಿತ್ವದ ಬಗ್ಗೆ ಅಭಿಮಾನವಿದ್ದವರನ್ನು ಅವಮಾನಗಳಿಗೆ ಗುರಿಪಡಿಸುವುದು, ತಮ್ಮ ಮನೋವಿಕಾರಗಳನ್ನು ವಿದ್ಯಾರ್ಥಿಗಳ ಮುಂದೆ ಪ್ರದರ್ಶಿಸುವುದು–ಮೊದಲಾದವುಗಳು ಇಲ್ಲಿನ ಸದಸ್ಯರ ಸಹವರ್ತಿಗಳು. ಈ ಬೆರಕೆ ಚಟುವಟಿಕೆಗಳಿಗೆ ಕಾರಣಗಳಿಲ್ಲದಿಲ್ಲ. ಕೈತುಂಬ ಹಣ; ಮೈತುಂಬ ಕೆಲಸವಿಲ್ಲ. ಬೋಧನವೋ ಮಾಮೂಲಿ. ಸಂಶೋಧನೆಯನ್ನು ಮಾಡಲೇ ಬೇಕೆಂಬ ಕಡ್ಡಾಯವಿಲ್ಲ. ಬೋಧನೆಯೊಡನೆ ಸಂಶೋಧನೆಯನ್ನು ಮಾಡುವುದು ಹೇಗೆ ಎಂಬುದು ಇವರ ಪ್ರಶ್ನೆ. ಕೆಲವರು ಶಿಕ್ಷಣ ಇಲಾಖೆಯಿಂದ ನಿವೃತ್ತಿಯನ್ನು ಇನ್ನೂ ಐದು ವರ್ಷ ಮುಂದೂಡಲು ಇಲ್ಲಿಗೆ ಬಂದಿರುತ್ತಾರೆ. ಇವರಿಗೆ ವಯಸ್ಸಾಗಿರುತ್ತದೆ. ಆಡಳಿತದ ಕುಟಿಲ ನೀತಿಗಳಲ್ಲಿ ಇವರು ನಿಸ್ಸೀಮರು. ಅಲ್ಲಿನ ಅನಂತ ಸುಖವನ್ನು ಕಂಠಪೂರ್ತಿ ಅನುಭವಿ ಸಿದವರು. ಇಂಥವರು ಸ್ನಾತಕೋತ್ತರ ವಿಭಾಗಗಳಲ್ಲಿ ನಿರಂತರ ಅಧ್ಯಯನದಲ್ಲಿ ಸಂಶೋಧನೆ ಯಲ್ಲಿ ತೊಡಗುವರೇ ? ಇಂಥವರಿಂದ ಶೈಕ್ಷಣಿಕವಾದ ಕೊಡುಗೆ ಸಾಧ್ಯವೇ ? ಇನ್ನು ವಿಭಾಗ ಮುಖ್ಯರ ಬಗ್ಗೆ ಮಸಿ ವ್ಯಯಿಸುವುದು ಸಲ್ಲ. ಬೋಧನೆ ಸಂಶೋಧನೆಗಳಿಗಿಂತ ಆಡಳಿತವೇ, ಪತ್ರವ್ಯವಹಾರವೇ ಇವರ ಮುಖ್ಯ ಕಸಬು. ಇವರು ಒಂದು ಕಡೆ ಸ್ಥಾಯಿಯಾಗಿರುವುದಿಲ್ಲ. ಸರ್ವದಾ ಪ್ರವಾಸಿಗಳೆ. ಕಾಲೇಜು ಸ್ವೀಕರಣ ಸಮಿತಿ, ಅಧ್ಯಯನ ಸಮಿತಿ, ವಿದ್ವನ್ಮಂಡಳಿ, ಸೆನೆಟ್, ಸ್ನಾತಕೋತ್ತರ ಮಂಡಳಿ, ನೇಮಕ ಮಂಡಳಿ ಇನ್ನೂ ಅನೇಕ ಸಭೆ ಸಮಿತಿಗಳಿಗೆ ಸದಸ್ಯ ರಾಗಿರುತ್ತಾರೆ. ಹೊರಗಣ ವಿಶ್ವವಿದ್ಯಾಲಯಗಳ ಅನೇಕ ಸಮಿತಿಗಳಲ್ಲಿ ಇವರು ಸದಸ್ಯರಾಗಿರು ತ್ತಾರೆ. ಇವರು ಆಗಾಗ್ಗೆ ತಮ್ಮ ಇಲಾಖೆಗಳಿಗೆ ಭೇಟಿ ಕೊಡುವರೆ ವಿನಾ, ಇಲಾಖೆಯಲ್ಲಿ ನೆಲೆ ನಿಲ್ಲುವುದಿಲ್ಲ. ನೆಲೆ ನಿಂತರೆ ಇವರಿಗೆ ಆಗುವ ನಷ್ಟ ಅಪಾರ. ಶಿಕ್ಷಣ ವಿಷಯದಲ್ಲಿ ಇವರು ಪತ್ಯೈಯಿಂದಿರುತ್ತಾರೆ. ಡ್ಯೂಯಿ, ಪೀಟರ್, ಗಾಂಧಿ, ಅರವಿಂದ್–ಮೊದಲಾದವರ ಹೆಸರು ಗಳನ್ನು ತರಗತಿಯಲ್ಲಿ ಬಾಯಿಚಟಕ್ಕೆ ಪುರೋಹಿತರಂತೆ ಉಚ್ಚರಿಸುವರೇ ಹೊರತು ಮತ್ತಾವ ರಚನಾತ್ಮಕ ದೃಷ್ಟಿಯಿಂದಲ್ಲ. ಇಂಥ ವಿಭಾಗ ಮುಖ್ಯರ ಪ್ರಭಾವಕ್ಕೆ ಒಳಗಾದ ವಿದ್ಯಾರ್ಥಿ ಗಳು ಮತ್ತು ಅಧ್ಯಾಪಕರು ಏನನ್ನು ಸಾಧಿಸಬಲ್ಲರು ? ಶಿಕ್ಷಣ ವಿಭಾಗಗಳು ಶೈಕ್ಷಣಿಕವಾಗಿ ಹೇಗೆ ಪ್ರಗತಿ ಹೊಂದಬಲ್ಲವು ? ಇವರೇ ನಮ್ಮ ಶಿಕ್ಷಣ ತಜ್ಞರು.

ಸ್ವಾತಂತ್ರ್ಯದನಂತರ ಶಿಕ್ಷಣ ಕ್ಷಿಪ್ರವಾಗಿ ವ್ಯಾಪಕವಾಗಿ ಬೆಳೆಯುತ್ತಿದೆ. ತತ್ಪರಿಣಾಮವಾಗಿ ಸಂಸ್ಥೆಗಳ ವಿದ್ಯಾರ್ಥಿಗಳ ಮತ್ತು ಶಿಕ್ಷಕರ ಸಂಖ್ಯೆ ವಿಪುಲವಾಗಿ ಬೆಳೆದಿವೆ. ಶಿಕ್ಷಣಕ್ಕೆ ಒಂದು ರೂಪ ಕೊಡುವ, ಶಿಕ್ಷಕರಿಗೆ ತರಬೇತಿ ಒದಗಿಸುವ ಸಂಸ್ಥೆಗಳು ತಮ್ಮದೇ ಆದ ಸಂಕುಚಿತೋ ದ್ದೇಶಗಳಿಂದ ಕಾರ್ಯನಿರತವಾಗಿವೆ. ಈ ಸಂಸ್ಥೆಗಳಲ್ಲಿ ಸ್ಥಿರಗತಿ ಪಡೆದಿರುವ ಅಶೈಕ್ಷಣಿಕವಾದ ಪರಿಸರದ ಕಾರಣದಿಂದಾಗಿ ಅಧ್ಯಾಪಕ ಶಿಕ್ಷಕರು ತಮ್ಮ ಕೆಲಸವನ್ನು ಯಾಂತ್ರಿಕವಾಗಿ ಮಾಡುವ ರಲ್ಲದೆ ಅದಕ್ಕಿಂತ ಹೆಚ್ಚಿನದನ್ನು ಮಾಡುವ ಸ್ಥಿತಿಯಲ್ಲಿಲ್ಲ. ಅಂದಮೇಲೆ ಈ ಸಂಸ್ಥೆಗಳಲ್ಲಿನ ಶಿಕ್ಷಕರು ವಿದ್ಯಾರ್ಥಿ ಶಿಕ್ಷಕರಿಗೆ ಅದು ಎಂತು ತರಬೇತಿಯನ್ನು ನೀಡುವಲ್ಲಿ ನಿರತವಾಗಿದ್ದಾರೆ ಎಂಬುದನ್ನು ಸೂಕ್ಷ್ಮವಾಗಿ ಪರಿಶೀಲಿಸಬಹುದು.

ನಮ್ಮ ಪ್ರಶಿಕ್ಷಣ ಸಂಸ್ಥೆಗಳು ಅನೇಕ ಮುಖ್ಯವಾದ ಐಚ್ಛಿಕವಾದ ವಿಷಯಗಳನ್ನು ಶಿಕ್ಷಣಾರ್ಥಿಗಳಿಗೆ ಒದಗಿಸುತ್ತಿವೆ. ಅವುಗಳಲ್ಲಿ ಮುಖ್ಯವಾದವಿವು: 1. ತಾತ್ವಿಕ ಹಾಗೂ ಸಾಮಾಜಿಕ ಶೈಕ್ಷಣಿಕ ಮೂಲ ವಿಷಯಗಳು, 2. ಶೈಕ್ಷಣಿಕ ಮನೋವಿಜ್ಞಾನ, 3. ಪ್ರಸ್ತುತ ಶಿಕ್ಷಣದ ಒಲವುನಿಲವುಗಳು, 4. ಶಾಲಾಡಳಿತ, 5. ಬೋಧನ ತತ್ತ್ವಗಳು ಹಾಗೂ ಆಚರಣೆಗಳು, ಇತ್ಯಾದಿ. ಈ ವಿಷಯಗಳು ಶಿಕ್ಷಕರಾಗಬಯಸುವವರಿಗೆ ಅತ್ಯಗತ್ಯ, ಅತ್ಯುಪಯುಕ್ತ ಎನ್ನುವಲ್ಲಿ ಲವಲೇಶವೂ ಅನುಮಾನವಿಲ್ಲ. ಈ ವಿಷಯಗಳನ್ನು ಆಯಾ ಶಿಕ್ಷಣ ಕಾಲೇಜಿನ ಪ್ರಾಚಾರ್ಯರೂ, ಪ್ರಾಧ್ಯಾಪಕರೂ ಹಿರಿಯ ಕಿರಿಯ ಅಧ್ಯಾಪಕ ವರ್ಗದವರೂ ನಿಷ್ಠೆಯಿಂದ ಬೋಧನೆಯಲ್ಲಿ ನಿರತರಾಗಿ ವಿಷಯ ಸರಬರಾಜಿಸುತ್ತಾರೆ, ಶಿಕ್ಷಣಾರ್ಥಿಗಳಿಗೆ.

ಈ ಹಿಂದೆ ವಿವೇಚಿಸಿದಂತೆ ಪಠ್ಯವಸ್ತುಗಳು ಪ್ರಾಧ್ಯಾಪಕನ ಟಿಪ್ಪಣಿಗಳಿಂದ ವಿದ್ಯಾರ್ಥಿಗಳ ನೋಟುಬುಕ್ಕುಗಳಿಗೆ ಅವರ ಲೇಖನಿಗಳ ಮೂಲಕ ರವಾನಿತವಾಗುತ್ತವೆ, ಇವರೀರ್ವರ ಹೃದಯಗಳನ್ನು ತಾಕದೆ! ಈ ಯಾಂತ್ರಿಕ ಬೋಧನೆಗೆ ಕಾರಣಗಳೇನು? ನಮ್ಮ ಪ್ರಾಧ್ಯಾಪಕವರ್ಯರು ಬೋಧಿಸುವ ವಿಷಯಗಳನ್ನು ಯಾರೋ ಮಹಾರಾಯರು ತಮ್ಮ ಸತತವಾದ ಅಧ್ಯಯನದಿಂದ, ಮಂಥನದಿಂದ ಚಿಂತನದಿಂದ ಸೃಷ್ಟಿಸಿರುತ್ತಾರೆ. ಈ ಸೃಷ್ಟಿ ಅವರ ನಿರಂತರ ತಪಸ್ಸಿನ ಫಲ. ಇಷ್ಟು ಕಠಿಣ ಶ್ರಮದಿಂದ ಸೃಜಿಸಿದ ವಿಷಯಗಳನ್ನು ನಮ್ಮ ಪ್ರಾಧ್ಯಾಪಕ ವರ್ಗದವರು ಆಳವಾದ ಅಭ್ಯಾಸದ, ಸತತವಾದ ಚಿಂತನದ, ನಿಷ್ಠಾದ ವಿಮರ್ಶೆ ಪರಿಶೀಲನಗಳಿಗೆ ಒಳಪಡಿಸಿಕೊಳ್ಳದೆ, ಇವನ್ನು ಅನುಷ್ಠಾನಿಸಿ ನೋಡದೆ, ಅನುಭವಿಸಿ ಪರೀಕ್ಷಿಸದೆ ಹಾಗೆ ಹಾಗೆಯೇ ಉಪನ್ಯಾಸದ ಮೂಲಕ ಹೇಳಿದರೆ ಯಾರಿಗೆ ಅರ್ಥವಾಗುತ್ತದೆ? ವಿದ್ಯಾರ್ಥಿಗಳು ಕೂಡ ಈ ವಿಷಯ ಕುರಿತು ಪೂರ್ವಭಾವಿಯಾಗಿ ಯೋಚಿಸುವುದಿಲ್ಲ. ಇವು ಅವರ ಜೀವನಕ್ಕೆ ಸಂಬಂಧಿಸಿರುವುದಿಲ್ಲ, ಅವರ ಅನುಭವಗಳಿಗೆ ದೂರವಾಗಿರುತ್ತವೆ. ಮೇಲಾಗಿ ವಿಷಯ ಬೋಧನದ ಮಾಧ್ಯಮ ಅನ್ಯ ಆಂಗ್ಲೇಯ ಭಾಷೆ—ಈ ಕಾರಣಗಳಿಂದ ವಿದ್ಯಾರ್ಥಿಗಳು ವಿಷಯ ಸಂಗ್ರಹಣೆಯಲ್ಲಿ ತೊಡಗುವರೆ ವಿನಾ ಅವನ್ನು ಅರ್ಥವಿಸಿಕೊಳ್ಳುವಲ್ಲಿ ಅಲ್ಲ.

ಶೈಕ್ಷಣಿಕ ಮನೋವಿಜ್ಞಾನ, ಶಿಕ್ಷಣ ತತ್ತ್ವಶಾಸ್ತ್ರ, ಕಲಿಸುವ ಸೂತ್ರಗಳು, ಶಿಕ್ಷಣ ಸಲಹಾ ವಿಧಾನ ಮತ್ತು ಪತ್ರರಚನಾ ವಿಧಾನ—ಮೊದಲಾದವುಗಳನ್ನು ಪ್ರಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳಿಗೆ ಒದಗಿಸಲಾಗುತ್ತದೆ. ವಿದ್ಯಾರ್ಥಿಗಳು ಈ ವಿಷಯಗಳನ್ನು ಕುರಿತು ಪರೀಕ್ಷಾ ದೃಷ್ಟಿಯಿಂದ ಅಭ್ಯಸಿಸುವರೇ ವಿನಾ ತಮ್ಮ ಶಾಲೆಗಳಿಗೆ ಹಿಂತಿರುಗಿ, ತಾವು ಪ್ರಶಿಕ್ಷಣ ಮಹಾ ವಿದ್ಯಾಲಯಗಳಲ್ಲಿ ಮಹೋಪಾಧ್ಯಾಯರಿಂದ ಕಲಿತ ವಿಷಯಗಳನ್ನು ತರಗತಿಯಲ್ಲಿ ಬೋಧನದಲ್ಲಿ ತೊಡಗಿದಾಗ ಅನುಷ್ಠಾನಿಸಲೆಂದಲ್ಲ. ವಿದ್ಯಾರ್ಥಿಗಳು ಪ್ರಶಿಕ್ಷಣ ಸಂಸ್ಥೆಗಳಲ್ಲಿ ಒಂದೆರಡು ವರ್ಷಗಳನ್ನು ಅಧ್ಯಯನದಲ್ಲಿ ಕಳೆಯುತ್ತಾರೆ. ಈ ಒಂದೆರಡು ವರ್ಷಗಳನಂತರವೂ ಇವರಲ್ಲಿ ಯಾವ ಸ್ಥಿತ್ಯಂತರವೂ ಆಗಿರುವುದಿಲ್ಲ. ಈ ಮಹಾವಿದ್ಯಾಲಯಗಳನ್ನು ಪ್ರವೇಶಿಸುವಾಗ ಮಾನಸಿಕವಾಗಿ ಬೌದ್ಧಿಕವಾಗಿ ಎಂತಿರುವರೋ ಅಲ್ಲಿಂದ ಪದವಿ ಪಡೆದು ಹಿಂತಿರುಗಿದಾಗಲೂ ಅಂತೆಯೇ ಇರುವರು. ಇದಕ್ಕೆ ಬಹುಮುಖ್ಯ ಕಾರಣ ಅಲ್ಲಿ ಒದಗಿಸಿದ ವಿಷಯಗಳು ಅನುಷ್ಠಾನ ಯೋಗ್ಯವಾಗಿರುವುದಿಲ್ಲ. ಅಲ್ಲಿನ ಪರಿಸರ, ಅಧ್ಯಾಪಕರ ಆದರ್ಶ ಜೀವನ, ಇವರನ್ನು ಇನ್ನೂ ವಿಕ್ಷಿಪ್ತ ಗೊಳಿಸುತ್ತದೆ. ಪ್ರಜಾಸತ್ತೆಯನ್ನು ಅತ್ಯಂತ ಆಕರ್ಷಕವಾಗಿ ಬೋಧಿಸುವ ಅಧ್ಯಾಪಕರ ನಡತೆಯಲ್ಲಿ ಇದು ಕಾಣೆಯಾಗಿರುತ್ತದೆ. ಶಿಕ್ಷಣ ತತ್ತ್ವಶಾಸ್ತ್ರವನ್ನು ಕಲಿಸುವ ಪ್ರಾಧ್ಯಾಪಕನ ವರ್ತನೆಯಲ್ಲಿ ಅನೈತಿಕತೆ ಅನ್ಯಾಯಗಳು ತಾಂಡವವಾಡುತ್ತಿರುತ್ತವೆ. ಮನೋವಿಜ್ಞಾನವನ್ನು ಕುರಿತು ಉಪನ್ಯಸಿಸುವ ಶಿಕ್ಷಕನು ಕೂಡ ವಿದ್ಯಾರ್ಥಿಗಳನ್ನು ಅರಿತು ಅವರಿಗೆ ಯುಕ್ತವಾಗಿ ವರ್ತಿಸುವುದಿಲ್ಲ. ಈ ಅಧ್ಯಾಪಕರ ಈ ವರ್ತನೆಗಳನ್ನು ಕಣ್ಣಾರೆ ಕಂಡ

ವಿದ್ಯಾರ್ಥಿ ತೀರ್ಮಾನಕ್ಕೆ ಬರುತ್ತಾನೆ, ಈ ಮಹಾವಿದ್ಯಾಲಯಗಳಲ್ಲಿ ಒದಗಿಸುವ ವಸ್ತು ವಿಷಯಗಳು ಕೇವಲ ಪರೀಕ್ಷೆಗಳಿಗೆ ಹೊರತು ಶಾಲಾತರಗತಿಯಲ್ಲಿ ಆಚರಣಯೋಗ್ಯವಲ್ಲ ಎಂದು.

ಶಿಕ್ಷಣ ತತ್ತ್ವಶಾಸ್ತ್ರ, ಶೈಕ್ಷಣಿಕ ಮನೋವಿಜ್ಞಾನ, ಶೈಕ್ಷಣಿಕ ಆಡಳಿತ, ಮೊದಲಾದ ವಿಷಯಗಳಿಗೆ ತಟ್ಟಿರುವ ಶಾಪವೇ ಕಲಿಸುವ ಪದ್ಧತಿಗಳಿಗೂ ತಟ್ಟುತ್ತದೆ ಎಂದು ನಿಸ್ಸಂಶಯವಾಗಿ ಹೇಳಬಹುದು. ಈ ಮೊದಲೆ ತಿಳಿಸಿದಂತೆ ನೂರಾರು ಬೋಧನ ಕ್ರಮಗಳು ನಮ್ಮ ಗ್ರಂಥ ಭಂಡಾರಗಳಲ್ಲಿನ ಪುಸ್ತಕಗಳಲ್ಲಿ ಸೆರೆಯಾಗಿವೆ ಈ ಕಲಿಸುವ ಪದ್ಧತಿಗಳಲ್ಲಿ ಹರ್‌ಬರ್ಟನ ಪಂಚಸೋಪಾನಗಳಿಗೆ ಈವರೆಗೂ ಮಹತ್ವದ ಸ್ಥಾನವಿತ್ತು, ಪ್ರಶಿಕ್ಷಣ ಸಂಸ್ಥೆಗಳಲ್ಲಿ. ಇನ್ನು ಮುಂದೆ ಮೈಕ್ರೊ-ಮ್ಯಾಕ್ರೊ ಬೋಧನ ಕ್ರಮಗಳು ಹರ್‌ಬರ್ಟನ ಸ್ಥಾನವನ್ನು ಕೊಂಚ ಕದಲಿಸಬಹುದೇನೊ. ಸಾಮಾನ್ಯವಾಗಿ ಪ್ರಶಿಕ್ಷಣ ಸಂಸ್ಥೆಗಳಲ್ಲಿ ಯಾವುದಾದರು ಒಂದು ಬೋಧನ ಪದ್ಧತಿಯನ್ನು ಹಿಡಿದು ಶಿಕ್ಷಣಾರ್ಥಿಗಳ ತಲೆಗೆ ಒಂದು ವರ್ಷದಾದ್ಯಂತವೂ ತುರುಕುವ ಸತತ ಪ್ರಯತ್ನ ನಡೆಯುತ್ತದೆ. ಪ್ರಶಿಕ್ಷಣ ಸಂಸ್ಥೆಯಲ್ಲಿ ಅಧ್ಯಾಪಕ ಶಿಕ್ಷಕರು ತಮ್ಮ ಪ್ರದರ್ಶನ ಪಾಠಗಳಲ್ಲಿ ಯಾವ ಮಾರ್ಗವನ್ನು ಅನುಸರಿಸುತ್ತಾರೊ ಅದನ್ನೆ ಶಿಕ್ಷಣಾರ್ಥಿಗಳು ತಮ್ಮ ತರಬೇತಿ ಮುಗಿಯುವವರೆಗೆ ಅನುಸರಿಸುತ್ತಾರೆ. ಅನಂತರ ತಮ್ಮ ಶಾಲೆಗಳಿಗೆ ಹಿಂತಿರುಗಿದ ಮೇಲೆ ಪ್ರಶಿಕ್ಷಣ ಸಂಸ್ಥೆಯ ಬೋಧನ ಕ್ರಮವನ್ನು ಅನುಸರಿಸುವುದು ಶಾಲಾ ತನಿಖಾಧಿಕಾರಿಗಳು ತನಿಖೆಗೆ ಬಂದಾಗಲೆ. ಈ ಬೋಧನ ಪದ್ಧತಿಯನ್ನು ಶಾಲೆಯಲ್ಲಿ ಅನುಸರಿಸಲು ಯುಕ್ತ ಸನ್ನಿವೇಶವಿರುವುದಿಲ್ಲ. ಮೊದಲನೆಯದಾಗಿ ಶಾಲೆಯಲ್ಲಿ ಶಿಕ್ಷಕನ ಮುಖ್ಯ ಕರ್ತವ್ಯ ನಿಯಮಿತ ಕಾಲದಲ್ಲಿ ಪಠ್ಯವಿಷಯವನ್ನು ಮುಗಿಸುವುದು. ಎರಡನೆಯದಾಗಿ ಬೋಧಕನು ಪರೀಕ್ಷೆಗಳಿಗೆ ಮಕ್ಕಳನ್ನು ತಯಾರಿಸುವುದು. ಮೂರನೆಯದಾಗಿ ಉತ್ತಮ ಫಲಿತಾಂಶಗಳತ್ತ ಗಮನ ಕೊಡುವುದು. ನಾಲ್ಕನೆಯದಾಗಿ ಪ್ರಶಿಕ್ಷಣ ಸಂಸ್ಥೆಯಲ್ಲಿ ಹೇಳಿಕೊಟ್ಟ ಪದ್ಧತಿಯನ್ನು ಅನುಸರಿಸಲು ಅಗತ್ಯವಾದ ಸಲಕರಣೆಗಳು ಇರುವುದಿಲ್ಲ. ಮೇಲಾಗಿ ಇವನ ಪ್ರಕೃತಿಗೆ, ಸ್ವಭಾವಕ್ಕೆ ಆಸಕ್ತಿಗಳಿಗೆ ಹಿಡಿಸದ ವಿಷಯಗಳನ್ನು ಬೋಧಿಸಲೇಬೇಕಾಗುತ್ತದೆ ಕೊನೆಯದಾಗಿ ಬೋಧನ ಮಾರ್ಗವನ್ನು ಕುರಿತು ಯೋಚಿಸಿ, ಚಿಂತಿಸಿ, ಸರ್ವಸಿದ್ಧತೆ ಮಾಡಿಕೊಂಡು ಪರಿಣಾಮಕಾರಿಯಾಗಿ ಕಲಿಸುವ ಸಂಯಮ, ತಾಳ್ಮೆ, ಆಸಕ್ತಿ ಇವನಿಗಿರುವುದೇ ಇಲ್ಲ. ಅನ್ಯರ ಬೋಧನ ಮಾರ್ಗದ ಬಗ್ಗೆ ಇವನೆಂತು ಚಿಂತಿಸಿಯಾನು? ತನ್ನದೇ ಆದ ಸ್ವತಂತ್ರವಾದ ಕಲಿಸುವ ಪದ್ಧತಿಯನ್ನು ನಿರ್ಮಿಸಿಕೊಳ್ಳುವ ಸಂಸ್ಕಾರವನ್ನೂ ಪಡೆದಿರುವುದಿಲ್ಲ. ಜೀವನ ಯಾಪನೆಗಾಗಿ ಶಿಕ್ಷಕ ಹುದ್ದೆಯನ್ನು ಹಮ್ಮಿಕೊಂಡ ಇವನಿಂದ ಇಂತಿಷ್ಟು ನಿರೀಕ್ಷಿಸುವುದು ಅತಿಯಾಗಬಹುದೇನೊ. ಪ್ರಶಿಕ್ಷಣ ಸಂಸ್ಥೆಗಳಲ್ಲಿ ಎಂತೊ ಇಲ್ಲಿಯೂ ಕೂಡ ಸ್ವಚ್ಛಂದ ಆವರಣದ ಅಭಾವವಿರುತ್ತದೆ. ಸ್ವತಂತ್ರವಾದ ವರ್ತನೆ, ನಿಲವು ಮನೋಭಾವಗಳು ಶಾಲೆಗಳಲ್ಲಿ ಸಲ್ಲುವುದಿಲ್ಲ. ಅಂತಮೇಲೆ ಬೋಧನೆ ವಿಫಲತೆಯ ಪರಮಾವಧಿಯನ್ನು ಮುಟ್ಟಿದೆ ಎಂದು ಧೈರ್ಯವಾಗಿ ಹೇಳಬಹುದು.

ಬೋಧನೆ ವಿಫಲತೆಯ ಪರಿಣಾಮವನ್ನು ಮುಟ್ಟಿದೆ ಎಂದರೆ ಅದರಲ್ಲಿ ನ್ಯೂನತೆಗಳಿವೆ ಎಂಬುದು ಸ್ಪಷ್ಟವಾಗುತ್ತದೆ. ಇಂದು ಪ್ರೈಮರಿ ಶಾಲೆಯಿಂದ ಉನ್ನತ ಶಿಕ್ಷಣ ಸಂಸ್ಥೆಗಳಾದ ಸ್ನಾತಕೋತ್ತರ ವಿಭಾಗಗಳವರೆಗೂ ಸ್ವಲ್ಪ ಹೆಚ್ಚುಕಡಮೆ ಏಕರೂಪವಾದ ಬೋಧನ ವಿಧಾನವನ್ನು ಅನುಸರಿಸುತ್ತಿರುವುದು ವೇದ್ಯವಾಗುತ್ತಿದೆ. ಅಂದರೆ ಶಾಲಾ ತರಗತಿಗಳಲ್ಲಿ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಶಿಕ್ಷಕನ ಆಟಾಟೋಪ ವಿಪರೀತವಾಗದೆ ಎಂದು ನಿಸ್ಸಂದೇಹವಾಗಿ ಹೇಳಬಹುದು. ತರಗತಿಯಲ್ಲಿ ಕ್ರಿಯಾತ್ಮಕವಾಗಿರುವವನು ಸಂಚಲನಾತ್ಮಕವಾಗಿರುವವನು ಜೀವಂತವಾಗಿರುವವನೆಂದರೆ ಈ ಶಿಕ್ಷಕನೆ. ಇವನು ಕಲಿಸುವವನಲ್ಲಿ ಕಲಿಯುವವನು. ಹೇಳಿದ ವಿಷಯವನ್ನೇ ವರ್ಷವರ್ಷವೂ ಹೇಳಿ ಹೇಳಿ ಅದು ಇವನಿಗೆ ಮನದಟ್ಟಾಗಿರಬಹುದು. ಪಾಠ ಮಾಡಿ ಮಾಡಿ

ಮಾತಿನ ಕಲೆಯಲ್ಲಿ ಪಳಗುತ್ತಾ ನಡೆಯುತ್ತಾನೆ. ತನ್ನ ಅಧಿಕಾರದ ಬಲದಿಂದ, ವಯಸ್ಸಿನ ಹೆಚ್ಚಳಿಕೆಯಿಂದ, ಅನುಭವದ ಮಹಿಮೆಯಿಂದ ಮಕ್ಕಳನ್ನು ನಿಯಂತ್ರಿಸುವಲ್ಲಿ ಕದೀಮನಾಗುತ್ತಾನೆ. ತರಗತಿಯಲ್ಲಿ ಮಕ್ಕಳ ಮುಖ್ಯ ಚಟುವಟಿಕೆ ಎಂದರೆ ಮೇಷ್ಟರ ಆಜ್ಞೆಗಳನ್ನು ಶಿರಸಾವಹಿಸಿ ಮಾಡುವುದು. ಸೀಮೆಸುಣ್ಣ, ಡಸ್ಟರ್, ಒದಗಿಸುವುದು, ಶಿಕ್ಷಕ ನಿದ್ದೆ ಮಾಡುವಾಗ ತರಗತಿಯಲ್ಲಿ ಯಾರೂ ಗಲಾಟೆ ಮಾಡದಂತೆ ನೋಡಿಕೊಳ್ಳುವುದು, ತಪ್ಪಿತಸ್ಥರ ಹೆಸರುಗಳನ್ನು ಕಪ್ಪು ಹಲಗೆಯ ಮೇಲೆ ಬರೆಯುವುದು, ಮೇಷ್ಟರ ಸಣ್ಣಪುಟ್ಟ ಕೆಲಸಗಳನ್ನು ಮಾಡುವುದು. ಅಂದರೆ ವ್ಯಾಸಂಗೇತರ ಚಟುವಟಿಕೆಗಳಲ್ಲಿ ಮಕ್ಕಳ ಪಾಲುಗಾರಿಕೆಗೆ ಅವಕಾಶವುಂಟೆ ಹೊರತು ತರಗತಿಯ ಬೌದ್ಧಿಕ ಚಟುವಟಿಕೆಗಳಲ್ಲಿ ಶಿಕ್ಷಕನೇ ಕಿರೀಟರಹಿತ ಸಾಮ್ರಾಟ. ಈ ಸಾಮ್ರಾಟನ ಮುಂದೆ ಮಕ್ಕಳು ತಮ್ಮ ಸಣ್ಣತನವನ್ನು ಒಪ್ಪಿ ತಗ್ಗಿಯೇ ನಡೆಯಬೇಕು. ತಮ್ಮ ಬಾಲ ಬಿಚ್ಚುವ ಪ್ರಯತ್ನವನ್ನು ಎಂದೂ ಮಾಡಕೂಡದು. ಅಧಿಕಪ್ರಸಂಗಿತನವನ್ನು ಎಂದೂ ಮೆರೆಯಕೂಡದು. ಈ ತೆರನಾದ ಮಕ್ಕಳ ವರ್ತನೆ ನಡವಳಿಕೆ ಉನ್ನತ ಹಂತಗಳಿಗೆ ಹೋದಂತೆಲ್ಲಾ ಅಲ್ಪಸ್ವಲ್ಪ ಮಾರ್ಪಾಡಿನೊಡನೆ ಮುಂದುವರಿಯುತ್ತದೆ. ತರಗತಿಯಲ್ಲಿ ಪೀಠೋಪಕರಣಗಳಿಗೂ ವಿದ್ಯಾರ್ಥಿಗಳಿಗೂ ಇರುವ ಒಂದು ವ್ಯತ್ಯಾಸವೆಂದರೆ ಒಂದು ಮೃತ ಮತ್ತೊಂದು ಅಮೃತ. ಒಂದು ವಿಷಯವನ್ನು ಯಾಂತ್ರಿಕವಾಗಿ ಸಂಗ್ರಹಿಸುತ್ತದೆ ಮತ್ತೊಂದು ಮೃತ ವಿಷಯ ಸಂಗ್ರಹಣೆಯಿಂದ ಉಪಯೋಗವಿಲ್ಲವೆಂದು ನಿಶ್ಚೇಷ್ಟಿತವಾಗಿರುತ್ತದೆ. ಹೀಗೆ ಮಕ್ಕಳು ತರಗತಿಯಲ್ಲಿ ಜಡತ್ವವನ್ನು ಸ್ವೀಕರಿಸಿರುವಾಗ ಅವರು ಎಂತು ಕಲಿಯಬಲ್ಲರು! ಈ ತೆರನಾದ ಬೋಧನೆಯ ನಿರುಪಯೋಗವನ್ನು ಅರಿತು ಮಹರ್ಷಿ ಅರವಿಂದರು "ಬೋಧನೆಯ ಮೊದಲ ತತ್ವ ಬೋಧಿಸದೆ ಇರುವುದು" ಎಂದು ವಿಶ್ವಕ್ಕೆ ಸಾರಿದರು.

ಬೋಧನ ಮತ್ತು ಕಲಿಕೆಗಳು ಪರಸ್ಪರ ವಿರೋಧಿಗಳಲ್ಲ. ಮಕ್ಕಳು ಕಲಿಕೆಯಲ್ಲಿ ಆಸಕ್ತಿಯುಳ್ಳವರಾಗಿರುತ್ತಾರೆ. ಅವರು ತುಂಬ ಕುತೂಹಲಿಗಳಾಗಿರುತ್ತಾರೆ, ಅನ್ವೇಷಣೆಯಲ್ಲಿ ತೊಡಗಿ ತಮ್ಮ ಅಂತರ್ಗತ ಶಕ್ತಿಗಳನ್ನು ಕಂಡುಕೊಳ್ಳುತ್ತಾರೆ. ಅವರು ಉತ್ಸಾಹಶಾಲಿಗಳೂ ಸಾಹಸಪ್ರಿಯರೂ ಆಗಿರುತ್ತಾರೆ. ಆದರೆ ಮಕ್ಕಳು ಅನ್ವೇಷಿಸುವ ವಸ್ತುವಿಷಯಗಳಿಗೂ ಶಿಕ್ಷಕರು ತರಗತಿಯಲ್ಲಿ ಬೋಧಿಸುವ ವಿಷಯಗಳಿಗೂ ಸಾಮ್ಯವಿರುವುದಿಲ್ಲ. ಮಕ್ಕಳು ನಿತ್ಯ ಜೀವನದಲ್ಲಿ ದರ್ಶಿಸುವ ಸಂಸ್ಪರ್ಶಿಸುವ ಜೀವಂತ ವಸ್ತುಗಳಿಗೂ ಶಾಲೆಯಲ್ಲಿನ ಸತ್ವಹೀನ ಹಾಗೂ ನಿರ್ಜೀವ ವಸ್ತುಗಳಿಗೂ ಅಗಾಧ ಭೇದ ಕಂಡುಬರುತ್ತದೆ.

ಒಮ್ಮೆ ಹದಿನೈದು ವರ್ಷದ ಹುಡುಗ ಶಾಲೆಯ ನಿರ್ಜೀವ ಚಟುವಟಿಕೆಗಳನ್ನು ಕುರಿತು ಇಂತು ಅಭಿಪ್ರಾಯಿಸಿದ್ದಾನೆ. "ಶಾಲೆಯನ್ನು ಕುರಿತ ಮೂಲಭೂತ ವಿಮರ್ಶೆ ಎಂದರೆ, ವಿದ್ಯಾರ್ಥಿಗಳು ಅದನ್ನು ಇಷ್ಟಪಡುವುದಿಲ್ಲ." ಇನ್ನೊಬ್ಬ ಹುಡುಗ ಶಾಲಾನುಭವವನ್ನು ಕುರಿತು ಇಂತು ಕವನಿಸಿದ್ದಾನೆ:

When I leave your school
Sitting at a dead desk
I will forget
What I learn.[4]

ಶಾಲೆಯ ಮೃತ ಬೆಂಚುಗಳ ಮೇಲೆ ಕುಳಿತಾಗ ನಾವೇನೆಂಬುದನ್ನೆ ಮರೆಯುತ್ತೇವೆ. ಮಕ್ಕಳು ಶಾಲೆಯಲ್ಲಿ ಕಲಿಯಲು, ಕ್ರಿಯಾತ್ಮಕವಾಗಿರಲು, ಸಂಚಲನಾತ್ಮಕವಾಗಿರಲು ಇಚ್ಛಿಸುತ್ತವೆ.

ವ್ಯಾಪಕಾರ್ಥದಲ್ಲಿ ಹೇಳುವುದಾದರೆ ಮಕ್ಕಳು ನಿತ್ಯೋಪಯೋಗಿಯೂ ಜೀವನೋಪಯೋಗಿಯೂ ಆದ ವಸ್ತುವಿಷಯಗಳನ್ನು ಕಲಿಯಲು ಇಚ್ಛಿಸುತ್ತಾರೆ. ಉತ್ತಮ ಆಟಗಾರ

ರಾಗುವ, ಒಳ್ಳೆಯ ನೌಕರಿಯನ್ನು ಪಡೆಯುವ, ಒಳ್ಳೆಯ ಸ್ನೇಹಿತರನ್ನು ಒದಗಿಸುವಂತೆ ಮಾಡುವ ಶಿಕ್ಷಣದ ಆವಶ್ಯಕತೆ ವಿದ್ಯಾರ್ಥಿಗಳಿಗೆ ಇದೆ. ಶಾಲೆಯಲ್ಲಿ ಒದಗಿಸುವ ಪಠ್ಯವಿಷಯಗಳು ಜೀವನಕ್ಕೆ ಅಗತ್ಯವಾದ ಉದ್ದೇಶಗಳ ಸಾಧನೆಗೆ ಸಹಾಯಕವಾಗುವುದಿಲ್ಲ. ಶಾಲೆಗಳಲ್ಲಿ ವ್ಯವಸ್ಥಿತ ರೀತಿಯಲ್ಲಿ ಒದಗಿಸುವ ಬೋಧನ ವಿಷಯಗಳಾದ ಚರಿತ್ರೆ, ಭೂಗೋಳ, ಇನ್ನಿತರೆ ವಿಷಯಗಳು ಮಕ್ಕಳು ತಿರುಗಾಡುವ ಬೀದಿಗಳಲ್ಲಿ ನಿತ್ಯಜೀವನದಲ್ಲಿ ಕಾಣಸಿಗುವುದಿಲ್ಲ. ಈ ವಿಷಯಗಳಿಗೂ ದೈನಂದಿನ ಜೀವನಕ್ಕೂ ಯಾವ ಸಂಬಂಧವಿದೆ?

ಬೋಧನೆಗೂ ಕಲಿಕೆಗೂ ಒಂದು ತೆರನಾದ ತುಮುಲವಿರುವುದು (tension) ವೇದ್ಯವಾಗುತ್ತದೆ. ಇದಕ್ಕೆ ಪಠ್ಯವಿಷಯವೇ ಕಾರಣವಲ್ಲ. ಅನ್ಯರ ಬೋಧನೆಯನ್ನು ನಿರ್ಲಕ್ಷಿಸಿ ತಾವೇ ಕಲಿಯಬೇಕೆಂಬ ಹಂಬಲ ಸ್ವಾಗತಾರ್ಹವಾದುದೆ, ಸ್ವಸ್ಥವಾದ ಭಾವನೆ. ಇದಕ್ಕೆ ಕಾರಣವೆಂದರೆ ಯಾವೊಬ್ಬ ವ್ಯಕ್ತಿಯನ್ನೂ ಬೋಧನೆಯಿಂದ ತೃಪ್ತಿಗೊಳಿಸಲು ಸಾಧ್ಯವಿಲ್ಲ. ತೃಪ್ತಿ ಪಡೆಯಲು ಸಾಧ್ಯವಾಗುವುದು ಸ್ವಯಂಬೋಧನೆಯಿಂದಲೆ, ಸ್ವಾನುಭವದಿಂದಲೆ. ಸುಶಿಕ್ಷಿತ ವ್ಯಕ್ತಿ ಯಾರೆಂದರೆ ಸ್ವಯಂಬೋಧನೆಯನ್ನು ಮಾಡಿಕೊಳ್ಳಲು ಕಲಿತಿರುವ ವ್ಯಕ್ತಿಯೇ. ಶಿಕ್ಷಕನು ಕಲಿಕೆಗೆ ಸಹಾಯ ಮಾಡಬಲ್ಲನೆ ಹೊರತು, ವ್ಯಕ್ತಿಯನ್ನು ಕಲಿಯುವಂತೆ ಮಾಡಲಾರನು. ಕಲಿಕೆಯಲ್ಲಿ ಆಸಕ್ತಿ ಇಲ್ಲದವನನ್ನು ಕಲಿಯುವಂತೆ ಮಾಡುವುದು ದುಸ್ಸಾಧ್ಯ. ಮಕ್ಕಳು ಒಂದೇ ಪಡಿಯಚ್ಚಿಗೆ ಒಳಗಾಗುವುದರ ಬದಲು ಸೃಷ್ಟ್ಯಾತ್ಮಕವಾದ ಕೆಲಸಗಳಲ್ಲಿ ನಿರತರಾಗಲು ಇಷ್ಟಪಡುತ್ತಾರೆ. ಶಿಕ್ಷಕನ ಮುಖ್ಯ ಕೆಲಸ, ಮಕ್ಕಳಿಗೆ ಕಲಿಯಲು ಸಹಾಯ ಒದಗಿಸುವುದು, ತೋಟಗಾರನು ಗಿಡಸಸಿಗಳನ್ನು ಬೆಳೆಯಲು ಭೂಮಿಯನ್ನು ಹದಗೊಳಿಸುವಂತೆ. ಇದೇ ಭಾವವನ್ನು ಸಮರ್ಥಿಸುವ ಶ್ರೀ ವಿವೇಕಾನಂದರ ಶೈಕ್ಷಣಿಕ ವಾಣಿಯನ್ನು ಆಲಿಸಿ:

"ಸಸಿಯನ್ನು ಬೆಳೆಸಲು ಹೇಗೆ ಸಾಧ್ಯವಿಲ್ಲವೋ ಅಂತೆಯೇ ಮಕ್ಕಳಿಗೆ ಬೋಧಿಸಲು ಸಾಧ್ಯವಿಲ್ಲ. ಸಸಿಯು ತನ್ನ ಪ್ರಕೃತಿಗೆ ಸ್ವಭಾವಕ್ಕೆ ಅನುಸಾರವಾಗಿ ಬೆಳೆಯತೊಡಗುತ್ತದೆ. ಮಗುವು ಕೂಡ ಸ್ವಯಂ ಬೋಧನೆಯಲ್ಲಿ ತೊಡಗುತ್ತದೆ. ಮಗುವು ತನಗನುಗುಣವಾದ ರೀತಿಯಲ್ಲಿ ಬೆಳೆದು ಮುಂಬಲಿಯಲಿಕ್ಕೆ ನಾವು ಸಹಾಯವನ್ನು ಎಸಗಬಹುದು. ಕಲಿಕೆಗೆ ಇರುವ ಅಡೆತಡೆಗಳನ್ನು ತೆಗೆದು ಹಾಕಿದರೆ ಜ್ಞಾನವು ಪ್ರಕೃತಿ ಸಹಜವಾಗಿಯೇ ಹೊಮ್ಮುತ್ತದೆ. ನೇರವಾದ ಸಹಾಯವನ್ನು ಒದಗಿಸದೆ ಪರೋಕ್ಷವಾಗಿ ನೆರವನ್ನು ಒದಗಿಸಬಹುದು. ಸಸಿಯ ಸುತ್ತಲೂ ಇರುವ ಮಣ್ಣನ್ನು ಹುಡಿಗೈದು ಹದಗೊಳಿಸಿದರೆ ಅದು ತಾನಾಗಿಯೇ ಮೇಲೇಳುತ್ತದೆ. ಅದರ ಸುತ್ತಲೂ ಬೇಲಿ ಹಾಕಿ ಅದು ನಾಶವಾಗದಂತೆ ನೋಡಿಕೊಳ್ಳಬೇಕು. ಅದರ ಬೆಳವಣಿಗೆಗೆ ಯುಕ್ತವಾದ ಗೊಬ್ಬರ ನೀರು ಮೊದಲಾದುವನ್ನು ಒದಗಿಸಬೇಕು. ಇಲ್ಲಿಗೆ ತೋಟಗಾರನ ಕೆಲಸ ಮುಗಿಯುತ್ತದೆ. ಸಸಿಯು ತನಗೆ ಬೇಕಾದುದನ್ನು ಪ್ರಕೃತಿಯಿಂದ ಪಡೆಯುತ್ತದೆ. ಇದೇ ತತ್ವ ಮಗುವಿನ ಶಿಕ್ಷಣಕ್ಕೂ ಅನ್ವಯಿಸುತ್ತದೆ. ಮಗುವು ತನ್ನಷ್ಟಕ್ಕೆ ತಾನೇ ಶಿಕ್ಷಣ ಪಡೆಯುತ್ತದೆ. ಶಿಕ್ಷಕನು ಮಗುವಿನ ಸರ್ವನಾಶಕ್ಕೂ ಕಾರಣನಾಗುತ್ತಾನೆ, ಬೋಧಿಸಲು ಉದ್ಯೋಗಿಸಿದರೆ. ಸರ್ವಜ್ಞಾನವೂ ಮನುಷ್ಯನಲ್ಲಿಯೇ ಅಡಕವಾಗಿರುತ್ತದೆ. ಅವನನ್ನು ಎಚ್ಚರಿಸಬೇಕಷ್ಟೆ. ಶಿಕ್ಷಕನದು ಇಷ್ಟೇ ಕೆಲಸ."

ಈ ಮೇಲಣ ಸ್ವಾಮಿ ವಿವೇಕಾನಂದರ ಶೈಕ್ಷಣಿಕ ಅಭಿಪ್ರಾಯಗಳು ಶಾಲಾ ತರಗತಿಯಲ್ಲಿ ಶಿಕ್ಷಕನು ಗೈಯಬೇಕಾದ ಕಾರ್ಯಗಳನ್ನು ಸೂಚಿಸುತ್ತವೆ. ಬೋಧನೆಯಲ್ಲಿ ಶಿಕ್ಷಕನ ಪಾತ್ರ ಪರಿಮಿತವಾದುದು. ತನ್ನ ಹೆಚ್ಚಿನ ಸಮಯವನ್ನು ಅವರ ಸ್ವಭಾವಗಳನ್ನು ಅರ್ಥವಿಸಿಕೊಳ್ಳುವಲ್ಲಿ ವ್ಯಯಿಸಿ ಅವರಿಗೆ ಸೂಕ್ತವಾದ ಮಾರ್ಗದರ್ಶನವನ್ನು ಒದಗಿಸಿ ಅವರ ಬೆಳವಣಿಗೆಗೆ ಕಾರಣವಾಗಬೇಕು. ಆದರೆ ಪ್ರಥಮದಲ್ಲಿ ಕಲಿಕೆ ಅಸಾಧ್ಯವಾಗುತ್ತದೆ, ಕಲಿಕೆಯ ಮೂಲ ಸಂಪನ್ಮೂಲ

ಗಳು ಮತ್ತು ವಿಧಾನಗಳು ಇಲ್ಲದಿದ್ದಲ್ಲಿ. ಪ್ರಾರಂಭದ ದಿನಗಳಲ್ಲಿ ಕಲಿಕೆಗೆ ಅನ್ಯರ ಪ್ರವೇಶ ಅಗತ್ಯ ವೆನಿಸುತ್ತದೆ. ಪ್ರಾಣಿಗಳೆಲ್ಲವೂ ಪ್ರಾರಂಭದಲ್ಲಿ ಕಲಿಕೆಗೆ ಅನ್ಯಾಶ್ರಯವನ್ನು ಪಡೆಯುತ್ತವೆ. ಮನುಷ್ಯನ ಬಾಲ್ಯಜೀವನ ಪ್ರಾಣಿಗಳಿಗಿಂತಲೂ ದೀರ್ಘವಾಗಿರುತ್ತದೆ.

ವಿದ್ಯಾರ್ಥಿ ಮತ್ತು ಶಿಕ್ಷಕರಲ್ಲಿ ಆಗಾಗ್ಗೆ ಸಂಭವಿಸುವ ಘರ್ಷಣೆ ನಡೆಯುವ ಬೌದ್ಧಿಕವಾದ ಕಲಹಗಳು ನಿಷ್ಪ್ರಯೋಜಕವಾಗಿರದೆ ಪರಿಮಿತವಾದ ಮೌಲ್ಯವನ್ನು ಹೊಂದಿರುತ್ತವೆ. ಕೆನೆತ್ ಬರ್ನ್ನಿಯ ಮಾತಿನಲ್ಲಿ ಹೇಳುವುದಾದರೆ ಮಕ್ಕಳ ಮತ್ತು ವಯಸ್ಕರ ನಡುವೆ ನಡೆಯುವ ಕಲಹ ಗಳು ಕೇವಲ ದುಷ್ಪರಿಣಾಮಗಳನ್ನೇ ಉಂಟುಮಾಡುವುದಿಲ್ಲ. ಆದರೆ ಮಕ್ಕಳು ಮತ್ತು ವಯಸ್ಕರಲ್ಲಿ ಭಾವಾತ್ಮಕ ಸಂಘರ್ಷಣೆಗಳು ನಡೆಯದಿದ್ದಲ್ಲಿ ಆಗುವ ದುಷ್ಪರಿಣಾಮಗಳು ಹೆಚ್ಚು.

ಉಪಾಧ್ಯಾಯನು ಅಗತ್ಯವಾಗಿ ಹೊಂದಿರಬೇಕಾದ ಗುಣವೆಂದರೆ ಮಕ್ಕಳ ಬೇಡಿಕೆಗೆ ಸಾಮರ್ಥ್ಯಕ್ಕೆ ಅನುಗುಣವಾದ ಮಾರ್ಗದರ್ಶನವನ್ನು ಒದಗಿಸುವ ಆತ್ಮಸಂಯಮವನ್ನು ಪಡೆಯುವುದು. ವಿದ್ಯಾರ್ಥಿಯು ಪರಿಣತನಾದಂತೆ ಶಿಕ್ಷಕನಿಂದ ಮಹತ್ತ್ವಾದುದನ್ನು ನಿರೀಕ್ಷಿಸದೆ ಸ್ವಾವಲಂಬಿಯಾಗುತ್ತಾ ನಡೆಯುತ್ತಾನೆ. ಕ್ರಮೇಣ ಶಿಕ್ಷಕ ತರಗತಿಯಲ್ಲಿ ಹಿನ್ನಡೆಯುತ್ತಾ ಮರೆಯಾಗುತ್ತಾ ಹೋಗಬೇಕು. ಯಾವ ಸಮಯದಲ್ಲಿ ತೀವ್ರತರವಾದ ಚಟುವಟಿಕೆಯಿಂದ ಅಪ್ರಕಟನಾಗಬೇಕು ಎಂಬುದನ್ನು ತಾನೇ ತಿಳಿದುಕೊಳ್ಳಬೇಕು. ಶಿಕ್ಷಕನು ದೈನಂದಿನ ಚಟುವಟಿಕೆ ಗಳಿಂದ ಅತ್ಯಂತ ಶೀಘ್ರವಾಗಿ ವಿಮುಖನಾದಲ್ಲಿ ಇಲ್ಲವೆ ಈ ವಿಮುಖತೆಯನ್ನು ವಿಳಂಬಿಸಿದಲ್ಲಿ ಹಾನಿ ತಪ್ಪದು. ಉತ್ತಮ ಪಾಂಡಿತ್ಯವನ್ನು ಪಡೆದ ಶಿಕ್ಷಕ ರೂಢಿ ಪಾಶ ಕ್ರಮದಿಂದ ತಿರೋ ಹಿತನಾಗುವುದು ಅಪೂರ್ವವೆ. ತನ್ನ ಮಹಿಮೆಯನ್ನು ಪೌರುಷವನ್ನು ಮಕ್ಕಳ ಮುಂದೆ ಮೆರೆ ಯುವುದೇ ಇವನಿಗೆ ಅತ್ಯಂತ ಪ್ರಿಯವಾದುದು. ತನ್ನ ವ್ಯಕ್ತಿತ್ವವನ್ನು ಮಕ್ಕಳಲ್ಲಿ ಬಿತ್ತಲು ಬೆಳೆಸಲು ಸರ್ವದಾ ಪ್ರಯತ್ನಿಸುತ್ತಾನೆ.

ಶಿಕ್ಷಕನ ಪವಿತ್ರತಮ ಕರ್ತವ್ಯವೆಂದರೆ ಮಕ್ಕಳ ಸ್ವಾಭಾವಿಕವಾದ ಸ್ವಾಯತ್ತತೆಯನ್ನು ಗೌರವಿಸುವುದು. ಹೀಗೆಂದಾಕ್ಷಣ ಅಧ್ಯಾಪಕನು ತನ್ನ ಅನಿಸಿಕೆಗಳನ್ನು ವ್ಯಕ್ತಪಡಿಸದೆ ತರಗತಿ ಯಿಂದ ತೊಲಗುವುದಲ್ಲ. ಅಂದರೆ ತನ್ನ ಉತ್ಕಟ ಭಾವಗಳನ್ನು ಸಲ್ಲದಮಾರ್ಗಗಳ ಮೂಲಕ ಬಹಿರ್ಪಡಿಸಿ ಮಕ್ಕಳ ಚಿಂತನೆಯನ್ನು ಪ್ರಭಾವಿಸುವುದು ಸಲ್ಲದು. ಮಕ್ಕಳು ಪ್ರಶ್ನೆ ಹಾಕಿ ದಾಗ ಅವರ ಭಾವಾಲೋಚನೆಗಳನ್ನು ಪ್ರಭಾವಿಸುವ ಸನ್ಮಾರ್ಗ ಅಪಮಾರ್ಗ ಯಾವುದು ಎಂಬು ದರ ಅರಿವೆ ಅಗತ್ಯ. ಸಂಗ್ರಹವಾಗಿ ಹೇಳುವುದಾದರೆ ಮಕ್ಕಳ ಯೋಚನಾಶಕ್ತಿಯನ್ನು ಪ್ರಚೋದಿ ಸುವ ಮಾರ್ಗ ಉತ್ಕೃಷ್ಟವಾದುದು. ಅವರ ಚಿಂತನೆಯ ಹುಟ್ಟನ್ನೇ ಅಡಗಿಸುವ ಮಾರ್ಗ ನಿಕೃಷ್ಟವಾದುದು. ರಾಜಕೀಯ ಮತ್ತು ವಾಣಿಜ್ಯ ಪ್ರಪಂಚದಲ್ಲಿ ಪ್ರಚಾರದ ಮುಖ್ಯ ಉದ್ದೇಶ ಗಿರಾಕಿಗಳನ್ನು ಪ್ರಶಂಸಿಸಿ ಅವರನ್ನು ಆಲೋಚನಾಹೀನರನ್ನಾಗಿ ಮಾಡಿ ತಮ್ಮ ವಸ್ತು ವನ್ನು ಇಲ್ಲವೆ ವಿಷಯವನ್ನು ಪಡೆಯುವಂತೆ ಮಾಡುವುದು. ಇಲ್ಲಿಯೇ ಶಿಕ್ಷಣಕ್ಕೂ ಪ್ರಚಾರಕ್ಕೂ ಕಂಡುಬರುವ ಅಂತರ. ಈ ಕಾರಣದಿಂದಲೇ ಉತ್ಕೃಷ್ಟ ಶಿಕ್ಷಣವೇನೆಂಬುದನ್ನು ಮೊದಲು ತಿಳಿದು ಕೊಳ್ಳಬೇಕು.

ವಿದ್ಯಾರ್ಥಿಯು ಶಿಕ್ಷಕನ ನಿಲುವಿನ ಬಗ್ಗೆ ಸಮ್ಮತ ತಳೆದಿರಲಿ ಇಲ್ಲವೆ ಭಿನ್ನಾಭಿಪ್ರಾಯ ಹೊಂದಿರಲಿ, ಅವನಿಗೆ ಸತ್ಯಾನ್ವೇಷಣೆಯ ಋಜುಮಾರ್ಗವನ್ನು ಪ್ರಾಮಾಣಿಕತೆಯಿಂದ ತಿಳಿಸಿ ಕೊಡಬೇಕು. ಯಾವ ವಿಷಯದ ಬಗೆಗಾದರೂ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲು ಅರ್ಹತೆಯನ್ನು ನಿರಂತರ ಅಭ್ಯಾಸದಿಂದ ಪಡೆಯಬೇಕೆಂದು ತಿಳಿಯ ಹೇಳಬೇಕು. ಮುಕ್ತ ಆಲೋಚನೆ ಎಂದರೆ ತನಗೆ ತಿಳಿಯದ ವಿಷಯದ ಬಗ್ಗೆ ಹರಟುವುದಲ್ಲ. ತನಗೆ ತಿಳಿಯದ

ವಿಷಯವನ್ನು ಕುರಿತು ಹುಚ್ಚಾಬಟ್ಟೆ ಮಾತನಾಡಿ ಅಧಿಕಪ್ರಸಂಗಿತನವನ್ನು ಮೆರೆಯುವ ವಿದ್ಯಾರ್ಥಿಗಳ ವಿಷಯದಲ್ಲಿ ಶಿಕ್ಷಕ ಸಿಡಿದೆದ್ದು ತನ್ನ ಉಚಿತಾಭಿಪ್ರಾಯವನ್ನು ವ್ಯಕ್ತಪಡಿಸಿ ಅವರ ತಲೆಹರಟೆಗೆ ಪೂರ್ಣವಿರಾಮ ಹಾಕಬೇಕು. ಇಂತಹ ಸಂದರ್ಭಗಳಲ್ಲಿ ಶಿಕ್ಷಕ ತನ್ನ ಅಧಿಕಾರವನ್ನು ಪ್ರದರ್ಶಿಸಬೇಕು. ಇಲ್ಲಿ ಅಧಿಕಾರವೆಂದರೆ ಸ್ಥಾನಬಲದಿಂದ ಹೊಮ್ಮಿದುದಲ್ಲ. ಜ್ಞಾನಬಲದಿಂದ, ಅನುಭವದಿಂದ ಪಡೆದ ತರಬೇತಿಯಿಂದ ಸಂಭವಿಸಿದುದು. ವಿವೇಕಿಯಾದ ಶಿಕ್ಷಕನು ತಿಳಿದಿರಬೇಕು, ಘನತೆ ಗೌರವಗಳು ಉನ್ನತಗೊಳ್ಳುವುದು ಸ್ಥಾನಬಲದಿಂದ ಧನಬಲದಿಂದ ಅಲ್ಲ ಎಂದು. ನಿರಂತರ ಕರ್ಮದಿಂದ ಸಂಸ್ಕಾರವನ್ನು ವರ್ಧಿಸಿಕೊಳ್ಳುವುದರಿಂದ ಅಧಿಕಾರ ಅಧಿಕವಾಗುತ್ತದೆ.

ಶಿಕ್ಷಕನು ತಾನು ಔನ್ನತ್ಯವನ್ನು ಏರಿ ನಿಂತವನು, ವಿದ್ಯಾರ್ಥಿಗಳು ಕ್ಷುಲ್ಲಕರು ಎಂಬ ಭಾವನೆಯಿಂದ ಪರಿತಪಿಸುತ್ತಿದ್ದರೆ, ವಿದ್ಯಾರ್ಥಿಗಳು ಅವನ ಮಟ್ಟ ಏನು ಎಂಬುದನ್ನು ತಿಳಿಯುವಂತೆ ಮಾಡಬೇಕು. ವಿದ್ಯಾರ್ಥಿ ಮತ್ತು ಶಿಕ್ಷಕರಲ್ಲಿ ಕೊಡು–ಕೊಳ್ಳುವ ಭಾವನೆ ಮೂಡಬೇಕೆಂಬುದನ್ನು ಶಿಕ್ಷಕ ಅರಿತಷ್ಟೂ ಉತ್ತಮ ಸ್ಥಿತಿಗೆ ಏರುವನು. ಇವರೀರ್ವರಲ್ಲಿ ವಿರಸವುಂಟಾದಲ್ಲಿ, ಅದೇ ಹೊಸ ಅನುಭವಕ್ಕೆ ಕಾರಣವಾಗುವುದು. ಬೋಧನೆ ಎಂದರೆ ಕೇವಲ ಸರಬರಾಜಿಸುವುದಲ್ಲ. ಕಲಿಕೆ ಎಂದರೆ ಎಲ್ಲವನ್ನೂ ಸ್ವೀಕರಿಸುವುದಲ್ಲ. ಶಿಕ್ಷಕನು ಬೋಧನೆಯಲ್ಲಿ ಯಶಸ್ವಿಯಾಗುವುದು ಅವನು ಮಕ್ಕಳಿಂದ ಅಲ್ಪವನ್ನಾದರೂ ಕಲಿತಾಗಲೇ. ಮಕ್ಕಳು ಕೂಡ ಶಿಕ್ಷಕರ ಸಂಸ್ಕಾರವನ್ನು ಹೆಚ್ಚಿಸದೆ ಏನನ್ನೂ ಕಲಿಯಲಾರರು. ಬೋಧನೆ–ಕಲಿಕೆಯ ಪ್ರಕ್ರಿಯೆಯಲ್ಲಿ ಶಿಕ್ಷಕ ಕೆಲವೊಮ್ಮೆ ಕಲಿಕೆಯಲ್ಲಿ ತೊಡಗಬೇಕಾಗುತ್ತದೆ, ವಿದ್ಯಾರ್ಥಿ ಬೋಧನೆಯಲ್ಲಿ ನಿರತವಾಗಬೇಕಾಗುತ್ತದೆ. ಈ ಪ್ರಕ್ರಿಯೆಯಲ್ಲಿ ಗುರು–ಶಿಷ್ಯನ ಸಂಬಂಧವು ಪರಿಣಾಮಕಾರಿಯಾಗಿದ್ದಲ್ಲಿ ಕೊಡು–ಕೊಳ್ಳು ಪ್ರಮಾಣ ವಿಶೇಷವಾಗಿರುತ್ತದೆ.

ಶಿಕ್ಷಕನು ಎದುರಿಸಬೇಕಾದ ಮಹತ್ತರವಾದ ಸಮಸ್ಯೆ ಎಂದರೆ ವೈಯಕ್ತಿಕವಾದ ಆಸಕ್ತಿಯನ್ನು ಪಕ್ಷಾತೀತವಾದ ನ್ಯಾಯಪರತೆಯನ್ನು ಹಿತಮಿತವಾಗಿ ಸಮ್ಮಿಶ್ರಣಗೊಳಿಸುವುದೇ. ಮಗುವಿನ ಮುಂದುವರಿಕೆಗೆ ಆಸಕ್ತಿ ವಹಿಸಿದರೆ ನಿಷ್ಪಾಕ್ಷಿಕವಾಗಿರುವುದು ಅಸಾಧ್ಯ. ಕನಿಷ್ಠ ಮಟ್ಟದ ಮಗುವಿಗೆ ಎಷ್ಟು ಆದ್ಯತೆಯನ್ನು ಕೊಡಬೇಕೊ ಅಷ್ಟನ್ನೇ ಶ್ರೇಷ್ಠ ಮಟ್ಟದ ಮಗುವಿಗೂ ಕೊಡಬೇಕಾಗುತ್ತದೆ. ಮಕ್ಕಳ ಬಗ್ಗೆ ಆಸಕ್ತಿ ವಹಿಸಬೇಕೆ ಬೇಡವೆ ಎಂಬುದನ್ನು ಮೊದಲು ನಿರ್ಣಯಿಸಿಕೊಳ್ಳಬೇಕು. ಮಕ್ಕಳ ವಿಷಯದಲ್ಲಿ ಅನುಕಂಪ ಆಸಕ್ತಿಗಳನ್ನು ತಳೆಯದೆ ಇರುವುದು ಕಠಿಣವಾದ ಕೆಲಸ. ಆದರೆ ಇದು ಶಿಕ್ಷಕನ ಕಾರ್ಯದ ಅವಿಭಾಜ್ಯವಾದ ಭಾಗ.

ಪ್ರಾಥಮಿಕ ಶಿಕ್ಷಣದ ನಂತರ ತರಗತಿಯ ಬೋಧನೆಗಿಂತ ಸಾಮೂಹಿಕ ಕ್ರಿಯೆ (Group work) ಮತ್ತು ವೈಯಕ್ತಿಕ ಅಧ್ಯಯನಗಳು ಪ್ರಾಮುಖ್ಯ ಪಡೆಯಬೇಕು. ಸಣ್ಣ ಸಮೂಹದಲ್ಲಿ ಒಬ್ಬ ಇನ್ನೊಬ್ಬನಿಗೆ ಸಹಾಯ ಒದಗಿಸಬಲ್ಲ. ವೈಯಕ್ತಿಕವಾದ ಕೆಲಸ ವಹಿಸಿ ಫಲಿತಾಂಶ ಪಡೆಯಬಹುದು. ವ್ಯಕ್ತಿಯು ಸ್ವತಂತ್ರವಾಗಿ ಕಾರ್ಯನಿರತನಾಗುವ ಮೂಲಕ ಅನಂತವಾದುದನ್ನು ಸಾಧಿಸಬಹುದು. ಸಾಮೂಹಿಕ ಕಲಿಕೆಯ ಪ್ರಕ್ರಿಯೆಯು ಸಾಮಾಜಿಕ ಚಟುವಟಿಕೆಗೆ ಸಂವಾದಿಯಾಗುತ್ತದೆ. ಶಿಕ್ಷಕ-ವಿದ್ಯಾರ್ಥಿಗಳ ಸಂಬಂಧಕ್ಕಿಂತಲೂ ಸಾಮೂಹಿಕ ಕ್ರಿಯೆಯಲ್ಲಿ ವಿಶೇಷ ಉತ್ಸಾಹ ಹುಮ್ಮಸ್ಸುಗಳು ಕಂಡುಬರುತ್ತವೆ. ಕಲಿಕೆಯು ಪರಿಸರ ಮತ್ತು ವಿದ್ಯಾರ್ಥಿಗಳ ಸಂಬಂಧದಿಂದ ಉತ್ತಮಗೊಳ್ಳುತ್ತವೆಂದು ಭಾಸವಾಗುತ್ತದೆ. ಶಾಲೆಗಳು ಸಮಾಜದಿಂದ ಪ್ರತ್ಯೇಕವಾಗಿದ್ದವು ಎಂಬುದು ಕಳೆದ ಶತಮಾನಕ್ಕೆ ಸೇರಿದ ವಿಷಯ. ಇಂದು ಶಾಲೆ ನೇರ ಜೀವನಕ್ಕೆ ಧುಮ್ಮಿಕ್ಕಬೇಕು, ಸುತ್ತಮುತ್ತಣ ಪರಿಸರದಿಂದ ವಸ್ತುವಿಷಯಗಳನ್ನು ಆಯಬೇಕು.

ಶಿಕ್ಷಣವು ಪರಿಣಾಮಕಾರಿಯಾಗಿರಲು ಮಕ್ಕಳ ಪ್ರಸ್ತುತ ಅವಶ್ಯಕತೆ ಮತ್ತು ಆಸಕ್ತಿಗಳಿಗೆ ಅನುಗುಣವಾಗಿರಬೇಕು. ನಮಗನಿಸಿದುದನ್ನು ಮಕ್ಕಳು ಓದಬೇಕೆಂದಾಗಲಿ ಇಲ್ಲವೆ ನಮಗೆ ಉಪಯುಕ್ತವಾದುದು ಅವರಿಗೂ ಉಪಯುಕ್ತವಾದುದೆಂದು ಬಗೆಯುವುದಾಗಲಿ ಸಲ್ಲದು. ಮಕ್ಕಳ ಅನುಭವಕ್ಕೆ ಸಮೀಪವಾದುದನ್ನೇ ಒದಗಿಸುವುದು ಯೋಗ್ಯವಾದುದು. ಹೀಗೆಂದಾಕ್ಷಣ ಮಕ್ಕಳಿಗೆ ಮಾರ್ಗದರ್ಶನ ಮತ್ತು ಸ್ಫೂರ್ತಿಯನ್ನು ಒದಗಿಸುವುದು ಅನಾವಶ್ಯಕವೆಂದು ಭಾವಿಸಬಾರದು. ಪ್ರಸ್ತುತ ಅವಶ್ಯಕತೆಗಳೇನೆಂಬುದು ಅವರಿಗೆ ತಿಳಿಯದು. ಅವರನ್ನು ಹಾಗೆಯೇ ಬಿಟ್ಟರೆ ಯಾವುದರಲ್ಲಿಯೂ ಶ್ರದ್ಧೆ ತಳೆಯಲಾರರು, ಯಾವ ಕಾರ್ಯದಲ್ಲೂ ಆಸಕ್ತಿ ವಹಿಸಲಾರರು. ಈ ಸ್ವಯಂಪ್ರವೃತ್ತಿ ಅವರಿಗೆ ಬೋರಿಡಬಹುದು.

ಮಗುವು ಮಾಡಲಿರುವ ಕೆಲಸ ಅವನಲ್ಲಿ ಉತ್ಸಾಹವನ್ನು ಮೂಡಿಸಿ ಕುತೂಹಲವನ್ನು ಕೆರಳಿಸಬೇಕು. ಕೆಲಸಕ್ಕೋಸ್ಕರ ಕೆಲಸ ಮಾಡದೆ ಅವನ ಶ್ರದ್ಧಾಸಕ್ತಿಗಳನ್ನು ಜೀವಂತಗೊಳಿಸಬೇಕು. ಅವನು ಮಾಡುವ ಕೆಲಸವು ಮುಂದೆ ಕೈಗೊಳ್ಳಲಿರುವ ಉದ್ಯೋಗಕ್ಕೆ ತರಬೇತಿಯನ್ನು ಒದಗಿಸುವಂತಿರಬೇಕು. ಮಕ್ಕಳು ಭವಿಷ್ಯದಲ್ಲಿ ಯಾವ ನಿರ್ದಿಷ್ಟ ಕೆಲಸವನ್ನು ನಿರ್ವಹಿಸುತ್ತಾರೆ ಎಂದು ಭವಿಷ್ಯ ನುಡಿಯುವುದು ಕಷ್ಟವಾದುದು. ಶಿಕ್ಷಕನ ಮುಖ್ಯ ಕರ್ತವ್ಯವೆಂದರೆ ಮಕ್ಕಳ ಆಸಕ್ತಿಯನ್ನು ಅರಳಿಸಿ ವಿಶಾಲ ವಿಶ್ವದಲ್ಲಿ ಒಂದಲ್ಲ ಒಂದು ಉದ್ಯೋಗವನ್ನು ಕೈಗೊಳ್ಳುವಂತೆ ಮಾಡುವುದು. ನಿರ್ದಿಷ್ಟ ರೇಖಾಮಾರ್ಗದಲ್ಲಿಯೇ ಗಮಿಸಬೇಕೆಂದು ಒತ್ತಾಯಿಸುವುದು ಸಲ್ಲದು. ಮಕ್ಕಳ ಆಸಕ್ತಿ, ಜ್ಞಾನ ಮತ್ತು ಸಂಸ್ಕಾರಗಳಿಗೆ ಯುಕ್ತ ಮಾರ್ಗದರ್ಶನ ಮಾಡಬೇಕು. 'ಮನುಜಗೆ ಮಗು ತಂದೆ' ಎಂಬುದನ್ನು ಶಿಕ್ಷಕ ಮರೆಯಕೂಡದು.

ಈ ಮೇಲಣ ವಾದಸರಣಿಯಿಂದ ತಿಳಿದು ಬರುವುದೆಂದರೆ ಮಕ್ಕಳ ಪೂರ್ವಸಂಸ್ಕಾರ, ಸ್ವಭಾವ, ಸ್ವಧರ್ಮಗಳಿಗೆ ಶಿಕ್ಷಣವು ಅನುಗುಣವಾಗಿರಬೇಕೆಂಬುದು. ಅಂದರೆ ಸಂಪ್ರದಾಯ ಶಿಕ್ಷಣ ಕ್ರಮದಂತಲ್ಲದೆ ಮಗುವು ಇಲ್ಲಿ ಕೇಂದ್ರೀಯ ಸ್ಥಾನವನ್ನು ಪಡೆಯುತ್ತದೆ. ಮಗುವಿನಲ್ಲಿ ಅಂತರ್ಗತವಾದ ಶಕ್ತಿಗಳಿಗೆ ಉಚಿತವಾದ ಶಿಕ್ಷಣವು ಸೃಷ್ಟಿಯಾಗಬೇಕು. ಇಲ್ಲಿ ಶಿಕ್ಷಣ ಯಾಂತ್ರಿಕವಾಗಿರುವುದಿಲ್ಲ. ಕಠಿಣ ಪಾಠಕ್ಕೆ ಇಲ್ಲಿ ಆಸ್ಪದವಿರುವುದಿಲ್ಲ. ಮಕ್ಕಳ ಆಸೆ ಅಭೀಪ್ಸೆಗಳನ್ನು ಶಿಕ್ಷಣ ಪೂರೈಸಬೇಕು. ವಿದ್ಯಾರ್ಥಿಗಳಿಗೆ ಪೂರ್ಣ ಸ್ವಾತಂತ್ರ್ಯವಿರುತ್ತದೆ. ಕಲಿಕೆ ಉಲ್ಲಾಸಕರವಾಗಿರುತ್ತದೆ. ಕ್ರಿಯಾರೂಪಿಯಾಗಿರುತ್ತದೆ. ಶ್ರೀ ಅರವಿಂದರ ಶೈಕ್ಷಣಿಕ ಚಿಂತನೆಗಳು ಪ್ರಗತಿಪರ ಶಿಕ್ಷಣ ಚಳುವಳಿಗೆ ಪ್ರಚೋದಕವಾಗಿವೆ ಎಂದು ಹೇಳಬಹುದು. ಪ್ರಗತಿಪರ ಶಿಕ್ಷಣದಪ್ರತಿಪಾದಕರು ತಮ್ಮ ಮುಂದಿರಿಸಿಕೊಂಡಿರುವ ಹತ್ತು ಅಂಶಗಳು ಇಂತಿವೆ :

1. ಶಿಕ್ಷಣದಲ್ಲಿ ಆರೋಗ್ಯಕ್ಕೆ ಆದ್ಯತೆ ಇರಬೇಕು. ಶಾರೀರಿಕವಾಗಿ ಮತ್ತು ಮಾನಸಿಕವಾಗಿ ಮಕ್ಕಳು ಆರೋಗ್ಯವಾಗಿರಬೇಕು. ಇದಕ್ಕಾಗಿ ಅವರಿಗೆ ಚಲನ ಸ್ವಾತಂತ್ರ್ಯವಿರಬೇಕು ಅಧ್ಯಯನ ಶ್ರಮದಾಯಕವಾಗಿರಬಹುದು. ತರಗತಿಗಳು ಕಿಕ್ಕಿರಿದಿರಬಾರದು. ಸಾಕಷ್ಟು ವಿಶ್ರಾಂತಿ, ಮನರಂಜನೆ ಮತ್ತು ಕ್ರೀಡೆಗಳಿಗೆ ಅವಕಾಶವಿರಬೇಕು.

2. ಕಲಿಕೆ ಕಾರ್ಯಾತ್ಮಕವಾಗಿರಬೇಕು. ಶರೀರ ಚಟುವಟಿಕೆಯಿಂದಲೂ ಕೈಕೆಲಸದಿಂದಲೂ ಕೂಡಿ ವಿಷಯಗ್ರಹಣೆಗೆ ಸಹಾಯಕವಾಗಬೇಕು.

3. ತರಗತಿಯ ನಿರ್ವಹಣೆಯಲ್ಲಿ ಸ್ವಯಂ ನಿಬಂಧನೆಗಳಿಗೆ ಆದ್ಯತೆ ಇರಬೇಕು.

4. ಮಕ್ಕಳಲ್ಲಿರುವ ವೈವಿಧ್ಯತೆಯನ್ನು ಗುರುತಿಸಿ, ವಿಭೇದಗಳನ್ನು ಅರಿತು ಅವರವರ ಯೋಗ್ಯತೆಗೆ ಅನುಗುಣವಾಗಿ ಅವರನ್ನು ಕಾರ್ಯೋನ್ಮುಖರನ್ನಾಗಿ ಮಾಡಬೇಕು.

5. ಮಕ್ಕಳಲ್ಲಿ ಸಾಮೂಹಿಕ ಮತ್ತು ಸಮಾಜ ಪ್ರಜ್ಞೆಗಳನ್ನು ಬೆಳೆಯಲು ಶಿಕ್ಷಣ ನೆರವಾಗಬೇಕು. ಸ್ಪರ್ಧಾಭಾವವನ್ನು ಕಡಮೆ ಮಾಡಿ ಸಹಕಾರವನ್ನು ಹೆಚ್ಚಿಸುವುದಕ್ಕೆ ಪ್ರಯತ್ನಿಸಬೇಕು. ಸಾಮಾಜಿಕ ಸಮಂಜಸ ಮತ್ತು ವೈಯಕ್ತಿಕ ಶೀಲನಿರ್ಮಾಣ ಶಿಕ್ಷಣದ ಗುರಿ.

6. ಮಕ್ಕಳಲ್ಲಿ ರಚನಾತ್ಮಕ ಅಭಿವ್ಯಕ್ತಿಗೆ ವಿಪುಲ ಅವಕಾಶವಿರಬೇಕು.

7. ಮಕ್ಕಳಿಗೆ ಕೇವಲ ಕಲಿಯುವುದರ ಮೇಲೆ ಗಮನವಿದ್ದರೆ ಸಾಲದು; ಕಲಿಕೆಯ ಕ್ರಿಯೆ, ಕಲಿಯಲು ಉಪಯೋಗಿಸುವ ಸಾಧನ ಮತ್ತು ವಿಧಾನಗಳ ಮೇಲೆ ಅವರಿಗೆ ನಿಯಂತ್ರಣವಿರಬೇಕು. ವಿಷಯಗ್ರಹಣ ಎಲ್ಲಿ, ಹೇಗೆ ಮತ್ತು ಏತಕ್ಕೆ ನಡೆಯಬೇಕು ಎಂಬುದರ ಪೂರ್ಣ ಅರಿವಿರಬೇಕು.

8. ಅಧ್ಯಯನ ಕಲಾತ್ಮಕವಾಗಿ ಹಿತಕರವಾಗಿ ಮತ್ತು ತೃಪ್ತಿಕರವಾಗಿರಬೇಕು.

9. ಮಕ್ಕಳನ್ನು ಪರೀಕ್ಷೆಗಳ ಭಯದಿಂದ ಪಾರುಮಾಡಬೇಕು; ಅಂಕಗಳ ಗುಲಾಮಗಿರಿಯಿಂದ ಬಿಡುಗಡೆ ಮಾಡಬೇಕು.

10. ಅಧ್ಯಾಪಕ ಮಾರ್ಗದರ್ಶಕನಾಗಬೇಕೇ ವಿನಾ ಯಜಮಾನನಾಗಬಾರದು; ಮುಂದಾಳು ಆಗಬೇಕೆ ಹೊರತು ಅಧಿಕಾರಿಯಾಗಬಾರದು ;[5]

ಶ್ರೀ ಅರವಿಂದರು, ಶ್ರೀ ವಿವೇಕಾನಂದರು, ಜಾನ್ ಡ್ಯೂಯಿ, ರೂಸೊ ಮೊದಲಾದ ಶ್ರೇಷ್ಠ ಶಿಕ್ಷಣ ತಜ್ಞರು ಶಾಲೆಯಲ್ಲಿ ಮಗುವು ಕೇಂದ್ರವಾಗಿರಬೇಕೆಂದೂ ಬೋಧನ ಪಠ್ಯವಿಷಯಗಳು ಮಗುವಿನ ಸ್ವಭಾವಗಳಿಗೆ ಅನುಗುಣವಾಗಿರಬೇಕೆಂದು, ಕ್ರಮೇಣ ಶಿಕ್ಷಕ ತರಗತಿಯಲ್ಲಿ ಗೌಣಸ್ಥಾನ ಹೊಂದಿ ಕೇವಲ ಮಾರ್ಗದರ್ಶಿಯಾಗಿ ಮಕ್ಕಳ ಸ್ವಯಂ ನಿರ್ದೇಶಿತ ಶಿಕ್ಷಣಕ್ಕೆ ಕಾರಣನಾಗಬೇಕೆಂದು ಪ್ರತಿಪಾದಿಸಿದ್ದಾರೆ.

ಅಡಿಟಿಪ್ಪಣಿಗಳು

1. ನೋಡಿ : ಎಂ. ಬಸವಣ್ಣ : ಶೈಕ್ಷಣಿಕ ಮನೋವಿಜ್ಞಾನ, ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾನಿಲಯ, 1970, ಪುಟಗಳು 284–302.

2. ವಿ. ಜಿ. ಮಾರಿಹಾಳ್: ಕಲಿಸುವ ಸಾಮಾನ್ಯ ಪದ್ಧತಿಗಳು, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ, 1975

3. ನೋಡಿ : ಕೆ. ಎಸ್. ಸದಾಶಿವಯ್ಯ : ಸಮುದಾಯ ಶಾಲೆ, ವಿಶ್ವನಾಥ ಪ್ರಕಾಶನ, ಮೈಸೂರು 1973

4. M. V. C. Jeffreys. *Education ; Its Nature & Purpose*, George Allen & Unvin Ltd. London, 1971 p. 56.

5. ಎಂ. ಬಸವಣ್ಣನವರ ಮೇಲೆ ಸೂಚಿಸಿದ ಗ್ರಂಥ, ಪು. 292-293.

'ಶಿಕ್ಷಣ' (Education) ಎಂಬುದು ಲ್ಯಾಟಿನ್ ಭಾಷೆಯಿಂದ (Educre) ಸಂರಕ್ಷಣ, ಪೋಷಣ ಎಂಬ ಅರ್ಥದಲ್ಲಿ ಉಪಯೋಗಿಸಲಾಗುತ್ತಿದೆ. ಒಬ್ಬ ದಾಯಿ ಮಗುವನ್ನು ಪೋಷಿಸುವುದಿಲ್ಲವೆ? ಆ ಬಗೆಯಾಗಿ ಪೋಷಣೆ, ಲಾಲನೆ ನಡೆದಿರುವುದು. ಈ ದೃಷ್ಟಿಯಿಂದ ಶಿಕ್ಷಣ ಎಂಬುದರ ಅರ್ಥ ತೀರಾ ವ್ಯಾಪಕವಾದುದು. ಬರೀ ಸಾಮಾನ್ಯಜ್ಞಾನ (ಪುಸ್ತಕೀಯ ಸಹ) ಎಂದರೆ ಶಿಕ್ಷಣವಲ್ಲ, ಅದರದು 'ವಿರಾಟರೂಪ', ವಿಶ್ವರೂಪ. ಅದರ ಮುಖಗಳು ಅನಂತ, ಅಪಾರ. ಒಳ್ಳೆಯ ಅಭಿರುಚಿಗಳು, ನೈಪುಣ್ಯಗಳು, ಸಂಸ್ಕಾರಗಳು ಅದರ ಅಂಗಗಳು. ಒಟ್ಟಿನಲ್ಲಿ ವ್ಯಕ್ತಿತ್ವದ ರಸವತ್ತಾದ ಪರಿಪೋಷಣೆ ಎಂದರೆ ಶಿಕ್ಸಣ. ಶಿಕ್ಸಣದಿಂದ ಉದ್ಭೂತವಾಗುವ ಜೀವನ ಸಾರವತ್ತಾದುದು ಆಗಬೇಕು.

—ಎನ್. ಎಸ್. ಗದಗಕರ ಅವರ 'ಇಂದಿನ ಶಿಕ್ಷಣ:
ತತ್ತ್ವ–ಸಮಸ್ಯೆ–ಪ್ರಯೋಗ' ಗ್ರಂಥದಿಂದ; ಪು. ೫–೬.

ಕಂಠೀರಾವ್

ಇಸ್ಲಾಮೀ ನ್ಯಾಯ

೧. ಮೊಗಲರ ನ್ಯಾಯಾಡಳಿತ

ಮೊಗಲರ ಕಾಲದಲ್ಲಿ ಕಾನೂನುಗಳೇ ಇರಲಿಲ್ಲವೆಂಬುದು ಕೆಲವು ಪಾಶ್ಚಾತ್ಯ ಪ್ರವಾಸಿಗರ ಅಭಿಪ್ರಾಯವಾಗಿತ್ತು. ಲಿಖಿತ ಕಾನೂನು ಇರಲಿಲ್ಲ. ರಾಜಾಜ್ಞೆಯ ಮೂಲಕ ಮತ್ತು ಒಳನಾಡಿನಲ್ಲಿ ರಾಜನಿಂದ ಅಧಿಕಾರ ಪಡೆದ ಗವರ್ನರರ ಆಜ್ಞೆಯಿಂದ ನ್ಯಾಯಾಡಳಿತ ನಡೆಯುತ್ತಿತ್ತು ಎಂದು ಸರ್ ಥಾಮಸ್‌ರೋ ಹೇಳಿದ್ದಾನೆ. "ಲಿಖಿತ ಕಾನೂನು ಇರಲಿಲ್ಲ. ರಾಜನ ಮತ್ತು ಅವನ ಗವರ್ನರರ ಇಚ್ಛೆಯೇ ಕಾನೂನಾಗಿತ್ತು" ಎಂದು ಬೆರ್ರಿ ಅಭಿಪ್ರಾಯಪಟ್ಟಿದ್ದಾನೆ; ಆಧುನಿಕ ರೀತಿಯಲ್ಲಿರುವಂತೆ ಕಾನೂನುಗಳು ಕ್ರೋಢೀಕೃತವಾಗಿರಲಿಲ್ಲವೆಂಬುದೇನೋ ಕೆಲಮಟ್ಟಿಗೆ ನಿಜವಾಗಿರಬಹುದು. ಆದರೆ ಕಾನೂನೇ ಇರಲಿಲ್ಲವೆಂಬುದು ಸತ್ಯಸಂಗತಿಯಾಗಿರಲಾರದು. ನ್ಯಾಯಪಾರಮ್ಯವಿಲ್ಲದೇ ಹೋಗಿರಬಹುದು. ಖುರಾನ್, ಹದೀಸ್, ಧರ್ಮಗ್ರಂಥಗಳೂ, ನ್ಯಾಯಾಧೀಶರ ತೀರ್ಮಾನ ಮತ್ತು ರೂಢಿಸಂಪ್ರದಾಯರೂಪವಾದ ಕಾನೂನು ಸಾಹಿತ್ಯವೂ, ಲಭ್ಯವಾಗಿದ್ದುವು. ಖಲೀಫರು ಹೊರಡಿಸುವ 'ಫರ್ಮಾನು'ಗಳೆಲ್ಲ ನ್ಯಾಯಮೂಲಗಳಾಗಿದ್ದುವು. ಭಾರತೇತರ ಧರ್ಮಗ್ರಂಥರೂಪವಾದ ಈ ಕಾನೂನು ಸಾಹಿತ್ಯವು ಹದಿನೇಳನೆಯ ಶತಮಾನದಲ್ಲಿ ಭಾರತದಲ್ಲಿ ಜಾರಿಗೆ ಬಂದಿತೆಂದು ಹೇಳಬಹುದು. ಭಾರತದ ಮೊಗಲರಾಜರ 'ಫರ್ಮಾನು' ಗಳಿಂದ ಇಸ್ಲಾಮೀ ನ್ಯಾಯಪದ್ಧತಿಯಲ್ಲಿ ಅನೇಕ ಬದಲಾವಣೆಗಳೂ ಆದುವು. ಅಕ್ಬರನ ಮತ್ತು ಜಹಾಂಗೀರನ ಕಾಲದಲ್ಲಿ ಅನೇಕ ಹಿಂದೂ ಧರ್ಮಶಾಸ್ತ್ರ ಗ್ರಂಥಗಳು ಕೂಡ ರಚಿತವಾದುವು. ಅವು ಇಂದಿಗೂ ಉತ್ತಮ ನ್ಯಾಯಶಾಸ್ತ್ರ ಗ್ರಂಥಗಳಾಗಿ ಉಳಿದಿವೆ.

ಅಕ್ಬರನ ಕಾಲದಲ್ಲಿ ತೋದರಮಲ್ಲನ ಆಶ್ರಯದಲ್ಲಿದ್ದ ನೀಲಕಂಠನು 'ತೋದರನಾಮಾ' ಎಂಬ ಗ್ರಂಥ ರಚನೆ ಮಾಡಿದ್ದಾನೆ. ಇದು ನ್ಯಾಯಿಕ ಪ್ರಕ್ರಿಯೆಯನ್ನು ಕುರಿತ ಬೃಹದ್ಗ್ರಂಥವಾಗಿದೆ. ಅದೇ ಕಾಲದಲ್ಲಿ ರಘುನಂದಮಿಶ್ರನೂ ತೋದರಮಲ್ಲನ ಆಶ್ರಯಹೊಂದಿದ್ದು 'ತೋದರಪ್ರಕಾಶ' ಎಂಬ ನ್ಯಾಯದರ್ಶನ ಗ್ರಂಥ ಬರೆದಿದ್ದಾನೆ. 1610 ರಿಂದ 1640ರ ಮಧ್ಯದಲ್ಲಿ ನೀಲಕಂಠಭಟ್ಟನೆಂಬುವನು 'ಭಗವಂತಭಾಸ್ಕರ' ಎಂಬ ಗ್ರಂಥ ರಚನೆ ಮಾಡಿದನೆಂದೂ ಇದನ್ನು ಬೊಂಬಾಯಿ ಹೈಕೋರ್ಟು ಮನ್ನಿಸಿತೆಂದೂ ತಿಳಿದುಬರುವುದು. ಜಹಾಂಗೀರನ ಕಾಲದಲ್ಲಿ ಪ್ರಸಿದ್ಧ ವಿಧಿವೇತ್ತನಾಗಿದ್ದ ಮಿತ್ರಕೃಷ್ಣ ಎಂಬುವನು 'ವೀರಮಿತ್ರೋದಯ' ವೆಂಬ ಗ್ರಂಥ ರಚನೆ ಮಾಡಿದನೆಂದೂ ಅದು ಕಾಶೀ ಪ್ರಾಂತದ ನ್ಯಾಯಪದ್ಧತಿಯ ಬಗ್ಗೆ ಶ್ರೇಷ್ಠವಾದ ಕೃತಿಯೆಂದೂ ಪ್ರಿವಿಕೌನ್ಸಿಲು ಅದನ್ನು ಮಾನ್ಯಮಾಡಿತೆಂದೂ ತಿಳಿದು ಬರುವುದು. ಷಹಜಹಾನನ ಕಾಲದ ವಿಧಿವಿಶಾರದನಾದ ಮಿತ್ರಮಿಶ್ರನೆಂಬುವನು ಅನೇಕ ನ್ಯಾಯದರ್ಶನ ಗ್ರಂಥ

ಗಳನ್ನು ಬರೆದಿರುವುದಾಗಿಯೂ ಅವು ಇಂದಿಗೂ ಕಲ್ಕತ್ತ ಮತ್ತು ಬೊಂಬಾಯಿ ಹೈಕೋರ್ಟು ಗಳಲ್ಲಿ ಮನ್ನಣೀಯ ಗ್ರಂಥಗಳಾಗಿರುವುದಾಗಿಯೂ ತಿಳಿದುಬರುವುದು.

ಖಾಜಿಗಳೇನೋ ನ್ಯಾಯಾಡಳಿತ ನಡೆಸುತ್ತಿದ್ದರೆಂಬುದು ನಿಜ. ಆದರೆ ಅಭಿಪ್ರಾಯ ಭೇದದಿಂದ ದಿನೇದಿನೇ ನ್ಯಾಯಶಾಸ್ತ್ರವು ಬೆಳೆಯತೊಡಗಿತು. ಔರಂಗಜೇಬನು, ಗುಜರಾತ ಗವರ್ನರನ್ನು ಕುರಿತು ಹೊರಡಿಸಿದ ಫರ್ಮಾನು 'ಪೀನಲ್ ಕೋಡ್' ಇದ್ದಂತಿತ್ತು. ಔರಂಗ ಜೇಬನ ಕಾಲದಲ್ಲಿ ರಚಿತವಾದ 'ಫತವಾ-ಇ-ಆಲಮ್‌ಗೀರಿ' ಎಂಬ ಇಸ್ಲಾಮೀ ನ್ಯಾಯದರ್ಶನ ದಲ್ಲಿ ಹಿಂದೂಗಳಿಗೂ ಮುಸ್ಲಿಮರಿಗೂ ಅನ್ವಯಿಸುವ ಕಾನೂನು ಪ್ರಭೇದ ಮಾಡಲಾಗಿತ್ತು. ಸಿವಿಲ್ ಮತ್ತು ಧಾರ್ಮಿಕ ವಿಷಯಗಳಲ್ಲಿ ಅವರವರ ಶಾಸ್ತ್ರಗಳನ್ನೇ ಅವರಿಗೆ ಅನ್ವಯಿಸಲಾಗು ತ್ತಿತ್ತು. ಆದರೆ, ವ್ಯಭಿಚಾರ, ಅತ್ಯಾಚಾರ ಮತ್ತು ಅನೈತಿಕ ಅಥವಾ ಕಾನೂನುಬಾಹಿರ ಸಂಭೋಗಗಳಿಗಾಗಿ ಎಲ್ಲರಿಗೂ ಏಕರೂಪವಾದ ಕಾನೂನೇ ಅನ್ವಯಿಸುತ್ತಿತ್ತು.

ಗ್ರಾಮಾಂತರ ಪ್ರದೇಶಗಳಲ್ಲಿ ಗ್ರಾಮಪಂಚಾಯತಿಗಳು ಹಿಂದೂಗಳ ವಿವಾದಗಳನ್ನು ಧರ್ಮಶಾಸ್ತ್ರಗಳ ಮೇರೆಗೆ ತೀರ್ಮಾನಿಸುತ್ತಿದ್ದುವು.

ಕಂಪಾಯ ಕಚೇರಿಗಳೂ ನ್ಯಾಯಾಡಳಿತ ನಡೆಸುತ್ತಿದ್ದುವು. 'ಕಾನೂನು' ಪದ್ಧತಿ ಅತ್ಯುತ್ತಮವಾಗಿತ್ತೆಂದೂ ಹೇಳಲಾಗಿದೆ.

ದೇಶೀಯ ನ್ಯಾಯಾಲಯಗಳಲ್ಲಿ ವಿದೇಶೀಯರಿಗೂ ವಿದೇಶಿಯ ವ್ಯಾಪಾರ ವಾಣಿಜ್ಯಕ್ಕೂ ಅನ್ವಯಿಸುವ ಪ್ರತ್ಯೇಕ ಕಾನೂನುಗಳಿದ್ದುವು.

ದಿಲ್ಲಿಯ ಸುಲ್ತಾನರು ಇಸ್ಲಾಮೀ ನ್ಯಾಯವನ್ನೇ ಅನುಸರಿಸಿದರೆಂಬುದನ್ನೂ ಮೊಗಲರೂ ಅದನ್ನೇ ಮುಂದುವರಿಸಿದರೆಂಬುದನ್ನೂ ಈ ಹಿಂದೆಯೇ ವಿವರಿಸಿದ್ದೇವೆ. ದಂಡನೆಗೆ ಅನುಸರಿ ಸುತ್ತಿದ್ದ ಇಸ್ಲಾಮೀ ಕ್ರಿಮಿನಲ್ ನ್ಯಾಯವನ್ನೂ ಸಾಕ್ಷಿಪದ್ಧತಿಯನ್ನೂ ಅಕ್ಬರನು ತೆಗೆದುಹಾಕಿ ದನು. ಇಸ್ಲಾಮೀ ಕರಾರು ಮತ್ತು ಸಾಕ್ಷಿ ಪದ್ಧತಿಯನ್ನು ಹಿಂದೂಗಳಿಗೂ ಅನ್ವಯಿಸಲಾಯಿತು.

ಇಸ್ಲಾಮಿ ನ್ಯಾಯದಾರ್ಶನಿಕರು ಇಸ್ಲಾಮಿ ನ್ಯಾಯವನ್ನು ಎರಡು ಭಾಗವಾಗಿ ವಿಂಗಡಿಸಿ ದರು. ಒಂದು 'ತಕ್ಷರಿಯೀ' ಎಂದರೆ ಮತೀಯ ನ್ಯಾಯ, ಮತ್ತೊಂದು 'ಗೈರ್ ತಕ್ಷರಿಯೀ' ಎಂದರೆ ಲೌಕಿಕ ನ್ಯಾಯ: ಮುಸ್ಲಿಮೇತರರಿಗೆ 'ತಕ್ಷರಿಯೀ' ನ್ಯಾಯ ಅನ್ವಯಿಸುತ್ತಿದ್ದಿಲ್ಲ.

ಅಕ್ಬರನು ಪರಮತಸಹಿಷ್ಣುವಾಗಿದ್ದನೆಂದೂ ಸ್ಥಳೀಯ ರೂಢಿ ಸಂಪ್ರದಾಯಗಳನ್ನು ಗೌರವಿಸಿದನೆಂದೂ ತಿಳಿದುಬರುವುದು. ಹಿಂದೂ ಅಥವಾ ಕ್ರೈಸ್ತಧರ್ಮದ ಬಗ್ಗೆ ಔದಾರ್ಯದ ಮೆಚ್ಚುಗೆ ಪಡೆಯಲು ಹೀಗೆ ಮಾಡಿದನೆಂದು ಕೆಲವರು ಅಭಿಪ್ರಾಯಪಟ್ಟಿದ್ದಾರೆ.

ರಾಜನ ವ್ಯಕ್ತಿತ್ವದ ಬಗ್ಗೆ ಅಕ್ಬರನು ಇಸ್ಲಾಮೀ ತತ್ತ್ವವನ್ನು ಒಪ್ಪಲಿಲ್ಲ. ರಾಜನು ದೈವನಿಯುಕ್ತನೆಂದೂ ಅವನು ಪ್ರಜಾರಂಜಕನಾಗಿ ರಾಜ್ಯಭಾರ ಮಾಡಬೇಕೆಂದೂ ಹೇಳುತ್ತಿ ದ್ದನು.

ರಾಜನು ಶಾಸನ ಕರ್ತೃವಲ್ಲವೆಂಬುದನ್ನು ಹಿಂದೂಧರ್ಮಶಾಸ್ತ್ರಗಳೂ ಸಾರಿವೆ. ಅದೇ ಕಲ್ಪನೆ ಇಸ್ಲಾಮೀ ನ್ಯಾಯದಲ್ಲಿಯೂ ಕಂಡುಬರುವುದು. ಇಸ್ಲಾಮಿ ನ್ಯಾಯದರ್ಶನದ ನಾಲ್ಕು ಅಂಗಗಳ ಸ್ಥಾಪಕರಾದ 'ಇಮಾಮು'ರೇ ವಿಧಿಸಿದ ಅನೇಕ ನಿರ್ಬಂಧಗಳು ಮತ್ತು ಪರಿಮಿತಿ ಗಳಿಂದಾಗಿ ದಂಡನ ನೀತಿಯಲ್ಲಿ ವ್ಯಾಪಕ ಬದಲಾವಣೆಗಳಾದುವು.

ಸುಲ್ತಾನ ಮುಹಮ್ಮದ್ ಬಿನ್ ತೊಗಲಖನು ಬಹು ಕಠೋರ ದಂಡನೆಗಳನ್ನು ವಿಧಿಸುತ್ತಿ ದ್ದನಂತೆ. ತನ್ನ ದಂಡನ ನೀತಿಯನ್ನು ಬದಲಾಯಿಸಲು ಅವನು ಸರ್ವಥಾ ಒಪ್ಪುತ್ತಿರಲಿಲ್ಲ.

ಅಷ್ಟೇ ಅಲ್ಲ, ಕಠೋರ ಶಿಕ್ಷೆ ವಿಧಿಸಲರ್ಹವಾದ ಅಪರಾಧಗಳಾವು ಎಂದು ಒಂದು ದಿನ ಬರನಿಯನ್ನು ಕೇಳಿದನಂತೆ. ಅದಕ್ಕೆ ಉತ್ತರವಾಗಿ ಕಠಿನ ದಂಡನೆಗೆ ಅರ್ಹವಾದ ಏಳುವರ್ಗದ ಅಪರಾಧಗಳಿವೆಯೆಂದು ಬರನಿಯು ಉತ್ತರಿಸಿದನಂತೆ. (1) ನಿಜವಾದ ನಂಬುಗೆಯಿಂದ ಭ್ರಷ್ಟನಾಗುವುದು, (2) ಬುದ್ಧಿಪೂರ್ವಕ ಕೊಲೆ, (3) ತನ್ನ ಹೆಂಡತಿ ಜೀವಿಸಿದ್ದಾಗ ವ್ಯಭಿಚಾರ ಮಾಡುವುದು, (4) ರಾಜದ್ರೋಹ, (5) ದಂಗೆಯೆಬ್ಬಿಸುವುದು, (6) ವೈರಿಗಳಿಗೆ ಸಹಾಯಮಾಡಿ ಸುದ್ದಿ ಒದಗಿಸಿ, ರಾಜನ ವಿರುದ್ಧ ಸಂಚು ಮಾಡುವುದು, (7) ರಾಜಾಜ್ಞೆಯನ್ನು ಉಲ್ಲಂಘಿಸುವುದು ಮತ್ತು ಅವಹೇಳನ ಮಾಡುವುದು. ಇವುಗಳಲ್ಲಿ ಹದೀಸಿನಲ್ಲಿ ಹೇಳಿದ ದಂಡನೆಗಳಿಗೆ ಒಳಪಡುವ ಅಪರಾಧಗಳಾವುವು ಎಂಬುದು ಮತ್ತೆ ತೊಗಲಖನ ಪ್ರಶ್ನೆ. ಹದೀಸಿನಲ್ಲಿ ನಂಬುಗೆ ಭ್ರಷ್ಟತನ, ಮುಸಲ್ಮಾನನ ಕೊಲೆ ಮತ್ತು ವ್ಯಭಿಚಾರ—ಈ ಮೂರು ಮಾತ್ರ ಹೇಳಲ್ಪಟ್ಟವೆ. ಉಳಿದ ನಾಲ್ಕು ಸುವ್ಯವಸ್ಥಿತ ಆಡಳಿತಕ್ಕಾಗಿ ರಾಜರಿಂದ ಈ ಪಟ್ಟಿಗೆ ಸೇರಿಸಲ್ಪಟ್ಟವೆ ಎಂದು ಉತ್ತರಿಸಿದ ಬರನಿ, "ಹಿಂದೆ ಜನ ಕಾಯಾವಾಚಾ ಸತ್ಯನಿಷ್ಠರಾಗಿದ್ದರು, ಈಗ ನೀತಿಭ್ರಷ್ಟರಾಗಿರುವ ಜನರನ್ನು ಸರಿಯಾದ ಮಾರ್ಗದಲ್ಲಿ ನಿರ್ಗಹಿಸಲು ಮತ್ತು ಅಂಥವರ ಮಧ್ಯದಲ್ಲಿ ನಾನು ಸುರಕ್ಷಿತವಾಗಿ ಜೀವಿಸಬೇಕಾದರೆ ಕಠಿನ ಶಿಕ್ಷೆ ಅನಿವಾರ್ಯ" ಎಂದನಂತೆ. ಇದರಿಂದ ಮೊಗಲರಿಗಿಂತ ಬಹು ಹಿಂದೆಯೇ ಭಾರತದಲ್ಲಿ ಇಸ್ಲಾಮೀ ನ್ಯಾಯವು ಬದಲಾವಣೆಗೊಂಡಿತ್ತೆಂದು ತಿಳಿದುಬರುವುದು.

ಸರಕಾರಗಳಲ್ಲಿ (ಅಂದರೆ ಒಳನಾಡಿನ ಪ್ರದೇಶಗಳಲ್ಲಿ) ಎಲ್ಲ ಸಿವಿಲ್ ಮತ್ತು ಧಾರ್ಮಿಕ ಆಡಳಿತದ ಬಗ್ಗೆ ಅಧಿಕಾರಿಗಳಿಗೆ ಕಟ್ಟುನಿಟ್ಟಾದ ಆಜ್ಞೆ ಮಾಡಲಾಗಿತ್ತೆಂದು ಬದಾಯೂನಿ ಬರೆಯುತ್ತಾನೆ.

"ಆ ಕಾಲಕ್ಕೆ ತಕ್ಕಂತೆ ಇಸ್ಲಾಮೀ ನ್ಯಾಯಾಲಯದ ಸ್ವರೂಪವನ್ನು ಬದಲಾಯಿಸಲಾಗಿತ್ತು" ಎಂದು ಡಾ. ಮುಹಮುದುಲ್ಲಾ ಹೇಳಿದ್ದಾರೆ.

ತನ್ನ ಆದೇಶಗಳ ಮೇರೆಗೆ 'ಫಿತವಾ–ಇ–ಆಲಮ್‌ಗೀರಿ' ಬರೆಯಿಸಿದ ಕಠೋರ ಸ್ವಭಾವದ ಔರಂಗಜೇಬನೇ ಸ್ವತಃ ಇಸ್ಲಾಮೀ ದಂಡನ ನೀತಿಯು ಬಹಳ ಗ್ರಾಮ್ಯವಾಗಿದೆ ಮತ್ತು ತನ್ನ ಕಾಲದ ಅವಶ್ಯಕತೆಗಳನ್ನು ಪೂರೈಸಲು ಅದು ಪರ್ಯಾಪ್ತವಾಗಿಲ್ಲವೆಂದು ಹೇಳಿದನಂತೆ. ಇವನ ಕಾಲದಲ್ಲಿ ಅಂತರರಾಷ್ಟ್ರೀಯ ಕಾನೂನುಗಳೂ ದೇಶದ ಲೌಕಿಕ ಕಾನೂನುಗಳೂ ಸೂಕ್ತ ಮಾರ್ಪಾಟುಗಳನ್ನು ಹೊಂದಿದುವು. 'ಮೀರ್ ಆದಲ್ ದಿವಾನಿ' ಎಂಬ ಉನ್ನತ ಸಿವಿಲ್ ನ್ಯಾಯಾಧೀಶರನ್ನು ನೇಮಿಸಲಾಯಿತು. ಈ ಬದಲಾವಣೆಗೆ ಅಂದಿನ ಪರಿಸ್ಥಿತಿಯ ಸಾಮಾಜಿಕ ಒತ್ತಡಗಳೇ ಕಾರಣವಾಗಿದ್ದುವು.

ಬದಲಾವಣೆಗಳನ್ನು ಬೆಂಬಲಿಸಿದ ಅಕ್ಬರನನ್ನು ಇಸ್ಲಾಮ್ ಪರಿತ್ಯಾಜಕನೆಂದು ಜನ ಆಡಿಕೊಳ್ಳುತ್ತಿದ್ದರಂತೆ. ಜಹಾಂಗೀರ್ ಬಾದಶಹನು ವಿಶಿಷ್ಟವರ್ಗದ ನಿಯಮಗಳನ್ನೇ ಜಾರಿಗೆ ತಂದನೆಂದು ಹೇಳುತ್ತಾರೆ. ದೈವೀ ನ್ಯಾಯ ವ್ಯವಸ್ಥೆಯ ಅತ್ಯುಚ್ಚ ದಿವಾನಿ ಅಧಿಕಾರಿಗಳಾದ ಮೀರ್ ಆದಲ್ ಮತ್ತು ಖಾಜಿಗಳು, ತನ್ನ ಮುಂದೆ ಫರ್ಷಿ ಸಲಾಮು ಹಾಕುವ ಕಾರಣವಿಲ್ಲವೆಂದು ಮುಸಲ್ಮಾನರಾಗಲು ನಿರಾಕರಿಸುವವರ ಕಣ್ಣು ಕಳೆಯುವುದು, ಕಿವಿ ಮೂಗು ಕತ್ತರಿಸುವುದು ಮೊದಲಾದ ದಂಡನೆಗಳನ್ನು ವಿಧಿಸುವ ಕಾರಣವಿಲ್ಲವೆಂದೂ ತನ್ನ ಆಳಿಕೆಯ ಐದನೆಯ ವರ್ಷದಲ್ಲಿ ಆದೇಶ ಮಾಡಿದನಂತೆ. ಕಾಶ್ಮೀರ ಪ್ರದೇಶದ ರಾಜೋರಿ (ಜಮ್ಮು)ಯಲ್ಲಿ ಮುಸ್ಲಿಮರು ಮತ್ತು ಹಿಂದುಗಳು ಪರಸ್ಪರ ಹೆಣ್ಣು ಕೊಡುಕೊಳ್ಳಲಾರಂಭಿಸಿದ್ದ ವ್ಯವಹಾರವನ್ನು ಮಾತ್ರ ಬಾದಶಹನು ಒಪ್ಪಲಿಲ್ಲನಂತೆ. ಹಿಂದೂ ಹೆಣ್ಣು ತೆಗೆದುಕೊಳ್ಳುವುದೇನೋ ಸರಿ,

ಹಿಂದೂಗಳಿಗೆ ಹೆಣ್ಣು ಕೊಡುವುದು ಸರಿಯಲ್ಲವೆಂಬುದು ಆವನ ಅಭಿಪ್ರಾಯವಾಗಿತ್ತೆಂದೂ ಹಾಗೆ ಮಾಡಿದವರಿಗೆ ಮರಣದಂಡನೆ ವಿಧಿಸಿದನೆಂದೂ ತಿಳಿದುಬರುವುದು.

೨. ಮೊಗಲರಾಳ್ವಿಕೆಯಲ್ಲಿ ಸಾಕ್ಷಿಪದ್ಧತಿ.

ಮೊಗಲರ ಕಾಲದಲ್ಲಿ ಸಾಕ್ಷಿದಾರರ ಹೇಳಿಕೆಗಳು, ಪ್ರಮಾಣವಚನಗಳು ಮತ್ತು ಲಿಖಿತ ದಸ್ತಾವೇಜುಗಳ ರೂಪದಲ್ಲಿ ಸಾಕ್ಷಿ ಪಡೆದುಕೊಳ್ಳಲಾಗುತ್ತಿತ್ತು. ಕ್ರಿಶ್ಚಿಯನ್ನರು ಬೈಬಲ್ಲನ್ನು ಹಿಡಿದು, ಹಿಂದೂಗಳು ಗೋಸ್ಪರ್ಶಮಾಡಿ (ಹಸುವಿನ ಬಾಲ ಹಿಡಿದು) ಮತ್ತು ಮುಸಲ್ಮಾನರು ಖುರಾನ್ ಕೈಯಲ್ಲಿಟ್ಟುಕೊಂಡು ಸಾಕ್ಷಿ ಹೇಳುತ್ತಿದ್ದರು. ಸಾಕ್ಷಿದಾರರನ್ನು ಮತ್ತು ಪ್ರಮಾಣ ವಚನಗಳನ್ನು ಇಂದಿನಂತೆ ಸಂಪೂರ್ಣವಾಗಿ ಆಧರಿಸುತ್ತಿರಲಿಲ್ಲ. ನ್ಯಾಯಾಧೀಶನು ಇವುಗಳ ಜೊತೆಗೆ ನಿಜವನ್ನು ಕಂಡುಹಿಡಿಯಲು ಬೇರೆ ಬೇರೆ ವಿಧಾನಗಳನ್ನು ಅನುಸರಿಸುತ್ತಿದ್ದನು. ಅಕ್ಬರನು ಸ್ವತಃ ನಾನಾ ರೀತಿಯಿಂದ ವಿವಾದಗ್ರಸ್ತ ವಿಷಯದ ಸತ್ಯಾಂಶವನ್ನು ಕಂಡುಹಿಡಿಯಲು ಯತ್ನಿಸುತ್ತಿದ್ದನೆಂದು ಅಬುಲ್ ಫೈಜಿ ಹೇಳುತ್ತಾನೆ. 'ಪಕ್ಷಕಾರರ ಹಣೆಯ ಮೇಲಿನ ಗೀರುಗಳನ್ನು ಅವಲೋಕಿಸು ಮುರಾದ್' ಎಂದು ಅಕ್ಬರನು ತನ್ನ ಮಗನಿಗೆ ಒಮ್ಮೆ ಉಪದೇಶಿಸಿದನಂತೆ. ಪಕ್ಷಕಾರರ ಮತ್ತು ಸಾಕ್ಷಿದಾರರ ಭಾವಭಂಗಿಯಿಂದ (Demeaner) ಸತ್ಯವನ್ನು ಅರಿತುಕೊಳ್ಳಲೆತ್ನಿಸಬೇಕು ಎಂಬುದು ಅಕ್ಬರನ ಮಾತಿನ ಅರ್ಥ. ಸಾಕ್ಷಿ ಕೊಡಲು ಬಂದ ಸಾಕ್ಷಿದಾರನಿಗೆ ಖಾಜಿಯು ಹೀಗೆ ಮಾಡೆಂದು ಹೇಳುವಂತಿರಲಿಲ್ಲ. ಸಾಕ್ಷಿದಾರನು ಹೇಳುವುದನ್ನು ಶಾಂತಚಿತ್ತದಿಂದ ಬರೆದುಕೊಳ್ಳುವುದು ಖಾಜಿಯ ಕರ್ತವ್ಯವಾಗಿತ್ತು. ಬರೆದುಕೊಳ್ಳಲು 'ಖಾತಿಬ್' ಸಹಾಯವಿತ್ತು. ಸಿವಿಲ್ ಸ್ವರೂಪದ ದಾವೆಗಳಲ್ಲಿ ದಸ್ತಾವೇಜೀಸಾಕ್ಷ್ಯವನ್ನು ತಪ್ಪದೆ ಹಾಜರುಪಡಿಸಬೇಕಾಗುತ್ತಿತ್ತು. ಪ್ರತ್ಯಕ್ಷ ಸಾಕ್ಷಿಗೆ ಬಹಳ ಮಹತ್ವವಿತ್ತು. ಕನಿಷ್ಟ ಎರಡಾದರೂ ಪ್ರತ್ಯಕ್ಷದರ್ಶಿಗಳ ಸಾಕ್ಷಿ ಅಗತ್ಯವಾಗಿತ್ತು. ಇಲ್ಲದಿದ್ದರೆ ದಾವೆಯನ್ನು ವಜಾ ಮಾಡಲಾಗುತ್ತಿತ್ತು. ಮುಸ್ಲಿಮೇತರರ ಸಾಕ್ಷ್ಯಕ್ಕೆ ಔರಂಗಜೇಬನು ಮಹತ್ವ ಕೊಡಲಿಲ್ಲವೆಂದೂ ಹೇಳಲಾಗಿದೆ.

ನ್ಯಾಯಾಲಯಗಳಲ್ಲಿ ನ್ಯಾಯವಾದಿಗಳಿರಬಹುದಾಗಿದ್ದರೂ (ವಕೀಲರು) ಅವರು ವಿಷಯ ಅಥವಾ ಕಾನೂನಿನ ಅರ್ಥವಿವರಣೆ ಮಾಡುವಂತಿರಲಿಲ್ಲ. ಕಾರಣಾಂತರಗಳಿಂದ, ಗೋಷಾ ಅಥವಾ ಪರ್ದಾ ಹೆಂಗಸರು ನ್ಯಾಯಾಲಯಕ್ಕೆ ಬರಲಾಗದ ಸಂದರ್ಭಗಳಲ್ಲಿ ವಕೀಲರು ಹಾಜರಿರುತ್ತಿದ್ದರು. ಅವರು ದಾವೆದಾರರ ಪ್ರತಿನಿಧಿಗಳಷ್ಟೆ. ಕೆಲವು ಸಲ ತನಿಖೆ ನಡೆಸಿ ವರದಿಗಳನ್ನು ಕಳಿಸುವಂತೆ ಗವರ್ನರನಿಗೆ ಆದೇಶ ನೀಡಲಾಗುತ್ತಿತ್ತು. ಅಕ್ಬರನು ಮಹಾ ಬುದ್ಧಿಶಾಲಿಯೂ ತೀಕ್ಷ್ಣಮತಿಯೂ ನ್ಯಾಯಪಕ್ಷಪಾತಿಯೂ ಆಗಿದ್ದನೆಂದೂ ಕ್ಷಿಪ್ರಕ್ರಮದಿಂದ ಅತ್ಯಂತ ತೃಪ್ತಿಕರವಾಗಿ ನ್ಯಾಯವಿತರಣೆ ಮಾಡುತ್ತಿದ್ದನೆಂದೂ ಇತಿಹಾಸಕಾರರು ಅಭಿಪ್ರಾಯಪಟ್ಟಿದ್ದಾರೆ.

ನ್ಯಾಯಾಧೀಶನ ಸಮಕ್ಷ ತಪ್ಪೊಪ್ಪಿಕೊಂಡರೆ ಬೇರೆ ಸಾಕ್ಷಿಬೇಕಾಗಿರಲಿಲ್ಲ. ಅದು ನಿರ್ಣಾಯಕವಾಗುತ್ತಿತ್ತು. ಸಾಕ್ಷಿ ಪ್ರಮಾಣಗಳನ್ನು ಲಿಖಿತವಾಗಿ ದಾಖಲೆಗೊಳಿಸಲಾಗುತ್ತಿತ್ತು.

ಔರಂಗಜೇಬನ ಸೂಕ್ಷ್ಮಮತಿಯ ಒಂದು ದೃಷ್ಟಾಂತವು ಬಹು ಸ್ವಾರಸ್ಯಕರವಾಗಿದೆ. ಅವನು ಒಂದು ದಿನ ದಾರಿಯಲ್ಲಿ ಹೋಗುವಾಗ, ಒಬ್ಬನು ಒಂದು ಗೋರಿಯನ್ನು ಭಕ್ತಿಪುರಸ್ಸರವಾಗಿ ಪೂಜಿಸುತ್ತಿದ್ದುದನ್ನು ಕಂಡನಂತೆ. ದಾರಿಹೋಕರಿಂದ ಅವನು ಗೋರಿಗೆ ಅಪಾರ ಕಾಣಿಕೆಗಳನ್ನು ಸಂಗ್ರಹಿಸುತ್ತಿದ್ದನು. ಅವನನ್ನು ನೋಡಿದೊಡನೆಯೆ ಔರಂಗಜೇಬನಿಗೆ ಸಂಶಯಬಂದು ಆ ಗೋರಿಯನ್ನು ಅಗೆದು ತೆಗೆಯುವಂತೆ ಸೇವಕರಿಗೆ ಆದೇಶ ನೀಡಿದನು.

ಅಗೆದಾಗ ಅಲ್ಲಿ ಸಿಕ್ಕಿದುದು ಕುದುರೆಯ ಎಲುಬುಗಳು. ಪೂಜಾರಿಯು ಹಿಂದೆ ಒಬ್ಬ ಸೈನಿಕ ನಾಗಿದ್ದು ಅವನ ಕುದುರೆಯು ಸತ್ತುಹೋಯಿತೆಂದೂ ಮತ್ತೊಂದು ಕುದುರೆಯನ್ನು ಕೊಳ್ಳಲು ಅವನಿಗೆ ಸಾಧ್ಯವಾಗಲಿಲ್ಲವೆಂದೂ ಆದುದರಿಂದ ಅದರ ಮೂಳೆಗಳನ್ನೇ ಹೂಳಿ ಗೋರಿ ಮಾಡಿ ಜನರಿಂದ ಹಣ ಸಂಗ್ರಹಿಸಲಾರಂಭಿಸಿದನೆಂದೂ ತಿಳಿಯಿತು. ಔರಂಗಜೇಬನು ಅವನಿಗೆ ತಕ್ಕ ಶಾಸ್ತಿ ಮಾಡಿದನೆಂದು ಪ್ರತೀತಿ.

ಈಗಿನ ಕಾಲದಲ್ಲಿ ಲಭ್ಯವಿದ್ದ ಸಾಕ್ಷಿಯ ಆಧಾರದಿಂದಲೇ ನ್ಯಾಯನಿರ್ಣಯವಾಗುತ್ತದೆ. ಅಮೇಲೆ ಒಮ್ಮೆ ನಿರ್ಣಯವಾದ ಬಳಿಕ ಕಾಲಾಂತರದಲ್ಲಿ ಮತ್ತೆ ಸಾಕ್ಷಿ ಕೊಡಲು ಬರುವುದಿಲ್ಲ. ಆದರೆ ಮೊಗಲರ ಕಾಲದಲ್ಲಿ ನ್ಯಾಯಾಲಯದಲ್ಲಿ ಸಾಕ್ಷಿ ಕೊಟ್ಟ ಬಳಿಕವೂ ಗುಪ್ತಚಾರರ ಮೂಲಕ ತನಿಖೆ ನಡೆಸಿ ವಿಷಯಗಳನ್ನು ತಿಳಿದುಕೊಂಡು ಸಾರಾಸಾರ ವಿಚಾರ ಮಾಡಿ ತೀರ್ಮಾ ನಿಸುತ್ತಿದ್ದರೆಂದು ತಿಳಿದುಬರುವುದು.

೩. ಮೊಗಲರಾಳಿಕೆಯ ಕೊನೆಗಾಲದಲ್ಲಿದ್ದ ನ್ಯಾಯವ್ಯವಸ್ಥೆ

ಹಿಂದೂರಾಜರ ಕಾಲದಲ್ಲಿ, ಮನುಸ್ಮೃತಿಯಲ್ಲಿ ಉಕ್ತವಾದ ವ್ಯಾವಹಾರಿಕ ಮತ್ತು ಅಪರಾಧಿಕ ವಿಧಿಗಳಿಗನುಸಾರವಾಗಿ ಭಾರತದಲ್ಲಿ ನ್ಯಾಯ ಪರಿಪಾಲನೆ ನಡೆಯುತ್ತಿತ್ತು. ಸುವ್ಯವ ಸ್ಥಿತವಾದ ಸ್ಥಳೀಯ ನ್ಯಾಯಾಲಯಗಳಿದ್ದುವು. ಅವುಗಳಿಂದ ರಾಜಧಾನಿಯಲ್ಲಿದ್ದ ವರಿಷ್ಠ ನ್ಯಾಯಾಲಯಗಳಿಗೆ ಮೇಲು ಮನವಿಗಳು (ಅಪೀಲು) ಬರುತ್ತಿದ್ದುವು. ಆಸ್ಥಾನದಲ್ಲಿ ನ್ಯಾಯಾ ಧೀಶರಿಂದ ಮತ್ತು ತನಗೆ ಪರಾಮರ್ಶನ ನೀಡುವ ಆಪ್ತ ಧರ್ಮಜ್ಞರಿಂದ ಕೂಡಿಕೊಂಡು ರಾಜನು ಮೇಲು ಮನವಿಯ ವಿಚಾರಣೆ ಮಾಡುತ್ತಿದ್ದನು. ರಾಜನೊಂದಿಗೆ ನ್ಯಾಯಸ್ಥಾನದಲ್ಲಿದ್ದ ವರು ರಾಜನಿಗೆ ಸಲಹೆ ಕೊಡುತ್ತಿದ್ದರೇ ಹೊರತು ತೀರ್ಮಾನ ಮಾಡುತ್ತಿರಲಿಲ್ಲ. ತೀರ್ಮಾನ ನೀಡುವ ಅಧಿಕಾರ ಕೇವಲ ರಾಜನನ್ನೇ ಕೂಡಿತ್ತು.

ಸ್ಥಳೀಯ ನ್ಯಾಯಾಲಯಗಳಿಗಿಂತ ಕೆಳಗೆ ಮೂರು ವರ್ಗದ ಮಧ್ಯಸ್ಥಿಕೆ ನ್ಯಾಯಾಲಯ, ಗಳಿದ್ದುವು. ಮೊದಲನೆಯದು 'ಕುಲ' ಎಂದರೆ ಜಾತಿ ಬಾಂಧವರಿಂದ ಕೂಡಿದ್ದು, ಎರಡನೆಯದು ಒಂದೇ ವೃತ್ತಿಯವರಿಂದ ಕೂಡಿದ್ದು, ಮೂರನೆಯದು ನಗರವಾಸಿಗಳಿಂದ ಕೂಡಿದ್ದು. ಮೊದಲನೆ ಯದರಿಂದ ಎರಡನೆಯದಕ್ಕೆ ಎರಡನೆಯದರಿಂದ ಮೂರನೆಯದಕ್ಕೆ ಮತ್ತು ಮೂರನೆಯದರಿಂದ ಸ್ಥಳೀಯ ನ್ಯಾಯಾಲಯಕ್ಕೆ ಆಮೇಲೆ ರಾಜಧಾನಿಯ ರಾಜಾಸ್ಥಾನದ ಅತ್ಯುಚ್ಚ ನ್ಯಾಯಸ್ಥಾನಕ್ಕೆ ಹೀಗೆ ಒಟ್ಟು ಐದು ಮೇಲು ಮನವಿಗಳಿಗೆ (ಅಪೀಲಿಗೆ) ಅವಕಾಶವಿತ್ತು. ಪಂಚರ ಮಧ್ಯ ಸ್ಥಿಕೆಯೂ ಜನಪ್ರಿಯವಾಗಿತ್ತು. ಗ್ರಾಮ ಮುಖಂಡನು (ಗ್ರಾಮ ಮುಖ್ಯನು, ಕನ್ನಡ ನಾಡಿನಲ್ಲಿ ಗಾವುಂಡನು, ಗೌಡನು) ಗ್ರಾಮದ ನ್ಯಾಯಾಧೀಶನೂ ದಂಡಾಧಿಕಾರಿಯೂ ಆಗಿರುತ್ತಿದ್ದನು. ಇದು ಪ್ರಾಚೀನ ಪದ್ಧತಿ. ಮೊಗಲರ ಆಡಳಿತದ ಕೊನೆಗಾಲದಲ್ಲಿ ಅನೇಕ ಬದಲಾವಣೆಗಳಾದವು.

ಹದಿನೆಂಟನೆಯ ಶತಮಾನದ ಮಧ್ಯಕಾಲದಲ್ಲಿ ಬುರ್ದವಾನದಲ್ಲಿದ್ದ 'ವೆರಲ್ಟ' ಎಂಬಾತನು ಆ ಕಾಲದಲ್ಲಿ ಅಸ್ತಿತ್ವದಲ್ಲಿದ್ದ ನ್ಯಾಯಾಲಯಗಳ ಸ್ವರೂಪವನ್ನು ಕುರಿತು ಬರೆಯುತ್ತಾನೆ.

1. **ಸದರ್ ಕಛೇರಿ:** ಸದರ್ ಎಂದರೆ ಮುಖ್ಯ, ಶ್ರೇಷ್ಠ, ಉಚ್ಚ, ಮೇಲಿನ ಎಂಬುದು ಸಾಮಾನ್ಯಾರ್ಥ. ಕಛೇರಿ ಎಂದರೆ ಕಾರ್ಯಾಲಯ, ಆಫೀಸು ಅಂದ ಹಾಗೆ. ಈ ಕಾರ್ಯಾ ಲಯವು ಇತರ ಪ್ರಕಾರ್ಯಗಳೊಡನೆ ಭೂಮಾಲೀಕರ ಮತ್ತು ಗೇಣಿದಾರರ ವಿವಾದಗಳನ್ನು ತೀರ್ಮಾನಿಸುವ ನ್ಯಾಯಾಲಯವಾಗಿತ್ತು.

2. ಬಕ್ಷಿದಸ್ತೂರ್: ಕಳವು ಸುಲಿಗೆಗಳಾಗದಂತೆ ಜನರಿಗೆ ರಕ್ಷಣೆ ನೀಡುವುದು ಮತ್ತು ಸಾರ್ವಜನಿಕ ಶಾಂತಿಯನ್ನು ಕಾಪಾಡುವುದು ಈ ನ್ಯಾಯಾಲಯದ ಕರ್ತವ್ಯವಾಗಿತ್ತು.

3. ಫೌಜ್ದಾರಿ: (ಅಂದರೆ ಕ್ರಿಮಿನಲ್) ಇದರ ಅಧಿಕಾರ ವ್ಯಾಪ್ತಿಯು, ಕೇವಲ ಕ್ರಿಮಿನಲ್ ವಿಷಯಗಳ ಮಟ್ಟಿಗೆ ಮತ್ತು ಘೋರಾಪರಾಧಗಳ ನಿರ್ಣಯಕ್ಕೆ ಪರಿಮಿತವಾಗಿತ್ತು.

4. ಬರ್ರಾ–ಅದಾಲತ್: ಇದು 50 ರೂಪಾಯಿಗಳಿಗೆ ಮೀರಿದ ಎಲ್ಲ ಕ್ಲೇಮುಗಳನ್ನು ವಿಚಾರಿಸುವ ನ್ಯಾಯಾಲಯವಾಗಿತ್ತು. ಅದಕ್ಕಿಂತ ಕಡಮೆ ಮೌಲ್ಯದ ವಿಷಯಗಳಲ್ಲಿ ಕೈ ಹಾಕುತ್ತಿರಲಿಲ್ಲ.

5. ಅಮೀನ್ ದಸ್ತೂರಿ: ಇದು ಸದರ್ ಕಛೇರಿಗೆ ಅಧೀನವಾದ ನ್ಯಾಯಾಲಯ ವಾಗಿದ್ದು, ಎಲ್ಲ ದೂರುಗಳು ಪ್ರಥಮತಃ ಇದರ ಮುಂದೆ ಬರಬೇಕಾಗಿತ್ತು. ಆಮೇಲೆ ಸದರ್ ಕಛೇರಿಗೆ ಮೇಲು ಮನವಿ ಸಲ್ಲಿಸಬಹುದಾಗಿತ್ತು.

6. ಛೋಟಾ ಅದಾಲತ್ (ಸಣ್ಣ ನ್ಯಾಯಾಲಯ): ಇದು 50 ರೂಪಾಯಿ ಮೌಲ್ಯಕ್ಕೆ ಮೀರದ ಸಾಲಗಳ ದಾವೆಗಳನ್ನು ವಿಚಾರಿಸುತ್ತಿತ್ತು. (ಈಗಿನ ಸ್ಮಾಲ್ ಕಾಜ್ ನ್ಯಾಯಾಲಯ ವನ್ನು ಹೋಲುವುದು)

7. ಜಾಜೀ ಜಮೀನ್ ದಸ್ತೂರ್: ಧರ್ಮಾದಾಯದ ಮತ್ತು ಸಾರ್ವಜನಿಕ ಉಪ ಯೋಗದ ಎಲ್ಲ ಜಮೀನುಗಳ ಸಂಬಂಧದ ವಿಷಯಗಳನ್ನು ವಿಚಾರಿಸುವ ನ್ಯಾಯಾಲಯ ವಾಗಿತ್ತು.

8. ಬಾಜೀ ಅಮ್ಮಾದಸ್ತೂರ್: ಕುಟುಂಬದ ಖಾಸಗಿ ಸಮಸ್ಯೆಗಳಾಗಿದ್ದು ಸರ್ಕಾರದ ತೀವ್ರ ಗಮನವನ್ನು ಆಕರ್ಷಿಸುವಂಥ ವ್ಯಭಿಚಾರ, ಗರ್ಭಪಾತ ಮತ್ತು ಇತರ ಅಪರಾಧಗಳನ್ನು ಕುರಿತು ಈ ನ್ಯಾಯಾಲಯವು ವಿಚಾರಣೆ ನಡೆಸುತ್ತಿತ್ತು (ಕ್ರಿಮಿನಲ್ ನ್ಯಾಯಾಲಯ).

9. ಕಾರೀದಗಿಯೆ ದಸ್ತೂರ್: ಇದು ಭೂ ಮಾಲೀಕರ ಲೆಕ್ಕಪತ್ರಗಳಿಗೆ ಸಂಬಂಧಿ ಸಿದ್ದು.

ಬಂಗಾಲದ ನವಾಬರ ಕಾಲದಲ್ಲಿ ಮುಹಮ್ಮದೀಯರ ನಿಯಮಗಳಿಗನುಸಾರವಾಗಿ ಈ ಕೆಳಕಂಡ ನ್ಯಾಯಿಕ ಪ್ರಾಧಿಕಾರಿಗಳು ನ್ಯಾಯಪಾಲನೆ ಮಾಡುತ್ತಿದ್ದರು.

1. ನಾಜಿಮ್: ಇವನು ಸರ್ವೋಚ್ಚ ಮ್ಯಾಜಿಸ್ಟ್ರೇಟನಾಗಿದ್ದು, ಘೋರಾಪರಾಧಗಳ ವಿಚಾರಣೆಯನ್ನು ಸ್ವತಃ ನಡೆಸುತ್ತಿದ್ದನು. ಪ್ರತಿ ಭಾನುವಾರ ನ್ಯಾಯ ವಿಚಾರಣೆ ಮಾಡುತ್ತಿ ದ್ದನು.

2. ದಿವಾನ್: (ಸ್ಥಿರ) ಆಸ್ತಿ ಅಥವಾ ಭೂ ಸ್ವರೂಪದ ಆಸ್ತಿಗಳಿಗೆ ಸಂಬಂಧಿಸಿದ ವಿಷಯ ವಿಚಾರಣೆ ಮಾಡುವವನು, ಆದರೆ ಸ್ವತಃ ವಿಚಾರಣೆ ನಡೆಸಿದ್ದು ಅತಿ ವಿರಳ.

3. ದಾರೋಗಾ ಅದಾಲತುಲ್ ಆಲಿಯಾ: ಕ್ರಿಮಿನಲ್ ನ್ಯಾಯಾಲಯದಲ್ಲಿ ನಾಜಿಮ ನನ್ನು ಪ್ರತಿನಿಧಿಸುವವನು; ಜಗಳ, ಕಿತ್ತಾಟ, ನಿಂದೆ, ಇವುಗಳ ಬಗ್ಗೆ ಮತ್ತು ಭೂಮಿ ಮತ್ತು ವಾರಸು ವಿಷಯಗಳ ಬಗ್ಗೆ ವಿಚಾರಣೆ ನಡೆಸುತ್ತಿದ್ದನು.

4. ದಾರೋಗಾಯೆ ಅದಾಲತ್ ದಿವಾನಿ: ಇವನು ಸಿವಿಲ್ ನ್ಯಾಯಾಲಯದಲ್ಲಿ ನಾಜಿ ಮನ ಪ್ರತಿನಿಧಿ. ಭೂರೂಪದ ಸ್ವತ್ತಿನ ವಿಷಯ ವಿಚಾರಣೆ ಮಾಡುವ ನ್ಯಾಯಾಧೀಶನಾಗಿ ದ್ದನು.

5. **ಫೌಜ್ದಾರ (ಪೋಲೀಸ್ ಅಧಿಕಾರಿ) :** ಘೋರಾಪರಾಧವಲ್ಲದ ಎಲ್ಲ ಇತರ ಅಪರಾಧ ವಿಷಯದಲ್ಲಿ ಇವನೇ ನ್ಯಾಯಾಧೀಶನು ಅಪರಾಧಗಳ ಬಗ್ಗೆ ರುಜುವಾತುಗಳನ್ನೆಲ್ಲ ಪಡೆದು ಕೊಂಡು ನಿರ್ಣಯ ಮತ್ತು ದಂಡನೆ ವಿಧಿಸುವುದಕ್ಕಾಗಿ ನಾಜಿಮನ ಕಡೆಗೆ ಕಳಿಸುತ್ತಿದ್ದನು. (ಕಮಿಟಲ್ ಪ್ರೊಸೀಡಿಂಗ್ಸ್ ಇದ್ದಂತೆ)

6. **ಖಾಜಿ :** ವಾರಸು ಮತ್ತು ಉತ್ತರಾಧಿಕಾರದ ಎಲ್ಲ ಕ್ಲೇಮುಗಳನ್ನು ತೀರ್ಮಾನಿಸು ತ್ತಿದ್ದನು.

7. **ಮೊಹತಸಿಬ್ :** ಮಾದಕ ದ್ರವ್ಯಗಳ ಸೇವನೆ, ಮಾದಕ ದ್ರವ್ಯಗಳ ಮಾರಾಟ ಇವು ಗಳನ್ನು ಕುರಿತ ಅಪರಾಧಗಳನ್ನು ಮತ್ತು ತೂಕ ಅಳತೆಗಳಿಗೆ ಸಂಬಂಧಿಸಿದ ವಿಷಯಗಳನ್ನು ವಿಚಾರಣೆ ಮಾಡುವವನು.

8. **ಮುಫ್ತಿ :** ಇವನು ಖಾಜಿಯ ಮಾರ್ಗದರ್ಶನಕ್ಕಾಗಿ ವಿಧಿರಚನೆ ಮಾಡುತ್ತಿದ್ದನು. ಖಾಜಿಯು ಒಪ್ಪಿದರೆ ಆ ಪ್ರಕಾರ ತೀರ್ಮಾನವಾಗುತ್ತಿತ್ತು. ಇಲ್ಲದಿದ್ದರೆ, ನಾಜಿಮನಿಗೆ ತಿಳಿಸ ಲಾಗುತ್ತಿತ್ತು. ಆಗ ನಾಜಿಮನು. ಖಾಜಿ, ಮುಫ್ತಿ, ಮೊಹತಸಿಬ್, ದಾರೋಗಾಯೆ ಅದಾಲತ್ ಮತ್ತು ಮೋಲ್ವಿಗಳನ್ನು ಬರಮಾಡಿಕೊಂಡು ತೀರ್ಮಾನ ಕೈಗೊಳ್ಳುತ್ತಿದ್ದನು. ಅವರ ತೀರ್ಮಾನವು ಅಂತಿಮವಾದುದಾಗಿರುತ್ತಿತ್ತು.

9. **ಕಾನೂನ್‌ಗೊ :** ಸಂದರ್ಭಬಿದ್ದಾಗ ಭೂಮಿ ದಾಖಲೆಗಳ ವಿಷಯದಲ್ಲಿ ಈತನ ಸಲಹೆ ಪಡೆಯಲಾಗುತ್ತಿತ್ತು. ಇವನ ನಿರ್ಣಯಕ್ಕಾಗಿ ನಾಜಿಮ್, ದಿವಾನ್, ದಿವಾನಿ–ಯೆದಾ ರೋಗಾ, ಇವರು ಪ್ರಕರಣಗಳನ್ನು ಆತನೆಡೆಗೆ ಕಳಿಸುತ್ತಿದ್ದರು.

10. **ಕೊತ್ವಾಲ :** (ನಿಶಾ ಶಾಂತಿಪಾಲಕ ಅಧಿಕಾರಿ, ಕ್ರಿಮಿನಲ್) ಈ ಕಾಲದ ಕೊತ್ವಾಲನ ಕರ್ತವ್ಯಗಳು ಪೂರ್ವಕಾಲದ ಲಂಡನ್ ನಗರದ ಮೇಯರನ ಕರ್ತವ್ಯಗಳನ್ನು ಹೋಲುವುವು. ಮ್ಯಾಜಿಸ್ಟ್ರೇಟ್ ಮತ್ತು ಪೋಲೀಸ್ ಸೂಪರಿಂಟೆಂಡೆಂಟನ ಕರ್ತವ್ಯಗಳು ಕೊತ್ವಾಲನಲ್ಲಿ ನಿಹಿತವಾಗಿದ್ದುವೆಂದು ಹೇಳಿದರೆ ಹೆಚ್ಚು ಸಮಂಜಸವಾದೀತು. ಈ ಕೊತ್ವಾ ಲನು ಇರುಳಿನಲ್ಲೆಲ್ಲ ನಗರದಲ್ಲಿ ಗಸ್ತು ತಿರುಗಿ ಶಾಂತಿ ಸುವ್ಯವಸ್ಥೆಯನ್ನು ರಕ್ಷಿಸುತ್ತಿದ್ದನು.[1] ಇತರ ಕಛೇರಿಗಳಂತೆ ಈ ಕೊತ್ವಾಲನ ಕಛೇರಿಯೂ ಒಂದು ಇಸ್ಲಾಮೀ ಮಾದರಿಯ ಕಛೇರಿ ಯಾಗಿತ್ತು. ಮದರಾಸಿನಲ್ಲಿ ಮಾತ್ರ ಪೆದ್ದ ನಾಯಕನೆಂಬ ಹಿಂದೂ ಅಧಿಕಾರಿಯು ಆ ಕಾಲದಲ್ಲಿ ಪೋಲೀಸ್ ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದನಂತೆ.

ವಧೂವರರು ವಯೋಪರೀಕ್ಷೆಗಾಗಿ ಕೊತ್ವಾಲನ ಮುಂದೆ ಹಾಜರಾಗಬೇಕಾಗುತ್ತಿತ್ತು. ಇದು ಲಂಚಗುಳಿತನಕ್ಕೆ ದಾರಿ ಮಾಡಿಕೊಟ್ಟಿತೆಂದು ಹೇಳುತ್ತಾರೆ. ಮುಸ್ಲಿಮ್ ಮತಾಂತರ ಹೊಂದಿದವರು ಮತ್ತೆ ತಮ್ಮ ಮತಕ್ಕೆ ಹಿಂದಿರುಗಲು ಅಕ್ಬರನು ಅವಕಾಶ ಕಲ್ಪಿಸಿದನು. ಹಿಂದೂ ಸ್ತ್ರೀಯರು ಮುಸ್ಲಿಮನನ್ನು ಪ್ರೀತಿಸಿ ಮುಸ್ಲಿಮ ಧರ್ಮಕ್ಕೆ ಮತಾಂತರ ಹೊಂದಿದರೆ ಅವಳನ್ನು ಅವಳ ತಂದೆ ತಾಯಿಗೆ ಒಪ್ಪಿಸಬೇಕೆಂದು ಕಟ್ಟಪ್ಪಣೆಯಿತ್ತು. ಇಂಥ ನಿಯಮಗಳಿಂದ ಪರಮತ ಸಹಿಷ್ಣುತೆಗೂ ದುರಾಚಾರ ನಿಗ್ರಹಕ್ಕೂ ಅವಕಾಶ ಕಲ್ಪಿಸಲಾಗಿತ್ತೆಂದು ತಿಳಿದು ಬರುವುದು.

ಮೇಲ್ಕಂಡ ಎಲ್ಲ ಕಾರ್ಯಾಲಯಗಳಿಗೆ ಮುರ್ಷಿದಾಬಾದು ಕೇಂದ್ರಸ್ಥಾನವಾಗಿತ್ತು. ಮೊಫಸಿಲಿನಲ್ಲಿ[2] (ಒಳನಾಡಿನಲ್ಲಿ) ನ್ಯಾಯಾಡಳಿತ ವ್ಯವಸ್ಥೆಯು ಈ ಕೆಳಗಿನಂತಿತ್ತು.

೪ ಜಮೀನ್ದಾರಿ ನ್ಯಾಯಾಧಿಕಾರಿಗಳು

ಮುಖ್ಯ ಕ್ರಿಮಿನಲ್ ನ್ಯಾಯಾಲಯದ ಕರ್ತವ್ಯಗಳನ್ನು ಜಮೀನ್ದಾರನಾಗಲಿ (ರಾಜನಾಗಲಿ) ನಿರ್ವಹಿಸುತ್ತಿದ್ದನು. ಈ ಪದ್ಧತಿಯು ಗುತ್ತಿಗೆ ಪದ್ಧತಿಯಾಗಿದ್ದು ಜಮೀನ್ದಾರನು ತನ್ನ ಅವಧಿಯಲ್ಲಿ ಜುಲ್ಮಾನೆ ರೂಪದಲ್ಲಿ ಪ್ರಜೆಗಳಿಂದ ಹಣ ವಸೂಲು ಮಾಡಿಕೊಳ್ಳುತ್ತಿದ್ದನು. ಅವನು ಮರಣದಂಡನೆಯನ್ನು ವಿಧಿಸಲೂ ಶಕ್ತನಾಗಿದ್ದನು, ಆದರೆ ಅಂಥ ದಂಡನೆಗೆ ಮುರ್ಷಿದಾಬಾದಿನಿಂದ ದೃಢೀಕರಣದ ಆದೇಶ ಅಗತ್ಯವಾಗಿತ್ತು.

ಪ್ರತಿಯೊಂದು ಜಿಲ್ಲೆಯ ಫೌಜ್ದಾರಿ ಅದಾಲತ್ತು ಜಿಲ್ಲಾ ಕ್ರಿಮಿನಲ್ ನ್ಯಾಯಾಲಯವಾಗಿತ್ತು. ಆ ಜಿಲ್ಲೆಯ ಹಿರಿಯ ರಾಜನು ಅಥವಾ ಜಮೀನ್ದಾರನು ಆ ನ್ಯಾಯಾಲಯದ ನ್ಯಾಯಾಧೀಶನಾಗಿರುತ್ತಿದ್ದನು. ಕ್ರಿಮಿನಲ್ ಸ್ವಭಾವದ ಪ್ರಕರಣಗಳಿಗೂ ಅವನ ಅಧಿಕಾರ ವ್ಯಾಪ್ತಿಯು ಅನ್ವಯಿಸುತ್ತಿತ್ತು. ಈ ನ್ಯಾಯಾಲಯದ ವ್ಯವಹರಣೆಗಳು ಕ್ಷಿಪ್ರ ಕ್ರಮದಲ್ಲಿ ನಡೆಯುತ್ತಿದ್ದುವು. ಮರಣದಂಡನೆ ವಿಧಿಸಿದರೆ ಕೇಂದ್ರ ಸರ್ಕಾರದ ಒಪ್ಪಿಗೆ ಬೇಕಾಗುತ್ತಿತ್ತು. ಆದರೆ ಹೆಚ್ಚಾಗಿ ಹಣದಂಡವನ್ನೇ (ಜುಲ್ಮಾನೆ) ವಿಧಿಸುತ್ತಿದ್ದರು. ವಿಧಿಸುತ್ತಿದ್ದ ದಂಡದ ಹಣವೆಲ್ಲವೂ ಜಮೀನ್ದಾರಿ ಅಧಿಕಾರಾವಧಿಯಲ್ಲಿ ಆ ಜಮೀನ್ದಾರನ ಬೊಕ್ಕಸಕ್ಕೇ ಸೇರುತ್ತಿತ್ತು. ಸ್ವಲ್ಪಕಾಲದ ಹಿಂದೆ ತಾನು ಮುರ್ಷಿದಾಬಾದಿನಲ್ಲಿ ರೆಸಿಡೆಂಟನಾಗಿ ವಾಸವಾಗಿದ್ದಾಗ ಸ್ಥಿತಿಯು ಹೀಗಿರಲಿಲ್ಲವೆಂದು ವಾರ್ನ್ ಹೇಸ್ಟಿಂಗ್ಸನು ಬಣ್ಣಿಸಿದ್ದಾನೆ. ಜಮೀನ್ದಾರನು ದಂಡನೆ ವಿಧಿಸುತ್ತಿರಲಿಲ್ಲ. ಅವನು ನ್ಯಾಯಾಲಯದ ಅಧ್ಯಕ್ಷತೆಯನ್ನು ಎಂದೂ ವಹಿಸುತ್ತಿರಲಿಲ್ಲ. ಜಿಲ್ಲೆಯ ಶಾಂತಿ ಸುವ್ಯವಸ್ಥೆಯನ್ನು ಕಾಪಾಡುವುದು ಅವನ ಕರ್ತವ್ಯವಾಗಿತ್ತೆಂಬುದೇನೋ ನಿಜ. ಆದರೆ ಅವನು ಇಡೀ ರಾಜ್ಯದ ವ್ಯಾಪಕ ನ್ಯಾಯ ವ್ಯವಸ್ಥೆಯ ಒಂದು ಅಂಗವಾಗಿದ್ದನೇ ಹೊರತು ನ್ಯಾಯ ವ್ಯವಸ್ಥೆಯ ಗುತ್ತೇದಾರನಾಗಿರಲಿಲ್ಲ. ಅನೇಕ ಜಮೀನ್ದಾರರ ಮೇಲೆ ಅಧಿಕಾರ ವ್ಯಾಪ್ತಿ ಹೊಂದಿರುತ್ತಿದ್ದ ಫೌಜ್ದಾರನಿಗೆ ಅವನು ಅಧೀನನಾಗಿರುತ್ತಿದ್ದನು. ಅವನು, ಕೆಲವು ಜನ ಸಶಸ್ತ್ರ ದಳದವರಿಂದ ಕೂಡಿದ ಅಧಿಕಾರಿಗಳ ಠಾಣೆಗಳನ್ನೂ ಕೆಳದರ್ಜೆಯ ಕೇಂದ್ರಗಳನ್ನೂ ಹೊಂದಿರುತ್ತಿದ್ದನು. ರಾಯರಾಯನ್‌ರ ಮೂಲಕ 'ನವಾಬ'ನಿಗೆ ಆಗಾಗ ಗುಪ್ತವಾಗಿ ವಾರ್ತೆ ಕಳಿಸಲು ಬದ್ಧನಾಗಿದ್ದನು ಮತ್ತು ತನ್ನ ಪ್ರದೇಶದಲ್ಲಿ ಸುಲಿಗೆ ದರೋಡೆಗಳು ನಡೆಯದಂತೆ ನೋಡಿಕೊಳ್ಳುವಲ್ಲಿ ಫೌಜ್ದಾರನಿಗೆ ಸಹಾಯ ಮಾಡುತ್ತಿದ್ದನು. ಆದರೆ ನಾಜಿಮ್‌ನ ಪ್ರತಿನಿಧಿಯಾಗಿದ್ದ ಫೌಜ್‌ದಾರನೇ ಪ್ರಥಮತಃ ಹೊಣೆಯಾಗಿದ್ದನು. ನವಾಬನಿಂದ 'ಸನ್ನದು' ಪಡೆದು ಜಮೀನ್ದಾರರು ನ್ಯಾಯಪಾಲನೆಯ ಪ್ರಕಾರ್ಯಗಳನ್ನು ನಿರ್ವಹಿಸುತ್ತಿದ್ದರು.

ಹೇಸ್ಟಿಂಗ್ಸ್ ಪರಿಷತ್ತಿನ ಸದಸ್ಯನಾದ ಫ್ರಾನ್ಸಿಸ್‌ನ ವರದಿ ಇದಕ್ಕಿಂತ ಸ್ವಲ್ಪ ಭಿನ್ನವಾಗಿದೆ. ಅವನ ಪ್ರಕಾರ, ಜಮೀನ್ದಾರನು ಕೆಲವು ಅಲ್ಪಾಪರಾಧಗಳಿಗೆ ಮಾತ್ರ ದಂಡನೆ ವಿಧಿಸಲು ಶಕ್ತನಾಗಿದ್ದನು. ಅಂಗ ವಿಚ್ಛೇದನದ ಅಥವಾ ಮರಣದಂಡನೆಯ ಶಿಕ್ಷೆ ವಿಧಿಸಲು ಅವನಿಗೆ ಅಧಿಕಾರವಿರಲಿಲ್ಲ.

ಕ್ಷೀಣಿಸುತ್ತಿದ್ದ ಮೊಗಲ ರಾಜ್ಯದಲ್ಲಿ ತಮ್ಮ ಹೊಣೆಯನ್ನು ತಪ್ಪಿಸಿಕೊಳ್ಳಲು ಇನ್ನೂ ಕೆಳದರ್ಜೆಯ ಜಮೀನ್ದಾರರು ಅಪರಾಧಗಳನ್ನು ಮರೆಮಾಡುತ್ತಿದ್ದರೆಂದೂ ಅಪರಾಧಿಗಳೊಂದಿಗೆ ಸ್ನೇಹ ಬೆಳೆಸಿ ತಮ್ಮ ರಕ್ಷಣೆಯನ್ನು ತಾವು ಭದ್ರಮಾಡಿಕೊಳ್ಳುತ್ತಿದ್ದರೆಂದೂ ಫರ್ಮಿಂಗರ್ ಎಂಬಾತನು ಅಭಿಪ್ರಾಯ ಪಟ್ಟಿದ್ದಾನೆ.

ವರಿಷ್ಠ ಜಮೀನ್ದಾರರೆಲ್ಲರೂ, ನಗದಿಗಳೆಂಬ (ನಗದು ಪ್ರತಿಫಲ ಪಡೆಯುವ) ಸೈನಿಕ

ದಳವನ್ನು ಠಾಣೆದಾರರೆಂಬ ಪೋಲೀಸ್ ಪಡೆಯನ್ನು ಗ್ರಾಮ ಸರಂಜಾಮ ಎಂಬ ಗ್ರಾಮ ಕಾವಲುಗಾರರನ್ನು ಮತ್ತು ಕಂದಾಯ ವಸೂಲಿ ಅಧಿಕಾರಿಗಳನ್ನು ಹೊಂದಿದ್ದರು.

ಈ ದೊಡ್ಡ ಜಮೀನ್ದಾರರು ಆ ಪ್ರದೇಶದ ಆದಾಯದ ಚತುರ್ಥವನ್ನು ಅಥವಾ ಪಂಚಾಂಶವನ್ನು ಪಡೆದುಕೊಂಡು ಸಿವಿಲ್ ಅಥವಾ ಕ್ರಿಮಿನಲ್ ನ್ಯಾಯಾಲಯಗಳ ನ್ಯಾಯಾಧೀಶರಾಗಿರುತ್ತಿದ್ದರು. ಹೀಗಾಗಿ ವಿವಾದ ತೀರ್ಮಾನಕ್ಕಿಂತ ಮಧ್ಯಸ್ಥಿಕೆಯೇ ಹೆಚ್ಚಾಗುತ್ತಿತ್ತು. 'ಖುರಾನ್' ಮತ್ತು ತತ್ಸಂಬಂಧದ ವ್ಯಾಖ್ಯಾನಗಳ ಪ್ರಕಾರ ನ್ಯಾಯಪಾಲನೆ ನಡೆಯುತ್ತಿತ್ತು. ಇವುಗಳಿಂದ ಮಾರ್ಗದರ್ಶನ ದೊರೆಯದಾಗ ಮಾತ್ರ ಸ್ಥಳೀಯ ರೂಢಿ ಸಂಪ್ರದಾಯಗಳನ್ನು ಗಮನಿಸಲಾಗುತ್ತಿತ್ತು. ತೀರ್ಮಾನಗಳು ಹೆಚ್ಚಾಗಿ ಅಧಿಕಾರಿಗಳ ಇಚ್ಛಾನುವರ್ತಿಯಾಗಿರುತ್ತಿದ್ದವು. ರಾಜಧಾನಿಗೆ ಅಪೀಲು ಮಾಡಬೇಕಾಗುತ್ತಿತ್ತು. ದೂರು ಬಂದಾಗ ಮಾತ್ರ ಸರ್ಕಾರವು ಹಸ್ತಕ್ಷೇಪ ಮಾಡಿ ಪರಿಹಾರ ನೀಡುತ್ತಿತ್ತು.

ಮತೀಯ ವಿಷಯಗಳನ್ನು ನಿರ್ಣಯಿಸುವಾಗ ಮಾತ್ರ ಮೌಲ್ವಿ, ಖಾಜಿ ಅಥವಾ ಧರ್ಮಜ್ಞರ ಸಲಹೆ ಪಡೆದು ತೀರ್ಮಾನ ನಡೆಯುತ್ತಿತ್ತು. ಹಿಂದುಗಳು ಪಾತಕವೆಸಗಿದ ಪರಿಣಾಮವಾಗಿ ಜಾತಿಭ್ರಷ್ಟರಾಗಿ, ಪಶ್ಚಾತ್ತಾಪದ ಪರಿಮಾರ್ಜನ ಕ್ರಮಗಳಿಂದ ಮತ್ತೆ ಜಾತಿಗೆ ಸೇರಬಹುದಾಗಿದ್ದಾಗ ಮುಸಲ್ಮಾನ ಸರಕಾರದ ಸಮ್ಮತಿ ಅಗತ್ಯವಾಗಿತ್ತು. ಹಿಂದುಗಳೇ ಬಹುಸಂಖ್ಯಾತರಾಗಿದ್ದರೂ ಅವರ ಧಾರ್ಮಿಕ ವಿಷಯದಲ್ಲಿ ಇಸ್ಲಾಮೀ ಆಧಿಪತ್ಯವು ಮೇಲುಗೈಯಾಗಿದ್ದುದು ಅಂದಿನ ಹಿಂದೂಗಳ ಅಸಹಾಯಕ ಪರಿಸ್ಥಿತಿಯನ್ನು ಸೂಚಿಸುವುದು ಎಂದಿದ್ದಾರೆ ಇತಿಹಾಸಕಾರರು.

ಇಸ್ಲಾಮೀ ಪ್ರಭುಗಳು ಹಿಂದೂ ಮುಸಲ್ಮಾನ ಎಲ್ಲರಿಗೂ ಇಸ್ಲಾಮೀ ಕ್ರಿಮಿನಲ್ ವಿಧಿಯನ್ನೇ ಅನ್ವಯಿಸುತ್ತಿದ್ದರು. 'ಹಿದಾಯಾ' ಎನ್ನುವುದೇ ಇಸ್ಲಾಮಿ ಕ್ರಿಮಿನಲ್ ಸಂಹಿತೆಯಾಗಿತ್ತು. ಇದು ಅಪರಾಧ ವರ್ಗೀಕರಣವನ್ನು ವಿವರಿಸಿ ವಿವಿಧ ಶಿಕ್ಷೆಗಳನ್ನು ಗೊತ್ತುಪಡಿಸಿತ್ತು, ಎಂದರೆ :—

i) **ಕಿಸಾಸ್**: ರಕ್ತ ಸೇಡೂ ಸೇರಿ (ದೀಯತ್) ಎಲ್ಲ ಪ್ರಕಾರದ ಸೇಡು ತೀರಿಕೆಗಳು. ಬುದ್ಧಿಪೂರ್ವಕವಾಗಿ ಕೊಲೆಗೈಯ್ದಾಗ, ಗಾಯಗೊಳಿಸಿದಾಗ ಅಥವಾ ಅಂಗವೈಕಲ್ಯವುಂಟು ಮಾಡಿದಾಗ ಈ ಬಗೆಯ ಶಿಕ್ಷೆ ವಿಧಿಸಲಾಗುತ್ತಿತ್ತು.

ii) **ಹದ್**: ನಿಯಮಿತ ದಂಡಗಳು (ಜುಲ್ಮಾನೆಗಳು) ದರೋಡೆ, ಸುಲಿಗೆ, ಕಳವು, ವ್ಯಭಿಚಾರ, ಸ್ವೈರಿಣಿಯೆಂಬ ಸುಳ್ಳು ಅಪಾದನೆ, ಇತ್ಯಾದಿ ಅಪರಾಧಗಳಿಗೆ ದಂಡ ಅಂಗಚ್ಛೇದದ ದಂಡನೆಗಳಿಗೆ ಬದಲಾಗಿ ಹಣ ದಂಡಗಳನ್ನು ವಿಧಿಸಲಾಗುತ್ತಿತ್ತು.

iii) **ತಾಜೀರ್** (ಹಲ್ಲೆ) : ವಿವೇಚನಾಧೀನ ದಂಡನೆಗಳು ಎಚ್ಚರಿಕೆ ಕೊಡುವ, ಸಾರ್ವಜನಿಕವಾಗಿ ಮುಖಭಂಗ ಮಾಡುವ, ಆಸ್ತಿ ಹರಣ ಮಾಡುವ, ಚಾಟಿ ಏಟು ಕೊಡುವ, ಕಾರಾವಾಸಕ್ಕೆ ಕಳಿಸುವ ಮತ್ತು ಘೋರಾಪರಾಧಗಳ ಸಂದರ್ಭಗಳಲ್ಲಿ ಮರಣದಂಡನೆಯನ್ನು ವಿಧಿಸುವ ದಂಡನೆಗಳು ಈ ವರ್ಗಕ್ಕೆ ಸೇರಿದ್ದುವು. (ಇದು ಇಂದಿನ ಪೀನಲ್ ಕೋಡನ್ನು ಹೋಲುವುದು. ಮುಂದೆ ಇದನ್ನೆ ದಕ್ಷಿಣದ ನಿಜಾಮರಾಳಿಕೆಯಲ್ಲಿ 'ತಾಜೀರಾತ್ ಹಿಂದ್' ಎಂದೂ ಕರೆಯಲಾಯಿತು)

ಕೊಲೆ ಮಾಡಲ್ಪಟ್ಟವನ ವಾರಸುದಾರರು ಕೊಲೆ ಮಾಡಿದವನನ್ನು ಕೊಲ್ಲಲು ಹಕ್ಕುಳ್ಳವರಾಗಿದ್ದರು. ಕೊಲೆಪಾತಕಿಯನ್ನು ಅವರು ಕ್ಷಮಿಸಲೂ ಶಕ್ತರಾಗಿದ್ದರು. ಪರಿಹಾರ ಪಡೆದು

(Blood money) ರಾಜೀ ಮಾಡಿಕೊಳ್ಳಲೂ ಅವಕಾಶವಿತ್ತು. ಅಂಗವೈಕಲ್ಯವುಂಟಾದ ಸಂದರ್ಭಗಳಲ್ಲಿಯೂ ಇದೇ ಕ್ರಮವನ್ನು ಅನುಸರಿಸುತ್ತಿದ್ದರು[4].

ಸ್ತ್ರೀಯರ ಮೇಲೆ ಅತ್ಯಾಚಾರ ಮಾಡಿದವನನ್ನು, ಸ್ವೈರಿಣಿಯನ್ನು, ಅಥವಾ ಲೈಂಗಿಕ ಅಪರಾಧ ಮಾಡಿದವನನ್ನು, ಸ್ವೈರಿಣಿಯೆಂಬ ಸುಳ್ಳು ಅಪಾದನೆ ಅಥವಾ ಅಪಪ್ರಚಾರ ಮಾಡಿದವನನ್ನು ಕಲ್ಲುಗಳಿಂದ ಹೊಡೆದು ಕೊಲ್ಲುತ್ತಿದ್ದರು[5].

ಮದ್ಯಪಾನ ಮಾಡಿದವರಿಗೆ ಎಂಬತ್ತು ಚಾಟೀ ಏಟು ಕೊಡುತ್ತಿದ್ದರು. ಕಳ್ಳತನದ ಅಪರಾಧಿಗೆ ಪ್ರಥಮಾಪರಾಧಕ್ಕೆ ಬಲಗೈ ಕಡಿಯುವುದು, ದ್ವಿತೀಯ ಅಪರಾಧಕ್ಕೆ ಎಡಪಾದ (ಅಡಿ)ವನ್ನು ಕಡಿಯುವುದು ಮತ್ತೆ ಅದೇ ಅಪರಾಧವೆಸಗಿದರೆ ಮರಣದಂಡನೆ ವಿಧಿಯಾಗಿತ್ತು[6].

ಮುಹಮ್ಮದೀಯರ ಆಳಿಕೆಯ ಕಾಲದಲ್ಲಿ ಪ್ರಚಲಿತವಿದ್ದ ನ್ಯಾಯಾಡಳಿತದ ಬಗ್ಗೆ ಭಿನ್ನಾಭಿಪ್ರಾಯಗಳಿವೆ. ಇಂಗ್ಲಿಷ್ ಕಾನೂನುಗಳಂತೆ ಆಗ ಹಿಂದೂಸ್ಥಾನದಲ್ಲಿ ನಿರ್ದಿಷ್ಟ ಶಾಸನಗಳಿರಲಿಲ್ಲ. 'ಖುರಾನ್' ಆಧಾರದ ಮೇಲೆ, ಪ್ರಾಚೀನ ಕಾಲದಿಂದಲೂ ನಡೆದುಬಂದ ರೂಢಿ ಸಂಪ್ರದಾಯಗಳ ಆಧಾರದ ಮೇಲೆ, ಮುಹಮ್ಮದೀಯರು ರಚಿಸಿದ ಅನೇಕ ಇಸ್ಲಾಮಿ ಶಾಸನ ಗ್ರಂಥಗಳ ಆಧಾರದ ಮೇಲೆ ನ್ಯಾಯಾಡಳಿತ ನಡೆಯುತ್ತಿತ್ತು. ಕೊಲೆ ಇತ್ಯಾದಿ ಕ್ರಿಮಿನಲ್

ಅಪರಾಧಗಳಿಗೆ ಹಿಂದುಗಳು (ಜೆಂಟುಗಳು) ಗುರಿಯಾದಾಗ, ಹಿಂದೂ ಶಾಸ್ತ್ರಗಳಿಗನುಸಾರವಾಗಿ ತೀರ್ಮಾನ ನಡೆಯುತ್ತಿತ್ತು ಎಂದು ಬೋಲ್ಟ್ ಎಂಬಾತನು ಅಭಿಪ್ರಾಯಪಟ್ಟಿದ್ದಾನೆ.

ಅಕ್ಬರನ ಕಾಲದಲ್ಲಿ ನ್ಯಾಯ ನಿಯಮಗಳು ಉದಾರವೂ ಮಾನವೀಯವೂ ಆಗಿದ್ದುವು. ನ್ಯಾಯ ಪರಿಪಾಲನೆಯು ಒಟ್ಟಿನಲ್ಲಿ ನ್ಯಾಯಸಮ್ಮತವಾಗಿ ನಡೆಯುತ್ತಿತ್ತು. ಕ್ರೂರ ದಂಡನೆಗಳನ್ನೂ ಮರಣದಂಡನೆಯನ್ನೂ ಸಾಕಷ್ಟು ನಿರ್ಬಂಧಿಸಲಾಯಿತು. ಪ್ರಾಚೀನ ಕಾಲದ ಅಗ್ನಿ ದಿವ್ಯ, ಜಲದಿವ್ಯಾದಿ ಕಠೋರ ಪರೀಕ್ಷಾಕ್ರಮಗಳನ್ನೂ ತೆಗೆದು ಹಾಕಲಾಯಿತು. ಗುಲಾಮಗಿರಿಯ ಅನಾಗರಿಕ ಸಂಪ್ರದಾಯವನ್ನೂ ಅಕ್ಬರ ಬಾದಶಹನು ನಿರ್ಮೂಲ ಮಾಡಿದನು. ಷಹಜಹಾನನ ಕಾಲವು "ಮೊಗಲ ರಾಜ್ಯಭಾರದ ಸುವರ್ಣಯುಗ"ವೆಂದು ಕರೆಸಿಕೊಂಡಿದೆ.

ಹೀಗಿದ್ದರೂ ಹಿಂದೂಗಳಿಗೆ ಕಠೋರ ಶಿಕ್ಷೆಗಳನ್ನು ವಿಧಿಸುತ್ತಿದ್ದರೆಂದೂ ಜಮೀನ್ದಾರರನ್ನು ಅಮಾನುಷ ರೀತಿಯಲ್ಲಿ ಶಿಕ್ಷಿಸಲಾಗುತ್ತಿತ್ತೆಂದೂ ಅನೇಕ ಪಾಶ್ಚಾತ್ಯ ವಿಮರ್ಶಕರು ಅಭಿಪ್ರಾಯಪಟ್ಟಿದ್ದಾರೆ. ಆಗ ಹಿಂದೂ ಅಧಿರಾಜರ ಆಳಿಕೆ ಇನ್ನೂ ಕೆಲವೆಡೆ ಉಳಿದಿದ್ದು ಬಂಗಾಲದ ಕೆಲವೆಡೆಗಳಲ್ಲಿ ಜನ ಶಾಂತರೂ ಸುಖಿಗಳೂ ಆಗಿದ್ದರು. ಪಾವಿತ್ರ್ಯ, ಪಾಪಭೀರುತ್ವ, ನೈಷ್ಠಿಕ ಜೀವನ, ಧರ್ಮಬುದ್ಧಿ ನ್ಯಾಯನಿಷ್ಠುರತೆಗಳು ಅವರಲ್ಲಿ ಮನೆ ಮಾಡಿದ್ದುವು. ಆಸ್ತಿಯ ಹಕ್ಕು, ವ್ಯಕ್ತಿ ಸ್ವಾತಂತ್ರ್ಯ ಅಬಾಧಿತವಾಗಿದ್ದುವು. ಕೊಲೆ ಸುಲಿಗೆಗಳಿರಲಿಲ್ಲ. ಯಾತ್ರಿಕರಿಗೂ ಪ್ರಯಾಣಿಕರಿಗೂ ಸಂಚಾರೀ ವರ್ತಕರಿಗೂ ಸದಾ ಅಭಯ ಹಸ್ತ ಕಾದಿರುತ್ತಿತ್ತು. ಶುಲ್ಕವಿಲ್ಲದೆ ಕಾವಲುಗಾರರು ಅವರನ್ನು ಹಿಂಬಾಲಿಸಿ ರಕ್ಷಣೆ ಒದಗಿಸುವಂತೆ ರಾಜರು ಏರ್ಪಾಡುಗಳನ್ನು ಮಾಡಿದ್ದರು. ಪ್ರಯಾಣಿಕರಿಗೆ ವಸತಿ ಸೌಕರ್ಯವೂ ಉಚಿತವಾಗಿ ದೊರೆಯುತ್ತಿತ್ತು. ಇಂಥ ಮುಗ್ಧ ಶಾಂತಿಪ್ರಿಯ ಜನರನ್ನು ಮುಹಮ್ಮದೀಯರ ಆಳಿಕೆಯಲ್ಲಿ ಕ್ರೂರವಾಗಿ ಹಿಂಸಿಸಿದರೆಂದೂ ಅದರಿಂದ ಹಿಂದೂಗಳ ನೈತಿಕ ಸ್ಥೈರ್ಯ ಉಡುಗಿ ಅವರು ಹತಾಶರಾಗಿ, ಭಯಗ್ರಸ್ತರಾಗಿ ಬಾಳಬೇಕಾಯಿತೆಂದೂ ಬಂಗಾಲದ ಆ ಕಾಲದ (1752–56) ಗವರ್ನರ್ ಹಾಲ್‌ವೆಲ್ಲನು ಅಭಿಪ್ರಾಯ ವ್ಯಕ್ತಪಡಿಸಿದ್ದಾನೆ.

ಈ ಅವಧಿಯಲ್ಲಿ ಜಮೀನ್ದಾರರ ಭೂಮಿ ಅಧಿಕಾರಗಳನ್ನೂ ಅವರು ಅನುಭೋಗಿಸುತ್ತಿದ್ದ ಅನೇಕ ಸೌಲಭ್ಯಗಳನ್ನೂ ಕಿತ್ತುಕೊಳ್ಳಲಾಯಿತೆಂದೂ ತಿಳಿಯುವುದು. ಜಮೀನ್ದಾರರು

ನವಾಬರ ಆಳ್ವಿಕೆಯಲ್ಲಿ ಅನುಭವಿಸಬೇಕಾಗಿ ಬಂದ ಭಯಾನಕ ಶಿಕ್ಷೆಗಳನ್ನೂ ಪರಾಭವಗಳನ್ನೂ ಓದಿದಾಗ ನ್ಯಾಯಾಡಳಿತವು ಬರಬರುತ್ತ ಪಕ್ಷಪಾತಮಯವಾಗುತ್ತ ಬಂತೆಂಬುದು ವ್ಯಕ್ತವಾಗದೆ ಇರದು. ಕಂದಾಯ ಕೊಡಲು ತಪ್ಪಿದ ಅಥವಾ ವಿಲಂಬ ಮಾಡಿದ ಹಿಂದೂ ಜಮೀನ್ದಾರರನ್ನು ಬಂಗಾಲದ ನವಾಬರು ದಂಡಿಸುತ್ತಿದ್ದ ಅಮಾನುಷ ರೀತಿಯು ನಾಗರಿಕತೆಯ ಮುಖಕ್ಕೆ ಮಸಿ ಬಳಿಯುವಂತಿತ್ತು. ಹೊಲಸು, ಕೊಚ್ಚೆ, ಅಮೇಧ್ಯಗಳಿಂದ ತುಂಬಿ ಸಮೀಪ ಸುಳಿದರೆ ಮೂರ್ಛೆ ಬರುವಂಥ ದುರ್ಗಂಧ ವಾಸನೆ ಸೂಸುವ ಉದ್ದುದ್ದದ ಚರಂಡಿಗಳನ್ನು ನಿರ್ಮಿಸಿ, ಅದಕ್ಕೆ ಬೈಕುಂಠ್[7]ವೆಂದು ಅಪಹಾಸ್ಯವಾಗಿ ಕರೆದು ಆ ಚರಂಡಿಗಳಲ್ಲಿ ತಪ್ಪಿತಸ್ಥ ಜಮೀನ್ದಾರರನ್ನು ನೂಕಿ, ಹಗ್ಗ ಕಟ್ಟಿ ಅದರಲ್ಲಿ ಹೊರಳಿಸುತ್ತ ಉರುಳಿಸುತ್ತ ನವಾಬನಿದ್ದೆಡೆಗೆ ಎಳೆತರುತ್ತಿದ್ದರಂತೆ ಮುಹಮ್ಮದ್ ಕುಲಿಖಾನ್ ಎಂಬ ನವಾಬನ ಕಾಲದ ಈ ಭೀಭತ್ಸ ದೃಷ್ಟಾಂತದಿಂದ ಅಂದಿನ ನ್ಯಾಯಾಡಳಿತದ ದುರವಸ್ಥೆಯನ್ನು ಅಳೆಯಬಹುದಾಗಿದೆ.

ನ್ಯಾಯ ವಿಚಾರಣೆಯೇನೋ ಕೂಡಲೇ ನಡೆಯುತ್ತಿತ್ತು. ಆದರೆ ಕ್ಷಿಪ್ರಕ್ರಮದಲ್ಲಿ ಮುಗಿಯುತ್ತಿತ್ತು. ನಿರಪರಾಧಿಗಳನ್ನು ಕೂಡಲೇ ಬಂಧಮುಕ್ತಗೊಳಿಸಲಾಗುತ್ತಿತ್ತು ಎಂದು ರತ್ನ ವ್ಯಾಪಾರಿಯೂ ಪ್ರವಾಸಿಗನೂ ಆದ ಫ್ರೆಂಚ್ 'ಟ್ರಾವೆನಿರ್' ದಕ್ಷಿಣದ ನವಾಬನೊಬ್ಬನ ಬಗ್ಗೆ ಬರೆದಿದ್ದಾನೆ.

17ನೆಯ ಶತಮಾನದ ಕೊನೆಯಲ್ಲಿ ಬಂಗಾಲದಲ್ಲಿ ಕಂಪನಿಯ ಏಜೆಂಟನಾಗಿದ್ದ ಜಾಬ್ ಚಾರ್‌ನಾಕ್ ಎಂಬಾತನು ಪ್ರಜೆಗಳನ್ನು ಅಷ್ಟೇ ಕ್ರೂರತನದಿಂದ ದಂಡಿಸುತ್ತಿದ್ದನೆಂದೂ ಅವನ ಭೋಜನಾಲಯದ ಹತ್ತಿರದಲ್ಲಿಯೇ ದಂಡನೆಗೆ ಗುರಿಯಾದ ಅಪರಾಧಿಗಳ ಆರ್ತನಾದಗಳೂ, ಹೃದಯಭೇದಕ ಕೂಗುಗಳೂ ಕೇಳುತ್ತಿದ್ದು, ಅದು ಏಜೆಂಟನಿಗೆ ಭೋಜನಕಾಲದ ಹಿನ್ನೆಲೆ ಗಾಯನವಾಗುತ್ತಿತ್ತೆಂದೂ ಬಣ್ಣಿಸಿದ ಅನೇಕ ವೃತ್ತಾಂತಗಳು ದೊರೆಯುವುವು. ಒಟ್ಟಿನಲ್ಲಿ ಮೊಗಲ ರಾಳಿಕೆಯ ಅವಸಾನ ಕಾಲದಲ್ಲಿ ಭಾರತದ ನ್ಯಾಯ ವ್ಯವಸ್ಥೆಯು ತೃಪ್ತಿಕರವಾಗಿರಲಿಲ್ಲ. ನ್ಯಾಯ ಪರಿಪಾಲನೆಯು ಇಚ್ಛಾನುವರ್ತಿಯಾಗಿತ್ತೇ ಹೊರತು ನಿಯಮಾನುಸಾರಿಯಾಗಿರಲಿಲ್ಲ ಎಂಬುದು ಇತಿಹಾಸಜ್ಞರ ಅಭಿಪ್ರಾಯವಾಗಿದೆ.

ಇಸ್ಲಾಮಿ ನ್ಯಾಯದ ತತ್ವಕ್ಕನುಸಾರವಾಗಿ ರಾಜನು ಶಾಸನ ಕರ್ತೃವಾಗಿರಲಿಲ್ಲ. ಆದರೆ ಅವಶ್ಯವೆನಿಸಿದಾಗ ಅವನು ಆದೇಶಗಳನ್ನು ಅಥವಾ ಶಾಸನಗಳನ್ನು ಹೊರಡಿಸಬಹುದಾಗಿತ್ತು. ಮೊಗಲರು ಮಾತ್ರ ಸ್ವತಂತ್ರರೂ ಇಚ್ಛಾನುವರ್ತಿಗಳೂ ಆಗಿದ್ದರು. ಆದರೆ ಹಿಂದೂಸ್ಥಾನವು ಕೇವಲ ಇಸ್ಲಾಮಿ ರಾಜ್ಯವಾಗಿರಲಿಲ್ಲ. ಮುಸ್ಲಿಮ್ ಧರ್ಮವು ರಾಜ್ಯಧರ್ಮವೆಂದು ಮೊಗಲರೆಂದೂ ಘೋಷಿಸಲಿಲ್ಲ. ಅದನ್ನು ತೆಗೆದೂ ಹಾಕಲಿಲ್ಲ. ಔರಂಗಜೇಬನು ಮಾತ್ರ ಅದನ್ನು ರಾಜಧರ್ಮವಾಗಿ ಘೋಷಿಸಿದನು. ಧರ್ಮವೂ ರಾಜಕಾರಣವೂ ಪರಸ್ಪರ ಪ್ರತ್ಯೇಕವಾಗಿದ್ದುವು. ಕೆಲವು ಮತಾಂಧ ರಾಜರನ್ನು ಬಿಟ್ಟರೆ ಸಾಮಾನ್ಯವಾಗಿ ಮೊಗಲರಾಳ್ವಿಕೆಯು ಜಾತ್ಯತೀತವಾಗಿತ್ತೆಂದು ಹೇಳಲಾಗಿದೆ. ನ್ಯಾಯಾಡಳಿತದಲ್ಲಿ ಅಕ್ಬರನೂ ಜಹಾಂಗೀರನೂ ಅಧಿಕಾರಿಗಳ ಪ್ರಭಾವಕ್ಕೆ ಎಂದೂ ಮಣಿಯಲಿಲ್ಲ. ಪರಿಸ್ಥಿತಿಗೆ ತಕ್ಕಂತೆ, ಇಸ್ಲಾಮೀ ನ್ಯಾಯದಲ್ಲಿ ಬದಲಾವಣೆಗಳನ್ನು ಮಾಡಿದರೇ ಹೊರತು ಅದನ್ನು ಅವರು ಎಂದೂ ಉಲ್ಲಂಘಿಸಲಿಲ್ಲ. ಔರಂಗಜೇಬನು ಮಾತ್ರ ಖುರಾನಿನ ಆದೇಶಗಳಿಗನುಸಾರವಾಗಿಯೇ ನ್ಯಾಯಪರಿಪಾಲನೆ ಮಾಡಿದನೆಂದು ಹೇಳುತ್ತಾರೆ. ಖಾಜಿಗಳಿಗೂ ಮುಫ್ತಿಗಳಿಗೂ ಬಲಾಢ್ಯರಾದ ಮೊಗಲ ಸಾಮ್ರಾಟರ ಮನಸ್ಸಿಗೆ ವಿರುದ್ಧವಾಗಿ ವರ್ತಿಸುವ ಧೈರ್ಯವಿರಲಿಲ್ಲ.

ಕಾಲಕ್ರಮದಲ್ಲಿ ಮೊಗಲರ ನೀತಿಯನ್ನು ನಿಗ್ರಹಿಸಲು ಇಸ್ಲಾಮೀ ನ್ಯಾಯವು ಸಮರ್ಥ ವಾಗದೆ ಹೋಯಿತು. ಮುಸ್ಲಿಮೇತರರು ಬಹುಸಂಖ್ಯಾತರಾಗಿದ್ದ ರಾಜ್ಯದ ಆಡಳಿತವನ್ನು ನಡೆಯಿಸಬೇಕಾಗಿದ್ದ ಅಕ್ಬರ ಮತ್ತು ಅವನ ಇಬ್ಬರು ಉತ್ತರಾಧಿಕಾರಿಗಳ ಕಾಲದಲ್ಲಿ ಮತಾಂಧರೂ ಸಂಕುಚಿತ ಬುದ್ಧಿಯವರೂ ಆದ ಉಲೆಮಾ ಮತ್ತು ಖಾಜಿಗಳ ಆಟ ನಡೆಯ ದಾಯಿತು. ಅವರ ಬಲೆಗೆ ಬಿದ್ದವನೆಂದರೆ ಔರಂಗಜೇಬನೊಬ್ಬನೆ. ಅವನು ಖಾಜಿಗಳ ಮಾತು ಕೇಳುತ್ತಿದ್ದನು. ಮತೀಯ ಶಾಸನವನ್ನು ಮತ್ತು ಖಲೀಫರು ಕೊಟ್ಟ ನಿರ್ಣಯಗಳನ್ನು ಅನು ಸರಿಸುತ್ತಿದ್ದನು. ಮುಸಲ್ಮಾನರನ್ನುಳಿದು ಉಳಿದೆಲ್ಲ ನಾಸ್ತಿಕರನ್ನು ನಿರ್ಮೂಲ ಮಾಡುವುದೇ ಅವನ ಉದ್ದೇಶವಾಗಿತ್ತೆಂದು ಇತಿಹಾಸಜ್ಞರು ಅಭಿಪ್ರಾಯಪಟ್ಟಿದ್ದಾರೆ. ಆದರೆ ಕೆಲವು ಸಲ ಅವನೂ ಖಾಜಿಗಳ ಮಾತು ಕೇಳುತ್ತಿರಲಿಲ್ಲ. ತನ್ನ ಧರ್ಮಬಂಧುಗಳಾದ ವಿಜಾಪುರ ಮತ್ತು ಗೋಲಕುಂಡದ ಷಾಹೀರಾಜರೊಡನೆ ಕಾದುವುದು ಬೇಡವೆಂದು ಸಲಹೆ ನೀಡಿದ ಷೇಕ್–ಉಲ್ ಇಸ್ಲಾಮನ ಮಾತನ್ನು ಕಡೆಗಣಿಸಿದನು. ಪರಿಣಾಮವಾಗಿ ಮುಖ್ಯ ಖಾಜಿಯು, "ಔರಂಗಜೇಬನು ಉತ್ತರಾಧಿಕಾರಿಯಾಗಲಾರನೆಂದು" ಷಹಜಹಾನನಿರುವಾಗಲೇ ಆಕ್ಷೇಪವೆತ್ತಿದನು. ಅವನನ್ನು ವಜಾಮಾಡಿ ಬೇರೊಬ್ಬ ಖಾಜಿಯನ್ನು ನಿಯಮಿಸಿ ಔರಂಗಜೇಬನು ಪಟ್ಟಕ್ಕೆ ಬಂದನು.

ಅಡಿಟಿಪ್ಪಣಿಗಳು

1. "ಅಹೋರಾತ್ರಯಾಮ ಹಸ್ತ್ಯಶ್ವ ಪುರುಷಾಚಾರ ವಿನಿರ್ಗತಮತಿಶ್ಚ"ರಾದ ನಗರ ರಕ್ಷಕ ಅಧಿಕಾರಿಗಳ ವಿಚಾರವನ್ನು ಕೌಟಿಲ್ಯನು ಸೂಚಿಸಿದ್ದಾನೆ.

2 'ಮೊಫಸಿಲ್' ಎಂಬುದು 'ಫಾಸಲಾ' ಎಂಬುದರಿಂದ ಬಂದದ್ದು. 'ಫಾಸಲಾ' ಅಂದರೆ ದೂರ. ರಾಜಧಾನಿಯಿಂದ ಅಥವಾ ಕೇಂದ್ರ ಸ್ಥಳದಿಂದ ದೂರವಿರುವ ಪ್ರದೇಶ ಎಂದು ಅರ್ಥ.

3 ಇತ್ತೀಚಿನ ಹೈದರಾಬಾದು ನಿಜಾಮರ ಕಾಲದಲ್ಲಿಯೂ ಕೆಲವು ಹಿಂದೂ ಪ್ರತಿಷ್ಠಿತ ಮನೆತನಗಳಿಗೆ ರಾಯರಾಯಾನ್ ಎಂಬ ಬಿರುದು ಇತ್ತು.

4. ಇಂಥ ಶಿಕ್ಷಾ ಪದ್ಧತಿಗಳು ಇಂಗ್ಲೆಂಡಿನಲ್ಲಿಯೂ ಸ್ವೀಡನ್ನಿನಲ್ಲಿಯೂ ಹಿಂದೆ ಪ್ರಚಲಿತ ವಿದ್ದುವು. ಇವುಗಳ ಗುಣಾವಗುಣ ವಿಮರ್ಶನ ನಡೆದು ಕಾಲಾಂತರದಲ್ಲಿ ರದ್ದುಗೊಳಿಸ ಲಾಯಿತು.

5. 'ಕಣ್ಣಿಗೆ–ಕಣ್ಣು' 'ಹಲ್ಲಿಗೆ–ಹಲ್ಲು' ಎಂಬ ಪ್ರತಿಕ್ರಮ ರೂಪದ ಶಿಕ್ಷೆಗಳು ಪ್ರಾಚೀನ ಯೆಹೂದಿಗಳಲ್ಲಿಯೂ ಐಜಿಪ್ತರಲ್ಲಿಯೂ ರೂಢಿಯಲ್ಲಿದ್ದುವು. ಕಾರಣವಿಲ್ಲದೆ ಪ್ರಾಣಾಂತಿಕ ವಿಷವನ್ನು ವಶದಲ್ಲಿಟ್ಟುಕೊಂಡವನು ಅದನ್ನು ಅವನೇ ಸೇವಿಸುವಂತೆ ಶಿಕ್ಷೆ ವಿಧಿಸಲಾಗುತ್ತಿತ್ತು.

6. 'ಸೊಲೋನ್'ನ ದಂಡನಾವಿಧಿಗಳೂ ಇದೇ ಪ್ರಕಾರವಾಗಿದ್ದುವು. ಹೆಚ್. ಪಿ ದುಬೆ ಅವರ 'ದಿ ಜುಡಿಷಿಯಲ್ ಸಿಸ್ಟಮ್ಸ್ ಆಫ್ ಇಂಡಿಯಾ' (ಅಂಡರ್ ಸಮ್ ಫಾರಿನ್ ಕಂಟ್ರೀಸ್') ಪುಟ 48.

7. 'ವೈಕುಂಠ' ಎಂಬುದರ ಬಂಗಾಲಿ ತದ್ಭವ

ಜಿ. ಎನ್. ಕುರ್ಡಿ

ಸಾಕ್ರಟೀಸ್

ಗ್ರೀಕ್ ತತ್ವಜ್ಞಾನಿ. ಐತಿಹಾಸಿಕ ಪುರುಷರಲ್ಲಿ ಅತಿ ಬುದ್ಧಿವಂತರೆಂದು ಹೆಸರಾಂತವರಲ್ಲಿ ಹೆಚ್ಚಿನವ. ಕ್ರಿ. ಪೂ. 469ರಲ್ಲಿ ಗ್ರೀಸದ ರಾಜಧಾನಿ ಅಥೆನ್ಸಿನಲ್ಲಿ ಜನಿಸಿದ. ಅವನ ತಂದೆ ಸಾಫ್ರಾನಿಸ್ಕಸ್ (Sophroniscus) ಶಿಲ್ಪಿ, ತಾಯಿ ಸೂಲಗಿತ್ತಿಯ ಕೆಲಸವನ್ನು ಮಾಡುತ್ತಿದ್ದಳು. ತಾಯಿಯ ಈ ಕಸಬು ಸಾಕ್ರಟೀಸ್‌ನ ಮೇಲೆ ದೀರ್ಘ ಕಾಲದ ಪ್ರಭಾವ ಬೀರಿತ್ತಾಗಿ ತೋರುತ್ತದೆ. ಚರ್ಚೆಗಳ ಮೂಲಕ ಸತ್ಯ ಹಾಗೂ ಹೊಸ ವಿಚಾರಗಳನ್ನು ಹೊರಗೆಡಹುವದನ್ನು ವಿನೋದಕ್ಕಾಗಿ ಈ ಕಸುಬಿಗೆ ಹೋಲಿಸುತ್ತಿದ್ದ. ಒಂದು ಮನೆ ಮತ್ತು ಸ್ವಲ್ಪ ಧನ ಪಿತ್ರಾರ್ಜಿತವಾಗಿ ಅವನಿಗೆ ಬಂದಿತ್ತು. ತನ್ನ ಜೀವನದ ಬಗೆಗೆ ಅವನು ಯಾವ ಮಾಹಿತಿಯನ್ನೂ ಬರೆದಿಟ್ಟಿಲ್ಲವಾದ್ದರಿಂದ ಅದನ್ನು ಪ್ಲೇಟೋ ಮೊದಲಾದ ಅವನ ಸಮಕಾಲೀನರ ದಾಖಲೆಗಳಿಂದ ಪಡೆಯಬೇಕಾಗುತ್ತದೆ. 450ರ ಸುಮಾರಿಗೆ ಅನೆಕ್ಸಾಗೋರಸ್ (Anexagoras) ಅಥೆನ್ಸಿನಲ್ಲಿ ಪ್ರವೇಶ ಮಾಡಿಸಿದ್ದ ಆಯೋನಿಯದ ತತ್ವ ವಿಚಾರಗಳು (Ionian Philosophy) ಅವನ ಕುತೂಹಲವನ್ನು ಕೆರಳಿದ್ದುವು. ಪ್ರಾರಂಭದಲ್ಲಿ ಆಸಕ್ತಿ ವಹಿಸುತ್ತಿದ್ದ ಭೌತಶಾಸ್ತ್ರ (Physical Science) ದಿಂದ ಹೊಸ ಭ್ರಮೆ ಪರಿಹಾರವಾಗಿ ಸ್ವಂತವಿಚಾರಗಳಲ್ಲಿ ತೊಡಗಿದ. 439ರ ಸುಮಾರಿಗೆ ಅತಿ ಬುದ್ಧಿವಂತನೆಂದು ಹೆಸರು ಪಡೆದಿದ್ದ. ಅವನು ವಯಸ್ಕನಾದಾಗ ಅಥೆನ್ಸ್ ಉನ್ನತಿಯ ಶಿಖರವನ್ನೇರಿತ್ತು. ಮುಂದೆ ಸೈನ್ಯದಲ್ಲಿ ಯೋಧನಾಗಿ ಸೇರಿಕೊಂಡು ಪಾಟಿಡೇ (Potidaea) (431), ಡೆಲಿಯಂ (424) ಮತ್ತು ಅಂಫಿಪ್ರೋಲೀಸ್‌ಗಳ (422) ಕದನಗಳಲ್ಲಿ ಭಾಗವಹಿಸಿ ಶೌರ್ಯ ಮತ್ತು ಸಹಿಷ್ಣುತೆಗಳಿಗೆ ಹೆಸರುಗಳಿಸಿದ. ಹಿಮ ಬೀಳುತ್ತಿದ್ದಾಗ ಪಾದರಕ್ಷೆ ಮತ್ತು ಬೇಕಾದಷ್ಟು ಬಟ್ಟೆಗಳನ್ನು ಧರಿಸಿಕೊಂಡಿದ್ದ ಉಳಿದ ಯೋಧರು ಚಳಿಯಲ್ಲಿ ನಡುಗುತ್ತಿದ್ದರೆ ಸಾಕ್ರಟೀಸ್ ಮಾತ್ರ ತೀರ ಕಡಿಮೆ ವಸ್ತುಗಳನ್ನು ಹಾಕಿಕೊಂಡು ಬರಿಗಾಲಲ್ಲಿಯೇ ಹಿಮದ ಮೇಲೆ ಉಳಿದ ಯೋಧರಿಗಿಂತ ಹೆಚ್ಚು ಶಿಸ್ತಿನಿಂದ ನಡೆಯುತ್ತಿದ್ದ. ಆಹಾರಾಭಾವದಿಂದ ಉಳಿದವರು ಹಸಿವೆಯಿಂದ ತತ್ತರಿಸುತ್ತಿದ್ದಾಗ ಅವನು ಮಾತ್ರ ಉಲ್ಲಾಸದಿಂದಲೇ ಇರುತ್ತಿದ್ದ. ಆದರೂ ಭೋಜನಾಸಿಗಳಲ್ಲಿ ಆಹಾರದಿಂದ ಎಲ್ಲರಿಗಿಂತಲೂ ಹೆಚ್ಚು ತೃಪ್ತಿ ಅವನಿಗಾಗುತ್ತಿತ್ತು. ಕುಡಿಯುವ ಚಟವಿಲ್ಲದಿದ್ದರೂ ಕರೆದು ಕೊಟ್ಟಾಗ ಎಲ್ಲರಿಗಿಂತಲೂ ಹೆಚ್ಚು ಮದ್ಯವನ್ನು ಹೀರುತ್ತಿದ್ದನಾದರೂ ಅವನಿಗೆ ಅಮಲೇರುತ್ತಿರಲಿಲ್ಲ. ಒಂದು ಕದನದಲ್ಲಿ ಸ್ವಂತದ ಪರಿವೆಯಿಲ್ಲದೆ ಗಂಡಾಂತರವನ್ನು ಅಲಕ್ಷಿಸಿ ಅಲ್ಸಿಬಿಯಾಡೆಸ್ (Alcibiades) ನ ಜೀವವನ್ನುಳಿಸಿದ್ದ.

ಪುರಾತನ ಅವಶೇಷ ಶಿಲ್ಪದಲ್ಲಿರುವ ಸಾಕ್ರಟೀಸ್‌ನ ಎದೆವಿಗ್ರಹವನ್ನು ನೋಡಿದವರಾರೂ ಅವನು ಸುಂದರಪುರುಷನಾಗಿದ್ದನೆಂದು ಹೇಳಲಾರರು. ಬೊಕ್ಕತಲೇ ದುಂಡು ದೊಡ್ಡಮುಖ, ದುರುಗುಡುವ ಕಣ್ಣುಗಳು, ಅಗಲವಾಗಿ ಅರಳಿದ ಹೊಳ್ಳೆಗಳ ಮೂಗು ಇವುಗಳನ್ನು ತೋರಿಸುವ

ವಿಗ್ರಹವನ್ನು ನೋಡುವವರಿಗೆ ಅದು ಸ್ಯಾತರ್ ದೇವತೆಯ (Satyr) ಮನುಷ್ಯಾಕೃತಿಯ ವನದೇವತೆ) ವಿಗ್ರಹದಂತೆ ಕಂಡೀತೇ ವಿನಹ ಅತ್ಯಂತ ಪ್ರಸಿದ್ಧ ತತ್ವಜ್ಞಾನಿಗಳಲ್ಲಿ ಒಬ್ಬನೆಂದು ನಂಬುವುದು ಕಠಿಣವಾದೀತು. ಆದರೂ ಸೂಕ್ಷ್ಮವಾಗಿ ಪರಿಶೀಲಿಸಿದ್ದಾದಲ್ಲಿ ಒರಟು ಶಿಲೆಯಲ್ಲಿ ಅವರಿಗೆ ಈ ಸರಳ ವಿವೇಕಿಯನ್ನು ಅಥೆನ್ಸಿನ ಶ್ರೇಷ್ಠ ಯುವಕರ ಪ್ರೀತ್ಯಾದರಗಳಿಗೆ ಪಾತ್ರನನ್ನಾಗಿ ಮಾಡಿದ ಮಾನವೀಯ ಕರುಣೆ ಮತ್ತು ನಿರಾಡಂಬರದ ಸಾದಾತನ ಇವುಗಳ ಅರಿವಾಗದಿರದು.

ಅವನು ತನ್ನ ಆಯುಷ್ಯದ ಬಹುಕಾಲವನ್ನು ವಿಚಾರ ಮಾಡುವದರಲ್ಲಿ, ಮಾತನಾಡುವುದರಲ್ಲಿ, ಇತರರ ಮಾತುಗಳನ್ನು ಕೇಳುವುದರಲ್ಲಿ ಕಳೆದ. ಶ್ರಮ, ಚಳಲಿಕೆ ಇವುಗಳ ಅರಿವೇ ಅವನಿಗಿರಲಿಲ್ಲವೆಂದು ತೋರುತ್ತದೆ. ಒಂದು ಬೆಳಗ್ಗೆ ಒಂದು ಸ್ಥಳದಲ್ಲಿ ಯೋಚನೆ ಮಾಡುತ್ತ ನಿಂತವನು ಮರುದಿನ ಬೆಳಗಿನವರೆಗೂ ಹಾಗೆಯೇ ನಿಂತುಬಿಟ್ಟಿದ್ದ. ಎಲ್ಲ ಕಾಲದಲ್ಲಿಯೂ ಒಳವಸ್ತ್ರಗಳಿಲ್ಲದೆ ಮಾಸಿಹೋಗಿದ್ದ ಮುದುರಿದ ಒಂದೇ ಒಂದು ದೋತಿಯನ್ನು ಧರಿಸುತ್ತಿದ್ದ. ಸುತ್ತಲಿನ ರಾಜಕೀಯದ ಗಲಾಟೆಯ ಸೋಂಕಿಲ್ಲದೆ ಬರಿಗಾಲಲ್ಲಿಯೇ ನಿಬಿಡ ಸ್ಥಳಗಳಲ್ಲಿ ಅಲೆದಾಡುತ್ತ ಕಂಡವರನ್ನು ಅವರಿವರೆನ್ನದೆ ತಡೆದು ನಿಲ್ಲಿಸಿ ಚರ್ಚೆ, ಮಾತುಕತೆ ಪ್ರಾರಂಭಿಸುತ್ತಿದ್ದ. ಅವರಿಗೆ ತನ್ನೊಡನೆ ಚರ್ಚಿಸುವುದಕ್ಕೆ ಸಮಯ, ಇಚ್ಛೆಗಳು ಇವೆಯೇ, ಇಲ್ಲವೇ ಎನ್ನುವುದರ ಪರಿವೆ ಅವನಿಗಿರಲಿಲ್ಲ. ಏನೂ ಅರಿಯದವನಂತೆ ಪ್ರಶ್ನೆಗಳ ಸುರಿಮಳೆಯನ್ನೇ ಪ್ರಾರಂಭಿಸಿ ಅವರಿಂದ ಅವುಗಳಿಗೆ ಉತ್ತರಗಳನ್ನು ಬಯಸುತ್ತಿದ್ದ, ಉತ್ತರ ಬಾರದಿದ್ದಲ್ಲಿ ತಾನೇ ಅದನ್ನು ಹೇಳುತ್ತಿದ್ದ. ಪ್ರಶ್ನೆಗಳೇನೋ ಮೇಲಿನಿಂದ ಕೇಳುವುದಕ್ಕೆ ಸರಳವಾಗಿರುತ್ತಿದ್ದುವು. ಪ್ರಾರಂಭದಲ್ಲಿ ಪ್ರಶ್ನೆಗಳನ್ನು ಕೇಳಿದವರು 'ಇದೇನು ಮಹಾ' ಎಂದು ಉತ್ತರಗಳನ್ನು ಹೇಳಲು ಪ್ರಾರಂಭಿಸುತ್ತಿದ್ದರೂ ಮುಂದೆ ತಡವರಿಸಿ ನಿಲ್ಲುತ್ತಿದ್ದರು. ಇಷ್ಟಾಗಿ ಒಂದು ಪ್ರಶ್ನೆಗೆ ಉತ್ತರವಿತ್ತಿದ್ದಾದರೆ ಉತ್ತರದ ಮೇಲೆಯೇ ಮತ್ತೊಂದು ಪ್ರಶ್ನೆ ಏಳುತ್ತಿತ್ತು. ಮಾನವನ ಆತ್ಮದಲ್ಲಿ ಇಣುಕಿ ನೋಡುವದು, ಪ್ರಮಾಣವಿಲ್ಲದೆ ಅಂಗೀಕೃತವಾದ ವಿಚಾರಗಳನ್ನು ಬಯಲಿಗೆಳೆಯುವದು ಅವನ ಪ್ರಶ್ನೆಗಳ ಗುರಿಯಾಗಿತ್ತು. ದೃಢವಾಗಿ ತಳವೂರಿದ್ದ ನಂಬಿಕೆಗಳನ್ನು ಅವನು ಪ್ರಶ್ನಿಸುತ್ತಿದ್ದ. 'ನೀನು' ಅಂದರೇನು? ಸಾಮಾನ್ಯವಾಗಿ ಬಳಸಲಾಗುತ್ತಿರುವ ಗೌರವ, ಸೌಶೀಲ್ಯ, ನೀತಿನಿಯಮಗಳು, ದೇಶಭಕ್ತಿ ಮುಂತಾದ ದುರವಗಾಹ್ಯ ಪದಗಳ ಅರ್ಥವೇನು? ಜನರು ತಪ್ಪುಗಳನ್ನು ಮಾಡುವದೇತಕ್ಕೆ? ಮೊದಲಾದ ಅವನ ಪ್ರಶ್ನೆಗಳಿಗೆ ನಿಖರವಾದ ಉತ್ತರಗಳನ್ನು ಕೊಡುವದು ಯಾರಿಗೂ ಕಷ್ಟವಾಗುತ್ತಿತ್ತು. ಕರಾರುವಾಕ್ಕಾದ ನಿಷ್ಕೃಷ್ಟಾರ್ಥ, ಸ್ಪಷ್ಟವಿಚಾರ ಮತ್ತು ಸರಿಯಾದ ವಿಶ್ಲೇಷಣೆಗಳನ್ನು ಬಯಸುತ್ತಿದ್ದ ಸಾಕ್ರೆಟೀಸನ ಪ್ರಶ್ನೆಯ ವಿಧಾನಕ್ಕೆ ಬಲಿಯಾದವರಲ್ಲಿ ಅನೇಕರು ಅವನು ಹೇಳುವ ಉತ್ತರಗಳಿಗಿಂತಲೂ ಕೇಳುವ ಪ್ರಶ್ನೆಗಳೇ ಹೆಚ್ಚು (He asked more than he answered) ಮತ್ತು ಅವನ ಪ್ರಶ್ನೆಗಳ ಮೂಲಕ ಕೇಳುಗರ ಮನಸ್ಸು ಮೊದಲಿದ್ದುದಕ್ಕಿಂತ ಹೆಚ್ಚು ಗೊಂದಲಕ್ಕೀಡಾಗುವದು ಖಂಡಿತ ಎಂದು ಆಕ್ಷೇಪಿಸುತ್ತಿದ್ದರು.

ಸಾಕ್ರೆಟೀಸನನ್ನು ವಿವಿಧ ತೆರದ ಯುವಕ ಅನುಯಾಯಿಗಳು ಕೂಡಿಕೊಂಡರು. ಎಲ್ಲ ಬಗೆಯ ವಿಚಾರಗಳ ವ್ಯಕ್ತಿಗಳೂ ಅವರಲ್ಲಿ ಸೇರಿದ್ದರು. ಅವನ ಅಥೆನ್ಸಿನ ಪ್ರಜಾಪ್ರಭುತ್ವದ ವಿಡಂಬನಾತ್ಮಕ ವಿಶ್ಲೇಷಣೆಯನ್ನು ಮೆಚ್ಚಿಕೊಂಡ ಪ್ಲೇಟೋ ಮತ್ತು ಅಲ್ಸಿಬಿಯಾಡೆಸ್ ಮೊದಲಾದ ಶ್ರೀಮಂತ ತರುಣರಿದ್ದರು. ಬಡತನದ ಬಗೆಗೆ ಅಲಕ್ಷದಿಂದಿರುವುದನ್ನು ಮೆಚ್ಚಿಕೊಂಡ ಆ್ಯಂಟಿಸ್ಥೆನೆಸ್ ಮೊದಲಾದ ಸಮಾಜವಾದಿಗಳಿದ್ದರು (Socialists). ಒಡೆಯರು, ಗುಲಾಮರು ಎಂಬ ಭೇದಭಾವಗಳಿಲ್ಲದೆ ಎಲ್ಲರೂ ತಮ್ಮ ಗುರುವಿನಂತೆಯೇ ಜೀವನದ ಬಗೆಗೆ ನಿಶ್ಚಿಂತೆಯಿಂದಿರಬಹುದಾದ ಜಗತ್ತನ್ನು ಬಯಸುತ್ತಿದ್ದ ಅರಿಸ್ಟಿಪಸ್‌ನಂತಹ ಒಬ್ಬಿಬ್ಬರು ಅರಾಜಕತಾವಾದಿಗಳೂ ಇದ್ದರು ಇಂದು ಸಮಾಜವನ್ನು ಕಾಡುತ್ತಿರುವ ಯುವಕ ಚರ್ಚೆಗೆ ಆಸ್ಪದವೀಯುತ್ತಿರುವ

ಪ್ರಶ್ನೆಗಳೇ ಈ ಗುಂಪನ್ನೂ ಕಾಡುತ್ತಿದ್ದವು ಸಾಕ್ರೆಟೀಸನ ಅನುಯಾಯಿಗಳ ತಂಡ ಅವನಂತೆಯೇ ಸಂವಾದ ಸಂಭಾಷಣೆಗಳಿಲ್ಲದ ಜೀವನ ಮಾನವನ ಯೋಗ್ಯತೆಗೆ ತಕ್ಕುದಲ್ಲವೆಂಬ ಮತವನ್ನು ಹೊಂದಿದ್ದಿತು. ಝೆನೋಫೋನ್ ಮತ್ತು ಪ್ಲೇಟೋ ಅವನ ಪ್ರಮುಖ ಅನುಯಾಯಿಗಳಾಗಿದ್ದರು.

ಸಾಕ್ರಟೀಸ್ ಹೇಗೆ ಜೀವನ ಸಾಗಿಸುತ್ತಿದ್ದನೆನ್ನುವದು ಅಚ್ಚರಿಯನ್ನುಂಟುಮಾಡುತ್ತಿದ್ದಿತು. ಅವನಿಗೆ ಯಾವ ಉದ್ಯೋಗವೂ ಇರಲಿಲ್ಲ. ನಾಳಿನ ಚಿಂತೆ ಅವನಿಂದ ದೂರವಿದ್ದಿತು ಹೀಗಿದ್ದಾಗ ಅವನ ಒರಟು ಸ್ವಭಾವದ ಮತ್ತು ಅವನಷ್ಟೇ ಮಾತುಗಾರಳಾಗಿದ್ದ ಪತ್ನಿ ಝಾಂತಿಪೆ ಅವನನ್ನು ಮನೆಗೆ ಅನ್ನ ವಸ್ತ್ರಗಳಿಗಿಂತಲೂ ಹೆಚ್ಚಾಗಿ ಕುಪ್ರಸಿದ್ಧಿಯನ್ನೊದಗಿಸುತ್ತಿದ್ದ ನಿಷ್ಪ್ರಯೋಜಕನೆಂದು ಎಣಿಸಿದ್ದರೆ ಯಾರೂ ಆಶ್ಚರ್ಯಪಡಬೇಕಾಗಿಲ್ಲ. ಅವನ ಅಲಕ್ಷ ವರ್ತನೆಯಿಂದ ಕ್ಷೋಭೆಗೊಂಡ ಅವಳು ಒಂದು ಸಲ ಗುಡುಗಿ ಒಂದು ಬಕೀಟು ನೀರಿನಿಂದ ಅವನಿಗೆ ಅಭಿಷೇಕ ಮಾಡಿದ್ದಳು. ಆ ಸಮಯಕ್ಕೆ ಅವನು ಇಷ್ಟೆಲ್ಲ ಗುಡುಗು ಮಿಂಚುಗಳಾದ ಬಳಿಕ ಮಳೆಯಾಗಬೇಕಿದ್ದುದು ಸ್ವಾಭಾವಿಕ ಎಂಬ ತತ್ವಜ್ಞಾನಿಯ ಮಾತುಗಳನ್ನು ಆಡಿದ್ದ. ಆದರೂ ಅವಳಿಗೆ ಅವನ ಬಗೆಗೆ ಪ್ರೇಮವಿತ್ತು. ಅವನು ಮರಣಹೊಂದಿದಾಗ ಅವಳು ಪತಿಗಳನ್ನು ಕಳೆದುಕೊಂಡ ಎಲ್ಲ ಪತ್ನಿಯರು ಅನುಭವಿಸುವ ದುಃಖವನ್ನು ಅನುಭವಿಸಿದ್ದಳು. ಬಹುಶಃ ಅವನ ಅನುಯಾಯಿಗಳು ಅವನ ಶಾರೀರಿಕ ಅವಶ್ಯಕತೆಗಳನ್ನು ಒದಗಿಸುತ್ತಿದ್ದಿರಬೇಕು. ಅವನ ಸಬಲವಾಗಿದ್ದ ಶರೀರವೇ ಇದಕ್ಕೆ ಸಾಕ್ಷಿ. ಅವನು ಬುದ್ಧಿವಂತನಾಗಿದ್ದಷ್ಟೇ ಒಳ್ಳೆಯ ಮನುಷ್ಯನೂ ಆಗಿದ್ದ. ಸೌಜನ್ಯದ ಮೂರ್ತಿಯಾಗಿದ್ದ ಅವನಿಗೆ ತನ್ನ ಅಧಿಕ ಜ್ಞಾನದ ಬಗೆಗೆ ಎಳ್ಳಷ್ಟೂ ಹೆಮ್ಮೆಯಿರಲಿಲ್ಲ 'ಒಂದು ಮಾತನ್ನು ನಾನು ತಿಳಿದಿದ್ದೇನೆ. ಅದೆಂದರೆ ನಾನು ಏನನ್ನೂ ತಿಳಿದಿಲ್ಲ ಎನ್ನುವದು' ಎಂದು ಅವನು ಹೇಳುತ್ತಿದ್ದ. ಅವನ ವರ್ತನೆ ಜ್ಞಾನವನ್ನು ಬಯಸಿ ಅದನ್ನು ಅರಸುವವನದಾಗಿತ್ತು. ಅವನು ಬಯಸುತ್ತಿದ್ದ ಜ್ಞಾನ ವಿಶಿಷ್ಟ ಬಗೆಯುದಾಗಿತ್ತು. ಜನರು ಯಾವ ಸಿದ್ಧಾಂತವನ್ನೇ ಆಗಲಿ, ಯಾವ ವಿಷಯವನ್ನೇ ಆಗಲಿ ಕುರುಡು ನಂಬಿಕೆಯಿಂದ ಒಪ್ಪಿಕೊಂಡು ಸ್ವೀಕರಿಸಲಾಗದು ಎಂಬುದು ಅವನ ತರ್ಕ. ಮಾನವ ವಿಚಾರ ಶಕ್ತಿಯುಳ್ಳ ಪ್ರಾಣಿ. ವಿವೇಚನೆಯಿಲ್ಲದೆ ಹಾದಪ್ಪಗಳಂತೆ ಎಲ್ಲವನ್ನೂ ಒಪ್ಪಿಕೊಳ್ಳುವುದಾದಲ್ಲಿ ಮಾನವನಿಗೂ ಪಶುವಿಗೂ ಅಂತರವೆಲ್ಲಿಯದು? ಮನುಷ್ಯ ಶಂಕಿಸುವದನ್ನು ವಿಶೇಷವಾಗಿ ತಾನು ನೆಮ್ಮಿಕೊಂಡಿದ್ದ ನಂಬಿಕೆಗಳನ್ನು (cherished beliefs), ಸಿದ್ಧಾಂತಗಳನ್ನು (dogmas) ಸಿದ್ಧನಿಯಮಗಳನ್ನು (axioms–ಆಧಾರಸೂತ್ರ ?), ಶಂಕಿಸುವದನ್ನು ಕಲಿತಾಗ ತತ್ವಜ್ಞಾನದ ಪ್ರಾರಂಭವಾಗುತ್ತದೆ. ಮನಸ್ಸು ಹಿಂತಿರುಗಿ ತನ್ನನ್ನೇ ಪರಿಶೀಲಿಸುವ ತನಕ ನಿಜವಾದ ತತ್ವಜ್ಞಾನವಿರುವುದಿಲ್ಲ. (There is no real philosophy until the mind turns round and examines itself). ಆದ್ದರಿಂದ 'ಮೊದಲು ನಿನ್ನನ್ನು ಅರಿತುಕೋ' ಎಂದು ಅವನು ಉಪದೇಶಿಸಿದ. ಅವನ ಹಿಂದೆ ತತ್ವಜ್ಞಾನಿಗಳಾಗಿದ್ದ ಥೇಲ್ಸ್ (Thales), ಹೆರಕ್ಲಿಟಸ್ (Heraclitus) ಮೊದಲಾದ ಬಲಿಷ್ಠರು, ಪರ್ಮೆನೈಡ್ಸ್ ಮತ್ತು ಝೀನೊ (Parmenides and Zeno) ಮೊದಲಾದ ಸೂಕ್ಷ್ಮ ವ್ಯಕ್ತಿಗಳು, ಪೈತಾಗೋರಸ್ ಮತ್ತು ಎಂಪೆಡಾಕಲ್ಸ್ (Empedocles) ಮೊದಲಾದ ದಿವ್ಯಜ್ಞಾನಿಗಳು ಆಗಿ ಹೋಗಿದ್ದರು. ಆದರೆ ಅವರು ಬಹುಮಟ್ಟಿಗೆ ಭೌತ ವಿಚಾರವಾದಿಗಳು (Physical philosophists). ಭೌತಿಕ ವಿಷಯಗಳ ಸಂಬಂಧದಲ್ಲಿ ಸತ್ಯಾನ್ವೇಷಕರು. ಆದರೆ ಸಾಕ್ರೆಟೀಸನ ವಿಚಾರ ಲಹರಿ ಮರ, ಕಲ್ಲು, ಮಣ್ಣು, ಇಲ್ಲವೇ ನಕ್ಷತ್ರ ಮೊದಲಾದವುಗಳಿಗಿಂತಲೂ ತತ್ವಜ್ಞಾನಿಗಳಿಗೆ ಹೆಚ್ಚು ತಕ್ಕುದಾದ ಮಾನವ ಮತ್ತು ಅವನ ಮನಸ್ಸು ಇವುಗಳ ಕಡೆಗೆ ಹರಿಯುತ್ತಿತ್ತು.

ಪ್ರಪಂಚದ ಬಗೆಗೆ ಊಹಾಪೋಹಗಳಿಗಿಂತ ಆತ್ಮಜ್ಞಾನ ಹೆಚ್ಚು ಮಹತ್ವವಾದದ್ದು. ಆತ್ಮಕ್ಕೆ ನಾಶವಿಲ್ಲ. ಸತ್ಯ (ಅಥವಾ ಜ್ಞಾನ) ಮತ್ತು ಸಾಶೀಲ್ಯಗಳ ನಡುವೆ ಬಿಡಿಸಲಾಗದ ಸಂಬಂಧವಿದೆ. ಅಜ್ಞಾನವೇ ದುರಾಚಾರದ ಮೂಲ ಎಂದು ಮುಂತಾಗಿ ಅವನು ಹೇಳಿದ.

ಸಾಕ್ರಟೀಸ್ ಅಧಿಕಾರದ ಸ್ಥಾನವನ್ನೆಂದಿಗೂ ಬಯಸಲಿಲ್ಲವಾದರೂ ಒಳ್ಳೆ ನಾಗರಿಕನು ಸಾರ್ವಜನಿಕ ಕರ್ತವ್ಯವನ್ನು ಅನಾದರಿಸಲಾಗದು ಎಂಬ ಮತದವನಾಗಿದ್ದ. 406ರಲ್ಲಿ ಐನೂರು ಸದಸ್ಯರ ಸಭೆಯ (Council of Fivehundred) ಸದಸ್ಯನಾದ. ಅದೇ ವರ್ಷ ಅರ್ಗಿನುಸೀಯ (Arginusea) ವಿಜಯೀ ಸೇನಾಧಿಕಾರಿಗಳ ಮೇಲೆ ಅಥೆನ್ಸಿನ ಮುಳುಗುತ್ತಿದ್ದ ಹಡಗುಗಳಿಂದ ನಾವಿಕರನ್ನು ರಕ್ಷಿಸಲಿಲ್ಲವೆಂಬ ಅಪಾದನೆ ಹೊರಿಸಿ ವಿಚಾರಣೆ ನಡೆಯಿತು. ಅವರೆಲ್ಲರನ್ನೂ ಸಾಮೂಹಿಕವಾಗಿ ಖಂಡಿಸಬೇಕೆಂಬ ನ್ಯಾಯ ವಿರುದ್ಧವಾದ ನಿರ್ಣಯವನ್ನು ಅವನು ವಿರೋಧಿಸಿದ. 404ರಲ್ಲಿ ಲಿಯೋ ಎಂಬ ರಾಜಕೀಯ ವ್ಯಕ್ತಿಯನ್ನು ದಸ್ತಗಿರಿ ಮಾಡುವುದಕ್ಕೆ ಮೂವತ್ತು ಸರ್ವಾಧಿಕಾರಿಗಳು (Thirty Tyrants) ಮಾಡಿದ ಆಜ್ಞೆಯನ್ನು ಅದು ಕಾಯಿದೆ ವಿರುದ್ಧವೆಂದು ಅವನಿಗೆ ಅನಿಸಿದ್ದರಿಂದ ಕಾರ್ಯಾಚರಣೆಗೆ ತರಲು ನಿರಾಕರಿಸಿದ. ಅವನ ಈ ವರ್ತನೆ ಅವನ ಮೃತ್ಯುವಿಗೆ ಕಾರಣವಾಗಬಹುದಿತ್ತು. ಆದರೆ 403ರಲ್ಲಿ ಸರ್ವಾಧಿಕಾರಿಗಳ ಉಚ್ಚಾಟನೆಯಾಯಿತಾದ್ದರಿಂದ ಅವನು ಉಳಿದುಕೊಂಡ. ಹೀಗೆ ಅವನು ತಾನು ನ್ಯಾಯ ಪಕ್ಷಪಾತಿಯಾಗಿದ್ದುದನ್ನು ತೋರಿಸಿಕೊಂಡ.

ಸಾಕ್ರಟೀಸ್ ಗ್ರೀಕರ ಪುರಾತನ ದೇವರುಗಳನ್ನು ನಂಬಲಿಲ್ಲ. ಅವನು ಭಕ್ತಿಯುಕ್ತನೂ ದೇವಭೀರುವೂ ಆಗಿದ್ದರೂ ಅವನ ಧಾರ್ಮಿಕ ವಿಚಾರಗಳು ಸಂಪ್ರದಾಯ ವಿರುದ್ಧವಾಗಿದ್ದುವು. ಅವನು ತನ್ನ ಪ್ರಶ್ನೆಗಳ ಮೂಲಕ ತಾವು ಎಲ್ಲವನ್ನೂ ತಿಳಿದವರು ಎಂದು ಹೆಮ್ಮೆಪಡುತ್ತಿದ್ದವರ ಅಜ್ಞಾನವನ್ನು ಬಯಲಿಗೆಳೆದ. ಇದರಿಂದ ಅವನು ಆ ಕಾಲದ ಸೋಫಿಸ್ಟರ (ಜ್ಞಾನಿಗಳು) ಕೋಪಕ್ಕೆ ತುತ್ತಾದ. ಪುರಾತನ ಕಾಲದಿಂದ ಜನ ಒಪ್ಪಿಕೊಂಡಿದ್ದ ಧಾರ್ಮಿಕ ತತ್ವಗಳನ್ನು, ದೇವರುಗಳನ್ನು, ನೀತಿ ನಡೆವಳಿಕೆಗಳನ್ನು ಪ್ರಶ್ನಿಸಿದ್ದರಿಂದ ಅವನಿಗೆ ಅನೇಕ ವಿರೋಧಿಗಳು ಉಂಟಾದರು. ಪ್ರಜಾಪ್ರಭುತ್ವದ ಅನೇಕ ಕುಂದುಕೊರತೆಗಳನ್ನು ಅವನು ಎತ್ತಿ ತೋರಿಸಿದ್ದೂ ಅವನನ್ನು ದ್ವೇಷಿಸುತ್ತಿದ್ದವರ ಸಂಖ್ಯೆ ಹೆಚ್ಚುವುದಕ್ಕೆ ಕಾರಣವಾಯಿತು. ಕ್ರಿ. ಪೂ. 5ನೇ ಶತಮಾನದ ಅಂತ್ಯದೊಳಗೆ ಅವನು ಗಮನಾರ್ಹನಾದ ಪ್ರಭಾವೀ ಬೋಧಕನೆಂದು ಹೆಸರುವಾಸಿಯಾಗಿದ್ದ. ಪ್ರಜಾಪ್ರಭುತ್ವದ ಮುಖ್ಯ ಕುಂದೆಂದರೆ ಅದರ ನಾಯಕರಲ್ಲಿ ಯಾವದೇ ಬಗೆಯ ವಿಶಿಷ್ಟ ಜ್ಞಾನವಿದೆ ಎಂಬುದರ ಪುರಾವೆಯ ಅಗತ್ಯವಿಲ್ಲದಿರುವದು. ಪ್ರಜಾಪ್ರಭುತ್ವ ಪ್ರಜೆಗಳ ಆಗುಹೋಗುಗಳನ್ನು ಅವಳಿತದ ಬಗೆಗೆ ಸಾಕಷ್ಟು ಅನುಭವವಿಲ್ಲದವರ ಕೈಯಲ್ಲಿ ಕೊಡುತ್ತದೆ ಮತ್ತು ಒಂದು ಕಾರ್ಯನೀತಿಯ ನೀತಿಕತೆ ಇಲ್ಲವೇ ನ್ಯಾಯದ ಪ್ರಶ್ನೆ ಬಂದಾಗ ಅವರಿವರೆನ್ನದೆ ಎಲ್ಲರ ಮತಗಳನ್ನೂ ಯೋಗ್ಯತೆಯಲ್ಲಿ ಸಮವೆಂದು ಎಣಿಸುತ್ತದೆ ಎಂಬ ಅವನ ಕ್ರಾಂತಿಕಾರೀ ವಿಚಾರಗಳು ಹೊಸತಾಗಿ ಅಧಿಕಾರಕ್ಕೆ ಬಂದಿದ್ದ ಪ್ರಜಾಪ್ರಭುತ್ವವಾದಿಗಳಿಗೆ ದಿಗಿಲನ್ನುಂಟು ಮಾಡಿದುವು. ಹೀಗಾಗಿ ಅಧಾರ್ಮಿಕತೆ (impiety) ಮತ್ತು ಅಥೆನ್ಸಿನ ಯುವಕರ ಮನಸ್ಸಿನಲ್ಲಿ ಸಲ್ಲದ ವಿಚಾರಗಳನ್ನು ತುಂಬಿದ ಎಂಬ ಅಪಾದನೆಗಳ ಮೇಲೆ ಅವನ ವಿಚಾರಣೆ ಪ್ರಾರಂಭವಾದಾಗ ಅವನ ನಿರ್ಮೂಲನವನ್ನು ಬಯಸುತ್ತಿದ್ದ ನೂರುಗಟ್ಟಲೆ ವ್ಯಕ್ತಿಗಳು ಅಥೆನ್ಸಿನಲ್ಲಿ ಬೇರೆ ಬೇರೆ ಹುದ್ದೆಗಳಲ್ಲಿದ್ದರು.

ಸಾಕ್ರೆಟೀಸ್ ಸ್ವತಂತ್ರ ವಿಚಾರದ ಹಕ್ಕು ಮತ್ತು ಅವಶ್ಯಕತೆಗಳನ್ನು ಪ್ರತಿಪಾದಿಸಿದ. ಅಲ್ಪ ಬಹುಮತದಿಂದ ಅವನು ಅಪರಾಧಿಯೆಂದು ತೀರ್ಮಾನವಾಯಿತು. ಆದರೆ ತೀರ್ಪಿನ ನಂತರದ ಅನನ ವರ್ತನೆ ನ್ಯಾಯಾಧೀಶರನ್ನು ರೋಷಗೊಳಿಸಿ ಅವರು ಮರಣದಂಡನೆ ವಿಧಿಸು

ವಂತೆ ಮಾಡಿತು. ಸಾಕ್ರಟೀಸ್ ಸಮಾಧಾನದಿಂದಲೇ 'ನಾವು ಅಗಲುವ ಸಮಯ ಬಂದಿದೆ. ನನಗೆ ಸಾಯಲು ಸಮಯ, ನಿಮಗೆ ಬದುಕಲು ಸಮಯ. ಆದರೆ ನಮ್ಮಲ್ಲಿ ಇನ್ನೂ ಉತ್ತಮ ಸ್ಥಿತಿಗೆ ಯಾರು ಹೋಗುತ್ತೇವೆ ಎನ್ನುವುದು ದೇವರಿಗೆ ಗೋಚರ' ಎಂದು ಹೇಳಿದ. ಅವನ ಮರಣದಂಡನೆಯನ್ನು ಡೆಲಿಯನ್ ಉತ್ಸವದ ಮೂಲಕ ಮೂವತ್ತು ದಿನಗಳವರೆಗೆ ಮುಂದೂಡ ಲಾಯಿತು. ಈ ಅವಧಿಯಲ್ಲಿ ಅವನ ಶಿಷ್ಯರಲ್ಲೊಬ್ಬನಾದ ಕ್ರಿಟೋ ಅವನು ಕಾರಾಗೃಹದಿಂದ ತಪ್ಪಿಸಿಕೊಂಡು ಹೋಗಲು ತಾನು ಏರ್ಪಾಡು ಮಾಡಿರುವುದಾಗಿ ಸೂಚನೆಯಿತ್ತ. ಆದರೆ ಸಾಕ್ರಟೀಸ್ ಅದಕ್ಕೊಪ್ಪದಾದ. ಅವನಿಗೀಗ ಎಪ್ಪತ್ತು ವರ್ಷಗಳು ತುಂಬಿದ್ದುವು. ಬಹುಶಃ ಅವನು ಸಾಯಲು ತಕ್ಕ ಸಮಯವೊದಗಿಬಂದಿದೆಯೆಂದೂ ಮುಂದೆಂದೂ ಅಷ್ಟು ಪ್ರಯೋಜನ ಕಾರಿಯಾದ ಮರಣ ತನಗೆ ಒದಗಲಾರದೆಂದೂ ನಂಬಿದ್ದ. ದುಃಖಿತರಾಗಿದ್ದ ತನ್ನ ಅನುಯಾಯಿ ಗಳಿಗೆ ಅವನು 'ದುಃಖಿಸದೆ ಉಲ್ಲಾಸದಿಂದಿರಿ. ನೀವು ನನ್ನ ನಶ್ವರವಾದ ಶರೀರವನ್ನಷ್ಟೇ ಹೂಳುತ್ತೀವೆ ಎಂಬುದನ್ನು ನೆನಪಿನಲ್ಲಿಡಿ' ಎಂದು ಧೈರ್ಯವಿತ್ತ.

ಕ್ರಿ. ಪೂ. 399ರ ವಸಂತದಲ್ಲಿ ಒಂದು ದಿನ ಸಾಕ್ರಟೀಸನಿಗೆ ಹೆಮ್‌ಲಾಕ್ ವಿಷವಿದ್ದ ಬಟ್ಟಲನ್ನು ಕುಡಿಯಲು ಕೊಡಲಾಯಿತು. ಅದಕ್ಕೂ ಮುಂಚಿತವಾಗಿ ಸೆರೆಮನೆಯ ಅಧಿಕಾರಿ ಸಾಕ್ರಟೀಸನಲ್ಲಿಗೆ ಬಂದು 'ಅಧಿಕಾರಿಗಳ ಅಜ್ಞೆಯನುಸಾರ ನಾನು ಇತರರಿಗೆ ವಿಷದ ಬಟ್ಟಲನ್ನು ಕೊಡಲು ಹೋಗುವಾಗ ರೋಷದಿಂದ ನನ್ನನ್ನು ಬಯ್ಯುವ ಅವರಿಗೆ ನನ್ನ ಬಗೆಗೆ ಇರುವ ಸಿಟ್ಟಿನ ಭಾವನೆಗಳು (angry feelings) ಇದುವರೆಗೆ ಇಲ್ಲಿಗೆ ಬಂದವರಲ್ಲಿ ಅತ್ಯಂತ ಉದಾ ರಿಯೂ, ಸಾಧುವೂ ಉತ್ತಮನೂ ಆಗಿರುವ ನಿನ್ನಲ್ಲಿ ಇವೆಯೆಂದು ನಾನು ಅಪಾದಿಸಲಾರೆ. ನಿನಗೆ ನನ್ನ ಮೇಲೆ ಸ್ವಲ್ಪವೂ ಸಿಟ್ಟಿಲ್ಲವೆಂದು ನನಗೆ ನಂಬಿಕೆಯಿದೆ. ಏಕೆಂದರೆ ದೋಷ ಇತರರದೇ ವಿನಹ ನನ್ನದಲ್ಲವೆಂದು ನೀನು ಅರಿತಿರುವೆ. ನಿನಗೆ ಶುಭವಾಗಲಿ. ಏನಾಗಬೇಕಿದೆಯೋ ಅದನ್ನು ಹಸುರವಾಗಿ ಸಹಿಸಿಕೊಳ್ಳಲು ಯತ್ನಿಸು. ನಿನಗೆ ನನ್ನ ಉದ್ದೇಶದ ಅರಿವಿದೆಯಷ್ಟೆ ?' ಎಂದು ಹೇಳಿ ಕಣ್ಣೀರು ಸುರಿಸುತ್ತ ಮುಖ ತಿರುಗಿಸಿಕೊಂಡು ಹೊರಟುಹೋದ. ಸಾಕ್ರಟೀಸ್ ಅವನತ್ತ ನೋಡಿ 'ನಿನಗೂ ನಾನು ಶುಭವನ್ನು ಕೋರುತ್ತೇನೆ. ಮತ್ತು ನೀನು ಹೇಳಿದಂತೆಯೇ ಮಾಡುವೆ' ಎಂದು ನುಡಿದು ತನ್ನ ಶಿಷ್ಯರಿಗೆ 'ಎಷ್ಟು ಒಳ್ಳೆಯ ಮನುಷ್ಯನೀತ ! ನಾನು ಸೆರೆ ಮನೆಗೆ ಬಂದಾಗಿನಿಂದ ನನ್ನನ್ನು ನೋಡಲು ಬರುತ್ತಿದ್ದಾನೆ. ಈಗ ಕೊನೆಗಾಲದಲ್ಲಿ ನನಗಾಗಿ ದುಃಖಿಸುತ್ತಿದ್ದಾನೆ. ನಾವು ಅವನು ಹೇಳಿದಂತೆಯೇ ನಡೆಯಬೇಕು. ಕ್ರಿಟೋ, ವಿಷವು ತಯಾರಿದ್ದರೆ ಬಟ್ಟಲು ಬರಲಿ. ಇಲ್ಲವಾದಲ್ಲಿ ಅದನ್ನು ಸೇವಕನು ತಯಾರಿಸಲಿ' ಎಂದು ಕೇಳಿಕೊಂಡ. ಅದಕ್ಕೆ ಕ್ರಿಟೋ 'ಇನ್ನೂ ಸೂರ್ಯಾಸ್ತವಾಗಿಲ್ಲ. ಅನೇಕರು ವಿಷವನ್ನು ತಡವಾಗಿ ಸೇವಿಸುವುದಕ್ಕಿಂತ ಮುಂಚೆ ತಿನ್ನುವುದು, ಕುಡಿಯುವುದು ಮೊದಲಾದ ದೈಹಿಕ ಸುಖ ಗಳನ್ನು ಅನುಭವಿಸಿದ್ದಾರೆ. ಆದ್ದರಿಂದ, ಅವಸರ ಬೇಡ, ಇನ್ನೂ ಸಮಯವಿದೆ' ಎಂದು ಉತ್ತರ ವಿತ್ತ. ಅದನ್ನು ಕೇಳಿದ ಸಾಕ್ರಟೀಸ್ 'ಹೌದು, ಕ್ರಿಟೋ ಅವರು ಹಾಗೆ ಮಾಡುವುದು ಸರಿ. ಯಾಕೆಂದರೆ ತಡಮಾಡುವುದರಿಂದ ತಮಗೆ ಪ್ರಯೋಜನವಿದೆಯೆಂದು ಅವರು ತಿಳಿಯುತ್ತಾರೆ. ಆದರೆ ಸ್ವಲ್ಪ ತಡಮಾಡಿ ವಿಷವನ್ನು ಸೇವಿಸುವುದರಿಂದ ಸ್ವಲ್ಪವಾದರೂ ಪ್ರಯೋಜನವಾದೀತೆಂದು ನನಗನ್ನಿಸುವುದಿಲ್ಲ.... ಆದ್ದರಿಂದ ದಯವಿಟ್ಟು ನಾನು ಹೇಳಿದಂತೆ ಮಾಡು. ನಿರಾಕರಿಸಬೇಡ' ಎಂದು ಮತ್ತೆ ಕೇಳಿಕೊಂಡ. ಆಗ ಕ್ರಿಟೋ ಸೇವಕನಿಗೆ ಸಂಜ್ಞೆ ಮಾಡಲು ಅವನು ಹೋಗಿ ವಿಷದ ಬಟ್ಟಲನ್ನು ಹಿಡಿದಿದ್ದ ಸೆರೆಮನೆಯ ಅಧಿಕಾರಿಯೊಂದಿಗೆ ಹಿಂತಿರುಗಿದ. ಸಾಕ್ರಟೀಸ್ ಅವನನ್ನು, 'ಮಿತ್ರಾ, ಈ ವಿಷಯಗಳಲ್ಲಿ ಅನುಭವವಿರುವ ನೀನು ನಾನು ಏನೆಲ್ಲ ಮಾಡಬೇಕೆಂಬು ದನ್ನು ತಿಳಿಸಬೇಕು' ಎಂದು ಬಿನ್ನವಿಸಿಕೊಂಡಾಗ ಅವನು ವಿಷವನ್ನು ಕುಡಿದ ಬಳಿಕ ಕಾಲುಗಳು

ಭಾರವಾಗುವ ತನಕ ಅಡ್ಡಾಡು. ಅನಂತರ ಅಡ್ಡಾಗು. ವಿಷವು ತನ್ನ ಕೆಲಸವನ್ನು ಮಾಡುತ್ತದೆ' ಎಂದು ಸಲಹೆ ನೀಡಿದ. ಮತ್ತು ವಿಷದ ಬಟ್ಟಲನ್ನು ಅವನ ಮುಂದೆ ಹಿಡಿದ. ಸಾಕ್ರಟೀಸ ಸ್ವಲ್ಪವೂ ಕ್ಷೋಭೆಗೊಳ್ಳದೆ ಧೈರ್ಯದಿಂದ ಅದನ್ನೆತ್ತಿಕೊಂಡು ಅಧಿಕಾರಿಗೆ 'ಇದರೊಳಗಿಂದ ನಾನು ಯಾವುದಾದರೂ ದೇವರಿಗೆ ತರ್ಪಣ ಕೊಡಬಹುದೇ ?' ಎಂದು ಕೇಳಿದಾಗ ಅವನಿಂದ 'ನಾವು ಎಷ್ಟು ಅವಶ್ಯವಿದೆಯೋ ಅಷ್ಟನ್ನೇ ತಯಾರಿಸುತ್ತೇವೆ' ಎಂಬ ಉತ್ತರ ಬಂದಿತು. ಆಗ ಸಾಕ್ರಟೀಸ್ 'ನನಗೆ ಅರ್ಥವಾಯಿತು. ಆದರೂ ಈ ಜಗತ್ತಿನಿಂದ ಇನ್ನೊಂದಕ್ಕೆ ನನ್ನ ಪ್ರಯಾಣ ಸುಖಪ್ರದವಾಗಲೆಂದು ನಾನು ದೇವರುಗಳಿಗೆ ಪ್ರಾರ್ಥಿಸಲೇ ಬೇಕು. ನನ್ನ ಈ ಪ್ರಾರ್ಥನೆ ಈಡೇರಲಿ' ಎಂದು ನುಡಿದವನೇ ಉಲ್ಲಾಸದಿಂದಲೇ ಬಟ್ಟಲನ್ನು ಬರಿದು ಮಾಡಿದ. ಇದನ್ನು ನೋಡಿದವರು ಅಳತೊಡಗಿದರು. ಅದನ್ನು ಕೇಳಿದ ಸಾಕ್ರಟೀಸ್ 'ಇದೆಂತಹ ವಿಚಿತ್ರ ಗದ್ದಲ ! ಇದು ನಡೆಯಬಾರದೆಂದೇ ನಾನು ಹೆಂಗಸರನ್ನು ಹೊರಗೆ ಅಟ್ಟಿದೆ. ಏಕೆಂದರೆ ಮನುಷ್ಯ ಶಾಂತತೆಯಲ್ಲಿ ಸಾಯಬೇಕೆಂದು ಕೇಳಿದ್ದೇನೆ. ಅದ್ದರಿಂದ ಸುಮ್ಮನಾಗಿರಿ ಸ್ವಲ್ಪ ಸಮಾಧಾನ ಮಾಡಿಕೊಳ್ಳಿ' ಎಂದು ಗದರಿಸಿದ. ಆಗ ಅವರು ಸುಮ್ಮನಾಗಲು ತಾನು ಅಡ್ಡಾಡತೊಡಗಿದ. ಕಾಲುಗಳು ಶಕ್ತಿಗುಂದಿದ ಬಳಿಕ ಅಂಗಾತ ಮಲಗಿದ. ಸೇವಕನು ಅವನ ಕಾಲುಗಳನ್ನು ಒತ್ತಿ ಅದರ ಅರಿವಾಗುತ್ತಿದೆಯೋ ಎಂದು ಕೇಳಿದಾಗ ಇಲ್ಲವೆಂಬ ಉತ್ತರ ಅವನಿಂದ ಬಂದಿತು. ಸ್ವಲ್ಪ ಸಮಯದ ನಂತರ ಸಾಕ್ರಟೀಸ್ ತನ್ನ ಮೈಯನ್ನು ಮುಟ್ಟಿನೋಡಿಕೊಂಡು 'ವಿಷ ಹೃದಯವನ್ನು ತಲುಪಿದಾಗ ಎಲ್ಲವೂ ಮುಗಿಯುತ್ತದೆ' ಎಂದು ಉಸುರಿದ. ಈಗಾಗಲೇ ಅವನ ಶರೀರ ತಣ್ಣಗಾಗತೊಡಗಿತ್ತು. ಕೊನೆಗೆ ಅವನು ತನ್ನ ಮುಸುಕನ್ನು ತೆಗೆದು ಕ್ರಿಟೋನಿಗೆ 'ಕ್ರಿಟೋ, ನಾನ ಅಸ್ಕ್ಲೆಪಿಯಸ್ (Asclepias)ನಿಗೆ ಒಂದು ಕೋಳಿಯನ್ನು ಕೊಡಬೇಕಾಗಿದೆ. ನನ್ನ ಋಣವನ್ನು ತೀರಿಸುತ್ತೀಯಾ' ಎಂದು ಕೇಳಿದ್ದಕ್ಕೆ ಅವನು ಒಪ್ಪಿಕೊಂಡು 'ಇನ್ನೇನಾದರೂ ಇದೆಯೇ' ಎಂದು ಪ್ರಶ್ನಿಸಿದಾಗ ಯಾವ ಉತ್ತರವೂ ಬರಲಿಲ್ಲ. ಒಂದೆರಡು ನಿಮಿಷಗಳ ನಂತರ ಅವನ ಶರೀರ ಅಲುಗಾಡಿದಂತಾಯಿತು. ಆಗ ಸೇವಕ ಮುಸುಕನ್ನು ತೆಗೆದ. ಸಾಕ್ರಟೀಸನ ದೃಷ್ಟಿ ನೆಟ್ಟಿತ್ತು. ಕ್ರಿಟೋ ಅವನ ಕಣ್ಣು ಬಾಯಿಗಳನ್ನು ಮುಚ್ಚಿಸಿದ.

ವಳವಾಡದ ಶಿಲಾಹಾರ ಗಂಡರಾದಿತ್ಯನ ಶಾಸನ

ಈ ಶಾಸನದ ಕಲ್ಲು ಈಗ ಕೊಲ್ಲಾಪುರದ ನಗರ ವಸ್ತುಸಂಗ್ರಹಾಲಯದಲ್ಲಿದೆ. ಮೂಲತಃ ಈ ಶಾಸನವು ಕೊಲ್ಲಾಪುರದ ಸಮೀಪದಲ್ಲಿರುವ ವಳವಡ ಗ್ರಾಮದಲ್ಲಿದ್ದು ಅಲ್ಲಿಂದ ಅದನ್ನು ನಗರ ವಸ್ತುಸಂಗ್ರಹಾಲಯಕ್ಕೆ ಸಾಗಿಸಿರುವಂತೆ ಕಂಡುಬರುತ್ತದೆ. ಪ್ರಸ್ತುತ ಶಾಸನವನ್ನು ಡಾ. ಬಾ.ರಾ. ಗೋಪಾಲ್‌ರವರು ಧಾರವಾಡದಲ್ಲಿದ್ದಾಗ, 1964–65ನೆಯ ವರ್ಷದಲ್ಲಿ, ಕೊಲ್ಲಾಪುರದಲ್ಲಿ ಪ್ರತಿ ಮಾಡಿಕೊಂಡಿದ್ದರು. ಇದರ ಪಡಿಯಚ್ಚು ಅವರ ಶಾಸನ ಸಂಗ್ರಹದಲ್ಲಿದೆ. ಶಾಸನದ ಸಂಕ್ಷಿಪ್ತ ಟಿಪ್ಪಣಿಯನ್ನು JBBRAS Vol II ಮತ್ತು Indian Culture (Vol. II) ಗಳಲ್ಲಿ ಕೊಡಲಾಗಿದೆ. ಆದರೆ ಶಾಸನದ ಪೂರ್ಣ ಪಾಠ ಪ್ರಕಟವಾಗಿಲ್ಲ.

ಪ್ರಸ್ತುತ ಶಾಸನವು ಕೊಲ್ಲಾಪುರದ ಶಿಲಾಹಾರ ಗಂಡರಾದಿತ್ಯನಿಗೆ ಸಂಬಂಧಿಸಿದುದಾಗಿದೆ. ಇದರ ಕಾಲ ಶಕ 1058, ರಾಕ್ಷಸ ಸಂವತ್ಸರ, ಕಾರ್ತಿಕ ಬಹುಳ ೫ ಸೋಮವಾರವಾಗಿದ್ದು ಇದು ಕ್ರಿ.ಶ. 1135ನೆಯ ವರ್ಷದ ಅಕ್ಟೋಬರ್ 28 ಸೋಮವಾರಕ್ಕೆ ಸರಿಹೊಂದುತ್ತದೆ.

ಪ್ರಾರಂಭದಲ್ಲಿ ಜಿನಪರವಾದ ಸಂಸ್ಕೃತ ಶ್ಲೋಕವನ್ನು ಬಿಟ್ಟರೆ ಉಳಿದ ಶಾಸನಪಾಠ ಗದ್ಯದಲ್ಲಿದೆ. ಶಾಸನವು ಕನ್ನಡ ಲಿಪಿ ಮತ್ತು ಕನ್ನಡ ಭಾಷೆಯಲ್ಲಿದೆ. ಗದ್ಯದ ಶೈಲಿ ಸೊಗಸಾಗಿದ್ದು ಸರಳವಾಗಿದೆ. ಯಾವ ರೀತಿಯ ಅಸ್ಪಷ್ಟತೆಯೂ ಗದ್ಯದಲ್ಲಿ ಕಂಡುಬರುವುದಿಲ್ಲ. ವಿಷಯವನ್ನು ಅಚ್ಚುಕಟ್ಟಾಗಿ ನಿರೂಪಿಸಲಾಗಿದೆ. ಶಾಸನದ ಲಿಪಿಯು ಸುಂದರವಾಗಿದ್ದು ಅಕ್ಷರಗಳನ್ನು ಗುಂಡಾಗಿ ಮುದ್ದಾಗಿ ಕಂಡರಿಸಲಾಗಿದೆ. ಲಿಪಿಯೂ ಸ್ಪಷ್ಟವಾಗಿದೆ. ಲಿಪಿ ಆ ಕಾಲದಲ್ಲಿ ಬಳಕೆಯಲ್ಲಿದ್ದ ಚಾಲುಕ್ಯರ ಕಾಲದ ಲಿಪಿಯನ್ನೇ ಹೋಲುತ್ತದೆ. 'ವ'ಕಾರ ಮತ್ತು 'ಚ'ಕಾರವನ್ನುಳಿದು ಉಳಿದೆಲ್ಲ ವರ್ಣಗಳೂ ಈಗಿನ ಕನ್ನಡ ಲಿಪಿಯನ್ನೇ ಹೋಲುತ್ತವೆ. ಆದರೆ ಕಂಡರಣೆಕಾರನ ಉಲ್ಲೇಖ ಶಾಸನದಲ್ಲಿಲ್ಲ.

ಶಾಸನದಲ್ಲಿ ಗಂಡರಾದಿತ್ಯನನ್ನು ಮಹಾಮಂಡಲೇಶ್ವರನೆಂದೇ ಸಂಬೋಧಿಸಿದೆ. ಆದರೆ ಶಾಸನದಲ್ಲಿ ಸಾರ್ವಭೌಮನ ಉಲ್ಲೇಖವಿಲ್ಲ. ಆದುದರಿಂದ ಬಹುಶಃ ಆತ ಸ್ವತಂತ್ರವಾಗಿ ಆಳುತ್ತಿದ್ದ ಸಂದರ್ಭದಲ್ಲಿ ಶಾಸನವನ್ನು ಹಾಕಿಸಿರಬೇಕು. ಶಾಸನೋಕ್ತ ಕಾಲದ ವೇಳೆಗೆ ಚಾಲುಕ್ಯರ ಇಮ್ಮಡಿ ಜಗದೇಕಮಲ್ಲನು ಚಾಲುಕ್ಯ ಸಾಮ್ರಾಜ್ಯದ ಅರಸನಾಗಿದ್ದ. ಆದರೆ ಈ ವೇಳೆಗೆ ಈ ಪ್ರದೇಶಗಳು (ಗಂಡರಾದಿತ್ಯ ಆಳುತ್ತಿದ್ದ ಪ್ರದೇಶ) ಚಾಲುಕ್ಯರ ಆಡಳಿತದ ಹಿಡಿತಕ್ಕೊಳಪಡದೆ ಸ್ವತಂತ್ರ ರಾಜ್ಯವಾಗಿ ರೂಪುಗೊಂಡಿತ್ತೆಂಬ ವಿಷಯ ಶಾಸನ ನಿರೂಪಣೆಯಿಂದ ಸ್ಪಷ್ಟಪಡುತ್ತದೆ. ಏಕೆಂದರೆ ಮಹಾಮಂಡಲೇಶ್ವರರು ತಮ್ಮ ಸಾರ್ವಭೌಮರಾದ ಚಕ್ರವರ್ತಿಗಳ ಹೆಸರನ್ನು ಉಲ್ಲೇಖಿಸದೆ ಶಾಸನಗಳನ್ನು ಹಾಕಿಸುತ್ತಿರಲಿಲ್ಲವೆಂಬ ವಿಚಾರ ಸರ್ವವಿದಿತ. ಅದು ಆಗಿನ ಸಂಪ್ರದಾಯವೂ ಆಗಿತ್ತು.

ಶಿಲಾಹಾರ ಅರಸರಲ್ಲಿ ಮೂರು ಶಾಖೆಗಳಿದ್ದು ಶಾಸನೋಕ್ತ ಗಂಡರಾದಿತ್ಯ ಕೊಲ್ಲಾಪುರ ಶಾಖೆಯ ಶಿಲಾಹಾರ ಮನೆತನಕ್ಕೆ ಸೇರಿದವನು. ಈತ ಉತ್ತರ ಕೊಂಕಣದ ಶಿಲಾಹಾರರಲ್ಲಿ ಸಮಕಾಲೀನನಾದ ಮೊದಲನೆಯ ಅಪರಾರ್ಕ (ಅಪರಾದಿತ್ಯ)ನ ನೆರವಿಗೆ ಹೋಗಿದ್ದು ಕದಂಬರ ಇಮ್ಮಡಿ ಜಯಕೇಶಿಯ ವಿರುದ್ಧವಾಗಿ ಸೆಣಸಬೇಕಾಯಿತೆಂಬ ವಿಷಯ ಇತರ ಆಧಾರಗಳಿಂದ ತಿಳಿದುಬರುತ್ತದೆ. ಗಂಡರಾದಿತ್ಯನ ಆಳಿಕೆಯ ಕಾಲ ಕ್ರಿ. ಶ. 1110 ರಿಂದ 1140. ಅರಸ ಗಂಡರಾದಿತ್ಯನು ವಳನಾಡ ನೆಲೆವೀಡಿನಿಂದ ಆಳುತ್ತಿದ್ದನೆಂದು ಶಾಸನದಲ್ಲಿ ಹೇಳಲಾಗಿದೆ. ಈ ವಳನಾಡು ಕೊಲ್ಲಾಪುರದ ಬಳಿಯಿರುವ ವಾಳ್ವ ಇರಬೇಕೆಂದು ಸರ್ ವಾಲ್ಟರ್ ಎಲಿಯಟ್‌ರ ಊಹೆ. ಆದರೆ ಕೊಲ್ಲಾಪುರ ತಾಲ್ಲೂಕಿನಲ್ಲಿಯೇ ವಾಳ್ವೆ ಎಂಬ ಹೆಸರಿನ ಎರಡು ಗ್ರಾಮಗಳಿರುವುದರಿಂದ ನಿರ್ದಿಷ್ಟವಾಗಿ ಇಂಥದೇ ಎಂದು ಗುರುತಿಸುವುದು ಕಷ್ಟಕರ ಎಂದಿದ್ದಾರೆ. ಶಾಸನಲಭಿಸಿದ ವಳವವೇ ವಳನಾಡಾಗಿರಬೇಕೆಂಬುದು ಸ್ಪಷ್ಟ.

ಗಂಡರಾದಿತ್ಯನ ಮಹಾಸಾಮಂತನಾದ ನಿಂಬದೇವರಸ ಕವಡೆಗೊಳ್ಳದ ಬಳಿಯ ಸಂತೆಯ ಮುದುಗೋಡೆಯಲ್ಲಿ ಮಾಡಿಸಿದ ಪಾರ್ಶ್ವನಾಥ ಬಸದಿಯ ದೇವರ ಅಷ್ಟವಿಧಾರ್ಚನೆ, ಬಸದಿಯ ಜೀರ್ಣೋದ್ಧಾರ ಹಾಗೂ ಅಲ್ಲಿರುವ ಋಷಿಯರ ಆಹಾರದಾನಕ್ಕೆಂದು ಅಯ್ಯಾವಳೆಯ ಪುರವರಮೇಶ್ವರರಾದ ಅಯ್ನೂರ್ವರಸ್ವಾಮಿಗಳು, ಹಲವು ಸೆಟ್ಟಿಯರು, ಗಾವುಂಡರು, ಕವಡೆಗೊಳ್ಳದ ಪ್ರಭು ಮತ್ತು ಸಮಸ್ತ ದೇಶದವರೊಡಗೂಡಿ ಹಲವು ವಿಧವಾದ ಸುಂಕಗಳ ಆಯವನ್ನು ಪತ್ತಿ ನೀಡಿದ್ದಾನೆ. ದಾನವನ್ನು ಸ್ವೀಕರಿಸಿದಾತ ಕೊಲ್ಲಾಪುರದ ರೂಪನಾರಾಯಣ ಬಸದಿಯ ಆಚಾರ್ಯನಾದ ಮೂಲಸಂಘ, ದೇಸಿಯಗಣ, ಪುಸ್ತಕಗಚ್ಛದ ಶ್ರುತಕೀರ್ತಿತ್ರೈವಿದ್ಯದೇವ. ಈ ಕಾಲದಲ್ಲಿ ಕೊಲ್ಲಾಪುರದ ರೂಪನಾರಾಯಣ ಬಸದಿಯು ಅತ್ಯಂತ ಪ್ರಸಿದ್ಧಿಯನ್ನು ಪಡೆದಿತ್ತು. ಈ ಬಸದಿಯ ಆಚಾರ್ಯನಿಗೆ ಇತರ ಹಲವಾರು ಬಸದಿಗಳ ಒಡೆತನವನ್ನೂ ವಹಿಸಲಾಗಿತ್ತು. ಅವುಗಳಲ್ಲಿ ಮೇಲೆ ತಿಳಿಸಿರುವ ಪಾರ್ಶ್ವನಾಥ ಬಸದಿಯೂ ಒಂದಾಗಿತ್ತು. ಪ್ರತಿಗ್ರಹಿಯಾದ ಶ್ರುತಕೀರ್ತಿತ್ರೈವಿದ್ಯದೇವನನ್ನು ರೂಪನಾರಾಯಣ ಬಸದಿಯ ಆಚಾರ್ಯನೆಂದೇ ಸೂಚಿಸಲಾಗಿರುವುದನ್ನು ಗಮನಿಸಿದಾಗ ಇದು ಸ್ಪಷ್ಟಪಡುತ್ತದೆ. ಅಲ್ಲದೆ ದಾನಿ ನಿಂಬರಸನೇ ರೂಪನಾರಾಯಣ ಬಸದಿಯನ್ನೂ ಕಟ್ಟಿಸಿದ್ದನೆಂಬ ವಿಷಯ ತೇರದಾಳ[1] ಶಾಸನದ "ಶ್ರೀ ಕೊಲ್ಲಾಪುರದ ನಿಂಬದೇವಸಾಮಂತ ಮಾಡಿಸಿದ ರೂಪನಾರಾಯಣದೇವ ಬಸದಿಯ ಪ್ರತಿಬದ್ಧಮಪ್ಪ ತೇರಿದಾಳದ ಗೊಂಕಜಿನೇಂದ್ರಮಂದಿರಕ್ಕೆ........"– ಈ ಉಲ್ಲೇಖದಿಂದ ತಿಳಿದುಬರುತ್ತದೆ.

ತಗರಪುರವರಾಧೀಶ್ವರ ಶಿಲಾಹಾರನರೇಂದ್ರ ಗಂಡರಾದಿತ್ಯನ ಹಲವು ಪ್ರಶಸ್ತಿಗಳು ಶಾಸನದಲ್ಲಿ ಉಕ್ತವಾಗಿವೆ. ಸಾಮಾನ್ಯವಾಗಿ ಶಿಲಾಹಾರ ಅರಸರಿಗೆ ಅನ್ವಯಿಸುವ ಪ್ರಶಸ್ತಿಗಳೊಂದಿಗೆ ಇರುವರಾದಿತ್ಯ, ರೂಪನಾರಾಯಣ, ಕಲಿಯುಗವಿಕ್ರಮಾದಿತ್ಯ ಎಂಬ ವಿಶಿಷ್ಟವಾದ ಪ್ರಶಸ್ತಿಗಳೂ ಇವೆ. ಇಲ್ಲಿ ಉಕ್ತವಾಗಿರುವ 'ಗಿರಿದುರ್ಗಲಂಘನಂ' ಎಂಬ ಪ್ರಶಸ್ತಿ ಗಮನಾರ್ಹ. ಸಾಧಾರಣವಾಗಿ ಅನೇಕ ಶಾಸನಗಳಲ್ಲಿ 'ಗಿರಿದುರ್ಗಮಲ್ಲ' ಎಂಬ ರೂಪ ಕಂಡುಬರುತ್ತದೆ.

ನಿಂಬದೇವನನ್ನು 'ಗಂಡರಾದಿತ್ಯದೇವದಕ್ಷದಕ್ಷಿಣಭುಜಾದಣ್ಡ' ಎಂದು ಹೇಳಲಾಗಿದೆ. ಆತನನ್ನು ನಾಗಲದೇವಿಯ ಗನ್ಧವಾರಣನೆಂದೂ ಪದ್ಮಾವತೀದೇವಿಲಬ್ಧವರಪ್ರಸಾದನೆಂದೂ ಸಂಬೋಧಿಸಲಾಗಿದೆ. ಅಲ್ಲದೆ ಹಲವು ಪೌರಾಣಿಕ ವ್ಯಕ್ತಿಗಳಲ್ಲಿದ್ದ ಗುಣಗಳು ನಿಂಬದೇವನೊಬ್ಬನಲ್ಲಿ ಒಟ್ಟೈಸಿದ್ದವು ಎಂಬುದನ್ನು ಸಾಧಾರವಾಗಿ ವರ್ಣಿಸಿರುವುದು ಕಂಡುಬರುತ್ತದೆ. ಈ ರೀತಿಯ ವರ್ಣನೆಗಳನ್ನು ಹಲವು ಶಾಸನಗಳಲ್ಲಿ ಕಾಣಬಹುದು. ಆತನ ಹಿರಿಮೆಯ

ಹೆಗ್ಗಳಿಕೆಯನ್ನು ಹಿಗ್ಗಲಿಸಿ ಹೇಳುವುದೇ ಇವುಗಳ ಉದ್ದೇಶ. ಐತಿಹಾಸಿಕ ಮಹತ್ವ ಇವುಗಳಲ್ಲಿ ಅಷ್ಟಾಗಿ ಕಂಡುಬರುವುದಿಲ್ಲ.

ಅಯ್ಯಾವೊಳೆಯನ್ನು ಅಹಿಚ್ಛತ್ರಪುರವೆಂದು ಕರೆಯಲಾಗಿದೆ. ಶಾಸನೋಕ್ತ ಮಿರಿಂಜೆಯು ಈಗಿನ ಮಿರಜ್. ಇದಲ್ಲದೆ ಕೊಂಡಿಪಟ್ಟಣ, ಬಳೆಯಪಟ್ಟಣ (ಪಟ್ಟಣ) ಹಾಗೂ ಕವಡೆಗೊಳ್ಳ ಗ್ರಾಮಗಳ ಹೆಸರುಗಳೂ ಉಕ್ತವಾಗಿವೆ.

ಶಾಸನದಲ್ಲಿ ಹಲವು ಸೆಟ್ಟಿಗಳನ್ನು ಹೆಸರಿಸಲಾಗಿದ್ದು ಕೆಲವರ ಹೆಸರಿನೊಂದಿಗೆ ಊರುಗಳ ಹೆಸರುಗಳನ್ನೂ ಸೂಚಿಸಿರುವುದು ಗಮನಾರ್ಹ. ದೇವಪಯ್ಯಸೆಟ್ಟಿಯನ್ನು ಗಂಡರಾದಿತ್ಯದೇವರ ರಾಜಶ್ರೇಷ್ಠಿ ಎಂಬ ವಿಶೇಷಣದೊಂದಿಗೆ ಹೆಸರಿಸುವುದು ವಿಶೇಷ ಸಂಗತಿ. ಆತನ ಸ್ಥಾನವನ್ನು ನಿರ್ದೇಶಿಸುವುದೇ ಇದರ ಉದ್ದೇಶ. ಅಂತೆಯೇ ಹೆಗ್ಗಡೆ, ಚೌದೊರೆ ಎಂಬ ಕೆಲವು ಅಧಿಕಾರಕ್ಕೆ ಸಂಬಂಧಿಸಿದ ಪದಗಳನ್ನೂ ಶಾಸನದಲ್ಲಿ ಬಳಸಲಾಗಿದೆ. 'ಚೌದೊರೆ' ಎಂಬುದು 'ಚೌಧುರಿ' ಎಂಬ ಪದದ ರೂಪವಾಗಿದ್ದು ಇದು ವ್ಯಕ್ತಿಯು ಹೊಂದಿದ್ದ ಅಧಿಕಾರವನ್ನು ನಿರ್ದೇಶಿಸುತ್ತದೆ.

ಪಾರ್ಶ್ವಜಿನಾಲಯಕ್ಕೆ ತೆರಿಗೆಯ ಆದಾಯವನ್ನು ದತ್ತಿಬಿಟ್ಟ ವಿಷಯವನ್ನು ಮೇಲೆ ತಿಳಿಸಲಾಗಿದೆ. ಆ ಕಾಲದಲ್ಲಿ ತೆರಿಗೆಯನ್ನು ಹಣದ ರೂಪದಲ್ಲಷ್ಟೇ ಸಲ್ಲಿಸುತ್ತಿರಲಿಲ್ಲ. ದವಸ ಧಾನ್ಯ ಮುಂತಾದ ಪದಾರ್ಥಗಳನ್ನೂ ತೆರಿಗೆಯ ರೂಪದಲ್ಲಿಯೂ ಸಲ್ಲಿಸುತ್ತಿದ್ದರು. ಹಾಗೆ ಸಲ್ಲಿಸಬೇಕಾದ ಪ್ರಮಾಣವನ್ನು ನಿಗದಿಗೊಳಿಸಲಾಗುತ್ತಿತ್ತು. ಸರಕುಗಳನ್ನು ಒಂದೆಡೆಯಿಂದ ಮತ್ತೊಂದೆಡೆಗೆ ಸಾಗಿಸುವಾಗ ಸರಕಿನ ಮೊತ್ತಕ್ಕೆ ತಕ್ಕಂತೆ ಸುಂಕವನ್ನು ವಸೂಲು ಮಾಡಲಾಗುತ್ತಿತ್ತು. ಹೀಗೆ ಸರಕುಗಳನ್ನು ಸಾಗಿಸಲು ಬಳಸುವ ಸಲಕರಣೆಗಳಿಗೆ ಸಂಬಂಧಿಸಿದಂತೆ ಹೇಱು, ಜವಳ, ಹಸರ ಎಂಬ ವಿಭಿನ್ನ ರೀತಿಯ ಸಲಕರಣೆಗಳನ್ನು ಬಳಸುತ್ತಿದ್ದರೆಂಬುದನ್ನು ಶಾಸನದಲ್ಲಿ ನಿರ್ದೇಶಿಸಲಾಗಿದೆ. ಎತ್ತು ಮೊದಲಾದ ಪ್ರಾಣಿಗಳ ಮೇಲೆ ಹೊರಿಸಿಕೊಂಡು ಬರುವುದಕ್ಕೆ 'ಹೇಱು' ಎಂದು ಹೇಳಲಾಗುತ್ತಿತ್ತು. ಜವಳ ಎಂಬುದನ್ನು ಈಚಿನ ದಿನಗಳಲ್ಲಿ ಬಳಸಲಾಗುವ ಅಡ್ಡೆ ಅಥವಾ ಕಾವಡಿ ಎಂದು ಗುರುತಿಸಬಹುದು. 'ಜವಳ' (ಯಮಳ) ಎಂದರೆ ಎರಡು ಎಂಬ ಅರ್ಥವಿದ್ದು ಬಹುಶಃ ವ್ಯಕ್ತಿಗಳು ಸರಕುಗಳನ್ನು ಸಾಗಿಸುವಾಗ ಅಡ್ಡೆಯಂತಹ ಸಲಕರಣೆಯನ್ನು ಬಳಸುತ್ತಿದ್ದಿರಬಹುದು. 'ಹಸರ'ವು ಹಸುಬೆ(?) ಯನ್ನು ನಿರ್ದೇಶಿಸುತ್ತಿರಬಹುದೇ ? ತಲೆಯ ಮೇಲೆ ಹೊತ್ತು ತರುತ್ತಿದ್ದುದಕ್ಕೆ 'ತಲೆವೊಱೆ' ಎಂದು ಹೇಳಲಾಗುತ್ತಿತ್ತು. ಎಣ್ಣೆ ಮುಂತಾದವುಗಳನ್ನು ಅಳೆಯಲು ಸೊಲ್ಲಗೆ, ಮಾನ, ಬಿಸಿಗೆ (ಬಿಸಗೆ) ಎಂಬ ಮಾಪಕಗಳನ್ನು ಬಳಸಲಾಗುತ್ತಿತ್ತು.

ಶಾಸನದಲ್ಲಿ ಅಲ್ಲ (ಹಸಿ ಶುಂಠಿ), ಅರಿಶಿಣ, ಶುಂಠಿ, ಬೆಳ್ಳುಳ್ಳಿ ಮುಂತಾದ ಸಾಂಬಾರ ಪದಾರ್ಥಗಳ ಹೆಸರುಗಳನ್ನು ಸೂಚಿಸಲಾಗಿದೆ. ಇವುಗಳೊಂದಿಗೆ ಭದ್ರವಿಭಸ್ತೆಯನ್ನೂ ಹೆಸರಿಸಿದ್ದು ಇದು ಭದ್ರಮುಸ್ತೆ ಅಥವಾ ಭದ್ರಮುಸ್ತಕದ ರೂಪಾಂತರವಾಗಿರಬಹುದೇ ? ಹಾಗಿದ್ದಲ್ಲಿ ಇದು ಒಂದು ಔಷಧಿಮೂಲಿಕೆ[೩]ಯ ಹೆಸರನ್ನು ಸೂಚಿಸುತ್ತದೆ.

ಶಾಸನ ಪಾಠ

1 ಶ್ರೀಮತ್ಪರಮಗಂಭೀರಸ್ಯಾದ್ವಾದಾಮೋಘಲಾಂಛನಂ । ಜೀಯಾತ್ತ್ರೈಲೋಕ್ಯನಾಥಸ್ಯ
ಶಾಸನಂ ಜಿನಶಾಸನಂ ॥ ಸ್ವಸ್ತಿ ಸಮಧಿಗತಪಂಚಮಹಾಶಬ್ದ ಮಹಾಮ

2 ಣ್ಡಳೇಶ್ವರಂ । ತಗರಪುರವರಾಧೀಶ್ವರಂ ಶ್ರೀ ಶಿಲಾಹಾರನರೇಂದ್ರಂ । ಜೀಮೂತವಾಹ
ನಾನ್ವಯಪ್ರಸೂತಂ । ಸುವರ್ಣ್ಣಗರುಡಧ್ವಜಂ ಮಱಕಿವೊಕ್ಕಸಪ್ಪರ್ಗಂ । ಅಯ್ಯ[ನ]

3 ಸಿಂಗಂ । ರಿಪುಮಣ್ಡಳಿಕಭೈರವಂ । ವಿದ್ವಿಷ್ಟಗಜಕಣ್ಠೀರವಂ । ಇಡುವರಾದಿತ್ಯಂ ।
ರೂಪನಾರಾಯಣಂ । ಕಲಿಯುಗವಿಕ್ರಮಾದಿತ್ಯಂ । ಶನಿವಾರಸಿದ್ಧಿ ಗಿರಿದು

4 ರ್ಗ್ಗಲಂಘನಂ । ಶ್ರೀಮಹಾಲಕ್ಷ್ಮೀದೇವಿಲಬ್ಧವರಪ್ರಸಾದಾದಿಸಮಸ್ತರಾಜಾವಳೀ
ವಿರಾಜಿತರಪ್ಪ ಶ್ರೀಮನ್ಮಹಾಮಣ್ಡಳೇಶ್ವರಂ ಗಣ್ಡರಾದಿತ್ಯದೇವರು ವಳವಾಡದ ನೆ

5 ಲೆವೀಡಿನಲ್ಸುಖಸಂಕಥಾವಿನೋದದಿಂ ರಾಜ್ಯಂಗೆಯ್ಯುತ್ತಮಿರೆ । ತತ್ಪಾದಪದ್ಮೋಪ
ಜೀವಿ । ಸಮಧಿಗತಪಂಚಮಹಾಶಬ್ದ ಮಹಾಸಾಮನ್ತಂ । ವಿಜಯಲ

6 ಕ್ಷ್ಮೀಕಾನ್ತಂ । ರಿಪುಸಾಮನ್ತಸೀಮನ್ತಿನೀಸೀಮನ್ತಭಂಗಂ । ವೀರವಾರಾಂಗನಾಪ್ರಿಯ
ಭುಜಂಗಂ । ವೈರಿಸಾಮಂತಮೇಘವಿಘಟನಸಮೀರಣಂ । ನಾಗಲದೇವಿಯಗನ್ಧವಾ

7 ರಣಂ ವಿದ್ವಿಷ್ಟಸಾಮನ್ತವಿಳಯಕಾಳಂ । ಸಾಮನ್ತಗಣ್ಡಗೋಪಾಳಂ । ದಾಯಾದ
ಸಾಮನ್ತತಾರಾಸುರವೀರಕುಮಾರಂ । ಸಾಮನ್ತಕೇದಾರಂ । ತೊಣ್ಡಸಾಮನ್ತ
ಪುಣ್ಡರೀಕ

8 ಷಣ್ಡಪ್ರಚಣ್ಡಮದವೇದಣ್ಡಂ । ಗಣ್ಡರಾದಿತ್ಯದೇವದಕ್ಷದಕ್ಷಿಣಭುಜಾದಣ್ಡಂ । ಯಾಚಕ
ಜನಮನೋಭಿಲಷಿತಚಿನ್ತಾಮಣಿ । ಸಾಮನ್ತಶಿರೋಮಣಿ । ಜಿನಚರಣಸರಸೀರು

9 ಹಮಧುಕರಂ ಸಮ್ಯಕ್ತ್ವರತ್ನಾಕರನಾಹಾರಾಭಯಭೈಷಜ್ಯಶಾಸ್ತ್ರದಾನವಿನೋದಂ
ಪದ್ಮಾವತೀದೇವಿಲಬ್ಧವರಪ್ರಸಾದಂ । ನಾಮಾದಿಸಮಸ್ತಪ್ರಶಸ್ತಿಸಹಿತಂ ಶ್ರೀಮನ್ಮಹಾ

10 ಸಾಮನ್ತಂ । ನಿಂಬದೇವರಸರು । ಕವಡೆಗೊಳ್ಳದ ಬಳಿಯ ಸನ್ತೆಯಮುದ್ಗೋಡೆಯ
ಲ್ಮಾಡಿಸಿದ ಬಸದಿಯ ಪಾರ್ಶ್ವನಾಥದೇವರಷ್ಟವಿಧಾರ್ಚನಕ್ಕ(ಂ)ಮಾ ಬಸದಿಯ
ಜೀರ್ಣ್ಣೋದ್ಧಾರಕ್ಕ(ಂ)

11 ಮಲ್ಲಿಪ್ಪ ರಿಷಿಯರಾಹಾರದಾನಕ್ಕಂ । ಸ್ವಸ್ತಿ ಸಮಸ್ತಭುವನವಿಖ್ಯಾತ ಪಂಚಶತವೀರ
ಶಾಸನಲಬ್ಧಾನೇಕಗುಣಗಣಾಳಂಕೃತಸತ್ಯಶೌಚಾಚಾರಚಾರುಚಾರಿತ್ರನಯವಿನಯ

12 ವಿಜ್ಞಾನವೀರಬಳಂಜಧರ್ಮ್ಮಪ್ರತಿಪಾಳನ ವಿಶುದ್ಧಗುಡ್ಡಧ್ವಜ ವಿರಾಜಮಾನಾನೂನ
ಸಾಹಸೋತ್ತುಂಗ ಕೀರ್ತ್ಯಂಗನಾಲಿಂಗಿತ ನಿಜಭುಜೋಪಾರ್ಜ್ಜಿತ ವಿಜಯಲಕ್ಷ್ಮೀ
ನಿವಾಸ ವಕ್ಷಸ್ಥಳರುಂ

13 ಭುವನಪರಾಕ್ರಮೋನ್ನತವಾಸುದೇವಖಣ್ಡಳಿಮೂಳಭದ್ರವಂಶೋದ್ಭವರುಂ । ಭಗವತೀ
ಲಬ್ಧವರಪ್ರಸಾದರುಂ । ತಾನೆಕಾದಿಸೋಲದರುಂ ಮಱುವಕ್ಕಮಾರಿಗಳುಂ । ಪರಸ್ತ್ರೀ
ಪರ

14 ಧನವರ್ಜ್ಜಿತರುಂ ಚತುಷ್ಷಷ್ಟಿ ಕಳೆಗಳೊಳ್ ಪ್ರವೀಣರಪ್ಪುದಱಿಂ । ಬ್ರಹ್ಮನನ್ನರುಂ ।
ಚಕ್ರಮುಳ್ಳುದಱಿಂ ನಾರಾಯಣನನ್ನರುಂ । ದೃಷ್ಟಿಯೊಳ್ನೋಡಿ ಕೊಲ್ವುದಱಿಂ
ಕಾಳಾಗ್ನಿರುದ್ರನನ್ನರುಂ । ಕೊ

15 ನ್ದರನಱಿಸಿಕೊಲ್ವುದಱಿಂ । ಪರಶುರಾಮನನ್ನರುಂ । ತುಳಿದು ಕೊಲ್ವುದಱಿಂ ಮದಾನ್ಧಗನ್ಧಸಿನ್ಧುರದನ್ನರುಂ । ಗಿರಿದುರ್ಗ್ಗಮುಂ ಮಱೆವೊಕ್ಕರಂ ತೆಗೆದು ಕೊಲ್ವೆಡೆಯೊಳ್ ಸಿಂಹ ದನ್ನರಂ

16 ಪಾತಾಳಮಂ ಪೊಕ್ಕರಂ ಕೊಲ್ವೆಡೆಯೊಳ್ ವಾಸುಗಿಯನ್ನರುಂ । ಆಕಾಶದೊಳಿರ್ದ್ದರಂ ಕೊಲ್ವೆಡೆಯೊಳ್ಗರುತ್ಮನನ್ನರುಂ । ಪೆಂಪಿನಲ್ ಪೃಥ್ವಿಯನ್ನರುಂ । ಬಿಣ್ಪಿನಲ್ ಕುಲಗಿ

17 ರಿಯನ್ನರುಂ । ಗುಣ್ಪಿನಲ್ಮಹಾಸಮುದ್ರದನ್ನರುಂ । ವಿದ್ಯೆಗಡಲ್ ರಾಮನನ್ನರುಂ । ಪರಾಕ್ರಮದೊಳ್ ಪಾರ್ತ್ಥನನ್ನರುಂ । ಶೌಚದೊಳ್ ಗಾಂಗೇಯನನ್ನರುಂ । ಸಾಹಸದೊಳ್ಭೀಮನನ್ನ

18 ರುಂ । ಧರ್ಮ್ಮದಲ್ ಧರ್ಮ್ಮಪುತ್ರನನ್ನರುಂ । ಜ್ಞಾನದಲ್ಸಹದೇವನನ್ನರುಂ । ಭೋಗದಲಿಂದ್ರನನ್ನರುಂ । ತ್ಯಾಗದಲ್ಕರ್ಣ್ಣನನ್ನರುಂ । ತೇಜದಲಾದಿತ್ಯನನ್ನರಂ । ಅಹಿಚ್ಛತ್ರಮೆನಿಸುವಯ್ಯಾವಳೆಪುರಪ

19 ರಮೇಶ್ವರರುಮಪ್ಪಯ್ನೂರ್ವ್ವರ ಸ್ವಾಮಿಗಳುಂ । ಗವಱೆಯರುಂ । ಗಾತ್ರಿಯರುಂ । ಸೆಟ್ಟಿಯರುಂ । ಸೆಟ್ಟಿಗುತ್ತರುಂ । ಗಾಮುಣ್ಡರುಂ । ಗಾಮುಣ್ಡಸ್ವಾಮಿಗಳುಂ । ಬೀರ

20 ರುಂ । ಬೀರವಣಿಗರುಂ । ಕೊಲ್ಲಾಪುರದ ಬಿಲ್ಲಾಣಸೆಟ್ಟಿಯುಂ । ಗೋವಿನ್ದಸೆಟ್ಟಿಯುಂ । ಕೊಮರ ಅಣ್ಣಮಯ್ಯನುಂ । ಮಿರಿಂಜೆಯ ಬಿಜ್ಜಸೆಟ್ಟಿಯುಂ । ಬೊಪ್ಪಿಸೆ

21 ಟ್ಟಿಯಂ । ಗಣ್ಡರಾದಿತ್ಯದೇವರ ರಾಜಶ್ರೇಷ್ಠಿ ವೆಸಪಯ್ಯಸೆಟ್ಟಿಯರುಂ । ಅ ಮಣ್ಡಳೇಶ್ವರನ ಬೀಡಿನ ಬಮ್ಮಸೆಟ್ಟಿಯುಂ । ಕೊಂಡಿಪಟ್ಟಣದಾದಿತ್ಯಗೃಹ

22 ದ ಸಾಸನಿಗಂ ಹೆಗ್ಗಡೆ ರಾವಸೆಟ್ಟಿಯುಂ । ಚಾದೊರೆ ಬೊಪ್ಪಿಸೆಟ್ಟಿಯುಂ । ತೋರಂಬಗೆಯ ಪ್ರಭು ಕನ್ನಪಯ್ಯಸೆಟ್ಟಿಯುಂ । ಮಯಿಸಿಗೆಯ ಕಾಜಗಾಱಿಂ ಚಾದೊ

23 ರೆ ಗೊರವಿಸೆಟ್ಟಿಯುಂ । ಬಳೆಯುವಟ್ಟಣದ ಶಾನ್ತಿಸೆಟ್ಟಿಯುಂ । ಅಯ್ಯವೊಳೆಯಯ್ನೂರ್ವ್ವರಸಿಂಗಂ ಹುಲಿಯಸೆಟ್ಟಿಯುಂ । ಕವಡೆಗೊಳ್ಳದ ಪ್ರಭು ಖಪ್ಪರಯ್ಯನಾ

24 ದಿಯಾಗಿ ಸಮಸ್ತದೇಶಂ ನೆರೆದು । ಶಕವರ್ಷದ ಸಾಸಿರದಯ್ವತ್ತೆಂಟನೆಯ ರಾಕ್ಷಸ ಸಂವತ್ಸರದ ಕಾರ್ತ್ತಿಕ ಬಹುಳ ಪಂಚಮಿ ಸೋಮವಾರದನ್ದು ಶ್ರೀಮೂಲಸಂಘ

25 ದೇಸಿಯಗಣ ಪುಸ್ತಕಗಚ್ಛದ ಕೊಲ್ಲಾಪುರದ ಶ್ರೀರೂಪನಾರಾಯಣನ ಬಸದಿಯಾಚಾರ್ಯ್ಯರಪ್ಪ ಶ್ರೀ ಶ್ರುತಕೀರ್ತ್ತಿತ್ರೈವಿದ್ಯದೇವರ ಕಾಲಂಕರ್ಚ್ಚಿ । ಧಾರಾಪೂ

26 ರ್ವ್ವಕವಾಗಿ ಕೊಟ್ಟಾಯಮಿನ್ತೆನ್ದೊಡೆ ಅಡಕೆ ಹೇಱಿಂಗೆ ಅಯ್ವತ್ತು । ಜವಳಕಿಪ್ಪತ್ತು । ಹಸರಕಯ್ದು । ಎಲೆ ಹೇಱಿಂಗೆ ನೂಱು । ತಲೆವೊಱೆಗಯ್ವತ್ತು । ಹಸರಕಿಪ್ಪ

27 ತ್ತಯ್ದು । ತುಪ್ಪಮೆಣ್ಣೆಯೆಂಬಿವು ಕೊಡಕ್ಕೆ ಸೊಲ್ಲಗೆ ಸಿದ್ದಿಗೆಗರಪಾನಂ [ಸಂ]ಗಡಿಗೊಮರ್ಮ್ಮನಂ [ದೂ] ಸಿಗವಸರಕ್ಕಮುಕ್ಕಸಾಲೆಗಂ ಹೊಂಗೆ ಹಣಂ ಹತ್ತಿ ಮಳವೆಗ

28 ಯ್ಪಲಂ । ಭಣ್ಡಿಯ ಕರುಸೆಯ ಮಳವೆಗೆರಡು ಬಿಸಿಗೆ । ಜವಳಕ್ಕೆ ಪಲಂ ಪತ್ತು । ಲಂಕರೊಕ್ಕಲಲ್ಲಿ ಅಱುತಿಂಗಳ್ಗೆ ಮಣೆ ತೀವಿಗೆ ಮರುವಿಯೆಂಬೀವೊನ್ದಕ್ಕಂ । ವರ್ಷಕ್ಕೆ ಮಂ

29 ಚವೊನ್ದಕ್ಕಂ । ಅಲ್ಲವರಿಸಿನಂ ಶುಣ್ಠಿ ಜೆಳ್ಳುಳ್ಳಿ ಬಜೆ ಭದ್ರವಿಭಸ್ತೆಯೆಂಬಿವು ಮೊದಲಾಗಿ ತೂಗಿ ಮಾಱುವ ಭಣ್ಡಂಗಳ್ಗೆ ಹೇಱಿಂಗಯ್ಪಲಂ ಜವಳಕಿಪ್ಪಲಂ ಹಸ

ಹೇೞಿಂಗೊವಾ್ಮನ ಜವಳಕ್ಕರ
30 ರಕೊಪ್ಪಲಂ ಜೀರಗೆ ಮೆಳಸು ಸಾಸವಿಯೆಂಬಿವು
ವಾನಂ ಹಸರಕ್ಕೆ ಸೊಲ್ಲಿಗೆ ಉಪ್ಪು ಮೊದಲಾಗಿ ಹದಿನೆಂಟು ಧಾನ್ಯ

ಮಾಸವೆರಡು ತಲೆ [ವೊ]ೞಿಕ
31 ಗಳ್ಗಂ ಭಂಡಿಗೆ ಕೊಳಗವೊಂದು ಹೇೞಿಂಗೆ ಭಣ್ಡಿಗೆ ದಣ್ಡಿಗೆ
ಗೊವಾ್ರ್ಣನಂ ಬಾಡುಕಾಂಪಿಂಬಿವು ಭಂಡಿಗೆ ಪತ್ತು ತಲೆವೊೞಿಗೆ ನಾಲ್ಕುಕ್ಕುಂ। ಭಣ್ಡಿಗೆ ದಣ್ಡಿಗೆ
ವೊಂದು

ಸೇವೆ ಯೆರಡು ಹೂವಿನ
32 ಸೇವೆಯಯ್ದು ಹೊದೆಯೆರಡಕ್ಕರ್ಣಂ ದಣ್ಡಿಗೆ ವೊಂ [ದು] ಇನ್ತೀಯಾ
ಹೆಡಲಿಗೆಗೆ ಮಾಳೆವೊನ್ದು ಕುಂಬಳರಲ್ಲಿ ಹಸರಕ್ಕೆ ಮಡಕೆವೊನ್ದು ॥ ಇನ್ತೀಯಾ

ಮಹಾಪಾತಕಮುಂ
33 ಯಮುನಳಿದಾತಂಗೆ ಬಾಣರಾಶಿ ಕುರುಕ್ಷೇತ್ರಾದಿಗಳೊಳ್ ಪಞ್ಚ ಮಹಾಪಾತಕಮಂ
ಮಾಡಿದ ಫಳಂಮಕುಂ ॥

ಅಡಿಟಿಪ್ಪಣಿಗಳು

1 B. R. Gopal (ed) : *Karnatak Inscriptions*. No. 98 vol. v

2 ಕನ್ನಡ ಸಾಹಿತ್ಯ ಪರಿಷತ್ತಿನ ಸಂಕ್ಷಿಪ್ತ ಕನ್ನಡ-ಕನ್ನಡ ನಿಘಂಟು. ಪು. ೬೨೩

3 ಮೊದಲು 'ತಾ' ಎಂದು ಬರೆದು ನಂತರ 'ತ' ಎಂದು ತಿದ್ದಲಾಗಿದೆ.

ಕೆ. ವಿ. ನಾಗರಾಜ್

ಅಲಿಪ್ತ ಸುದ್ದಿಕೂಟ: ಸಂವಿಧಾನ, ಸಾಧನೆ

ಆಧುನಿಕ ಜಗತ್ತಿನಲ್ಲಿ ತಂತ್ರಜ್ಞಾನ ಮುಂದುವರಿದ ಪಾಶ್ಚಿಮಾತ್ಯ ರಾಷ್ಟ್ರಗಳ ಸೊತ್ತು. ಶಕ್ತಿ ರಾಜಕೀಯದಲ್ಲಿ ಬಳಸಬಹುದಾದ ಪ್ರಬಲ ಅಸ್ತ್ರ. ಹಾಗೆಯೇ ಸುದ್ದಿ ಸರಬರಾಜು ಕ್ಷೇತ್ರದಲ್ಲಿಯು ಸಹ ಪಾಶ್ಚಿಮಾತ್ಯ ರಾಷ್ಟ್ರಗಳದೇ ಏಕಸ್ವಾಮ್ಯ. ಅಂತರ ರಾಷ್ಟ್ರೀಯ ಸುದ್ದಿ ಸಂಸ್ಥೆಗಳ ಕಾರ್ಯಕಛೇರಿಗಳೆಲ್ಲ ಇರುವುದು ಲಂಡನ್ ಮತ್ತು ನ್ಯೂಯಾರ್ಕ್‌ನಂತಹ ಪಶ್ಚಿಮ ಗೋಳದ ನಗರಗಳಲ್ಲಿಯೇ.

ಅಸೋಸಿಯೇಟೆಡ್ ಪ್ರೆಸ್, ಯುನೈಟೆಡ್ ಪ್ರೆಸ್ ಇಂಟರ್‌ನ್ಯಾಷನಲ್ ಮತ್ತು ರಾಯಿಟರ್ಸ್ ಅತಿ ದೈತ್ಯ ಸುದ್ದಿಸಂಸ್ಥೆಗಳು. ಮೊದಲೆರಡು ಅಮೆರಿಕಾ ಸಂಯುಕ್ತ ಸಂಸ್ಥಾನಕ್ಕೆ ಸೇರಿದವು. ರಾಯಿಟರ್ಸ್ ಬ್ರಿಟನ್ನಿನ ಸುದ್ದಿಸಂಸ್ಥೆ.

ಇವಲ್ಲದೇ ಇನ್ನೂ ಅನೇಕ ಮಧ್ಯಮ ಪ್ರಮಾಣದ ಸುದ್ದಿಸಂಸ್ಥೆಗಳಿವೆ. ಫ್ರಾನ್ಸಿನ ಏಜೆನ್ಸಿ ಪ್ರೆಸ್ಸೆ ಫ್ರಾನ್ಸ್, ಜಪಾನಿನ ಕ್ಯೋಡೋ, ನ್ಯಾಫೆನ್ ಮುಂತಾದುವು ದ್ವಿತೀಯ ದರ್ಜೆ ಸಂಸ್ಥೆಗಳು.

ವಿಕಾಸಶೀಲ ರಾಷ್ಟ್ರಗಳ ಪರಿಸ್ಥಿತಿ ಸುದ್ದಿ ಕ್ಷೇತ್ರದಲ್ಲಿ ಸಹ ಶೋಚನೀಯ. ಬಲಿಷ್ಠ ವಾರ್ತಾಸಂಸ್ಥೆಗಳ ರಚನೆಗೆ ಅಗತ್ಯ ಬಂಡವಾಳ, ಸಿಬ್ಬಂದಿ ಮತ್ತು ತಂತ್ರಜ್ಞಾನದ ಕೊರತೆ ಅವನ್ನು ಕಾಡುತ್ತಿರುವ ಪ್ರಮುಖ ಸಮಸ್ಯೆ.

ಅಸೋಸಿಯೇಟೆಡ್ ಪ್ರೆಸ್, ಯುನೈಟೆಡ್ ಪ್ರೆಸ್ ಇಂಟರ್‌ನ್ಯಾಷನಲ್ ಮತ್ತು ರಾಯಿಟರ್ಸ್ ಜಗತ್ತಿನ ಒಟ್ಟು ಸುದ್ದಿಸರಬರಾಜಿನಲ್ಲಿ ಶೇ. 70ಕ್ಕಿಂತ ಹೆಚ್ಚು ನಿಯಂತ್ರಣ ಹೊಂದಿವೆ. ಅವುಗಳಿಗೆ ತಮ್ಮ ದೇಶಗಳ ಸರಕಾರಗಳಿಂದ ಅಪಾರ ಬೆಂಬಲ ಸಹ ದೊರಕುತ್ತಿದೆ.

ಈ ಮೂರು ಸುದ್ದಿಸಂಸ್ಥೆಗಳಿರಲಿ, ದ್ವಿತೀಯ ದರ್ಜೆಯ ಸಂಸ್ಥೆಗಳಿಗೆ ಸಮನಾದ ಒಂದೇ ಒಂದು ಸುದ್ದಿಸಂಸ್ಥೆ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಇಲ್ಲ. ಅಲ್ಲದೆ, ಪಾಶ್ಚಿಮಾತ್ಯ ರಾಷ್ಟ್ರಗಳು ಇತರ ರಾಷ್ಟ್ರಗಳನ್ನು ನೋಡುವ ದೃಷ್ಟಿಕೋನವೇ ಬೇರೆ. ಪಾಶ್ಚಿಮಾತ್ಯರ ಒಲವು ಮತ್ತು ನೀತಿಗಳನ್ನು ಪ್ರತಿಪಾದಿಸುವ ಈ ಸಂಸ್ಥೆಗಳು ಏಷ್ಯಾ ಮತ್ತು ಆಫ್ರಿಕಾ ದೇಶಗಳನ್ನು ಬಹಳಷ್ಟು ಉಪೇಕ್ಷಿಸಿವೆ ಎಂದರೆ ಉತ್ಪ್ರೇಕ್ಷೆಯಲ್ಲ.

ಈ ಮೂರೂ ಸುದ್ದಿಸಂಸ್ಥೆಗಳ ದೈತ್ಯಗಾತ್ರಕ್ಕೆ ಅವುಗಳ ಸಂಪರ್ಕಜಾಲದ ವಿಸ್ತಾರವೇ ಸಾಕ್ಷಿ. ಯುನೈಟೆಡ್ ಪ್ರೆಸ್ ಇಂಟರ್‌ನ್ಯಾಷನಲ್ 62 ದೇಶಗಳಲ್ಲಿ 238 ಶಾಖೆಗಳನ್ನು ಹೊಂದಿದೆ. ನೂರಕ್ಕೂ ಹೆಚ್ಚು ದೇಶಗಳಲ್ಲಿ ಅದರ ಸುದ್ದಿಸೇವೆ ಪಡೆಯುವ 6500 ಮಂದಿ ಚಂದಾದಾರರು ಇದ್ದಾರೆ. ಅಸೋಸಿಯೇಟೆಡ್ ಪ್ರೆಸ್ ಸುದ್ದಿ ಮತ್ತು ಚಿತ್ರಗಳನ್ನು ಪಡೆಯುವ ಚಂದಾದಾರ

ರಲ್ಲಿ 10,000 ಪತ್ರಿಕೆಗಳು ಮತ್ತು ಬಾನುಲಿ ಕೇಂದ್ರಗಳು 109 ದೇಶಗಳಲ್ಲಿ ಹರಡಿವೆ. ಯುಪಿಐನ ಸುದ್ದಿ ಪ್ರಸಾರ ಪ್ರತಿದಿನ 45 ಲಕ್ಷ ಪದಗಳು.[1]

ರಾಯಿಟರ್ಸ್ ಜಗತ್ತಿನ ಅತ್ಯಂತ ಹಳೆಯ ಸುದ್ದಿ ಸಂಸ್ಥೆ. ಲಂಡನ್ ಮಹಾನಗರದಲ್ಲಿ 1850ರಲ್ಲಿ ಸ್ಥಾಪಿತವಾದ ಮೊದಲ ವಾರ್ತಾಸಂಸ್ಥೆಯೂ ಹೌದು. ಇದರ ಮಾಲೀಕತ್ವ ಬ್ರಿಟನ್, ಆಸ್ಟ್ರೇಲಿಯಾ ಮತ್ತು ನ್ಯೂಜಿಲೆಂಡ್ ರಾಷ್ಟ್ರಗಳ ಪತ್ರಿಕೆಗಳಿಗೆ ಸೇರಿದೆ. ಸುಮಾರು 200 ದೇಶಗಳಲ್ಲಿ ಸಂಗ್ರಹಿಸಲಾದ ಸುದ್ದಿಯನ್ನು ನೂರಐವತ್ತಕ್ಕೂ ಹೆಚ್ಚು ದೇಶಗಳಲ್ಲಿರುವ ಚಂದಾದಾರರಿಗೆ ವಿತರಿಸಲಾಗುತ್ತದೆ. ಪ್ರತಿದಿನ ಲಂಡನ್ನಿನಲ್ಲಿರುವ ಕೇಂದ್ರ ಕಛೇರಿಗೆ ಪ್ರಪಂಚದಾದ್ಯಂತ ಹಬ್ಬಿರುವ ಕೇಬಲ್, ದೂರದರ್ಶಕ ಮತ್ತು ಉಪಗ್ರಹಜಾಲಗಳಿಂದ ಐದುಲಕ್ಷಕ್ಕೂ ಹೆಚ್ಚು ಪದಗಳ ಸುದ್ದಿ ಬಂದು ಸುರಿಯುತ್ತದೆ. ಇವಲ್ಲದೆ, ರಾಯಿಟರ್ಸ್‌ನ ಆರ್ಥಿಕ ಸುದ್ದಿ ಸೇವೆ ವಿಶಿಷ್ಟ ಮತ್ತು ಉತ್ಕೃಷ್ಟ.[2]

ಪ್ರಗತಿ ಹೊಂದಿದ ಮತ್ತು ಹೊಂದುತ್ತಿರುವ ರಾಷ್ಟ್ರಗಳ ನಡುವಿನ ಸುದ್ದಿ ಅಸಮತೆ ಈಚಿನದಲ್ಲ. ಬಹಳ ಕಾಲದಿಂದ ನಡೆದುಬಂದದ್ದು. ಅದನ್ನು ಸರಿಪಡಿಸುವ ಯಾವುದೇ ಪ್ರಯತ್ನ ಇಲ್ಲಿಯವರೆಗೆ ಆಶಾದಾಯಕವಾಗಿಲ್ಲ. ಅಮೆರಿಕಾ ಸಂಯುಕ್ತ ಸಂಸ್ಥಾನಗಳ ವಿಖ್ಯಾತ ಸಮುದಾಯ ಸಂಪರ್ಕತಜ್ಞ ವಿಲ್‌ಬರ್ ಶ್ರಾಮ್ ನಡೆಸಿರುವ ಅಧ್ಯಯನ ಸುದ್ದಿ ಸರಬರಾಜಿನಲ್ಲಿರುವ ಅಸಮತೆಯನ್ನು ಸ್ಪಷ್ಟವಾಗಿ ಗುರುತಿಸಿದೆ.[3]

	ಅರ್ಜೆಂಟೈನಾ	ಆಸ್ಟ್ರೇಲಿಯ	ಬ್ರೆಜಿಲ್	ಈಜಿಪ್ಟ್	ಫ್ರಾನ್ಸ್	ಭಾರತ	ಇಟಲಿ	ಜಪಾನ್	ಪಾಕಿಸ್ತಾನ	ಪೋಲೆಂಡ್	ಇಂಗ್ಲೆಂಡ್	ಅಮೆರಿಕಾ ಸಂಯುಕ್ತ ಸಂಸ್ಥಾನಗಳ	ಸೋವಿಯತ್ ರಷ್ಯಾ
ಎ.ಪಿ.	2				5			5			12	64	6
ಯು.ಪಿ.ಐ.					3	2		10			12	64	7
ರಾಯಿಟರ್ಸ್		4		2	14	2		2			30	36	8
ಎ.ಎಫ್.ಪಿ.		8		2	8	5		3			24	37	10
ತಾಸ್						7		3			9	13	65

ಜಗತ್ತಿನ ಐದು ಪ್ರಮುಖ ಸುದ್ದಿ ಸಂಸ್ಥೆಗಳು ಏಷ್ಯಾ ಖಂಡಕ್ಕೆ ನೀಡಿದ ಸುದ್ದಿ ಸರಬರಾಜಿನಲ್ಲಿ 13 ರಾಷ್ಟ್ರಗಳಿಗೆ ನೀಡಿದ ಆದ್ಯತೆಯ ಪ್ರಮಾಣ. ಖಾಲಿ ಸ್ಥಳ ಶೇಕಡ 1.5 ಕ್ಕಿಂತ ಕಡಿಮೆ ಪ್ರಮಾಣದ ಸುದ್ದಿ ಸರಬರಾಜಿನಲ್ಲಿ ಆದ್ಯತೆಯನ್ನು ಸೂಚಿಸುತ್ತದೆ.

ಪ್ರಸಿದ್ಧ ಅರ್ಥಶಾಸ್ತ್ರಜ್ಞ ಅಶೋಕಮಿತ್ರ ಇದಕ್ಕೆ ಕಾರಣವಾದ ಕೆಲವು ಅಂಶಗಳನ್ನು ಪಟ್ಟಿಮಾಡಿದ್ದಾರೆ. ಸೂಕ್ತ ಪರಿಕರಣಗಳ ಕೊರತೆ, ಏಷ್ಯಾದ ರಾಷ್ಟ್ರಗಳ ನಡುವೆ ಭಾರೀ ಸುದ್ದಿಸಂಸ್ಥೆಗಳು ಬೆಳೆಸುವ ಅಂತರ ಮತ್ತು ಇದನ್ನು ತಗ್ಗಿಸುವ ಬಗ್ಗೆ ಆ ರಾಷ್ಟ್ರಗಳಲ್ಲೇ ಇರುವ ತಾತ್ಸಾರ. ಇವಕ್ಕೆ ಪೂರಕವಾಗಿ ಏಷ್ಯಾ ರಾಷ್ಟ್ರಗಳಲ್ಲಿ ಅಭಿಪ್ರಾಯ ರೂಪಿಸುವ ಕ್ಷೇತ್ರ ವೇಗವಾಗಿ ಬಹುರಾಷ್ಟ್ರೀಯ ಸಂಸ್ಥೆಗಳ ಕೈಗೆ ಹೋಗುತ್ತಿರುವುದು. ಸಾಲದು ಎಂಬಂತೆ ನಾವು ಓದುವ ಪಠ್ಯಪುಸ್ತಕಗಳೂ ಬ್ರಿಟನ್ ಮತ್ತು ಅಮೆರಿಕಾ ಸಂಯುಕ್ತ ಸಂಸ್ಥಾನಗಳಿಂದ ಆಮದಾಗಬೇಕಾಗಿರುವ ವಿಪರ್ಯಾಸವನ್ನು ಅಶೋಕಮಿತ್ರ ನೋವಿನಿಂದ ಎತ್ತಿ ತೋರಿಸಿದ್ದಾರೆ.[4] ಸುದ್ದಿ ಕ್ಷೇತ್ರದಲ್ಲಿರುವ ಈ ಅಸಮತೆ ಈಗ ಚಿತ್ರಗಳು, ಚಲನಚಿತ್ರಗಳು ಮತ್ತು ಟೆಲಿವಿಷನ್ ಕ್ಷೇತ್ರವನ್ನು ಪ್ರವೇಶಿಸಿದೆ ಎಂದರೆ ಅದರ ತೀವ್ರತೆಯ ಅರಿವಾಗುತ್ತದೆ.

ಸಂಪರ್ಕ ಕ್ಷೇತ್ರವನ್ನು ಅಭಿವೃದ್ಧಿಪಡಿಸಲು ಅಪಾರ ಬಂಡವಾಳ ಹೂಡಿಕೆ ಅತ್ಯಗತ್ಯ. "ಭಾರತ ಮತ್ತು ಯಾವುದಾದರೊಂದು ಆಫ್ರಿಕನ್ ರಾಷ್ಟ್ರದೊಡನೆ ಸಂಪರ್ಕವ್ಯವಸ್ಥೆಯನ್ನು ನಿರ್ಮಿಸಲು ಭಾರತೀಯ ಸಂಸ್ಥೆಯೊಂದಕ್ಕೆ ಬೇಕಾಗುವ ಬಂಡವಾಳ 4,00000 ರೂಪಾಯಿ. ಹಾಕಿದಷ್ಟು ಬಂಡವಾಳ ವಾಪಸ್ಸು ಬರುತ್ತದೆಂಬ ಖಾತರಿ ಇಲ್ಲ"[5] ಇಂತಹ ಪರಿಸ್ಥಿತಿಯಲ್ಲಿ ಸಂಪರ್ಕ ಕ್ಷೇತ್ರವನ್ನು ಉತ್ತಮಪಡಿಸುವ ಯೋಜನೆಗಳು ಮೃಗಜಲವಾಗಿಯೇ ಉಳಿದರೆ ಅಚ್ಚರಿಯೇನಿಲ್ಲ.

ಇನ್ನು ಪಶ್ಚಿಮದ ಸುದ್ದಿಸಂಸ್ಥೆಗಳು ಸರಬರಾಜು ಮಾಡುವ ಸುದ್ದಿ. ಇಲ್ಲಿ ಅಲಿಪ್ತ ರಾಷ್ಟ್ರಗಳಿಗೆ ಯಾವುದು ಹಾನಿಕರವೋ ಅದಕ್ಕೆ ಪ್ರಾಮುಖ್ಯತೆ. ಅವುಗಳ ಸಾಧನೆಗಳನ್ನು ಕೆಳಕ್ಕೆ ತಳ್ಳುವುದು, ಯಾವುದು ಅವುಗಳಿಗೆ ಕಿರಿಕಿರಿ ಉಂಟುಮಾಡಬಲ್ಲುದೋ ಅದಕ್ಕೆ ಪ್ರಾಶಸ್ತ್ಯ ನೀಡುವುದು ಇವು ಅನುಸರಿಸುತ್ತಿರುವ ನೀತಿ. ಪಶ್ಚಿಮ ರಾಷ್ಟ್ರಗಳ ಹಿತ ಕಾಯುವ ಸುದ್ದಿಗೆ ಅಗ್ರಮಾನ್ಯತೆ. ಈ ದ್ವಿಮುಖ ನೀತಿಯ ಸುದ್ದಿ ಸರಬರಾಜು ಅಲಿಪ್ತ ರಾಷ್ಟ್ರಗಳಿಗೆ ನುಂಗಲಾರದ ತುತ್ತು.

ಸುದ್ದಿ ಸರಬರಾಜು ಕ್ಷೇತ್ರದಲ್ಲಿರುವ ಈ ಹೊಸ ವಸಾಹತುವಾದವನ್ನು ತೊಡೆಯಲು ಕೊನೆಗೂ ಕೆಲವು ಅಲಿಪ್ತ ರಾಷ್ಟ್ರಗಳು ಯೋಜಿಸಿದವು. ಅದಕ್ಕೆ ಉಳಿದ ಅಲಿಪ್ತರಿಂದ ವ್ಯಾಪಕ ಬೆಂಬಲ ದೊರೆಯಿತು.

ಅಲಿಪ್ತ ರಾಷ್ಟ್ರಗಳ ವಿದ್ಯಮಾನಗಳನ್ನು ತಿಳಿಸುವ ಸುದ್ದಿಗಳಲ್ಲಿ ಅವುಗಳ 'ಸ್ವಂತ ಧ್ವನಿ' ಇರಬೇಕು ಎಂಬುದು ಅದರ ರಚನೆಯ ಉದ್ದೇಶ. ಕಂಡದ್ದನ್ನು ಕಂಡಹಾಗೆ ನಿರೂಪಿಸಬಲ್ಲ, ಅಲಿಪ್ತ ರಾಷ್ಟ್ರಗಳ ಸುದ್ದಿ ಸಂಚಯನ ಮತ್ತು ವಿತರಣ ಕಾರ್ಯಕ್ಕಾಗಿ ಅಲಿಪ್ತ ರಾಷ್ಟ್ರಗಳಿಂದಲೇ ಯೋಜಿಸಲ್ಪಟ್ಟ ಸ್ವತಂತ್ರ ಪರ್ಯಾಯ ಸುದ್ದಿ ವ್ಯವಸ್ಥೆ 'ಅಲಿಪ್ತ ರಾಷ್ಟ್ರಗಳ ವಾರ್ತಾಕೂಟ'[6]

ಇದರ ರಚನೆಯ ಸಲುವಾಗಿ 1976ರ ಜುಲೈ 8ರಿಂದ 13ರವರೆಗೆ ಅಲಿಪ್ತ ರಾಷ್ಟ್ರಗಳ ಸಚಿವ ಮಟ್ಟದ ಸಮ್ಮೇಳನ ನವದೆಹಲಿಯಲ್ಲಿ ನಡೆಯಿತು. ಏಷ್ಯಾ, ಆಫ್ರಿಕಾ, ಲ್ಯಾಟಿನ್ ಅಮೆರಿಕಾ ಮತ್ತು ಯೂರೋಪಿನ ಸುಮಾರು 60 ರಾಷ್ಟ್ರಗಳ ಸುದ್ದಿ ಸಚಿವರು, ವಾರ್ತಾ ಇಲಾಖೆಗಳ ಮುಖ್ಯಸ್ಥರು, ಸುದ್ದಿಸಂಸ್ಥೆಗಳು ಮತ್ತು ವಿಶ್ವಸಂಸ್ಥೆಯ ಪ್ರತಿನಿಧಿಗಳು ಭಾಗವಹಿಸಿದ್ದರು.

ಸುದೀರ್ಘ ಚರ್ಚೆಯ ನಂತರ ಈ ಸಮ್ಮೇಳನದಲ್ಲಿ ಅಲಿಪ್ತ ವಾರ್ತಾಕೂಟದ ಸಂವಿಧಾನ ಅಂಗೀಕೃತವಾಯಿತು. ಕೊಲಂಬೋವಿನಲ್ಲಿ ಆಗಸ್ಟ್‌ನಲ್ಲಿ ನಡೆದ ಅಲಿಪ್ತರ ಶೃಂಗಸಭೆಯಲ್ಲಿ ಇದಕ್ಕೆ ವಿಧ್ಯುಕ್ತ ಒಪ್ಪಿಗೆ ದೊರಕಿತು.

ಇದಕ್ಕೆ ಮುನ್ನವೇ ಈ ನಿಟ್ಟಿನಲ್ಲಿ ಪ್ರಯತ್ನ ಸಾಕಷ್ಟು ನಡೆದಿತ್ತು. ಅಲ್ಜಿಯರ್ಸ್‌ನಲ್ಲಿ 1973ರ ಸೆಪ್ಟೆಂಬರ್‌ನಲ್ಲಿ ನಡೆದ ನಾಲ್ಕನೇ ಅಲಿಪ್ತ ಶೃಂಗ ಸಮ್ಮೇಳನದಲ್ಲಿ ಸಂಪರ್ಕ ಮಾಧ್ಯಮಗಳ ಅಭಿವೃದ್ಧಿಗಾಗಿ ವಿಶಾಲ ತಳಹದಿಯ ಕಾರ್ಯಕ್ರಮವೊಂದನ್ನು ರೂಪಿಸಲಾಯಿತು.

ಇದಕ್ಕೆ ಪೂರಕವಾಗಿ ಅಲಿಪ್ತ ವಿದೇಶ ಸಚಿವರ ಸಮ್ಮೇಳನ 1975ರ ಆಗಸ್ಟ್‌ನಲ್ಲಿ ಪೆರುವಿನ ರಾಜಧಾನಿ ಲಿಮಾದಲ್ಲಿ ವ್ಯವಸ್ಥೆಗೊಂಡಿತ್ತು. ಇಲ್ಲಿ ಸುದ್ದಿಕೂಟದ ರಚನೆಗಾಗಿ ಅಲಿಪ್ತ ರಾಷ್ಟ್ರಗಳ ಸುದ್ದಿಸಂಸ್ಥೆಗಳನ್ನು ಒಟ್ಟುಗೂಡಿಸುವ ಸಮ್ಮೇಳನವನ್ನು ನಡೆಸಲು ಭಾರತವನ್ನು ಆಯಲಾಯಿತು. ಇದಕ್ಕೂ ಮುನ್ನ ಸಮುದಾಯ ಸಂಪರ್ಕ ಮಾಧ್ಯಮಗಳ ಅಭಿವೃದ್ಧಿಗೆ ಮಾರ್ಗೋಪಾಯಗಳನ್ನು ಚರ್ಚಿಸುವ ಸಲುವಾಗಿ ವಿಚಾರ ಸಂಕಿರಣವೊಂದನ್ನು ನಡೆಸಲು ಟ್ಯೂನೀಸಿಯಾವನ್ನು ಕೇಳಲಾಯಿತು.

ವಿಚಾರ ಸಂಕಿರಣ 1976ರ ಮಾರ್ಚಿಯಲ್ಲಿ ಟ್ಯೂನಿಸ್ ನಗರದಲ್ಲಿ ನಡೆಯಿತು. ಸುಮಾರು 39 ದೇಶಗಳ ತಾಂತ್ರಿಕ ಹಾಗೂ ಅಧಿಕಾರಿ ನಿಯೋಗಗಳು ಇದರಲ್ಲಿ ಭಾಗವಹಿಸಿದ್ದವು. ಭಾರತದ ಪರ ಆಗಿನ ಪ್ರಧಾನಿಯ ವಿಶೇಷ ರಾಯಭಾರಿ ಮಹಮದ್ ಯೂನಸ್ ನಿಯೋಗದ ನಾಯಕತ್ವವನ್ನು ವಹಿಸಿದ್ದರು. ವಿಚಾರ ಸಂಕಿರಣ ಫಲಪ್ರದವಾಯಿತೆಂದು ಬೇರೆ ಹೇಳಬೇಕಿಲ್ಲ.

ನವದೆಹಲಿ ಸಮ್ಮೇಳನ ಯಶಸ್ವೀ ಆಗಬೇಕಾದರೆ ಎರಡು ಅಂಶಗಳನ್ನು ಮಹತ್ವಪೂರ್ಣವೆಂದು ಭಾರತ ಸರ್ಕಾರ ಪರಿಗಣಿಸಿತು. ಮೊದಲನೆಯದು, ಸಮ್ಮೇಳನ ರಾಜಕೀಯ ಮಟ್ಟದಲ್ಲಿ ನಡೆಯಬೇಕು. ಎರಡನೆಯದು, ಸಮ್ಮೇಳನದ ಚರ್ಚೆ ಕೇವಲ ಸುದ್ದಿಸಂಸ್ಥೆಗಳ ಒಕ್ಕೂಟಕ್ಕೆ ಮಾತ್ರ ಸೀಮಿತವಾಗಬಾರದು. ಜೊತೆಗೆ ಎಲ್ಲ ಸಮುದಾಯ ಸಂಪರ್ಕ ಮಾಧ್ಯಮಗಳು ಎದುರಿಸುತ್ತಿರುವ ಮೂಲಭೂತ ಸಮಸ್ಯೆಗಳನ್ನು ಚರ್ಚಿಸುವುದು ಮತ್ತು ಎಲ್ಲದಕ್ಕೂ ಅನ್ವಯವಾಗುವಂತಹ ಸಮನ್ವಯ ಕಾರ್ಯಕ್ರಮವೊಂದನ್ನು ರೂಪಿಸುವುದು.

ಸಮ್ಮೇಳನ ಅಂಗೀಕರಿಸಿದ ನಿರ್ಣಯವನ್ನು ಸುದ್ದಿ ಮಾಧ್ಯಮ ಕುರಿತ 'ನವದೆಹಲಿ ಘೋಷಣೆ' ಎಂದು ಕರೆಯಲಾಯಿತು. ನವದೆಹಲಿ ಸಮ್ಮೇಳನ ಅಂಗರಚನೆಯನ್ನು ಮಾತ್ರವಲ್ಲದೆ, ಹದಿನಾಲ್ಕು ರಾಷ್ಟ್ರಗಳ ಸಮನ್ವಯ ಸಮಿತಿಯೊಂದನ್ನು ರಚಿಸಿತು. ಅದರ ಅಧ್ಯಕ್ಷಸ್ಥಾನಕ್ಕೆ ಭಾರತ ಸರ್ವಾನುಮತದಿಂದ ಆಯ್ಕೆಯಾಯಿತು.

ಇತರ ಸದಸ್ಯ ರಾಷ್ಟ್ರಗಳು ಕ್ಯೂಬಾ, ಈಜಿಪ್ಟ್, ಘಾನಾ, ಇಂಡೊನೇಷಿಯಾ, ಇರಾಕ್, ಮಾರಿಷಸ್, ಮೆಕ್ಸಿಕೋ, ಪೆರು, ಸೆನೆಗಲ್, ಟ್ಯೂನೀಸಿಯಾ, ವಿಯಟ್ನಾಮ್, ಯುಗೋಸ್ಲಾವಿಯಾ ಮತ್ತು ಜೈರೆ. ಭೌಗೋಳಿಕವಾಗಿ ಎಲ್ಲ ಪ್ರದೇಶಗಳಿಗೂ ಸೂಕ್ತ ಪ್ರಾತಿನಿಧ್ಯ ದೊರಕುವಂತೆ ಈ ಸಮಿತಿಯನ್ನು ಆಯಲಾಗಿದೆ.

ಅಲಿಪ್ತ ಸುದ್ದಿಕೂಟದ ಸಂವಿಧಾನ ಹೀಗಿದೆ :[7]

ಉದ್ದೇಶಗಳು :

1. ಅಲಿಪ್ತ ಸುದ್ದಿಕೂಟದ ಧ್ಯೇಯ, ತನ್ನ ಗುರಿಗಳನ್ನು ಬೆಳೆಸುವ ಮತ್ತು ಸಾಧಿಸುವ ಪ್ರಯತ್ನದಲ್ಲಿ ಅಲಿಪ್ತ ರಾಷ್ಟ್ರಗಳು ತಮ್ಮ ಸಮ್ಮೇಳನಗಳಲ್ಲಿ ಒಗ್ಗೂಡಿ ತೆಗೆದುಕೊಂಡ ನಿರ್ಧಾರಗಳ ಆಧಾರದ ಮೇಲೆ ಅಲಿಪ್ತ ರಾಷ್ಟ್ರಗಳ ನಡುವಣ ಪರಸ್ಪರ ಸುದ್ದಿ ವಿನಿಮಯವನ್ನು ಸಧಾರಿಸುವುದು, ವಿಸ್ತರಿಸುವುದು ಮತ್ತು ಪರಸ್ಪರ ಸಹಕಾರವನ್ನು ಮತ್ತಷ್ಟು ಬಲಪಡಿಸುವುದು.

2. ಪ್ರಗತಿಪರ ಆರ್ಥಿಕ, ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ವಿಕಾಸ

ಮತ್ತು ಪರಸ್ಪರ ಸಹಕಾರ ಹಾಗೂ ಕಾರ್ಯಕ್ರಮಕ್ಕೆ ಹೆಚ್ಚು ಒತ್ತುಕೊಟ್ಟ ವಸ್ತುನಿಷ್ಠ ಸುದ್ದಿ ಅಲಿಪ್ತ ಸುದ್ದಿ ಕೂಟದ ಅಡಿಗಲ್ಲು.

3. ಅಲಿಪ್ತ ರಾಷ್ಟ್ರಗಳ ನಡುವಿನ ಪರಸ್ಪರ ಸಹಕಾರ ಮತ್ತು ಇತರ ಸಾಮಾನ್ಯ ಹಿತಾಸಕ್ತಿಯ ವಿಷಯಗಳನ್ನು ಕುರಿತ ಸತ್ಯಪೂರ್ಣ ಹಾಗೂ ನಿರ್ದುಷ್ಟ ಸುದ್ದಿಯನ್ನು ಅಲಿಪ್ತ ರಾಷ್ಟ್ರಗಳ ನಡುವೆ ಮತ್ತು ಅಂತರರಾಷ್ಟ್ರೀಯ ಸಮುದಾಯಕ್ಕೆ ಸರಬರಾಜು ಮಾಡುವ ವ್ಯವಸ್ಥೆಯನ್ನು ಉತ್ತಮಪಡಿಸುವುದು ಒಕ್ಕೂಟದ ಗುರಿ.

4. ಅಲಿಪ್ತ ರಾಷ್ಟ್ರಗಳು ಮತ್ತು ಅವುಗಳ ನೀತಿಗಳನ್ನು ಕುರಿತು ಮತ್ತಷ್ಟು ಮಾಹಿತಿಯನ್ನು ನೀಡಿ ಈ ಕ್ಷೇತ್ರದಲ್ಲಿ ಈಗಿರುವ ಅಂತರವನ್ನು ತುಂಬುವುದು ಸುದ್ದಿಕೂಟದ ಉದ್ದೇಶ. ಸುದ್ದಿಕೂಟದ ಸುದ್ದಿಗಳನ್ನು ಇತರ ಸುದ್ದಿಸಂಸ್ಥೆಗಳು, ಸಮುದಾಯ ಸಂಪರ್ಕ ಮಾಧ್ಯಮಗಳು ಮತ್ತು ಇತರ ಆಸಕ್ತ ಸಂಸ್ಥೆಗಳಿಗೆ ದೊರಕುವಂತೆ ಮಾಡಬಹುದು.

5. ಸುದ್ದಿಕೂಟದಲ್ಲಿ ಭಾಗವಹಿಸಿರುವ ಅಲಿಪ್ತ ರಾಷ್ಟ್ರಗಳ ನಡುವೆ ಈಗಾಗಲೆ ಇರುವ ಸುದ್ದಿ ವಿನಿಮಯ ವ್ಯವಸ್ಥೆ ಅಥವಾ ರಾಷ್ಟ್ರೀಯ ಸುದ್ದಿಸಂಸ್ಥೆಗೆ ಈ ಕೂಟ ಬದಲಿ ವ್ಯವಸ್ಥೆ ಅಲ್ಲ. ಅದರ ಸ್ಥಾಪನೆಯ ಉದ್ದೇಶ ಮೇಲೆ ಹೇಳಿದ ಗುರಿಗಳ ಸಾಧನೆ ಅಷ್ಟೇ.

ಕಾರ್ಯವಿಧಾನ :

1. ಭಾಗವಹಿಸುತ್ತಿರುವ ಪ್ರತಿಯೊಂದು ಸುದ್ದಿ ಸಂಸ್ಥೆಗೂ ಒಕ್ಕೂಟದ ಚೌಕಟ್ಟಿನಲ್ಲಿ ಸುದ್ದಿಯನ್ನು ಕಳುಹಿಸುವ ಮತ್ತು ವಿತರಿಸುವ ಹಕ್ಕು ಉಂಟು.

2. ಸುದ್ದಿಕೂಟದ ಚೌಕಟ್ಟಿನೊಳಗೆ ಪ್ರಾದೇಶಿಕ ಮರುಸುದ್ದಿವಿತರಣೆ ಕೇಂದ್ರಗಳಾಗಿ ಕಾರ್ಯನಿರ್ವಹಿಸಲು ಸಿದ್ಧವಿರುವ ಎಲ್ಲ ಸುದ್ದಿಸಂಸ್ಥೆಗಳಿಗೂ ಆ ರೀತಿ ಕಾರ್ಯನಿರ್ವಹಿಸಲು ಮತ್ತು ಪಾಲುಗೊಳ್ಳುತ್ತಿರುವ ಸುದ್ದಿಸಂಸ್ಥೆಗಳೊಡನೆ ಈ ಉದ್ದೇಶಕ್ಕಾಗಿ ತಮ್ಮನ್ನು ಗುರುತಿಸಿಕೊಳ್ಳಲು ಅವಕಾಶ ಉಂಟು.

3. ಭಾಗವಹಿಸುವ ಎಲ್ಲ ಸುದ್ದಿಸಂಸ್ಥೆಗಳು ಒಪ್ಪಂದ ಮಾಡಿಕೊಳ್ಳಲಾದ ಶಬ್ದಗಳಷ್ಟು ಸುದ್ದಿಯನ್ನು ಒಂದು ಅಥವಾ ಹೆಚ್ಚು ಸಂಖ್ಯೆಯ ಗುರುತಿಸಲಾದ ವಿತರಣೆ ಸಂಸ್ಥೆಗಳಿಗೆ ಕಳುಹಿಸಬೇಕು.

4. ಎಲ್ಲ ವಿತರಣ ಸುದ್ದಿಸಂಸ್ಥೆಗಳು ತಮ್ಮ ಪ್ರತಿದಿನದ ಸುದ್ದಿರವಾನೆ ಅಥವಾ ಪ್ರಸಾರದಲ್ಲಿ ಇತರ ಪಾಲ್ಗೊಂಡ ಸುದ್ದಿಸಂಸ್ಥೆಗಳಿಂದ ಬರುವ ಸುದ್ದಿಗಳನ್ನು ವಿತರಿಸಲು ಪರಸ್ಪರ ಒಪ್ಪಿಕೊಳ್ಳಲಾದಷ್ಟು ಕಾಲವನ್ನು ಮೀಸಲಿಡಬೇಕು.

5. ಭಾಗವಹಿಸುವ ಪ್ರತಿಯೊಂದು ಸುದ್ದಿಸಂಸ್ಥೆಯೂ ಸ್ವತಃ ತಾನೇ ಪರಸ್ಪರ ಮನ್ನಣೆಯ ಮತ್ತು ಸಾಮಾನ್ಯ ಹಿತಾಸಕ್ತಿಯ ಮಾಹಿತಿಗಳನ್ನು ಆರಿಸಿ ಸಿದ್ಧಪಡಿಸಬೇಕು. ಸಾಮಾನ್ಯ ಹಿತಾಸಕ್ತಿ ಏನು ಎಂಬುದನ್ನು ಸುದ್ದಿಕೂಟ ವಿವರಿಸುತ್ತದೆ.

6. ಸುದ್ದಿಮೂಲದ ಋಣಸೂಚಿ ಸಂಬಂಧಪಟ್ಟ ಸುದ್ದಿಸಂಸ್ಥೆ ಮತ್ತು ಸುದ್ದಿಕೂಟ ಎರಡನ್ನೂ ಹೆಸರಿಸಬೇಕು.

7. ಸುದ್ದಿಸಂಸ್ಥೆಗಳ ನಡುವೆ ಸುದ್ದಿಸಂಚಯನ ಮತ್ತು ವಿತರಣೆಯ ವಿಧಾನವನ್ನು ಪರಸ್ಪರ ಒಪ್ಪಂದದಿಂದ ನಿರೂಪಿಸಿಕೊಳ್ಳಬಹುದು. ಒಕ್ಕೂಟದ ಗುರಿಗಳಿಗೆ ಹೊಂದಿಕೊಂಡಿ

ರುವ ಪಾಲುಗೊಂಡ ಸುದ್ದಿ ಸಂಸ್ಥೆಗಳ ಮಧ್ಯೆ ಇರುವ ಯಾವುದೇ ದ್ವಿಪಕ್ಷೀಯ ಒಪ್ಪಂದಗಳನ್ನಾಗಲೀ ಅಥವಾ ಈ ಸುದ್ದಿ ಸಂಸ್ಥೆಗಳು ಇತರ ಸಂಸ್ಥೆಗಳೊಡನೆ ಮಾಡಿಕೊಂಡಿರುವ ಒಪ್ಪಂದಕ್ಕಾಗಲೀ ಸುದ್ದಿ ಒಕ್ಕೂಟ ಅಡ್ಡಿಯಾಗುವುದಿಲ್ಲ.

8. ಪ್ರತಿಯೊಂದು ಸುದ್ದಿ ಸಂಸ್ಥೆಯೂ ತನ್ನ ಸೇವೆಯನ್ನು ಪಡೆಯುತ್ತಿರುವ ಮುದ್ರಣ ಮಾಧ್ಯಮಗಳು, ಬಾನುಲಿ ಮತ್ತು ದೂರದರ್ಶನ ಕೇಂದ್ರಗಳು ಕೂಟದ ಸುದ್ದಿ ಮತ್ತು ಮಾಹಿತಿಯನ್ನು ಬಳಸುವಂತೆ ಸಾಧ್ಯವಾದಷ್ಟು ಯತ್ನಿಸಬೇಕು.

9. ಸಂಗ್ರಾಹಕ–ವಿತರಕ ಸಂಸ್ಥೆಗಳೂ ಒಳಗೊಂಡಂತೆ ಕೂಟದ ಎಲ್ಲ ಸುದ್ದಿ ಸಂಸ್ಥೆಗಳು ಇತರ ಭಾಗವಹಿಸಿರುವ ಸಂಸ್ಥೆಗಳೊಡನೆ ಸಂಪರ್ಕ ಇಟ್ಟುಕೊಳ್ಳಬೇಕು. ಆಗಾಗ್ಗೆ ಸುದ್ದಿ ಸಂಗ್ರಹಣೆಯ ಗುಣಮಟ್ಟವನ್ನು ಅವುಗಳಿಗೆ ತಿಳಿಸುತ್ತಿರಬೇಕು ಮತ್ತು ಒಂದು ಅಥವ ಹೆಚ್ಚು ಸಂಸ್ಥೆಗಳಿಗೆ ನಿರ್ದಿಷ್ಟ ಆಸಕ್ತಿಯ ಸೂಕ್ತವಾದ ವಿಷಯಗಳು ಮತ್ತು ವರದಿಗಳನ್ನು ಸಲಹೆ ಮಾಡಬಹುದು.

10. ಯಾವ ಅಲಿಪ್ತರಾಷ್ಟ್ರಗಳಲ್ಲಿ ಸುದ್ದಿ ಸಂಸ್ಥೆಗಳಿಲ್ಲವೋ ಅವು ಸಹ ಕೂಟದಲ್ಲಿ ಪಾಲುಗೊಳ್ಳಬಹುದು.

ಸಮನ್ವಯ :

1. ಸಮಾನತೆ ಮತ್ತು ಜನತಂತ್ರ ಕಾರ್ಯವಿಧಾನತತ್ವಗಳಿಗೆ ಪೂರ್ಣ ಗೌರವವೇ ಪಾಲುಗೊಳ್ಳುತ್ತಿರುವ ಸಂಸ್ಥೆಗಳ ನಡುವೆ ಸಹಕಾರಕ್ಕೆ ಆಧಾರ.

2. ಸುದ್ದಿ ಕೂಟದಲ್ಲಿ ಭಾಗವಹಿಸುತ್ತಿರುವ ರಾಷ್ಟ್ರಗಳು ಪ್ರತಿವರ್ಷದ ಆರಂಭದಲ್ಲಿ ಸರ್ಕಾರೀ ಮತ್ತು ರಾಷ್ಟ್ರೀಯ ಸುದ್ದಿ ಸಂಸ್ಥೆಗಳ ಮಟ್ಟದಲ್ಲಿ ಸಭೆ ಸೇರಬೇಕು. ಇಲ್ಲಿ ಅಲಿಪ್ತ ರಾಷ್ಟ್ರ ಮುಖ್ಯಸ್ಥರು ಅಥವಾ ಸರ್ಕಾರಗಳ ಮುಖ್ಯಸ್ಥರ ಸಮ್ಮೇಳನ ನಡೆಯಬೇಕು. ಇಂತಹ ಸಭೆಗಳಲ್ಲಿ ಪರಸ್ಪರ ಸಹಕಾರ ಮತ್ತು ಕೂಟದ ಕಾರ್ಯವಿಧಾನ ಕುರಿತ ಪ್ರಶ್ನೆಗಳನ್ನು ಚರ್ಚಿಸಲು ಸಮಾನ ಭೌಗೋಳಿಕ ಪ್ರಾತಿನಿಧ್ಯದ ಆಧಾರದ ಮೇಲೆ, ಸಮನ್ವಯ ಸಮಿತಿಯನ್ನು ಚುನಾಯಿಸಬೇಕು. ಸಮನ್ವಯ ಸಮಿತಿ ವರ್ಷಕ್ಕೆ ಒಂದು ಬಾರಿ ಅಥವ ಇಚ್ಛೆಪಟ್ಟಲ್ಲಿ ಅದಕ್ಕಿಂತ ಹೆಚ್ಚು ಬಾರಿ, ನಿರ್ಧರಿಸಲಾದ ಸ್ಥಳದಲ್ಲಿ ಸಭೆ ಸೇರಬೇಕು. ಸಮನ್ವಯ ಸಮಿತಿಯ ಅಧ್ಯಕ್ಷರು ಮತ್ತಿತರ ಪದಾಧಿಕಾರಿಗಳು ಮುಂದಿನ ಸಮನ್ವಯ ಸಮಿತಿಯ ಚುನಾವಣೆ ಆಗುವವರೆಗೂ ಅಧಿಕಾರದಲ್ಲಿ ಮುಂದುವರಿಯುತ್ತಾರೆ.

3. ಪಾಲುಗೊಳ್ಳುತ್ತಿರುವ ದೇಶಗಳು ಮತ್ತು ಸುದ್ದಿ ಸಂಸ್ಥೆಗಳು ತಮ್ಮ ಅನುಭವಗಳು ಮತ್ತು ಸಮಸ್ಯೆಗಳನ್ನು ಕೂಟಕ್ಕೆ ಅವು ನೀಡಿರುವ ಸಹಕಾರದ ಚೌಕಟ್ಟಿನಲ್ಲಿ ತಿಳಿಸುವ ದೃಷ್ಟಿಯಿಂದ ಸಮನ್ವಯ ಸಮಿತಿಯೊಡನೆ ಸದಾ ಸಂಪರ್ಕ ಇಟ್ಟುಕೊಳ್ಳಬೇಕು.

ಪೂರಕ ವ್ಯವಸ್ಥೆಗಳು :

1. ನುಡಿಚಿತ್ರಗಳು, ಚಿತ್ರಗಳು, ವಿಶೇಷ ಆರ್ಥಿಕ ಮತ್ತು ಸಾಂಸ್ಕೃತಿಕ ಮಾಹಿತಿಗಳು, ಪತ್ರಕರ್ತರ, ತಂತ್ರಜ್ಞರ ಮತ್ತು ತರಬೇತಿ ಸೌಲಭ್ಯಗಳ ವಿನಿಮಯದಲ್ಲಿ ಪಾಲುಗೊಳ್ಳುತ್ತಿರುವ ರಾಷ್ಟ್ರಗಳು ತಮ್ಮ ಸಹಕಾರದ ವ್ಯಾಪ್ತಿಯನ್ನು ಒಕ್ಕೂಟದ ಚೌಕಟ್ಟಿನದ ಸಮನ್ವಯ ಸಮಿತಿಯ ಸಹಕಾರದೊಡನೆ ವಿಸ್ತರಿಸಬಹುದು.

2. ಪರಸ್ಪರ ಸಹಕಾರೀ ಬಳಕೆಯ ಅವಕಾಶಗಳನ್ನು ಹೆಚ್ಚಿಸುವ ಸಲುವಾಗಿ ಕೂಟದ ಪ್ರತಿಯೊಂದು ಸುದ್ದಿ ಸಂಸ್ಥೆಯಲ್ಲಿ ದೊರಕುವ ತಾಂತ್ರಿಕ ಮಾಹಿತಿಯನ್ನು ನವೀಕರಿಸಿ, ಅವನ್ನು ಸಂಗ್ರಹಿಸುವ ಮತ್ತು ವಿತರಿಸುವ ಕಾರ್ಯವನ್ನು ಸಮನ್ವಯ ಸಮಿತಿ ನಿರ್ವಹಿಸುತ್ತದೆ.

3. ಕೂಟದಲ್ಲಿ ಪಾಲುಗೊಂಡಿರುವ ಸುದ್ದಿ ಸಂಸ್ಥೆಗಳ ಕಾರ್ಯವಿಧಾನ ಮತ್ತು ಸೌಲಭ್ಯಗಳನ್ನು ತಾಂತ್ರಿಕ ಮಾಹಿತಿ ಮತ್ತು ಸಿಬ್ಬಂದಿಯ ವಿನಿಮಯದ ಮೂಲಕ ಸುಧಾರಿಸುವ ತಾಂತ್ರಿಕ ಸಹಕಾರದ ಸಾಧ್ಯಾಸಾಧ್ಯತೆಗಳನ್ನು ಸಮನ್ವಯ ಸಮಿತಿ ಪರಿಶೀಲಿಸುತ್ತದೆ.

4. ಭಾಗವಹಿಸುತ್ತಿರುವ ರಾಷ್ಟ್ರಗಳು ಕೇಬಲ್ ದರಗಳಲ್ಲಿ ಪರಸ್ಪರ ಹೊಂದಾಣಿಕೆ ಮತ್ತು ಸಂಪರ್ಕ ಸೌಲಭ್ಯಗಳ ಸುಧಾರಣೆ ಬಗ್ಗೆ ಒಪ್ಪಂದಗಳನ್ನು ಮಾಡಿಕೊಳ್ಳಬೇಕು.

ಬಂಡವಾಳ ಹೂಡಿಕೆ :

1. ಸುದ್ದಿಕೂಟದ ಸ್ಥಾಪನೆ ಸ್ವ–ಬಂಡವಾಳ ಹೂಡಿಕೆ ಆಧಾರದ ಮೇಲೆ. ಪಾಲುಗೊಳ್ಳುತ್ತಿರುವ ಪ್ರತಿಯೊಂದು ಸಂಸ್ಥೆಯೂ ತನ್ನ ವೆಚ್ಚವನ್ನು ತಾನೇ ಭರಿಸಬೇಕು. ಅಂದರೆ ಸುದ್ದಿ ಕಳುಹಿಸುವ ಮೂಲ ಸಂಸ್ಥೆಗಳು, ಸಂಪಾದಕೀಯ ಹಾಗೂ ತರ್ಜುಮೆ ಕಾರ್ಯವನ್ನು ನಿರ್ವಹಿಸುವ ಮತ್ತು ಸುದ್ದಿ, ವರದಿ ಹಾಗೂ ಮಾಹಿತಿಗಳನ್ನು ಕಳುಹಿಸುವ ಸುದ್ದಿಸಂಸ್ಥೆಗಳು ತಾವೇ ಆ ಎಲ್ಲ ಕೆಲಸಗಳಿಗೆ ತಗಲುವ ವೆಚ್ಚವನ್ನು ನಿರ್ವಹಿಸಬೇಕು.

2. ಮರುಸಂಚಯನ ಅಥವಾ ಮರುವಿತರಣ ಸುದ್ದಿಸಂಸ್ಥೆಗಳಿಂದ ಸುದ್ದಿಕೂಟದ ಸುದ್ದಿಪ್ರಸಾರ ಪಡೆಯುವ ಸುದ್ದಿಸಂಸ್ಥೆಗಳು ತಮ್ಮ ಚಂದಾದಾರರೊಡನೆ ಮಾಡಿಕೊಂಡ ಒಪ್ಪಂದಗಳಿಗೆ ಅನುಗುಣವಾಗಿ ತಮ್ಮ ವೆಚ್ಚದಲ್ಲೇ ಅದನ್ನು ಅವರಿಗೆ ವಿತರಿಸುತ್ತವೆ.

ಅಲಿಪ್ತ ರಾಷ್ಟ್ರದ ಸುದ್ದಿಕೂಟದ ಸಭೆಗಳಿಗೆ ವಸಾಹತುಷಾಹಿಯಿಂದ ಜಗತ್ತನ್ನು ವಿಮುಕ್ತಗೊಳಿಸುವ ಉದ್ದೇಶವಿರುವ ಮತ್ತು ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿರುವ ಸಂಸ್ಥೆಗಳಿಗೆ, ಅಂತರರಾಷ್ಟ್ರೀಯ ಸಂಸ್ಥೆಗಳಿಗೆ, ಮತ್ತು ವಿಶೇಷತಃ ವಿಶ್ವಸಂಸ್ಥೆ ಅಥವಾ ಅದರ ಅಂಗ ಸಂಸ್ಥೆ ಯುನೆಸ್ಕೊಗೆ ವೀಕ್ಷಕರಾಗಿ ಭಾಗವಹಿಸಲು ಸಮನ್ವಯ ಸಮಿತಿ ಪ್ರವೇಶ ನೀಡಬಹುದು.

ಅಲಿಪ್ತ ಸುದ್ದಿಕೂಟದ ಇತರ ಸುದ್ದಿಸಂಸ್ಥೆಗಳೊಡನೆ ಆಗ ಭಾರತದಲ್ಲಿದ್ದ ಏಕೈಕ ಸುದ್ದಿಸಂಸ್ಥೆ ಸಮಾಚಾರ್ ಸುದ್ದಿ ವಿನಿಮಯವನ್ನು ಆರಂಭಿಸಿತ್ತು. ಜನತಾ ಪಕ್ಷದ ಸರ್ಕಾರ ಅದನ್ನು ತುರ್ತುಪರಿಸ್ಥಿತಿಗೆ ಮೊದಲಿನ ನಾಲ್ಕು ಸಂಸ್ಥೆಗಳನ್ನಾಗಿ—ಪ್ರೆಸ್‌ಟ್ರಸ್ಟ್ ಆಫ್ ಇಂಡಿಯಾ, ಯುನೈಟೆಡ್ ನ್ಯೂಸ್ ಆಫ್ ಇಂಡಿಯಾ, ಹಿಂದುಸ್ತಾನ್ ಸಮಾಚಾರ್ ಮತ್ತು ಸಮಾಚಾರ್ ಭಾರತಿ—ವಿಭಜಿಸಿತು. ಈಗ ಈ ಸುದ್ದಿಸಂಸ್ಥೆಗಳ ಮತ್ತು ಅಲಿಪ್ತ ಸುದ್ದಿಕೂಟದ ಬಾಂಧವ್ಯ ಇನ್ನೂ ಸ್ಪಷ್ಟವಾಗಿಲ್ಲ.

ಇನ್ನು ಪರರಾಷ್ಟ್ರಗಳ ಸರಕಾರಗಳನ್ನೇ ಉರುಳಿಸಬಲ್ಲ ಪಶ್ಚಿಮದ ಆಸಕ್ತಿಗಳು ಈ ಸುದ್ದಿಸಂಸ್ಥೆ ಸುಸೂತ್ರವಾಗಿ ಕಾರ್ಯ ನಿರ್ವಹಿಸಲು ಬಿಡುತ್ತವೆಯೇ ಎಂಬುದು ಯಕ್ಷಪ್ರಶ್ನೆ. ಶಕ್ತಿ ರಾಜಕೀಯದಲ್ಲಿ ತಮ್ಮ ಶ್ರೇಷ್ಠತೆಯನ್ನು ಇತರ ರಾಷ್ಟ್ರಗಳ ಮೇಲೆ ಹೇರಬಯಸುವ ದೇಶಗಳು ಸುದ್ದಿ ಸಂಚಯನ ಮತ್ತು ವಿತರಣೆ ಕ್ಷೇತ್ರದಲ್ಲಿ ತಮ್ಮ ಭದ್ರನೆಲೆಯನ್ನು ಬಿಟ್ಟುಕೊಡುವುದು ಅಷ್ಟು ಸುಲಭವೇನಲ್ಲ.

ಇದರ ಜೊತೆಗೆ ಅಲಿಪ್ತ ರಾಷ್ಟ್ರಗಳ ನಡುವೆ ಇರುವ ಪರಸ್ಪರ ಅಪನಂಬಿಕೆ ಮತ್ತು ದ್ವೇಷ ಸುದ್ದಿಕೂಟದ ಉಳಿವಿಗೇ ಕುತ್ತಾಗಬಹುದು. ಶಕ್ತಿರಾಷ್ಟ್ರಗಳು ಅಲಿಪ್ತ ಚಳುವಳಿಯನ್ನೇ

ವಿಧ್ವಂಸಗೊಳಿಸಲು ನಡೆಸುತ್ತಿರುವ ಪ್ರಯತ್ನದ ಬಗ್ಗೆ ಅಲಿಪ್ತ ರಾಷ್ಟ್ರಗಳು ಎಚ್ಚರದಿಂದ ಇರಬೇಕು ಎಂದು ಯುಗೋಸ್ಲಾವಿಯಾದ ಅಧ್ಯಕ್ಷ ಜೋ ಟೀಟೋ ಮುನ್ನೆಚ್ಚರಿಕೆ ನೀಡಿರುವುದು ವಾಸ್ತವಿಕ, ಸಕಾಲಿಕ. ಅಲಿಪ್ತ ಬಣವೇನಾದರೂ ಛಿದ್ರವಾದರೆ ಅಲಿಪ್ತ ಸುದ್ದಿಕೂಟ ನಿರ್ನಾಮವಾಗುತ್ತದೆ. ಬಲಿಷ್ಠ ರಾಷ್ಟ್ರಗಳ ಸುದ್ದಿಸಂಸ್ಥೆಗಳು ಅಟ್ಟಹಾಸದಿಂದ ತಮ್ಮ ಕಪಿಮುಷ್ಟಿಯನ್ನು ಅಲಿಪ್ತ ರಾಷ್ಟ್ರಗಳ ಮೇಲೆ ಇನ್ನಷ್ಟು ಬಿಗಿಗೊಳಿಸುತ್ತವೆ. ಹಾಗೇನಾದರೂ ಆದಲ್ಲಿ ಅದು ಉತ್ತಮ ಧ್ಯೇಯೋದ್ದೇಶ ಮತ್ತು ಜಾಗತಿಕ ಶಾಂತಿಗೆ ಆದ ಸೋಲು ಎಂಬುದಂತೂ ದಿಟ.

ಇನ್ನು ಭಾರತವನ್ನೇ ಉದಾಹರಣೆಯಾಗಿ ತೆಗೆದುಕೊಂಡರೆ, ಇಲ್ಲಿಯೇ ಅಲಿಪ್ತ ಸುದ್ದಿಕೂಟದ ಬಗ್ಗೆ ಅತಿನಿರುತ್ಸಾಹದ ಸ್ವಾಗತ. ಆದರೂ ಸುದ್ದಿಕೂಟ ಕುರಿತ ಸಮ್ಮೇಳನಕ್ಕೆ ಪತ್ರಿಕಾ ಪುಟಗಳಲ್ಲಿ 'ಪರವಾಗಿಲ್ಲ' ಎನಿಸಬಹುದಾದಷ್ಟು ಸ್ಥಳಾವಕಾಶ.

ಈ ದಿಸೆಯಲ್ಲಿ ಕರ್ನಾಟಕದಲ್ಲಿ ಕನ್ನಡ ಪತ್ರಿಕೆಗಳು ಸುದ್ದಿಕೂಟದ ಸಮ್ಮೇಳನಕ್ಕೆ ನೀಡಿದ ಸ್ಥಳಾವಕಾಶದ ಬಗ್ಗೆ ನಡೆಸಲಾದ ಸಮೀಕ್ಷೆ ಕೆಳಗಿನ ಅಂಕಿ ಅಂಶಗಳನ್ನು ನೀಡಿದೆ.[8]

ಕನ್ನಡದ ಮೂರು ಪ್ರಾತಿನಿಧಿಕ ದೈನಿಕಗಳು ಅಲಿಪ್ತ ವಾರ್ತಾಕೂಟದ ರಚನೆಯನ್ನು ಸ್ವಾಗತಿಸಿ ಸಂಪಾದಕೀಯಗಳನ್ನು ಬರೆದವು. ಆದರೆ ಹಿನ್ನೆಲೆ ಲೇಖನಗಳನ್ನು ಕುರಿತು ಸಮೀಕ್ಷೆಯ ವರದಿ:

"ಈ ನಿಟ್ಟಿನಲ್ಲಿ ನೋಡಿದಾಗ ಮೂರೂ ಪತ್ರಿಕೆಗಳಲ್ಲಿ ಅಲಿಪ್ತ ಚಳುವಳಿಯ ಬಗೆಗಾಗಲೀ, ಅಲಿಪ್ತರ ವಾರ್ತಾಕೂಟದ ಬಗೆಗಾಗಲಿ ವಿವರಗಳನ್ನೊಳಗೊಂಡ ಯಾವುದೇ ಲೇಖನಗಳನ್ನು ಪ್ರಕಟಿಸಿದಂತೆ ಕಾಣಬರುವುದಿಲ್ಲ"[9]

ಇದು ಎಲ್ಲ ಭಾರತೀಯ ಭಾಷಾ ಪತ್ರಿಕೆಗಳ ವಿಚಾರದಲ್ಲೂ ಹೀಗೆಯೇ ಎಂದು ಹೇಳಬಹುದು. ಇಂಗ್ಲಿಷ್ ಪತ್ರಿಕೆಗಳು ಸ್ವಲ್ಪವಾಸಿ.

'ನವದೆಹಲಿ ಘೋಷಣೆ' ನಂತರ ಇಲ್ಲಿಯವರೆಗೆ ಅಲಿಪ್ತ ಸುದ್ದಿಕೂಟ ಸಾಧಿಸಿರುವ ಪ್ರಗತಿಯ ಚಿತ್ರಣದ ಬಗ್ಗೆ ವಿವರಗಳು ಹೊರಬಿದ್ದಿಲ್ಲ. ಅಂದರೆ ಸುದ್ದಿಕೂಟ ಕುಂಟುತ್ತಿದೆ ಎಂದು ಅರ್ಥ. ಅಲಿಪ್ತ ಸುದ್ದಿಕೂಟದ ರಚನೆ ಸ್ವಾಗತಾರ್ಹ, ಆದರೆ ಅದರ ಉಳಿವು, ಸಾಧನೆ ಸಂದೇಹಾಸ್ಪದ.

ಟಿಪ್ಪಣಿಗಳು

1. *Communicator*, No. 9 July, 1975
2. *The British Press*, 1976
3. Wilbur Schramm: *Mass Media and National Development*, UNESCO, Paris, 1964, pp. 64
4. *Communicator*, No. 9, July, 1975
5. ಕನ್ನಡ ದಿನಪತ್ರಿಕೆಗಳಲ್ಲಿ ಅಲಿಪ್ತರಾಷ್ಟ್ರ ಸುದ್ದಿಕೂಟ: ಒಂದು ವಿಶ್ಲೇಷಣೆ, ಸ್ನಾತಕೋತ್ತರ ಪತ್ರಿಕೋದ್ಯಮ ಇಲಾಖೆ, ಮೈಸೂರು ವಿಶ್ವವಿದ್ಯಾನಿಲಯ, 1977 ಪುಟ. 11
6. ಅದೇ ಪುಟ. 13
7. *Communicator*, No. 2–3, April–July, 1976
8. ಕನ್ನಡ ದಿನಪತ್ರಿಕೆಗಳಲ್ಲಿ ಅಲಿಪ್ತರಾಷ್ಟ್ರ ಸುದ್ದಿಕೂಟ : ಒಂದು ವಿಶ್ಲೇಷಣೆ ಪುಟ. 28—A (ಮುಂದಿನ ಪುಟ ನೋಡಿ)
9. ಅದೇ ಪುಟ. 30

ಪತ್ರಿಕೆಗಳು	ಕನ್ನಡ ಪ್ರಭ			ಪ್ರಜಾವಾಣಿ			ಸಂಯುಕ್ತ ಕರ್ನಾಟಕ		
ವಿವಿಧ ವಿಷಯುಗಳು	ಚದರ ಸೆಂಟಿಮೀಟರು ಗಳಲ್ಲಿ	ಕಾಲಂ ಸೆಂಟಿ ಮೀಟರುಗಳಲ್ಲಿ	ಸರಾಸರಿ ಶೇಕಡ	ಚದರ ಸೆಂಟಿಮೀಟರು ಗಳಲ್ಲಿ	ಕಾಲಂ ಸೆಂಟಿಮೀಟರು ಗಳಲ್ಲಿ	ಸರಾಸರಿ ಶೇಕಡ	ಚದರ ಸೆಂಟಿಮೀಟರು ಗಳಲ್ಲಿ	ಕಾಲಂ ಸೆಂಟಿ ಮೀಟರುಗಳಲ್ಲಿ	ಸರಾಸರಿ ಶೇಕಡ
ಸುದ್ದಿ	52382	10476.4	57.89	51919	10383.8	55.66	49456	9891.2	59.43
ಅಲಿಪ್ತ ವಾರ್ತಾ ಕೂಟದ ಸುದ್ದಿ	2731	546.2	3.02	2794	558.8	2.99	2715	543	3.27
ಇತರೆ	9863	1972.6	10.90	6057	1211.4	6.49	5454	1090.8	6.57
ಜಾಹೀರಾತು	25504	5100.8	28.19	32510	6502	34.86	25575	5115	30.73
ಒಟ್ಟು	90,480	18,096	100	93,280	18,656	100	83,200	16,640	100

ಅಲಿಪ್ತ ಸುದ್ದಿಕೂಟ

ಸಮನ್ವಯ ಸಮಿತಿಯ ಅಧ್ಯಕ್ಷರಾಗಿದ್ದ ಭಾರತದ ಡಿ. ಆರ್. ಮಂಕೇಕರ್ ಸುದ್ದಿ ಕೂಟದ ಯಶಸ್ಸಿನ ಬಗ್ಗೆ ಸ್ವಲ್ಪಮಟ್ಟಿಗೆ ಆಶಾವಾದಿ ಆಗಿದ್ದರೆಂದೇ ಹೇಳಬಹುದು. ಆದರೆ ಪಾಶ್ಚಿಮಾತ್ಯ ಸುದ್ದಿ ಸಂಸ್ಥೆಗಳಿಗೆ ಅದರ ಉಳಿವಿನ ಬಗ್ಗೆ ಇಂದಿಗೂ ಸಂದೇಹವಿದೆ.

ಇದಕ್ಕೆ ಕಾರಣಗಳು ಇಲ್ಲದಿಲ್ಲ. ಇಂದು ಅಲಿಪ್ತ ಚಳುವಳಿಯ ಸದಸ್ಯ ರಾಷ್ಟ್ರಗಳ ಸಂಖ್ಯೆ ಸುಮಾರು ನೂರು. ಇದರಲ್ಲಿ ಏಷಿಯಾ, ಆಫ್ರಿಕಾ, ಯೂರೋಪ್ ಮತ್ತು ಲ್ಯಾಟಿನ್ ಅಮೆರಿಕಾ ರಾಷ್ಟ್ರಗಳಿವೆ. ಪ್ರತಿಯೊಂದು ದೇಶವೂ ಪ್ರತಿಯೊಂದು ವಿಷಯವನ್ನೂ ತನ್ನದೇ ಆದ ದೃಷ್ಟಿಕೋನದಿಂದ ನೋಡುತ್ತದೆ. ಸಾಲದೆಂಬಂತೆ, ಅದಕ್ಕೆ ತಾತ್ವಿಕತೆಯ ಲೇಪ ಬೇರೆ.

ಹೀಗಾಗಿ ಅವುಗಳಲ್ಲೇ ತತ್ವದ ಆಧಾರದ ಸಂಘರ್ಷ ಅನಿವಾರ್ಯ. ಇದು ಅಲಿಪ್ತ ಚಳುವಳಿಯ ಧ್ರುವೀಕರಣಕ್ಕೆ ಒಯ್ಯುವಷ್ಟು ಗಂಭೀರವಾಗಬಹುದು: ಆಗ ಸಹಜವಾಗಿಯೇ ಅಲಿಪ್ತ ಸುದ್ದಿ ಕೂಟದ ಭವಿಷ್ಯ ಅಭದ್ರ.

ಹೊರಗಿನ, ಅದರಲ್ಲೂ ವಿಶೇಷವಾಗಿ ಮುಂದುವರಿದ ಪಾಶ್ಚಿಮಾತ್ಯ ರಾಷ್ಟ್ರಗಳ ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಆಕ್ರಮಣದಿಂದ ಪ್ರತಿಯೊಂದು ಅಭಿವೃದ್ಧಿಪರ ರಾಷ್ಟ್ರವೂ ತನ್ನ ಮೌಲ್ಯಗಳನ್ನು ಮತ್ತು ಸ್ವಂತಿಕೆಯನ್ನು ಕಾಯ್ದುಕೊಳ್ಳಲು ಪ್ರಯತ್ನಿಸುತ್ತಿದೆ. ಆದರೆ ಇದು ತೀರಾ ಸಂಕುಚಿತವಾಗಬಾರದು.

ಈಚೆಗೆ, ಯುನೆಸ್ಕೊ ಸಹಾ ಅನಿರ್ಬಂಧಿತ ಸುದ್ದಿ ವಿತರಣೆಯಲ್ಲಿ ಆಸಕ್ತಿ ವಹಿಸಿದೆ. ಅದು 1977ರಲ್ಲಿ ಕೈರೋದಲ್ಲಿ ನಡೆದ ಅಲಿಪ್ತ ಸುದ್ದಿ ಕೂಟದ ಸಮನ್ವಯ ಸಮಿತಿಯಲ್ಲಿ ವೀಕ್ಷಕನಾಗಿ ಭಾಗವಹಿಸಿತು. ಇತ್ತೀಚಿನ ವರದಿಗಳ ಪ್ರಕಾರ ಅಲಿಪ್ತ ಸುದ್ದಿ ಕೂಟದಲ್ಲಿ ಭಾಗವಹಿಸುತ್ತಿರುವ ರಾಷ್ಟ್ರಗಳ ಸಂಖ್ಯೆ ಕೂಟವನ್ನು ಬೆಂಬಲಿಸಿದ ರಾಷ್ಟ್ರಗಳ ಸಂಖ್ಯೆಗಿಂತ ಕಡಮೆ. ಇದೇ ಪರಿಸ್ಥಿತಿ ಮುಂದುವರಿದಲ್ಲಿ ಅಲಿಪ್ತ ಸುದ್ದಿ ಕೂಟ ಕೇವಲ ಕಾಗದದ ಮೇಲೆ ಉಳಿಯುತ್ತದಷ್ಟೇ.

ಕೆ. ಮೊಹಮ್ಮದ್ ಶರೀಫ್

ಕರ್ನಾಟಕದ ಇತಿಹಾಸ ರಚನೆಗೆ ಮುಹಮ್ಮದೀಯ ಶಾಸನಗಳ ಕೊಡುಗೆ

ಕರ್ನಾಟಕದ ಶಾಸನ ಸಂಪತ್ತು ಶ್ರೀಮಂತವಾದುದು. ಇದು ನಮ್ಮ ಜನಾಂಗದ ಆಸ್ತಿ. ಇಲ್ಲಿ ಕನ್ನಡ, ತಮಿಳು ಮತ್ತು ಇತರ ಭಾಷೆಗಳ ಶಾಸನಗಳ ಹಾಗೆ ಮುಹಮ್ಮದೀಯ ಭಾಷೆಗಳಲ್ಲೂ ಶಾಸನಗಳಿವೆ. ಇವು ಇತರ ಭಾಷೆಗಳ ಶಾಸನಗಳಂತೆಯೇ ನಮ್ಮ ನಾಡಿನ ರಾಜಕೀಯ, ಸಾಮಾಜಿಕ ಮತ್ತು ಧಾರ್ಮಿಕ ಘಟನೆಗಳ ಅಧ್ಯಯನಕ್ಕೆ ಅಮೂಲ್ಯವಾದ ಆಕರಗಳಾಗಿವೆ. ಇಲ್ಲಿ ಸಿಕ್ಕಿರುವ ಮುಹಮ್ಮದೀಯ ಶಾಸನಗಳಲ್ಲಿ ಪರ್ಶಿಯನ್ ಭಾಷೆಯ ಶಾಸನಗಳೇ ಹೆಚ್ಚು. ಕೆಲವು ಶಾಸನಗಳು ಅರೇಬಿಕ್ ಭಾಷೆಯಲ್ಲೂ ಇನ್ನು ಕೆಲವು ಅರೇಬಿಕ್ ಮತ್ತು ಪರ್ಶಿಯನ್ ಭಾಷೆಗಳಲ್ಲೂ ಇವೆ. ಇವುಗಳಲ್ಲದೆ ಕನ್ನಡ, ಮರಾಠಿ ಮುಂತಾದ ಭಾಷೆಗಳಲ್ಲೂ ನಾವು ಮುಹಮ್ಮದೀಯ ಅರಸರ ಶಾಸನಗಳನ್ನು ಕಾಣಬಹುದು. ಕೆಲವು ದ್ವಿಭಾಷಾ (ಮಡಕೇರಿ, ಬಿಜಾಪುರ ಮುಂತಾದ ಸ್ಥಳಗಳಲ್ಲಿ) ಮತ್ತು ತ್ರಿಭಾಷಾ (ಶಿವಮೊಗ್ಗ ಜಿಲ್ಲೆಯ ಶಿರಿಗುಪ್ಪ ಎಂಬಲ್ಲಿ) ಶಾಸನಗಳು ಸಿಕ್ಕಿರುವುದಂತೂ ತುಂಬಾ ಕುತೂಹಲಕಾರಿಯಾದ ಸಂಗತಿ. ಇವು ಅಂದು ಬಳಕೆಯಲ್ಲಿದ್ದ ಸ್ಥಳೀಯ ಆಡುಮಾತಿನ ಮಾದರಿಯನ್ನೊದಗಿಸುವುದರ ಜೊತೆಗೆ ಯಾವ ಯಾವ ಸ್ಥಳಗಳಲ್ಲಿ ಎಷ್ಟೆಷ್ಟರ ಮಟ್ಟಿಗೆ ಇವುಗಳ ಬಳಕೆ ಹಾಗೂ ಪ್ರಭಾವ ಇದ್ದಿತೆಂಬುವುದರ ಅಧ್ಯಯನಕ್ಕೆ ಸಹಾಯಕಾರಿಯಾಗಿವೆ. ದ್ವಿಭಾಷಾ ಶಾಸನಗಳಲ್ಲಿ ಹೆಚ್ಚಿನವು ಪರ್ಶಿಯನ್ ಮತ್ತು ಕನ್ನಡ ಭಾಷೆಯವು. ಇವು ನಮ್ಮ ನಾಡಿನ ಅನೇಕ ಹಿಂದೂ ರಾಜರುಗಳು ಸಂಸ್ಕೃತ–ಕನ್ನಡ ದ್ವಿಭಾಷಾ ಶಾಸನಗಳನ್ನು ಬರೆಸಿಹಾಕಿಸಿದಂತಿದೆ ಅಲ್ಲವೆ ? ಮುಹಮ್ಮದೀಯ ಅರಸರು ಸ್ಥಳೀಯ ಜನರಿಗೆ ತಮ್ಮ ಆಜ್ಞೆಗಳ ಅರಿವಾಗಲೆಂದು ಇತರ ಭಾಷೆಗಳಲ್ಲೂ ಶಾಸನಗಳನ್ನು ಬರೆಸಿಹಾಕಿಸಿರಬಹುದು.

ಕರ್ನಾಟಕದಲ್ಲಿ ನಾವು ಮುಹಮ್ಮದೀಯ ಶಾಸನಗಳನ್ನು ಕ್ರಿ. ಶ. ಹದಿನಾಲ್ಕನೆಯ ಶತಮಾನದಿಂದೀಚೆಗೆ ಕಾಣುತ್ತೇವೆ. ಅಲ್ಲದೆ ಇಲ್ಲಿ ಈವರೆಗೆ ಸಿಕ್ಕಿರುವ ಶಾಸನಗಳ ಸಂಖ್ಯೆ ಸುಮಾರು ಎಂಟನೂರರಿಂದ `ಒಂಬೈನೂರು. ಈ ಶಾಸನಗಳ ಪೈಕಿ ಏಳು ಶಾಸನಗಳನ್ನು ಖಿಲ್ಜಿ ಮತ್ತು ತುಘಲಕ್ ಅರಸರ ಕಾಲಕ್ಕೂ, ಸುಮಾರು ಇಪ್ಪತ್ತು ಶಾಸನಗಳನ್ನು ಹದಿನಾಲ್ಕನೆಯ ಶತಮಾನಕ್ಕೂ, ಮೂವತ್ತು ಶಾಸನಗಳನ್ನು ಹದಿನೈದನೆಯ ಶತಮಾನಕ್ಕೂ, ಒಂದುನೂರ ಐವತ್ತು ಶಾಸನಗಳನ್ನು ಹದಿನಾರನೆಯ ಶತಮಾನಕ್ಕೂ, ಎಪ್ಪತ್ತೈದು ಶಾಸನಗಳನ್ನು ಹದಿನೇಳನೆಯ ಶತಮಾನಕ್ಕೂ, ಅರವತ್ತು ಶಾಸನಗಳನ್ನು ಹದಿನೆಂಟನೆಯ ಶತಮಾನಕ್ಕೂ ಮತ್ತು ಎಪ್ಪತ್ತೈದು ಶಾಸನಗಳನ್ನು ಹತ್ತೊಂಭತ್ತನೆಯ ಶತಮಾನಕ್ಕೂ ಸೇರಿಸಬಹುದು. ಉಳಿದವು ಕಾಲ ಮತ್ತು ಚಾರಿತ್ರಿಕ ಅಂಶಗಳಿಲ್ಲದವು. ಇವುಗಳಲ್ಲಿ ಹೆಚ್ಚಿನವು ಬಿಜಾಪುರ, ಧಾರವಾಡ,

ಗುಲ್ಬರ್ಗ, ರಾಯಚೂರು ಮತ್ತು ಬೀದರ್ ಜಿಲ್ಲೆಗಳಲ್ಲೂ, ಉಳಿದವು ಬೆಂಗಳೂರು, ಬೆಳಗಾಂ, ಮಂಡ್ಯ, ಹಾಸನ, ತುಮಕೂರು, ಚಿತ್ರದುರ್ಗ, ಶಿವಮೊಗ್ಗ ಮತ್ತು ಇತರ ಜಿಲ್ಲೆಗಳಲ್ಲೂ ಇವೆ. ಈ ಶಾಸನಗಳ ಪೈಕಿ ಅನೇಕ ಶಾಸನಗಳು ಖಿಲ್ಜಿ, ತುಘಲಕ್, ಬಹಮನಿ, ಆದಿಲ್‌ಷಾಹಿ, ಬರೀದ್‌ಷಾಹಿ, ನಿಜಾಮ್‌ಷಾಹಿ ಮುಂತಾದ ವಂಶಗಳ ಅರಸರಿಗೆ ಸೇರಿದವು. ಇವುಗಳಲ್ಲದೆ ಮೊಗಲರಿಗೂ, ಹೈದರ್ ಅಲಿ ಮತ್ತು ಟಿಪ್ಪು ಸುಲ್ತಾನರಿಗೂ ಸೇರಿದ ಶಾಸನಗಳೂ ಇವೆ. ನಮಗೆ ಸಿಕ್ಕಿರುವ ಈ ಶಾಸನಗಳಲ್ಲೆಲ್ಲಾ ಬಿಜಾಪುರ ಜಿಲ್ಲೆಯ ರಕ್ಕಸಗಿ ಶಾಸನವೇ[1] ಅತ್ಯಂತ ಪ್ರಾಚೀನವಾದುದು. ಇದು ಖಿಲ್ಜಿ ವಂಶದ ಅರಸ ಅಲ್ಲಾವುದ್ದೀನನಿಗೆ ಸೇರಿದೆ. ಇದರ ಕಾಲ ಕ್ರಿ. ಶ. 1315.

ನಮ್ಮ ನಾಡಿನ ಮುಹಮ್ಮದೀಯ ಶಾಸನಗಳಲ್ಲಿ ಬಹುಪಾಲು ಮಸೀದಿ, ಗೋರಿ, ಅಣೆಕಟ್ಟು, ಕೆರೆ, ಬಾವಿ, ಮುಸಾಫರ್ ಖಾನ, ಕೋಟೆ, ಅರಮನೆ, ಹೆಬ್ಬಾಗಿಲು ಮುಂತಾದ ಸ್ಥಳಗಳಲ್ಲಿ ದೊರೆಯುತ್ತವೆ. ಇವು ಅವುಗಳ ನಿರ್ಮಾಣ, ನಿರ್ಮಿಸಿದ ವ್ಯಕ್ತಿಯ ಹೆಸರು, ಅಂದಿನ ಅರಸ, ಅವರ ಕಾಲ ಮುಂತಾದ ವಿಷಯಗಳನ್ನೊಳಗೊಂಡಿರುತ್ತವೆ. ಇವುಗಳಲ್ಲದೆ ತೋಪುಗಳು, ನಾಣ್ಯಗಳು, ಪಾತ್ರೆಗಳು ಮುಂತಾದ ಚರವಸ್ತುಗಳ ಮೇಲೂ ಈ ಶಾಸನಗಳನ್ನು ನಾವು ಕಾಣ ಬಹುದು.

ಮುಹಮ್ಮದೀಯ ಶಾಸನಗಳಲ್ಲಿ ಇತರ ಭಾಷೆಗಳ ಶಾಸನಗಳ ಹಾಗೆ ರಾಜಕೀಯ ವಿಷಯ ಗಳನ್ನು ತಿಳಿಸುವ ಶಾಸನಗಳು ಹೆಚ್ಚಾಗಿಲ್ಲ. ಇದಕ್ಕೆ ಕಾರಣ ಮುಹಮ್ಮದೀಯ ಅರಸರು ಅಂತಹ ವಿಷಯಗಳನ್ನು ಹೆಚ್ಚುಹೆಚ್ಚಾಗಿ ಕಾಗದಗಳ ಮೇಲೆ ಬರೆಸುತ್ತಿದ್ದರು. ಆದರೂ ಕೆಲವು ಶಾಸನ ಗಳು ಒಂದು ಗೊತ್ತಾದ ವಂಶ ಅಥವ ಕಾಲದ ರಾಜಕೀಯ ಅಥವ ಸಾಂಸ್ಕೃತಿಕ ಸ್ಥಿತಿಗತಿಗಳ ಅಧ್ಯಯನಕ್ಕೆ ಬಹುಮುಖ್ಯವಾದ ಆಕರಗಳಾಗಿವೆ ಎಂಬುವುದನ್ನು ನಾವು ಮರೆಯುವಂತಿಲ್ಲ. ಅವು ಅನೇಕ ವೇಳೆ ನಮಗೆ ರಾಜಕೀಯ ಘಟನೆಗಳನ್ನು ತಿಳಿಸುತ್ತವೆ ಎಂಬುದಕ್ಕೆ ಉದಾಹರಣೆ ಗಳಿವೆ. ಕ್ರಿ. ಶ. 1522ರಲ್ಲಿ ವಿಜಯನಗರದ ಅರಸ ಕೃಷ್ಣದೇವರಾಯನು ಬಿಜಾಪುರವನ್ನು ಮುತ್ತಿದುದನ್ನು ಮತ್ತು ನಾಲ್ಕು ದಿವಸಗಳ ನಂತರ ಆ ಸ್ಥಳದಿಂದ ಹಿಂತಿರುಗಿದುದನ್ನು ಆ ಊರಿನ ಒಂದು ಶಾಸನದಿಂದ[2] ನಾವು ತಿಳಿಯಬಹುದು. ರಕ್ಕಸತಂಗಡಿ ಅಥವ ತಾಳಿಕೋಟೆ ಯುದ್ಧದ ಉಲ್ಲೇಖ ಆ ವರ್ಷದಲ್ಲೇ ಬರೆಸಿ ಹಾಕಿಸಿದ ಒಂದು ಶಾಸನದಲ್ಲಿದೆ.[3] ಬಿಜಾಪುರದ ಅರಸ ಅಲಿ ಆದಿಲ್‌ಷಾಹನು ಬಂಕಾಪುರದ ಕೋಟೆಯನ್ನು ವಶಪಡಿಸಿಕೊಂಡ ವಿಚಾರವು ಮುದ ಗಲ್ಲಿನ ಶಾಸನದಿಂದ[4] ತಿಳಿಯುತ್ತದೆ. ಷಹಜಹಾನನ ದಳಪತಿಯಾದ ಖಾನ್-ಇ-ದೌರಾನ್‌ನು ಬೀದರ್ ಜಿಲ್ಲೆಯಲ್ಲಿರುವ ಉದ್‌ಗೀರ್‌ನ ಕೋಟೆಯನ್ನು ನೆಲಸಮ ಮಾಡಿದ ವಿಚಾರವು ನಮಗೆ ತಿಳಿಯುವುದು ಅಲ್ಲಿಯ ಒಂದು ಶಾಸನದಿಂದ[5] ಕ್ರಿ. ಶ. 1610-11ರ ಉದ್‌ಗೀರ್‌ನ ಇನ್ನೊಂದು ಶಾಸನದಲ್ಲಿ[6] ನಿಜಾಂಷಾಹಿ ಅಧಿಕಾರಿಯೊಬ್ಬನು ಯುದ್ಧದಲ್ಲಿ ಸತ್ತ ವಿಚಾರವಿದೆ. ಇವಲ್ಲದೆ ಹೈದರ್ ಅಲಿ, ಆತನ ಮಗ ಟಿಪ್ಪುಸುಲ್ತಾನ, ಆತನ ಮಗ ನಿಜಾಮುದ್ದೀನ್ ಮತ್ತು ಟಿಪ್ಪುಸುಲ್ತಾನನ ಸೈನ್ಯದ ಅಧಿಕಾರಿ ಸಯ್ಯದ್ ಹಮೀದ್ ಮುಂತಾದ ಇತಿಹಾಸಪ್ರಮುಖ ವ್ಯಕ್ತಿಗಳು ದೈವಾಧೀನರಾದ ವಿಚಾರಗಳನ್ನು ತಿಳಿಸುವ ಶಾಸನಗಳು ಹೇರಳವಾಗಿವೆ.[7] ಇವೆಲ್ಲವು ಈ ಮೇಲಿನ ಹೇಳಿಕೆಗೆ ನಿದರ್ಶನಗಳು.

ಕೆಲವೊಮ್ಮೆ ಈ ಶಾಸನಗಳು ರಾಜಕೀಯ ವಿಷಯಗಳನ್ನೊದಗಿಸುವುದರ ಜೊತೆಗೆ ಯಾವುದಾದರೊಂದು ಐತಿಹಾಸಿಕ ವಿಚಾರದಲ್ಲಿ ವಿದ್ವಾಂಸರಲ್ಲಿ ವಿರುದ್ಧಾಭಿಪ್ರಾಯಗಳಿದ್ದಾಗ ಅವುಗಳನ್ನು ಹೋಗಲಾಡಿಸಿ ಖಚಿತವಾದ ಅಭಿಪ್ರಾಯ ಏನೆಂಬುದನ್ನು ತಿಳಿಯಲು ತುಂಬಾ ಸಹಾಯಕಾರಿಯಾಗಿವೆ. ಉದಾಹರಣೆಗೆ ಅನೇಕ ಇಂಗ್ಲಿಷ್ ಬರಹಗಾರರು ಟಿಪ್ಪುಸುಲ್ತಾನನನ್ನು

ಮತಾಂಧ ಮತ್ತು ಕ್ರೂರಿ ಎಂದು ಚಿತ್ರಿಸಿದ್ದಾರೆ. ಆದರೆ ಇವನ ಶಾಸನಗಳನ್ನು ಸೂಕ್ಷ್ಮವಾಗಿ ಅಭ್ಯಸಿಸಿದವರಿಗೆ ಇವರ ಅಭಿಪ್ರಾಯಗಳಲ್ಲಿ ತಿರುಳಿಲ್ಲವೆಂದು ಗೊತ್ತಾಗದೆ ಇರಲಾರದು. ಇದಕ್ಕೆ ಬದಲಾಗಿ ಅವನು ಮುಸ್ಲಿಮೇತರರನ್ನು ಬಹಳ ಔದಾರ್ಯದಿಂದಲೇ ನಡೆಸಿಕೊಂಡನೆಂದು ತಿಳಿಯುತ್ತದೆ. ಹಿಂದುಗಳಿಗೆ ಅನೇಕ ದೇವಸ್ಥಾನಗಳನ್ನು ಕಟ್ಟಿಸಿಕೊಟ್ಟುದಲ್ಲದೆ ಆ ದೇವಸ್ಥಾನಗಳಿಗೂ ಬ್ರಾಹ್ಮಣರಿಗೂ ಬಿಟ್ಟ ದತ್ತಿಯನ್ನು ಹೆಸರಿಸುವ ಅನೇಕ ಶಾಸನಗಳಿರುವುದು[8] ಈ ಅಂಶವನ್ನು ಖಚಿತಗೊಳಿಸುತ್ತದೆ.

ಅನೇಕ ವೇಳೆಯಲ್ಲಿ ಈ ಶಾಸನಗಳು ಒಂದು ವಂಶದ ರಾಜರ ಸರಿಯಾದ ವಂಶಾವಳಿಯನ್ನು ಕೊಡುವುದರಲ್ಲಿ ಸಹಾಯಕಾರಿಯಾಗಿವೆ. ಈ ಸಂದರ್ಭದಲ್ಲಿ ನಾವು ಗುಲ್ಬರ್ಗ ಜಿಲ್ಲೆಯ ಸಾಗರ ಎಂಬಲ್ಲಿ ದೊರೆತ, ಮೊಹಮೂದ್-ಷಾಹ್-ಬಹಮನಿಯ 'ಮಗ ವಲೀ ಉಲ್ಲಾಹ್‌ನ ಕಾಲಕ್ಕೆ ಸೇರಿರುವ ಒಂದು ಶಾಸನವನ್ನು[9] ಉದಾಹರಿಸಬಹುದು. ಇದಲ್ಲದೆ ಕೆಲವು ಅರಸರ ಸರಿಯಾದ ಹೆಸರು ಅವರ ಬಿರುದುಗಳು ಇತ್ಯಾದಿ ವಿಷಯಗಳನ್ನು ತಿಳಿಯುವಲ್ಲಿಯೂ ಇವು ತುಂಬಾ ಸಹಾಯಕಾರಿಯಾಗಿವೆ. ಬಿಜಾಪುರ ಸುಲ್ತಾನರ ಹೆಸರುಗಳ ಕಾಗುಣಿತ, 'ಸವಾಇ' ಎಂಬ ಬಿರುದಿನ ಸರಿಯಾದ ಅರ್ಥ, ಅಲ್ಲದೆ ಬೆಳಗಾವಿಯಲ್ಲಿ ಆದಿಲ್‌ಷಾಹಿ ಸುಲ್ತಾನರ ಪ್ರಾಂತಾಧಿಕಾರಿಯಾದ ಅಸದ್ ಖಾನ್ ಎಂಬುವನ ಸರಿಯಾದ ಹೆಸರು ಮುಂತಾದ ವಿಷಯಗಳನ್ನು ತಿಳಿಯಲು ಅವರ ಶಾಸನಗಳೇ ಉಪಯೋಗಕರವಾಗಿವೆ ಎಂಬುದನ್ನು ಇಲ್ಲಿ ಸ್ಮರಿಸಬಹುದು.[10]

ಈ ಶಾಸನಗಳು ಸ್ಥಳೀಯ ಇತಿಹಾಸ ರಚನೆಯಲ್ಲಿ ಮಹತ್ವವಾದ ಪಾತ್ರವನ್ನು ವಹಿಸುತ್ತವೆ ಎನ್ನುವುದು ಇವುಗಳ ಅಧ್ಯಯನದಿಂದ ತಿಳಿದುಬರುವ ಇನ್ನೊಂದು ಅಂಶ. ಬಿಜಾಪುರ, ಬೀದರ್ ಜಿಲ್ಲೆಯ ಕಲ್ಯಾಣ, ರಾಯಚೂರು, ಸಾಗರ, ಗುಲ್ಬರ್ಗ ಜಿಲ್ಲೆಯ ಷಾಹ್‌ಪುರ ಮುಂತಾದ ಸ್ಥಳಗಳಲ್ಲಿ ಪ್ರಾಂತಾಧಿಕಾರಿಗಳಾಗಿಯೋ, ಪಟ್ಟಣಾಧಿಕಾರಿಗಳಾಗಿಯೋ, ದಳವಾಯಿಗಳಾಗಿಯೋ ಅಥವ ಇನ್ನಾವ ಹುದ್ದೆಗಳಲ್ಲಿಯೋ ಸೇವೆ ಸಲ್ಲಿಸಿದವರಲ್ಲಿ ಅನೇಕರು ನಮಗೆ ತಿಳಿದುಬರುವುದೇ ಈ ಶಾಸನಗಳಿಂದ ಎಂದು ಹೇಳಿದರೆ ತಪ್ಪಾಗಲಾರದು. ಖಿಲ್ಜಿ ವಂಶದ ಸುಲ್ತಾನರ ಕಾಲಕ್ಕೆ ಸೇರಿದ ಬಖ್ತ್ಯಾರ್ ಖಾನ್ ಮತ್ತು ಮಾಲಿಕುಷ್-ಷರ್ಕ್-ಕರೀಮುದ್-ದೀನ್ ಮತ್ತು ತುಘಲಕ್‌ರ ಕಾಲಕ್ಕೆ ಸೇರಿದ ಅಲೀ ಜಖ್ನೆರೀಯ ಮಗ ಅಹಮದ್ ಇವರುಗಳ ಹೆಸರು ನಮಗೆ ತಿಳಿದಿರುವುದು ಆ ಕಾಲದ ಶಾಸನಗಳಿಂದಲೇ. ಇವರಲ್ಲದೆ ಇನ್ನೂ ಅನೇಕ ಅಧಿಕಾರಿಗಳ ಜೀವನ, ಕಾರ್ಯಸಾಧನೆ ಇತ್ಯಾದಿ ವಿವರಗಳನ್ನು ಅವರ ಶಾಸನಗಳಿಂದ ಮಾತ್ರ ತಿಳಿಯಬಹುದಾಗಿದೆ. ಈ ನಾನಾ ಇಲಾಖೆಗಳ ಅಧಿಕಾರಿಗಳ ಹೆಸರುಗಳನ್ನು ತಿಳಿದುಕೊಳ್ಳುವುದರ ಜೊತೆಗೆ ಅವರ ಸ್ಥಾನಮಾನ, ಆಡಳಿತಕ್ಕೆ ತಕ್ಕ ಪ್ರಾಂತ ವಿಂಗಡಣೆ, ಅವಕ್ಕೆ ತಕ್ಕ ಹುದ್ದೆಗಳು, ಮುಂತಾದ ಆಡಳಿತಕ್ಕೆ ಸಂಬಂಧಿಸಿದ ವಿವರಗಳನ್ನು ನಾವು ಈ ಶಾಸನಗಳಿಂದ ತಿಳಿಯಬಹುದು. ತುಘಲಕ್ ಮತ್ತು ಬಹುಮನಿ ಶಾಸನಗಳಲ್ಲಿ ಬರುವ ಇಖ್‌ಲಿಮ್ (ಪ್ರಾಂತ), ಮುಅಮಲ (ಜಿಲ್ಲೆ), ಖಸ್ಬ ಅಥವ ಥಾನಾ (ಪಟ್ಟಣ ಅಥವ ಉಪವಿಭಾಗ) ಮೊಗಲರ ಶಾಸನಗಳಲ್ಲಿ ಬರುವ ಫೌಜ್‌ದಾರ್, ಖಿಲಾದಾರ್ ಮತ್ತು ಟಿಪ್ಪುಸುಲ್ತಾನನ ಶಾಸನಗಳಲ್ಲಿ ಬರುವ ಸಿಪಾಹ್‌ದಾರ್, ಸರ್-ಇ-ಅಸ್ಕರ್ ಮುಂತಾದ ಹುದ್ದೆಗಳ ಹೆಸರುಗಳನ್ನು ನಾವು ಈ ಸಂದರ್ಭದಲ್ಲಿ ಉದಾಹರಿಸಬಹುದು.

ಇವುಗಳಲ್ಲದೆ ಅರಸರಿಂದಲೋ ಅಥವ ಇನ್ನಾವ ಅಧಿಕಾರಿಗಳಿಂದಲೋ ವಿಧಿಸಲ್ಪಟ್ಟ ಹೊಸ ಹೊಸ ತೆರಿಗೆಗಳ ವಿಚಾರ, ದಂಡ ವಿನಾಯತಿ, ಬಲಾತ್ಕಾರದಿಂದ ಆಚರಣೆಗೆ ತಂದ ನ್ಯಾಯಬಾಹಿರ ಪದ್ಧತಿಗಳು ಮುಂತಾದ ಆಡಳಿತಕ್ಕೆ ಸಂಬಂಧಿಸಿದ ಪ್ರಮುಖ ಅಂಶಗಳು ಕಂಡುಬರು

ತ್ತವೆ. ಕ್ರಿ. ಶ. 1513ಕ್ಕೆ ಸೇರಿದ ಶಾಸನವೊಂದರಲ್ಲಿ[11] ನೇಕಾರರು, ಗಾಣಿಗರು, ಚಿಲ್ಲರೆ ವ್ಯಾಪಾರಿಗಳು ಮುಂತಾದವರಿಗೆ ತೆರಿಗೆ ಮನ್ನಾ ಮಾಡಿದ ವಿಚಾರವಿದೆ. ತೆರಿಗೆ ವಿನಾಯಿತಿಯ ಜೊತೆಗೆ ಅವುಗಳನ್ನು ಹಾಕಬೇಕಾದ ಸಂದರ್ಭಗಳಲ್ಲಿ ತೆರಿಗೆಯ ಪ್ರಮಾಣಗಳನ್ನು ತಿಳಿಸುವ ಶಾಸನಗಳು, ಅಲ್ಲದೆ ಕಟ್ಟಡ ಮುಂತಾದುವುಗಳನ್ನು ಕಟ್ಟಲು ತಗುಲಿದ ವೆಚ್ಚ ಇತ್ಯಾದಿ ವಿವರಗಳನ್ನೊಡಗಿಸುವ ಶಾಸನಗಳೂ ಇವೆ.[12] ಇವು ಅಂದಿನ ಆರ್ಥಿಕ ಸ್ಥಿತಿಯನ್ನು ಅರಿಯಲು ನಮಗೆ ಸಹಾಯಕಾರಿಗಳಾಗಿವೆಯಲ್ಲವೆ? ಇವುಗಳಲ್ಲದೆ ಸಂತೆಗಳ ಅಥವ ಪಟ್ಟಣಗಳ ಪ್ರಾರಂಭ, ವ್ಯವಸಾಯ ಅಭಿವೃದ್ಧಿಗಾಗಿ ಸಿಕ್ಕ ಪ್ರೋತ್ಸಾಹ, ಮುಸಾಫರ್ ಖಾನ (ಅತಿಥಿಗೃಹ), ರಸ್ತೆ, ಕೆರೆ ಕಾಲುವೆಗಳ ನಿರ್ಮಾಣ ಇತ್ಯಾದಿ ಜನೋಪಕಾರಿ ಕಾರ್ಯಗಳ ಪ್ರಸ್ತಾಪ ಕೆಲವು ಶಾಸನಗಳಲ್ಲಿದೆ.[13]

ಇವುಗಳ ಅಧ್ಯಯನದಿಂದ ಸಾಮಾಜಿಕ ಸ್ಥಿತಿಗತಿಗಳ ಬಗೆಗೂ ನಮಗೆ ಅಲ್ಲಲ್ಲಿ ಮಾಹಿತಿಗಳು ದೊರಯುತ್ತವೆ. ಉದಾಹರಣೆಗೆ 'ನಿಪುತ್ರಿಕ್' ಎಂಬ ಪದ್ಧತಿ. ಉತ್ತರ ಕರ್ನಾಟಕ ಮತ್ತು ಕೊಂಕಣದಲ್ಲಿ ಪ್ರಚಾರದಲ್ಲಿದ್ದ ಈ ಪದ್ಧತಿಯ ಪ್ರಕಾರ ಮಗನಿಲ್ಲದೆ ಮರಣ ಹೊಂದಿದ ವ್ಯಕ್ತಿಯ ಆಸ್ತಿಯು ಸರ್ಕಾರಕ್ಕೆ ಹೋಗುತ್ತಿತ್ತು. ಹತ್ತಿರದ ಬಂಧುಗಳಾರಿಗೂ ಇದರ ಹಕ್ಕಿರಲಿಲ್ಲ. ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೆಂದರೆ ಈ ಪದ್ಧತಿ ಕೆಲವು ಸ್ಥಳಗಳಲ್ಲಿ ಎಲ್ಲಾ ಕೋಮಿನ ಜನರಿಗೂ ಇನ್ನು ಕೆಲವು ಸ್ಥಳಗಳಲ್ಲಿ ಕೆಲವೇ ಕೋಮಿನ ಜನರಿಗೂ ಅನ್ವಯಿಸುತ್ತಿತ್ತು.[14] ಈ ಸಂದರ್ಭಗಳಲ್ಲಿ ನಾವು ಆದಿಲ್‌ಷಾಹಿ ಸುಲ್ತಾನರು ಈ ಪದ್ಧತಿಯನ್ನು ರದ್ದುಪಡಿಸಲೋಸುಗ ಹೊರಡಿಸಿದ ಅನೇಕ ಆಜ್ಞೆಗಳನ್ನು ಕಾಣಬಹುದು ಇಲ್ಲಿ ತಿಳಿದು ಬರುವ ಇನ್ನೊಂದು ಅಂಶವೆಂದರೆ ಕೆಲವು ಕೋಮಿನ ಜನರು ಕೆಲವು ಕೆಲಸಗಳನ್ನು ಕಡ್ಡಾಯವಾಗಿ ಮಾಡಬೇಕಿತ್ತು. ಇಂತಹ ಕಡ್ಡಾಯ ಸೇವೆಗಳನ್ನು ಕೆಲವು ಕೋಮಿನ ಜನರಿಗೆ ಮನ್ನಾಮಾಡಿ ಹೊರಡಿಸಿದ ಅಪ್ಪಣೆಗಳನ್ನು[15] ಕಾಣಬಹುದು. ಉದಾಹರಣೆಗೆ ನಾಯಿಂದ ಕೋಮಿನ ಜನರು ಸೈನ್ಯದಲ್ಲಿ ಕಡ್ಡಾಯ ಸೇವೆ ಸಲ್ಲಿಸಬೇಕಾಗಿರಲಿಲ್ಲ.

ಕೆಲವು ಶಾಸನಗಳಲ್ಲಿ ಸ್ಥಳನಾಮಗಳ ವಿವರಣೆ, ಯಾವುದಾದರೊಂದು ಊರಿನ ಹಳೆಯ ಹೆಸರಿಗೆ ಬದಲಾಗಿ ಇಟ್ಟ ಹೊಸ ಹೆಸರು ಇತ್ಯಾದಿ ವಿವರಗಳಿರುತ್ತವೆ ರಾಯಬಾಗ್ ಅನ್ನು ಮುಸ್ತಫಾಬಾದ್ ಎಂದೂ, ಬಿಜಾಪುರವನ್ನು ಮುಹಮದ್‌ಪುರ ಎಂದೂ ಕರೆಯುತ್ತಿದ್ದುದನ್ನು ನಾವು ಇಲ್ಲಿ ಸ್ಮರಿಸಬಹುದು.

ಅಳತೆಗೆ ಸಂಬಂಧಿಸಿದಂತೆ ನೀತನ್, ಚಾಹಾರ್, ಬೀಘಾ, ಗಜ್ ಮುಂತಾದ ಶಬ್ದಗಳ ಬಳಕೆಯನ್ನು, ನಾಣ್ಯಗಳಿಗೆ ಸಂಬಂಧಿಸಿದಂತೆ ಹೊನ್, ಪ್ರತಾಪ್, ಟಂಕ, ಜೀಕಾಣಿ, ಜೀತಾಲ್ ಮುಂತಾದ ಶಬ್ದಗಳ ಬಳಕೆಯನ್ನು ಈ ಶಾಸನಗಳಲ್ಲಿ[16] ಕಾಣಬಹುದು. ಕೆಲವೊಮ್ಮೆ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಇರುವ ದೂರವನ್ನೋ ಅರಸರಿಗೆ ಸೇರಿದ ರಾಜ್ಯದ ಎಲ್ಲೆಯನ್ನೋ ಅಥವ ಮಸೀದಿ, ಈದ್‌ಗಾಹ್ (ಪ್ರಾರ್ಥನಾ ಸ್ಥಳ), ಖಬರಸ್ತಾನ (ಸ್ಮಶಾನಭೂಮಿ) ಮುಂತಾದ ಧಾರ್ಮಿಕ ಸ್ಥಳಗಳಿಗೆ ದತ್ತಿಯಾಗಿ ನೀಡಿದ ಭೂಮಿಗಳ ಚಕ್ಕುಬಂದಿಗಳ ವಿವರಗಳನ್ನೋ ತಿಳಿಸುವ ಶಾಸನಗಳೂ ಇವೆ.

ಕರ್ನಾಟಕದಲ್ಲಿ ದೊರೆತ ತೋಪುಗಳ ಮೇಲಿರುವ ಅನೇಕ ಶಾಸನಗಳು ಅವುಗಳನ್ನು ತಯಾರು ಮಾಡಲು ಅಪ್ಪಣೆಕೊಟ್ಟ ಅರಸ, ಅವನ್ನು ರವಾನಿಸಿದ ಸ್ಥಳ, ಯಾವ ಯಾವ ಅರಸರ ಕಾಲದಲ್ಲಿ ಅವುಗಳನ್ನು ಹೆಚ್ಚು ಹೆಚ್ಚಾಗಿ ತಯಾರಿಸುತ್ತಿದ್ದರು ಎಂಬಂತಹ ಅನೇಕ ವಿಷಯಗಳನ್ನು ತಿಳಿಯಲು ಸಹಾಯಕಾರಿಯಾಗಿವೆ.

ನಮ್ಮ ನಾಡಿನ ಸಾಹಿತ್ಯ, ಚರಿತ್ರೆಯ ಜೊತೆಗೆ ಲೇಖನ ಕಲೆಯ ದೃಷ್ಟಿಯಿಂದಲೂ ಈ ಶಾಸನಗಳ ಮೌಲ್ಯ ಹೆಚ್ಚಿನದು. ಅನೇಕ ಕವಿಗಳು ಸುಂದರ ಲಿಪಿಕಾರರು (ಶಿಲ್ಪಿಗಳು) ನಮಗೆ ತಿಳಿದಿರುವುದು ಈ ಶಾಸನಗಳಿಂದಲೇ. ಇಲ್ಲಿ ಫರೀದ್, ನದೀಮ್, ಮುಹಮ್ಮದ್, ಅಮೀನ್, ಅಬ್ದುಲ್ ಖಾಸಿಮ್, ಆಬಿದ್, ಬಾದ್‌ಷಾಹ್‌ಮೊಹಿಯುದ್-ದೀನ್, ಮೀರ್ ಹುಸೇನ್ ಅಲಿ, ಗುಲಾಮ್ ಹುಸೇನ್, ಷಹೀರ್ ಮುಂತಾದ ಕವಿಗಳನ್ನೂ ಮಹಮದ್ ಬಿನ್ ದಿಯಾ (1323) ಮಿರಾಕ್ ಹಿರವೀ (1517), ಖಾಜಿ ನಿಜಾಮ್ ದವ್ವಾನೀ (1518), ಹಾಫೀಜ್ ನಿಜಾಮುದ್-ದೀನ್ (1536-37), ಹಿದಾಯತುಲ್ಲಾಹ್ (1581), ಕರೀಮುದ್-ದೀನ್ ಅಲಿ (1583) ಅಬ್ದುಲ್ ಅಜೀಜ್ (1633-34), ಮುಂತಾದ ಸುಂದರ ಲಿಪಿಕಾರರನ್ನು ಇಲ್ಲಿ ಉದಾಹರಿಸಬಹುದು.

ಬಿದರೆ, ಬಿಜಾಪುರ, ರಾಯಚೂರು, ಗುಲ್ಬರ್ಗ ಮತ್ತು ಇತರ ಸ್ಥಳಗಳಲ್ಲಿ ಬಳಕೆಯಲ್ಲಿದ್ದ 'ಷುಹುರ್' ಮತ್ತು 'ಹಿಜರಿ' ಶಕೆಗಳ ವಿಚಾರ ನಮಗೆ ತಿಳಿಯುವುದು ಈ ಶಾಸನಗಳಿಂದಲೇ.[18] ಟಿಪ್ಪು ಸುಲ್ತಾನನು ಬಳಕೆಗೆ ತಂದ 'ಮೌಲೂದಿ ಶಕೆ' ಅವನ ಕೆಲವು ಶಾಸನಗಳಿಂದ[19] ತಿಳಿದು ಬರುತ್ತದೆ. 'ಹಿಜರಿ' ಶಕೆಯನ್ನು ಬರೆಯುವಾಗ ಅಂಕೆಗಳನ್ನು ಎಡದಿಂದ ಬಲಕ್ಕೂ 'ಮೌಲೂದಿ'ಶಕೆಯನ್ನು ಬರೆಯುವಾಗ ಅಂಕೆಗಳನ್ನು ಬಲದಿಂದ ಎಡಕ್ಕೂ ಸಾಮಾನ್ಯವಾಗಿ ಬರೆಯುವ ಪದ್ಧತಿ ಇದ್ದು ಈ ಪದ್ಧತಿಯನ್ನು ನಾವು ಟಿಪ್ಪುಸುಲ್ತಾನನ ಕೆಲವು ಶಾಸನಗಳಲ್ಲಿ ಕಾಣಬಹುದು.[20] ಅವನ ಅನೇಕ ಶಾಸನಗಳಲ್ಲಿ ಪರ್ಶಿಯನ್ ಭಾಷೆಯ ಪದ್ಯಗಳಿದ್ದು ತೇದಿ ವಿವರಗಳನ್ನು ಹೊಂದಿರುತ್ತವೆ.[21] ಕೋಟೆಗಳನ್ನೋ ಮಂದಿರಗಳನ್ನೋ ಕಟ್ಟಬೇಕಾದರೆ ಮತ್ತು ಇತರ ಶುಭಕಾರ್ಯಗಳನ್ನು ಮಾಡಬೇಕಾದರೆ ಜನತೆ ಜ್ಯೋತಿಷ್ಯ ಶಾಸ್ತ್ರಕ್ಕೆ ಕೊಡುತ್ತಿದ್ದ ಮಹತ್ವವನ್ನು ನಾವು ಇನ್ನೂ ಕೆಲವು ಶಾಸನಗಳಲ್ಲಿ[22] ಕಾಣಬಹುದು.

ಅನೇಕ ಮಹಮ್ಮದೀಯ ಕಟ್ಟಡಗಳ ಅವಶೇಷಗಳನ್ನು ಗುರುತಿಸುವುದು ಅಲ್ಲದೆ ಅವುಗಳನ್ನು ಕಟ್ಟಿದವರು ಇಲ್ಲವೆ ಜೀರ್ಣೋದ್ಧಾರ ಮಾಡಿದವರು ಯಾರು ? ಅದರ ಕಾಲವೇನು ? ಎಂಬಂತಹ ಅನೇಕ ವಿಚಾರಗಳನ್ನು ತಿಳಿಯುವುದು ನಾವು ಈ ಶಾಸನಗಳಿಂದಲೇ. ಮುಹಮ್ಮದೀಯ ವಾಸ್ತುಶಿಲ್ಪದ ಅಧ್ಯಯನದ ದೃಷ್ಟಿಯಿಂದ ಈ ಶಾಸನಗಳ ಮೌಲ್ಯ ಅಮೋಘವಾದುದು. ಇದು ಬೆಳೆದು ಬಂದ ರೀತಿ, ಅದನ್ನು ಬೆಳೆಯಲು ಪ್ರೋತ್ಸಾಹಿಸಿದ ಅರಸರ ವಿಚಾರ, ಕಾಲ ಕಾಲಕ್ಕೆ ಬಂದ ವಿವಿಧ ಶೈಲಿಗಳ ಅಧ್ಯಯನ ಇತ್ಯಾದಿ ವಿಷಯಗಳ ದೃಷ್ಟಿಯಿಂದ ಈ ಶಾಸನಗಳು ತುಂಬಾ ಉಪಯುಕ್ತವಾಗಿವೆ. ಬೆಂಗಳೂರಿನ ಕೋಟೆಯಲ್ಲಿರುವ ಟಿಪ್ಪುಸುಲ್ತಾನನ ಅರಮನೆಗೆ 'ಫರೂಕ್ ಮಹಲ್' ಎಂಬ ಹೆಸರಿದ್ದಿತೆಂದು ತಿಳಿಯುವುದೇ ಅವನ ಶಾಸನದಿಂದ.[23]

ಮಸೀದಿ, ಗೋರಿ, ಈದ್‌ಗಾಹ್ ಮುಂತಾದ ಧಾರ್ಮಿಕ ಕಟ್ಟಡಗಳ ಮೇಲೆ ಕಂಡುಬರುವ ಶಾಸನಗಳಲ್ಲಿ ಖುರಾನಿನಲ್ಲಿರುವ ಪದ್ಯಗಳೇ ಹೆಚ್ಚು. ಅಲ್ಲದೆ ಅವುಗಳಲ್ಲಿರುವ ಅನೇಕ ಶಾಸನಗಳಲ್ಲಿ ದೇವರ ಮತ್ತು ಇಸ್ಲಾಂ ಮತಸ್ಥಾಪಕ ಮೊಹಮ್ಮದ್ ಪೈಗಂಬರ್‌ನ ವಿವಿಧ ಹೆಸರುಗಳು ಇರುತ್ತವೆ.[24] ಇವು ಧಾರ್ಮಿಕ ಇತಿಹಾಸದ ರಚನೆಯಲ್ಲಿ ಮಹತ್ವವಾದ ಪಾತ್ರವನ್ನು ವಹಿಸಿಕೊಂಡಿವೆ. ಒಟ್ಟಿನಲ್ಲಿ ಕನ್ನಡ ನಾಡಿನಲ್ಲಿ ಕಂಡುಬರುವ ಮುಹಮ್ಮದೀಯ ಶಾಸನಗಳು ಇತರ ಭಾಷೆಗಳ ಶಾಸನಗಳ ಹಾಗೆ ಈ ನಾಡಿನ ಜನಜೀವನ, ಇತಿಹಾಸ ಇತ್ಯಾದಿ ವಿಷಯಗಳನ್ನು ತಿಳಿದುಕೊಳ್ಳುವಲ್ಲಿ ನಮಗೆ ತುಂಬಾ ಉಪಯುಕ್ತವಾಗಿವೆ.

ಅಡಿಟಿಪ್ಪಣಿಗಳು

1. *Epigraphia Indo Moslemica (E.I.M.)* 1927-28, p. 17
2. *Annual Report on Indian Epigraphy (A.R.I.E.)*, 1964-65, D. 278
3. *E. I. M.*, 1939-40, pp. 17-18
4. *A. R. I. E.*, 1959-60, D. 172
5. *E. I. M.*, 1929-30, p. 22
6. ಅದೇ, p. 21
7. ನೋಡಿ *Epigraphia Carnatica* (*E. C.*) ಸಂ. VI, (1977), ಶ್ರೀಪ 59, 60, 61, 64 ಇತ್ಯಾದಿ
8. ನೋಡಿ, ಅದೇ, ಪಾಂಪು 171 ಮತ್ತು 197 ಶ್ರೀಪ. 12, 13, 14, 16, ಇತ್ಯಾದಿ
9. *E. I. M.*, 1931-32, pp. 19-20
10. ವಿವರಗಳಿಗೆ ನೋಡಿ, Z. A. Desai : *Archaeology of Karnataka*; (Ed. A. V. Narasimha Murthy), Mysore, 1978, pp. 184-85.
11. *A. R. I. E.*, 1970-71 No. D. 127
12. ಅದೇ 1970-71 No. D. 126-27; 1963-64 No. D. 266 ; 1964-65 No. D. 284
13. ನೋಡಿ, ಅದೇ, 1958-59 No. D. 49, 85, 138 ;1963-64 No. D. 258 ಇತ್ಯಾದಿ.
14. Z. A. Desai:, *Indian History Congress*, *33*rd Session, Muzaffarpur, 1972, P. 646
15. *Epigraphia Indica—Arabic and Persian Supplement* 1962, pp. 63-64
16. *A. R. I. E.*, 1964-65, No. D. 287
17. ಅದೇ, 1952-53, No. D. 39 ; 1965-66, No. D. 233, 234, 242-243 ಇತ್ಯಾದಿ.
18. ಅದೇ, 1955-56. No. D. 109; 1962-63, No. D. 179, 181, 1964-65, No. D. 330; 1968-69, No. D. 408 ಇತ್ಯಾದಿ.

19. ಕೀರ್ಮಾನಿಯವರು ಈ ಶಕೆಯನ್ನು 'ಮಹಮ್ಮದಿ ಶಕೆ' ಎಂದು ಕರೆದಿದ್ದಾರೆ. (ನೋಡಿ. Mohibbul Hasan: *History of Tippu Sultan* ಪು. 400

20. ಅದೇ, ಪು. 396 ಮತ್ತು *E. C.*, ಸಂ. VI (1977), ಶ್ರೀಪ. 92 ಇತ್ಯಾದಿ.

21. *E. C.*, VI (1977), ಶ್ರೀಪ , 48, 60, 61 ಇತ್ಯಾದಿ.

22. ಅದೇ, ಶ್ರೀಪ. 46

23. *A. R. I. E.*, 1963-64, No. D. 242

24. *E. C.*, VI (1977), ಶ್ರೀಪ.49, 50 ; *A. R. I. E*, 1962-63, No. D. 165, 167, 176 ಮತ್ತು 1964-65 No. D. 278, 280-82, 288, 296 ಇತ್ಯಾದಿ.

ಹದಿನಾಲ್ಕನೆಯ ಶತಮಾನದ ಮಧ್ಯಭಾಗದಿಂದಲೆ ಉತ್ತರ ಕರ್ಣಾಟಕದ ಬಹುಭಾಗವು ಬಹಮನಿ ಸುಲ್ತಾನರು, ಬಿಜಾಪುರದ ಸುಲ್ತಾನರು ಮತ್ತು ಅನಂತರದಲ್ಲಿ ಮೊಗಲರು ಅಥವಾ ಗೋಲ್ಕೊಂಡದ ಅವರ ಪ್ರತಿನಿಧಿಗಳ ಮೂಲಕ ನೇರವಾಗಿ ಮುಸಲ್ಮಾನ ಆಳಿಕೆಗೆ ಒಳಪ[ಟ್ಟಿತು] ....ಹದಿನೆಂಟನೆ ಶತಮಾನದಲ್ಲಿ ಹೈದರ್ ಮತ್ತು ಟಿಪ್ಪುಗಳು ಅಭ್ಯುದಯಕ್ಕೆ ಬಂದ ಮೇಲೆ ದಕ್ಷಿಣ ಕರ್ಣಾಟಕವು ಹಳೆಯ ಮೈಸೂರು ರಾಜ್ಯವು ಸೇರಿ ಸುಮಾರು ನಾಲ್ಕು ದಶಕಗಳವರೆಗೂ ಮುಸಲ್ಮಾನರ ಆಳಿಕೆಯಲ್ಲಿತ್ತು. ಹೀಗೆ ಮುಸಲ್ಮಾನರು ಕರ್ಣಾಟಕದಲ್ಲಿ ಅಲ್ಪ ಸಂಖ್ಯಾತರೇ ಆಗಿದ್ದರೂ ಕರ್ಣಾಟಕದ ಬಹಳ ಪ್ರದೇಶಗಳ ಮಧ್ಯಂತರ ಕಾಲದಲ್ಲಿ ವಿಶೇಷವಾದ ರಾಜಕೀಯ ಅಧಿಕಾರವನ್ನು ಪಡೆದಿದ್ದರು. ಕರ್ಣಾಟಕದ ಇತಿಹಾಸವನ್ನು ಪುನರಾಲೋಕನ ಮಾಡುವ ಉದ್ದೇಶದಿಂದ ನೋಡಿದರೆ ಇದು, ಬ್ರಿಟಿಷರಿಂದ ಶ್ರೀರಂಗಪಟ್ಟಣದ ವಿಜಯ ಹಾಗೂ ಟಿಪ್ಪುವಿನ ಮರಣವಾದ ಮೇಲೆ—ಹದಿನೆಂಟನೆಯ ಶತಮಾನದ ಕೊನೆಗಾಲಕ್ಕೆ, ಮುಗಿದುಹೋಯಿತೆಂದು ಭಾವಿಸಬಹುದು. (ಕರ್ಣಾಟಕದ ಪರಂಪರೆ, ಸಂಪುಟ ೨, ಪುಟ ೨೭೬).

ಸಂಗ್ರಹ : ಎಚ್. ಎಸ್. ಸುಜಾತಾ

ಎಂ. ಎಸ್. ಪುಟ್ಟಣ್ಣನವರ ಎರಡು ಲೇಖನಗಳು

(ಎಂ. ಎಸ್. ಪುಟ್ಟಣ್ಣನವರು ಹೊಸಗನ್ನಡ ಸಾಹಿತ್ಯಕ್ಕಾಗಿ ದುಡಿದ ಹಿರಿಯ ಮಹನೀಯರಲ್ಲಿ ಒಬ್ಬರು. ಅವರು ಕಾದಂಬರಿ, ಜೀವನಚರಿತ್ರೆ, ಅನುವಾದ, ಸಂಶೋಧನೆ, ಬಾಲಸಾಹಿತ್ಯ ಮೊದಲಾದ ಪ್ರಕಾರಗಳಲ್ಲಿ ಹೆಸರು ಮಾಡಿದರು. ಜೊತೆಗೆ 'ಹಿತಬೋಧಿನಿ', ಎಂಬ ಮಾಸಪತ್ರಿಕೆಯನ್ನು ಕೆಲವು ಕಾಲ ನಡೆಸಿದರು. 'ಹಿತಬೋಧಿನಿ'ಯಲ್ಲೂ ಇತರ ಹಲವು ಪತ್ರಿಕೆಗಳಲ್ಲೂ ಅನೇಕ ಬಿಡಿಲೇಖನಗಳನ್ನು ಬರೆದರು.

'ನಿರಂಕುಶಪ್ರಭುತ್ವ' ಎಂಬ ಪುಟ್ಟಣ್ಣನವರ ಲೇಖನ 'ಹಿತಬೋಧಿನಿ' ಪತ್ರಿಕೆಯಲ್ಲಿ (ಸಂಪುಟ ೧, ಸಂಚಿಕೆಗಳು ೩, ೪, ೫, ; ೧೮೮೩–೮೪) ಪ್ರಕಟವಾಯಿತು. ಪುಟ್ಟಣ್ಣನವರು ಇದರಲ್ಲಿ ನಿರಂಕುಶ ಪ್ರಭುತ್ವದ ಸಾಧಕ-ಬಾಧಕಗಳನ್ನು ಕುರಿತು ವಿವೇಚಿಸಿದ್ದಾರೆ. 'ಷಹರುಗಳ ಸ್ವತಂತ್ರಾಡಳತ, ಅಥವಾ ಮ್ಯೂನಿಸಿಪ್ಯಾಲಿಟಿ' ಎಂಬ ಅವರ ಲೇಖನವೂ 'ಹಿತಬೋಧಿನಿ' ಪತ್ರಿಕೆಯಲ್ಲಿಯೇ (ಸಂಪುಟ ೧, ಸಂಚಿಕೆ ೬ ; ೧೮೮೪) ಪ್ರಕಟವಾಯಿತು. ಆಡಳಿತ ವ್ಯವಸ್ಥೆಯ ಬಗೆಗೆ ಪ್ರಜೆಗಳಿಗೆ ಖಚಿತ ತಿಳುವಳಿಕೆ ಇರುವುದು ಅಗತ್ಯ ಎಂಬ ಪುಟ್ಟಣ್ಣನವರ ಧೋರಣೆ ಇಲ್ಲಿ ಸುಸ್ಪಷ್ಟವಾಗಿದೆ. ಕನ್ನಡಿಗರ ಗಮನಕ್ಕೆ ಬರಲೆಂಬ ಉದ್ದೇಶದಿಂದ ಈಗ ಈ ಎರಡು ಲೇಖನಗಳನ್ನು ಇಲ್ಲಿ ಪುನರ್ಮುದ್ರಿಸಲಾಗಿದೆ.

ಮೊದಲ ಲೇಖನ ಕೆಲವುಕಡೆ ತ್ರುಟಿತವಾಗಿದೆ. 'ಹಿತಬೋಧಿನಿ' ಯ ಮೊದಲ ಸಂಪುಟದ ಕೇವಲ ಒಂದು ಪ್ರತಿ ಮಾತ್ರ ಲಭ್ಯವಿರುವುದರಿಂದ ಪೂರ್ಣಪಾಠ ದೊರೆಯಲು ಅಡ್ಡಿಯಾಗಿದೆ. ಆ ಲೇಖನದ ತ್ರುಟಿತಭಾಗಗಳನ್ನು .... ಈ ಚಿಹ್ನೆಯಿಂದ ಸೂಚಿಸಲಾಗಿದೆ. —ಎಚ್. ಎಸ್. ಸುಜಾತಾ)

ನಿರಂಕುಶ ಪ್ರಭುತ್ವ

ಪ್ರಜೆಗಳು ತಮ್ಮ ಸೌಖ್ಯಕ್ಕೆ ಅನುಗುಣವಾದ ಆಲೋಚನೆಯನ್ನು ಧೊರೆಗೆ ಅಥವಾ ಮಂತ್ರಿಯೇ ಮುಂತಾದ ಅಧಿಕಾರಿಗಳಿಗೆ ಆಗಾಗ್ಯೆ ತಿಳಿಯಪಡಿಸುತ್ತಾ, ರಾಜ್ಯಾಂಗ ವಿಚಾರದಲ್ಲಿ ತಕ್ಕ ಚಟುವಟಿಕೆಯನ್ನು ತೋರಿಸುತ್ತಿದ್ದರೆ, ರಾಜ್ಯವು ಆಚಂದ್ರಾರ್ಕವಾಗಿರುವುದೆಂದು ಕಳೆದ ಸಂಚಿಕೆಯಲ್ಲಿ ಸೂಕ್ಷ್ಮವಾಗಿ ಸೂಚಿಸಿದೆವಷ್ಟೆ. ಹಾಗಲ್ಲದೆ ಧೊರೆಯು ಪ್ರಜೆಗಳ ಕಷ್ಟಸುಖಗಳನ್ನು ಅರಿಯದೆ ಎಲ್ಲಾ ಕಾರ್ಯಗಳನ್ನೂ ತಾನೇ ನಡಿಸುತ್ತಾ ಇದ್ದರೆ, ರಾಜ್ಯಕ್ಷೋಭೆ ಉಂಟಾಗುವದು. ಅಂಥವನಲ್ಲಿ ನೀಚಗುಣಗಳೂ ಇದ್ದರೆ, ಜನರಿಗೆ ಹಿಂಸೆ ಇನ್ನೂ ಹೆಚ್ಚುವದು. ನೀಚನಾದ

ಧೊರೆಯಿಂದ ಉಂಟಾಗತಕ್ಕ ಕಷ್ಟವನ್ನು ಮುಸಲ್ಮಾನರ ಅನೇಕ ಕೆಟ್ಟಧೊರೆಗಳಿಂದ ಆಳಲ್ಪಡುತ್ತಿದ್ದ ನಮ್ಮ ಜನರಿಗೆ ಇಲ್ಲಿ ನಾವು ಹೇಳಲು ಅಗತ್ಯವಿಲ್ಲ.

ಹೈದರಲ್ಲಿಗೂ ತರುವಾಯ ಟಪ್ಪೂಸುಲಾನನಿಗೂ ಕೃಷ್ಣರಾಯನೆಂಬ ಒಬ್ಬ ಬ್ರಾಹ್ಮಣನು ಮಂತ್ರಿಯಾಗಿ ಬಹು ಆಪ್ತನಾಗಿದ್ದನು. ಇವನ ಮೇಲೆ ಯಾರೋ ಕ್ಷುದ್ರವನ್ನು ಹೇಳಿದ ಕಾರಣ, ಜಯಪ್ರದಕ್ಕಾಗಿ ಮತ್ತೊಂದು ದೇಶಕ್ಕೆ ಹೋಗಿದ್ದ ಟಪ್ಪುವು ಕೃಷ್ಣರಾಯನ ಪ್ರಾಣವನ್ನು ಆ ಕ್ಷಣದಲ್ಲಿ ತೆಗಿಸಬೇಕೆಂದು ಶ್ರೀರಂಗಪಟ್ಟಣಕ್ಕೆ ಕಾಗದವನ್ನು ಬರೆದನು. ರಾಜ್ಯವಿಚಾರವನ್ನು ಮಾಡುತ್ತಾ ಕೂತಿದ್ದ ಆ ಮಂತ್ರಿಯನ್ನು ಆಕಸ್ಮಿಕವಾಗಿ ಹಿಡಿದುಕೊಂಡು ಹೋಗಿ ಸಿದ್ದಿಯವರು ಕತ್ತನ್ನು ತಿರುಚಿಕೊಂದರು. ಹೀಗೆ ಸ್ವತಂತ್ರನಾದ ಧೊರೆಯು ನೀಚನಾದರೆ, ಯಾವಾಗ ಪ್ರಾಣವನ್ನು ತೆಗಿಸುವನೋ ತಿಳಿಯದು. ಪಖನೀ ಮುಸಲ್ಮಾನರಲ್ಲಿ ಮತ್ತೊಬ್ಬ ಧೊರೆಯು ತನಗೆ ಸೇರಿದ ಒಂದು ಪಟ್ಟಣದ ಬೀದಿಯಲ್ಲಿ ಕುದುರೇ ಮೇಲೆ ಕೂತುಕೊಂಡು ಹೋಗುತ್ತಾ, ಅಲ್ಲಿದ್ದ ದೊಡ್ಡ ದೊಡ್ಡ ಮನೆಗಳನ್ನೂ ಉಪ್ಪರಿಗೆಗಳನ್ನೂ ಜನರ ವಸ್ತ್ರಾಭರಣವನ್ನೂ ನೋಡಿ – ಜನರ ಐಶ್ವರ್ಯ ಹೆಚ್ಚಾಗಿದೆ: ತನ್ನ ಖಜಾನೆಯಲ್ಲಿ ಹಣ ಕೊಂಚವಿದೆ. ಆದ್ದರಿಂದ ಆವೂರು ಜನರ ಆಸ್ತಿಯನ್ನೆಲ್ಲಾ ದೋಚಿ ತೆಗೆದುಕೊಳ್ಳುವದೆಂದು ಅಪ್ಪಣೇ ಮಾಡಿದನು. ಪ್ರಜೆಗಳೆಲ್ಲಾ ಸಮಸ್ತವನ್ನೂ ಈ ಹಗಲುಗಳ್ಳನಿಗೆ ಸುಲಿಗೇಕೊಟ್ಟು, ದೇಶಾಂತರಕ್ಕೆ ಹೊರಟು ಹೋದರು. ಇಂಥಾ ದೊರೆಗಳ ದೇಶದಲ್ಲಿ ಜನಗಳು ಬದುಕುವುದು ಹ್ಯಾಗೆ? ದೆಹಲೀ ಆಲಂಘೀರನು ಪ್ರಜೆಗಳಾದ ಹಿಂದುಗಳ ಮೇಲೆ ಜೆಜಿಯಾ ಎಂಬ ತಲೆಗಂದಾಯವನ್ನು ಹಾಕಿದನು. ಗಂಗಾನದಿಯಲ್ಲಿ ಹಿಂದುಗಳು ಸ್ನಾನವನ್ನು ಮಾಡಿದರೆ, ತುರಕರು ವರಿಯನ್ನು ವಸೂಲು ಮಾಡುತ್ತಿದ್ದರು. ತಮ್ಮ ತಮ್ಮ ಮನೇಭಾವಿ ನೀರನ್ನು ಉಪಯೋಗಿಸುವವರೆಲ್ಲಾ ತೆರಿಗೆಯನ್ನು ಕೊಡಬೇಕೆಂದು ವಿಧಿಸಿದ್ದರಂತೆ. ಗಂಡಹೆಂಡಿರು ಕೂಡಿ ಸಂಸಾರಾ ಮಾಡಿಕೊಂಡು ಸುಖವಾಗಿದ್ದ ದಿವಸದಲ್ಲೆಲ್ಲಾ ತೆರಿಗೆಯನ್ನು ಕೊಡಬೇಕೆಂದು ಹಿಂಸಿಸುತ್ತಿದ್ದ ಈ ಚಂಡಾಲ ಧೊರೆಗಳಿಂದ ರಾಜ್ಯಕ್ಕೆ ಹ್ಯಾಗೆ ಕ್ಷೇಮ ಉಂಟಾದೀತು ? ಒಬ್ಬ ಮುಸಲ್ಮಾನನು ಕದ್ದರೆ, ಕದ್ದ ಪದಾರ್ಥವನ್ನು ಅವನು ಉಪಯೋಗಿಸಿಕೊಳ್ಳದೇ ಇರುವದೇ ಅವನಿಗೆ ಶಿಕ್ಷೆಯೆಂತಲೂ, ಒಬ್ಬ ಹಿಂದುವು ಅದೇ ಪದಾರ್ಥವನ್ನು ಕದ್ದರೆ, ಇವನ ಕೈಯನ್ನು ಕತ್ತರಿಸುವುದು ಇವನಿಗೆ ಶಿಕ್ಷೆಯೆಂತಲೂ, ನ್ಯಾಯ ವಿಮರ್ಶೆ ಮಾಡುತ್ತಿದ್ದರಂತೆ. ಮಹಮದ್ ತೊಗಲಖ್ ಎಂಬುವನು ದೆಹಲಿಯನ್ನು ಬಿಟ್ಟು ದಕ್ಷಿಣದಲ್ಲಿರುವ ದೇವಗಿರಿಯನ್ನು ತನ್ನ ರಾಜಧಾನಿಯಾಗಿ ಮಾಡಿಕೊಳ್ಳಬೇಕೆಂಬ ತಾತ್ಪರ್ಯದಿಂದ ಜನರೆಲ್ಲರೂ ಕಂಚುಮುಟ್ಟು ಎತ್ತಿಕ್ಕೊಂಡು ಹೊಸ ರಾಜಧಾನಿಗೆ ಹೋಗುವ ಹಾಗೆ ದೆಹಲೀ ಜನರಿಗೆಲ್ಲಾ ಅಪ್ಪಣೇ ಮಾಡಿದನು. ಇದರಿಂದ ಜನರಿಗೆಲ್ಲಾ ಬಹಳ ಕಷ್ಟ ಉಂಟಾಯಿತು. ಅವರಲ್ಲಿ ಒಬ್ಬನು ಮೊಂಡತನವನ್ನು ಮಾಡಲು, ಸುಮಾರು ೬೦೦ ಮೈಲೀ ದೂರದಲ್ಲಿ ಇರುವ ದೇವಗಿರಿಗೆ ಅವನ ಕಾಲನ್ನು ಹಿಡಿದು ಎಳೆದುಕೊಂಡು ಹೋಗುವಂತೆ ಹುಕ್ಕುಂ ಆಯಿತು; ಆ ದೇವಗಿರಿಯನ್ನು ಸೇರುವದರ ಒಳಗಾಗಿ, ಆ ಮನುಷ್ಯನ ದೇಹವೆಲ್ಲಾ ದಾರಿಯಲ್ಲಿಯೇ ಖಂಡ ಖಂಡವಾಗಿ ಬಿದ್ದುಹೋಗಿ, ಒಂದು ಕಾಲು ಮಾತ್ರ ಉಳಿಯಿತು. ಇಂಥಾ ಐಲು ಧೊರೆಗಳು ಅನೇಕರಿದ್ದರು. ಪೂರ್ವಕಾಲದಲ್ಲಿ ಕೆಲವು ಅಧಿಕಾರಿಗಳು ಸರಕಾರದ ಕಂದಾಯವನ್ನು ಕೊಡಲು ಗತಿಯಿಲ್ಲದ ಬಡರೈತರ ತಲೆಯ ಮೇಲೆ ದೊಡ್ಡಕಲ್ಲನ್ನು ಹೊರಿಸಿ, ಅವರನ್ನು ಬಿಸಲಲ್ಲಿ ನಿಲ್ಲಿಸಿ, ಗಂಟುಚಾವಟಿಯಿಂದ ಅವರು ನೆಲಕ್ಕೆ ಬಿದ್ದು ಪ್ರಾಣಾ ಬಿಡುವ ತನಕ ಹೊಡಿಸುತ್ತಿದ್ದರಂತೆ; ಇನ್ನೂ ಅನೇಕರನ್ನು ಹಿಡಿಸಿ ಸಾಲುಗಲ್ಲಿಗೆ ಹಾಕಿಸಿದರಂತೆ. ಅರಸುಗಳು ವ್ಯಭಿಚಾರಿಗಳಾಗಿ ನಡಿಸಿದ ಹೊಲಸು ಕೆಲಸಗಳನ್ನು ವಿವರಿಸಬೇಕೆಂದು ತವಕ ಪಡುವ ನಮ್ಮ ಮನಸ್ಸನ್ನು ಮಾನದ ಮೇಲಿನ ದೃಷ್ಟಿಯು ಹಿಂದಕ್ಕೆ ಎಳಯುತ್ತಿದೆ. ಈ ಬಗೇ ಅವಿವೇಕಗಳಿಗೆ ಲೆಖ್ಖವೇ ಇಲ್ಲ. ಇಂಥಾ ನೀಚರಾದ ಧೊರೆಗಳ ಆಳಿಕೆಯ ಫಲಗಳನ್ನು ನಮ್ಮ ಜನರು

ವೃದ್ಧರಾದವರಿಂದ ಕೇಳಿಯೂ, ಪುಸ್ತಕಗಳಲ್ಲಿ ಓದಿಯೂ ತಿಳಿದಿರಬಹುದು. ಅನ್ಯಮತ ವೈರಿಯಾದ ಟಿಪ್ಪುವಿನ ದುಷ್ಕಾರ್ಯಗಳನ್ನು ಇನ್ನೂ ಯಾರೂ ಮರೆತಿರಲಾರರು.

ಆದರೆ ಧೊರೆಯು ಸಜ್ಜನನಾಗಿ ಪ್ರಜೆಗಳಿಗೆ ಹಿತವನ್ನೇ ಕೋರುತ್ತಾ ಸ್ವತಂತ್ರಾಧಿಕಾರ ವನ್ನು ನಡಿಸುತ್ತಿದ್ದರೆ, ರಾಜ್ಯಕ್ಕೆ ಸಕಲಭಾಗದಲ್ಲಿಯೂ ಕ್ಷೇಮ ಉಂಟಾಗುವದು. ಹೀಗೆ ಉತ್ತಮನಾದ ಅರಸು ಇತರರ ಕಾಟವಿಲ್ಲದಂತೆ ಮಾಡತಕ್ಕ ನಿರಂಕುಶ ಪ್ರಭುತ್ವವೇ ಶ್ರೇಷ್ಠ ವಾದದ್ದೆಂದು ಕೆಲವರು ಅಭಿಪ್ರಾಯ ಪಡುವರು. ಆದರೆ ರಾಜನಲ್ಲಿ ಎಷ್ಟೇ ಸುಗುಣಗಳಿದ್ದಾಗ್ಯೂ, ಪ್ರಜೆಗಳು ಅವನಲ್ಲಿ ಎಷ್ಟೇ ಅನುರಕ್ತನಾಗಿದ್ದಾಗ್ಯೂ ಕ್ರಮೇಣ ರಾಜ್ಯ ಕೆಡುತ್ತಾ ಬರುವದು. ನಿರಂಕುಶನಾಗಿರತಕ್ಕ ಪ್ರಭುವು ಒಳ್ಳೇ ನಿಬಂಧನೆಗಳನ್ನೇ ಮಾಡಿ, ನ್ಯಾಯವಿಮರ್ಶೆಯನ್ನು ಸರಿಯಾಗಿಯೇ ಮಾಡುತ್ತಾ, ಜನರಿಗೆ ಯಾವ ಹಾನಿಯೂ ಬರದಂತೆ ರಾಜ್ಯವಾಳುವನೆಂದು ಊಹಿಸೋಣ. ಇಂಥಾ ಅರಸು ಸಜ್ಜನನಾಗಿರತಕ್ಕದ್ದು ಮಾತ್ರವೇ ಅಲ್ಲ; ಅತ್ಯಂತ ಚತುರ ನಾಗಿಯೂ ಇರಬೇಕು. ಇವನಿಗೆ ಜನರ ಮತ್ತು ರಾಜ್ಯಭಾರದ ಸ್ಥಿತಿಯ ಸರಿಯಾದ ವರ್ತ ಮಾನವೂ ಬಂದು ತಲಪಬೇಕು. ಶಕ್ತರಾಗಿಯೂ ಪ್ರಾಮಾಣಿಕರಾಗಿಯೂ ಯಾವ ಕೆಲಸವನ್ನಾ ದರೂ ತಮ್ಮ ಕೆಲಸದ ಹಾಗೆ ನೋಡಿಕೊಳ್ಳತಕ್ಕ ಕಾರ್ಯದಕ್ಷರಾಗಿಯೂ, ಇರುವ ಜನಗಳನ್ನು ನಾನಾವಿಧವಾದ ಅಧಿಕಾರಗಳಲ್ಲಿ ಇರಿಸಬೇಕು. ತನ್ನ ರಾಜ್ಯದ ಎಲ್ಲಾ ಕಡೆಯಲ್ಲಿಯೂ ಮೈಯೆಲ್ಲಾ ಕಣ್ಣಾಗಿ ನೋಡಿಕೊಳ್ಳುತ್ತಿರಬೇಕು. ಇವುಗಳಲ್ಲಿ ಒಂದೊಂದು ಕಾರ್ಯವನ್ನು ನೆರ ವೇರಿಸುವುದಕ್ಕೇ ವಿಶೇಷವಾದ ಬುದ್ಧಿಯೂ, ಶಕ್ತಿಯೂ, ಅವಶ್ಯಕ. ಹೀಗಿರುವಲ್ಲಿ ಎಲ್ಲಾ ಕಾರ್ಯವನ್ನೂ ಒಬ್ಬನೇ ತೂಗಿಸಬೇಕಾದರೆ, ಅವನು ಎಂಥಾ ಬೃಹಸ್ಪತಿಯೋ! ಅಂಥಾ ಪುರು ಷನು ಸಿಕ್ಕುವದೇ ಕಷ್ಟ. ಅಥವಾ ಸಿಕ್ಕಿದರೂ ಇಂಥಾ ಅಧಿಕಾರವನ್ನು ನಡಿಸಲು ಅವನು ಸಮ್ಮತಿಸು ವದು ಮತ್ತೂ ಕಷ್ಟ. ಮೀರಿ ಸಮ್ಮತಿಸುತ್ತಾನೆಂದು ಇಟ್ಟುಕೊಳ್ಳೋಣ. ಇಂಥಾ ದೊರೆಯ ಆಳಿಕೆ ಯಿಂದಲೂ ಪ್ರಜೆಗಳಿಗೆ ಒಂದು ವಿಧವಾದ ಕೇಡು ಸಂಭವಿಸುವದು. ಯಾವಾಗಲೂ ರಾಜ್ಯಭಾರ ಕ್ರಮವು ಪ್ರಜೆಗಳಿಗೆ ಬರುವ ಹಾನಿಯನ್ನು ತಪ್ಪಿಸಿ ಅವರ ವೃದ್ಧಿಗೆ ಕಾರಣವಾಗಿದ್ದರೆ, ಆ ಧೊರೆತನವೇ ಸರ್ವೋತ್ತಮವಾದದ್ದಷ್ಟೆ. ಮೇಲೆ ಹೇಳಿದಂಥಾ ಒಬ್ಬ ಸತ್ಪುರುಷನ ಆಳಿಕೆಯಲ್ಲಿ ಮತ್ಯಾವ ಕಷ್ಟವಿಲ್ಲದಿದ್ದಾಗ್ಯೂ ಪ್ರಜೆಗಳ ಅದೃಷ್ಟವೆಲ್ಲಾ ಧೊರೆಯ ಕೈಲಿರುವ ಕಾರಣ, ರಾಜ ಕಾರ್ಯಗಳಲ್ಲಿ ಯಾವ ಚಟುವಟಿಕೆಯನ್ನೂ ತೋರಿಸದೆ ಪ್ರಜೆಗಳು ತಟಸ್ಥರಾಗುವರು, ಅಂದರೆ ಇಂಥಾ ದೊಡ್ಡ ವಿಷಯಗಳನ್ನು ಕುರಿತು ಆಲೋಚನೇ ಮಾಡುವ ಅಭ್ಯಾಸವನ್ನು ಬಿಡುವರು. ಈ ವಿಷಯವನ್ನು ಕುರಿತು ತಾವು ಆಲೋಚಿಸಿದರೆ ತಮ್ಮ ಅಭಿಪ್ರಾಯವನ್ನು ಯಾರೂ ಕೇಳುವು ದಿಲ್ಲವೆಂಬ ಮಾತು ಅವರ ಮನಸ್ಸಿನಲ್ಲಿ ಖಚಿತವಾಗಿ ನೆಟ್ಟಿರುವದೇ, ಅವರ ಉಪೇಕ್ಷೆಗೆ ಕಾರಣ ವಾಗಿದೆ. ಹಾಗಲ್ಲದೆ ತಾನು ಮಾಡಿದ ಆಲೋಚನೆಯೂ ಒಂದಾನೊಂದು ಕಾಲದಲ್ಲಿಯಾದರೂ ಸಾಗುತ್ತೆಂಬ ಧೈರ್ಯವಿಲ್ಲದೆ ದೊಡ್ಡ ವಿಷಯಗಳನ್ನು ಕುರಿತು ಆಲೋಚನೆ ಮಾಡತಕ್ಕ ರಸಿಕರು ಬಹಳ ಅಪೂರ್ವ. ಇಂಥಾ ಸಂದರ್ಭದಲ್ಲಿ ಸಾಧಾರಣ ವಿಷಯಗಳ ಮೇಲೆ ಈ ಜನರ ಬುದ್ಧಿ ಪ್ರಯವಾಗಬೇಕಾಯಿತು. ಶಾಸ್ತ್ರಗಳನ್ನು ವಿಚಾರ ಮಾಡಿಕೊಂಡು ಹೋಗುವ ಆಲೋಚನ ಪರರಾದ ಪಂಡಿತರು ರಾಜ್ಯದಲ್ಲಿರಬಹುದು. ಇಂಥಾ ಕೆಲವರು ಇದ್ದ ಮಾತ್ರಕ್ಕೇ ಪ್ರಜೆಗಳೆಲ್ಲರೂ ತಮ್ಮ ಯೋಗ್ಯತಾನುಸಾರ ಬುದ್ಧಿವಂತರಾದರೆಂದು ಹೇಳಕೂಡದು. ದೊಡ್ಡ ವಿಷಯಕ್ಕೆ ಹೋಗದ ಇವರ ಬುದ್ಧಿ ಅಲ್ಪವಿಷಯಗಳಲ್ಲಿಯೇ ವೆಚ್ಚವಾಗುವದು; ಮನುಷ್ಯನಿಗೆ ಅಲ್ಪ ವಿಷಯವನ್ನೇ ಕುರಿತು ಯೋಚಿಸುವ ಅಭ್ಯಾಸವಿದ್ದರೆ ಅವನ ಬುದ್ಧಿಯ ಚಾತುರ್ಯವು ದಿನೇ ದಿನೇ ಕಡಿಮೆಯಾಗುತ್ತಾ ಬರುವದು. ಕ್ರಮೇಣ ಜನರ ಆಲೋಚನಾ ಸಾಮರ್ಥ್ಯವು ಹೋಗಿ, ಅವರು ಪಶುಗಳ ತರಗತಿಗೆ ಇಳಿಯುವರು. ಸಜ್ಜನನಾದ ಧೊರೆಯ ನಿರಂಕುಶ ಪ್ರಭುತ್ವದಿಂದ

ಉಂಟಾಗುವ ಫಲಗಳಲ್ಲಿ ಇದೊಂದು ಮುಖ್ಯವಾದದ್ದು. ಉಳಿದವುಗಳನ್ನು ಮುಂದಿನ ಸಂಚಿಕೆಯಲ್ಲಿ ವಿಸ್ತರಿಸಿ ಹೇಳುವೆವು.

೨

ಪ್ರಜೆಗಳ ಅಭಿಪ್ರಾಯವನ್ನು ತಿಳಿಯದೆ ಸ್ವತಂತ್ರನಾಗಿ....ರಾಜ್ಯಭಾರವು ಎಷ್ಟೇ ಚನ್ನಾಗಿದ್ದರೂ, ಆತನು ಎಷ್ಟೇ....ರೂ ಪ್ರಜೆಗಳಿಗೆ ನಷ್ಟ ತಪ್ಪುವುದಿಲ್ಲ ರಾಜ್ಯಾಂಗ ವಿಚಾರಗಳೇ ಮೊದಲಾದ ದೊಡ್ಡ ವಿಷಯಗಳಲ್ಲಿ, ಇವರು ತಮ್ಮ ಬುದ್ಧಿಯನ್ನು ಪ್ರವೇಶ ಮಾಡಿ ....ಲಚನೆ ತಮ್ಮ ಅಭಿಪ್ರಾಯವನ್ನು ಹೊರೆಗೆ ತಿಳಿಯಪಡಿಸು....ನಾವಶ್ಯಕವಾಗಿಯೂ ಹಾಗೆ ಮಾಡಿ, ತಮ್ಮ ಅಭಿಪ್ರಾಯವನ್ನು ಹೊರೆಗೆ ತಿಳಿಯಪಡಿಸು....ನಾವಶ್ಯಕವಾಗಿಯೂ ಹಾಗೆ ಮಾಡಿದರೆ ತೊಂದರೆಯೂ ಇರು....ದೊಡ್ಡ ಸಂಗತಿಗಳನ್ನು ಕುರಿತು ಯೋಚಿಸುವ ಅಭ್ಯಾಸವು ಪ....ಕಡಮೆಯಾಗುತ್ತಾ ಬರುವದೆಂತಲೂ; ಕ್ರಮೇಣ ಅವರ ಬುದ್ಧಿ ....ನಾಗುತ್ತಾ ಬರುವದೆಂತಲೂ; ಹಿಂದಿನ ಸಂಚಿಕೆಯಲ್ಲಿ ಹೇಳಿದ್ದ........

ಆದರೆ ಪ್ರಜೆಗಳೆಲ್ಲರೂ ಬುದ್ಧಿಹೀನರಾಗಿ ಏಕಕಾಲದಲ್ಲಿಯೇ ಪ.... ಮಾನರಾಗುವುದಿಲ್ಲ. ಕೆಲವರು ಮನಸ್ಸು ಬಂದ ಅಲ್ಪವಾದ ಗ್ರಂಥ....ಓದುವುದರಲ್ಲಿಯೂ, ಕೆಲವರು ಜೂಜು ಮುಂತಾದದ್ದನ್ನು ಆಡುವ...., ಕೆಲವರು ಮೋಸಮಾಡುವುದರಲ್ಲಿಯೂ. ಕೆಲವರು ಕಳ್ಳತನದ.... ಕೆಲವರು ವ್ಯಸನಾಧೀನತೆಯಲ್ಲಿಯೂ, ಕೆಲವರು ಪಾನ, ವೇಶ್ಯಾ....ಮೊದಲಾದ ದುಷ್ಕಾರ್ಯಗಳಲ್ಲಿಯೂ ನಿರತರಾಗಿ ಆಯಾ ಕೆಲಸಗಳಲ್ಲಿ....ಸ....ಯು....ನ್ನು ತೆಗೆಯುತ್ತಾ, ಪರಹಿಂಸೆಗೆ ನೂತನವಾದ ಯಂತ್ರಗಳನ್ನು ಕಲ್ಪಿಸುವ ಮಹಾಶಿಲ್ಪಿಗಳೋ ಎನ್ನುವ ಹಾಗೆ ಲೋಕಕಂಟಕರಾಗುವರು. ಉಳಿದವರಲ್ಲಿ ಹಲವರು ಸಾಧಾರಣವಾದ ವ್ಯವಸಾಯ ಅಥವಾ ವ್ಯಾಪಾರಗಳಲ್ಲಿ ಕಾಲವನ್ನು ಕಳೆಯುವರು ಇಂಥಾ ಕೆಲಸಗಳಿಂದ ಜನರ ಬುದ್ಧಿಯು ಕೆಡದೇ ಇದ್ದಾಗ್ಯೂ ಮಧ್ಯಸ್ಥವಾಗಿದ್ದೀತೇ ಹೊರತು ವೃದ್ಧಿಯಾಗಲಾರದು. ಮತವಿಷಯಗಳನ್ನು ವಿಚಾರ ಮಾಡಿಕೊಂಡು ದೇವರಲ್ಲಿ ಅತ್ಯಂತ ಭಕ್ತಿಯುಳ್ಳವರು ಹಲವರು ಇದ್ದಾಗ್ಯೂ, ತಮಗೆ ನರಕ ತಪ್ಪಿ ಸ್ವರ್ಗ ಪ್ರಾಪ್ತವಾಗುವಂತೆ ಸರ್ವಶಕ್ತನನ್ನು ಬೇಡಿಕೊಳ್ಳಲು ಸ್ವಾರ್ಥಪರರಾಗಿರುವರಲ್ಲದೆ, ಲೌಕಿಕ ವ್ಯವಹಾರದಲ್ಲಿ ಜನರು ವೃದ್ಧಿಯಾಗುವ ಹಾಗೆ ಯಾವ ಕಾರ್ಯವನ್ನೂ ಇವರು ಇದುವರೆಗೆ ಜರಿಗಿಸಲ್ಲ. ಅಥವಾ ಈ ಜನರು ಅನ್ಯರ ಯೋಗಕ್ಷೇಮವನ್ನು ವಿಚಾರಿಸಿದಾಗ್ಯೂ, ವೈರಾಗ್ಯವನ್ನು ಬೋಧಿಸಲು ಬರುವರು. ವೈರಾಗ್ಯವು ಲೌಕಿಕ ವ್ಯವಹಾರವನ್ನು ಎಷ್ಟು ಮಟ್ಟಿಗೆ ಹೆಚ್ಚಿಸುವದೋ ಅದು ಸರ್ವರಿಗೂ ತಿಳಿದೇ ಇದೆ.

ಹೀಗೆ ಜನರು ಒಂದು ವಿಧವಲ್ಲದಿದ್ದರೂ ಮತ್ತೊಂದು ವಿಧದಲ್ಲಿಯಾದರೂ ನೀತಿಯನ್ನು ವೃದ್ಧಿಮಾಡದೆ ಇತರತ್ರ ಮಾರ್ಗದಲ್ಲಿಯಾಗಲಿ ಅಥವಾ ನೀತಿಯನ್ನು ಕೆಡಿಸುವ ಮಾರ್ಗದಲ್ಲಿಯಾಗಲೀ ಪ್ರವರ್ತಿಸುತ್ತಾರೆ. ....ಥಾ ಜನರು ನೆರೆಮನೆಗೆ ಕಳ್ಳಬಿದ್ದಿದ್ದಾನೆಂದು ಕೇಳಿದ ಕೂಡಲೆ-ನಮ್ಮ ಮನೆ ಬೀದೀ ಬಾಗಲು ಹಾಕಿದೆಯೋ ಇಲ್ಲವೋ? ಪೆಟ್ಟಿಗೆಗೆ ಬೀಗ ಬಿದ್ದಿದೆಯೋ ಇಲ್ಲವೋ? ನಮ್ಮ ಪದಾರ್ಥವು ಭದ್ರವಾಗಿದ್ದರೆ ಸಾಕು. ನಾವು ಕಚೇರಿಗೆ ಹೋಗಿ ಸಾಕ್ಷ್ಯ ಹೇಳುವುದು ತಪ್ಪಿದರೆ ಸಾಕು, ಯಾರು ಎತ್ತ ಹೋದರೆ ನಮಗೇನು? ಎಂದು ತಮ್ಮ ಕ್ಷೇಮವನ್ನೇ ನೋಡುವರೇ ಹೊರತು ಅನ್ಯನಿಗೋಸ್ಕರ ಸಹಾಯ ಮಾಡುವದಿಲ್ಲ, ಪಶ್ಚಾತ್ತಾಪವನ್ನಾದರೂ ಪಡುವದಿಲ್ಲ. ಕೊನೆಗೆ ಒಂದೊಂದು ಸಮಯದಲ್ಲಿ ತನ್ನ ನೆರೆಯವನಿಗೆ ಇಂಥಾ ಕೇಡು ಬಂತಲ್ಲಾ ಅಷ್ಟೇ ಸಾಕು. ಅವನ ಮನೆ ಹಾಳಾದರೆ ತನ್ನ ಮನೆಗೆ ಬಹಿಭೂ೯ಮಿಯಾಯಿತು, ಎಂದು ಹಿ....ವರು ನೆರೆಹೊರೆಯವರ ಪ್ರಯೋಜನವನ್ನೇ ನೋಡದ ಮನುಷ್ಯನು ದೆ....

ಪ್ರಯೋಜನವನ್ನೆಲ್ಲಾ ಕಟ್ಟಿಕೊಂಡು ಒದ್ದಾಡುವದು ಸುಳ್ಳು. ಹೀಗೆ ಜನರೆಲ್ಲಾ ದೇಶಾಭಿ
ಮಾನವನ್ನು ಬಿಡುವರು. ತಟಸ್ಥರಾದ ಇಂಥಾ ಜನರನ್ನು ಆಳತಕ್ಕ ನಿರಂಕುಶಪ್ರಭು ಒಬ್ಬನೇ
ದೇಶಾಭಿಮಾನಿಯಾಗಿರಾನಲ್ಲದೆ ಮತ್ತೆ ಯಾರೂ ಇಲ್ಲ. ಮೊಗಲಾಯ ಚಕ್ರವರ್ತಿಗಳು ಹಿಂದೂ
ಸ್ಥಾನದಲ್ಲಿಯೂ, ಕಾಬೂಲ್ ಮೊದಲಾದ ಪ್ರಾಂತ್ಯಗಳಲ್ಲಿಯೂ, ಅನೇಕ ರಾಜ್ಯವನ್ನು ಜಯಿಸಿ
ದ್ದರು. ಹೀಗೆ ತಮ್ಮ ಧೊರೆಗೆ ಜಯವಾಯಿತಲ್ಲಾ, ಎಂದು ಸಂತೋಷಪಡದೆ ಪ್ರಜೆಗಳು
ರಾಯನಿಗೆ ರಾಜ್ಯಪಾಪದಿ ರಾಗೀ ಬೀಸೋದು ತಪ್ಪಲಿಲ್ಲ. ನಮ್ಮ ಕಷ್ಟ ಬಿಡಲಿಲ್ಲ, ಎಂದುಕೊಳ್ಳು
ತ್ತಿದ್ದರು.

ನಿರಂಕುಶಪ್ರಭುವಿನ ಕೈಕೆಳಗಿನ ಅಧಿಕಾರಿಗಳು ಜನಕ್ಕೆ ಯಾವ ಹಿಂಸೆಯನ್ನೂ ಕೊಡದೇಲೂ,
ರಾಜ್ಯಭಾರವು ಜನರ ಕ್ಷೇಮಾಭಿವೃದ್ಧಿಗೆ, ಅನುಕೂಲವಾಗಿಯೂ, ಜನಗಳು ತಾವಾಗಿ ಆಲೋಚಿಸಿ
ಮಾಡಿಕೊಳ್ಳಬೇಕಾದ ಮತ್ತು ಪ್ರಯೋಜನಕರವಾದ ಕೆಲಸಗಳನ್ನು ಅವರಿಗೆ ಅಂಥ ಶ್ರಮವಿಲ್ಲ
ದೇಯೇ ಸರಕಾರದವರೇ ನಡಿಸುತ್ತಾಲೂ ಇದ್ದಲ್ಲಿ, ಅಂಥಾ ಪ್ರಭುತ್ವವೇ ಒಳ್ಳೇ ನಿರಂಕುಶ
ಪ್ರಭುತ್ವವೆಂದು ಹೇಳಬಹುದು. ಇಂಥಾ ರಾಜ್ಯದ ತಟಸ್ಥರಾದ ಜನರು ರಾಜ್ಯಭಾರ ಕ್ರಮದ
ಗೋಜಿಗೆ ಹೋಗದೆ ಸಮಸ್ತವನ್ನೂ ಸರಕಾರದವರ ಕೈಯಲ್ಲಿ ಬಿಟ್ಟು, ಸುಮ್ಮನೆ ಕೂತಿರುವರು.
ರಾಜ್ಯಭಾರಕ್ರಮದಲ್ಲಿ ವ್ಯತ್ಯಾಸವಾಗಿ ....ದರಿಂದ ತಮಗೆ ಕೆಟ್ಟದ್ದಾದರೆ, ಅದನ್ನು ದೈವಿಕವೆಂದು
ತಿಳಿಯುತ್ತಾರೆ. ಧೊರೆಯು ಮಾಡಿದ ಕೆಲಸದ ಮೇಲೆ ತಮ್ಮ ಕೈಯೇನೂ ಸಾಗದೇ ಇದ್ದ
ಕಾರಣದಿಂದಲೇ ಪೃಥ್ವಿಪತಿಯೇ ಸಾಕ್ಷಾತ್ ವಿಷ್ಣುವೆಂಬ ಮಾತು ಈ ದೇಶದ ಜನರ ಮನಸ್ಸಿನಲ್ಲಿ
ಖಚಿತವಾಗಿ ನಿಂತುಹೋಯಿತು. ಗ್ರಂಥ ಕಾಲಕ್ಷೇಪವನ್ನೇ ಜನರೆ....ಕೊಡುತ್ತ ಆಲೋಚನಾಪರ
ರಾಗಿರತಕ್ಕ ಕೆಲವು ವಿದ್ವಾಂಸರು ವಿನಾ ಉಳಿದ ಜನರೆಲ್ಲಾ ತಮ್ಮ ದೇಶದ ಸಮಸ್ತ ಆಡಳತ
ವನ್ನೂ ಸರಕಾರದ ಅಧಿಕಾರಿಗಳಿಗೂ ಅರಸನಿಗೂ ಒಪ್ಪಿಸಿ, ಮನಸ್ಸು ಬಂದಂತೆ ವಿನೋದವಾಗಿ
ಕಾಲಕ್ಷೇಪವನ್ನು....ಡುತ್ತ, ತಮ್ಮ ತಮ್ಮ ಸೌಖ್ಯವನ್ನೇ ಹುಡುಕಿಕೊಂಡು ಹೋಗುವರು.
ಇದರಿಂದ ಜನಾಂಗವು ಖಚಿತವಾಗಿ ನಿಂತು ರಾಜ್ಯವು ಆಚಂದ್ರಾರ್ಕವಾಗಿ ನಡೆಯುವಂತೆ ಸ್ಥಾಯಿ
ಗೊಳದೆ, ದಿನೇ ದಿನೇ ಪ್ರಜೆಗಳೆಲ್ಲಾ ಕೆಟ್ಟು ಕೊನೆಗೆ ರಾಜ್ಯಕ್ಷೋಭೆಯುಂಟಾಗುವದು.

ಪುನಹೆ ಪ್ರಾಂತ್ಯದ ಮಹಾರಾಷ್ಟ್ರರೆಲ್ಲಾ ಸಿವಾಜಿಯ ಕೈಕೆಳಗೆ ಒಗ್ಗಟ್ಟಾಗಿ ಸೇರಿ, ಒಂದು
ಕಾಲದಲ್ಲಿ ಬಿಜಾಪುರದ ರಾಜ್ಯವನ್ನೂ, ಮತ್ತೊಂದು ಕಾಲದಲ್ಲಿ ಮೊಗಲಾಯಿ ಸೀಮೆಯನ್ನೂ
ಹಿಡಿದು, ವಿಶೇಷವಾದ ಜಯವನ್ನೂ ಹೊಂದಿದರು. ಸ್ವಲ್ಪ ದಿವಸದಲ್ಲಿಯೇ ಪ್ರಸಿದ್ಧರಾದ
ಮೊಗಲಾಯರೂ ಕೂಡ ಇವರಿಗೆ ಹೆದರಿಕೊಂಡು, ಸಾತಾರೆ ಮೊದಲಾದ ರಾಜ್ಯವನ್ನು ಬಿಟ್ಟು
ಹೊರಟು ಹೋದರು. ಈ ಮಹಾರಾಷ್ಟ್ರರಲ್ಲಿ ಪ್ರತಿ ಒಬ್ಬ ಮನುಷ್ಯನೂ ತನ್ನ ರಾಜ್ಯಕ್ಕೆ ಆದ
ಜಯವೇ ತನ್ನ ಜಯವೆಂತಲೂ, ರಾಜ್ಯಕ್ಷೇಮವೇ ತನ್ನ ಕ್ಷೇಮವೆಂತಲೂ ರಾಜ್ಯದ ಆಡಳಿತವೆಲ್ಲಾ
ತನ್ನ ಮನೇ ಆಡಳಿತವೆಂತಲೂ ತಿಳಿದು, ಧೊರೆಯಾಗಲಿ ಅಧಿಕಾರಿಯಾಗಲಿ ಪ್ರಜೆಗಳಿಗೆ ವಿರೋಧ
ವಾದ ಯಾವ ಕಾರ್ಯವನ್ನೂ ಮಾಡದಂತೆ. ಅತ್ಯಂತ ಚಟುವಟಿಕೆಯಿಂದ ನೋಡಿಕೊಳ್ಳುತ್ತಿದ್ದನು.
ಯುದ್ಧಕ್ಕೆ ಹೊರಟ ಕಾಲಗಳಲ್ಲಿ ೩-೪ ದಿವಸವಾದರೂ ಕುದುರೇ ಬೆನ್ನನ್ನು ಬಿಟ್ಟು ಇಳಿಯದೆ,
ಅಲ್ಲಿಯೇ ಒಣಕಲ ರೊಟ್ಟಿಯನ್ನು ಕಡಿಯುತ್ತಾ, ಪಕಾಲೀ ನೀರನ್ನು ಕುಡಿಯುತ್ತಾ, ಅಶ್ವಾರೂಢ
ರಾಗಿಯೇ ನಿದ್ರೆಮಾಡುತ್ತಾ, ಮಳೆಗಾಗಲಿ ಬಿಸಲಿಗಾಗಲಿ ಹೆದರದೆ, ಸ್ವಸೌಖ್ಯವನ್ನು ಯಳ್ಳಷ್ಟೂ
ನೋಡದೇ ಇದ್ದ ಈ ಮಹಾರಾಷ್ಟ್ರರ ಒಗ್ಗಟ್ಟೂ, ಪರಾಕ್ರಮವೂ, ಪ್ರಪಂಚವನ್ನೇ ಜಯಿಸು
ವದೋ ಎಂಬ ಹಾಗೆ ಎಲ್ಲರನ್ನೂ ತಲ್ಲಣಗೊಳಿಸಿತು. ಸಾಹು ಮಹಾರಾಯನಿಗೆ ಮಂತ್ರಿ
ಅಥವಾ ಪೇಷ್ವೆಗಳಾಗಿದ್ದ, ಶ್ರೀಮಂತ ಬಾಳಾಜೀ ವಿಶ್ವನಾಥ ಇವನ ಮಗ ೧ನೇ ಬಾಜೀರಾವ್
ಇವರ ಸಾಮರ್ಥ್ಯಕ್ಕೆ ಎದುರೇ ಇರಲಿಲ್ಲ, ತುರುಕರ ಕಾಟವು ಸ್ವಲ್ಪ ಹೆಚ್ಚಾಗಿ ಸಾಹುಮಹಾ

ರಾಯನ ಮನಸ್ಸಿಗೆ ಸ್ವಲ್ಪ ವ್ಯಸನ ಉಂಟಾಗಲು, ೧ನೇ ಬಾಜೀರಾಯನು ಮಹಾಸ್ವಾಮಿ ಇದಕ್ಕೆ ಚಿಂತೆ ಯಾತಕ್ಕೆ; ಮೊಗಲಾಯಿ ರಾಜ್ಯವು ಒಡೆದು ಸಿಕ್ಕಿದವರ ಪಾಲಾಗುತ್ತಿದೆ; ಈ ತುಂಟು ಪಾಳಯಗಾರರನ್ನು ಒಬ್ಬೊಬ್ಬರನ್ನಾಗಿ ಜಯಿಸುವದಕ್ಕಿಂತಲೂ, ಈ ಕೊಂಬೆಗಳಿಗೆ ಮೂಲವಾಗಿರುವ ಬೇರಿಗೆ ಒಂದು ಏಟನ್ನು ಹಾಕಿ ಜಯಿಸಿದರೆ, ಈ ಶಾಖೋಪಶಾಖೆಗಳೆಲ್ಲಾ ನಿಮಿಷದಲ್ಲಿ ಉದುರಿಕೊಳ್ಳುವವು. ಆಸೇತುಹಿಮಾಚಲ ಪರ್ಯಂತವೂ ಜಯಿಸಿ ಆ ಹಿಮಾಲಯ ಪರ್ವತದ ಮೇಲೆ ತಮ್ಮ ಝಂಡ್ಯವನ್ನು ಹಾಕುತ್ತೇನೆ, ಎಂದನು. ಇವನ ದಿವಸದಲ್ಲಿ ಮರಾಟಿಯವರು ಬ್ರಹ್ಮಾಂಡ ರಾಜ್ಯವನ್ನು ಜಯಿಸಿದರು.

ಹೀಗಿದ್ದಾಗ್ಯೂ ಬಾಜೀರಾಯನ ಮಗನಾದ ಬಾಳಾಜೀಬಾಜೀರಾಯನ ದಿವಸದಲ್ಲಿ ಪೇಷ್ವನ ಅಧಿಕಾರ ಹೆಚ್ಚಿತು. ಪ್ರಜೆಗಳಾಗಲಿ, ಅವರ ಮುಖಂಡರಾದ ಸಿಂಧ್ಯಾ, ಹೋಳಕರ, ಗಾಯಿಕವಾಡ, ಇವರೇ ಮೊದಲಾದ ಬಾರಾಬಾಯಿಗಳಾಗಲಿ, ರಾಜ್ಯಭಾರದ ಗೋಜಿಗೆ ಬರದೆ, ಸಮಸ್ತ ಅಧಿಕಾರವನ್ನು ಪೇಷ್ವನೂ ಅವನ ಮಂತ್ರಿಗಳೂ ನಡಿಸುತ್ತ ಬಂದರು. ಆದಕಾರಣ ಅವರೆಲ್ಲಾ ತಟಸ್ಥರಾಗಿ, ತಮ್ಮ ತಮ್ಮ ಸೌಖ್ಯವನ್ನು ನೋಡಿಕೊಳ್ಳುವದಕ್ಕೆ ಮೊದಲು ಮಾಡಿದರು. ಅವರ ಪೂರ್ವದ ಚಟುವಟಿಕೆ ಹೋಗುತ್ತ ಬಂತು. ಡಂಭ ವಿಲಾಸವೂ, ಶೃಂಗಾರದಲ್ಲಿಯೂ, ಅಪೇಕ್ಷೆ ಹೆಚ್ಚಿತು. ಕುರುಕ್ಷೇತ್ರದಲ್ಲಿ....ರಾನಿಸವರು ಇವರನ್ನು ಜಯಿಸಿ, ನಷ್ಟಗೊಳಿಸಿದರು. ಪ್ರಜೆಗಳ ಮುಖಂಡರಾದ ಬಾರಾಬಾಯಿಗಳೆಲ್ಲಾ ತಮ್ಮ ಕೈಗೆ ಸಿಕ್ಕಿದ ರಾಜ್ಯಗಳನ್ನೆಲ್ಲಾ ಆಕ್ರಮಿಸುತ್ತ ಬಂದರು; ಒಗ್ಗಟ್ಟು ತಪ್ಪಿಯೇ ಹೋಯಿತು. ಸಮರ್ಥನಾದ ನಾನಾ ಫರ್ನಾವೀಸ್ ಎಂದು ಕರೆಯಲ್ಪಡುತ್ತಿದ್ದ ಬಾಳಾಜೀ ಜನಾರ್ಧನನು ಇರುವವರೆಗೂ ಪೂರ್ವದ ದರ್ಪ ಸ್ವಲ್ಪಯಿತ್ತು. ೧೮೦೦ರಲ್ಲಿ ಆತ ಸತ್ತ ಕೂಡಲೆ, ೨ನೇ ಬಾಜೀರಾಯನ ಅವಿವೇಕಗಳಿಂದ ರಾಜ್ಯವು ಇಂಗ್ಲೀಷರ ಪಾಲಾಯಿತು. ನಿರಂಕುಶನಾದ ಪ್ರಭು ಎಷ್ಟೇ ಸಜ್ಜನನಾದಾಗ್ಯೂ ಹೀಗೆ ಪ್ರಜಾಕ್ಷೋಭೆ ತಪ್ಪುವದಿಲ್ಲ. ಪ್ರಜೆಗಳ ಅನುಮತಿಯ ಪ್ರಕಾರವೇ ಆಳಿದಾಗ್ಯೂ ಧೊರೆಯು ಸರ್ವಸ್ವತಂತ್ರನಾಗಿದ್ದರೆ ಇನ್ನೂ ಒಂದು ಕೇಡು ಸಂಭವಿಸುವದು. ಅದನ್ನು ಮುಂದಿನ ಸಂಚಿಕೆಯಲ್ಲಿ ತಿಳಿಯಪಡಿಸುವೆವು.

೩

ಸರ್ವಸ್ವತಂತ್ರನಾದ ಧೊರೆಯು ಪ್ರಜೆಗಳ ಇಷ್ಟಾನುಸಾರವೇ ಆಳುತ್ತಾನೆಂದು ಊಹಿಸೋಣ. ಪ್ರಜೆಗಳು ರಾಜ್ಯಾಂಗ ವಿಚಾರವನ್ನು ಕುರಿತು ಬಾಯಿಮಾತಿನಲ್ಲಿಯೂ ನ್ಯೂಸ್ ಪೇಪರ್ ಮುಂತಾದ ಬರಹಗಳಲ್ಲಿಯೂ ಚರ್ಚಿಸುವ ಸ್ವಾತಂತ್ರ್ಯವನ್ನು ಅರಸನು ಅವರಿಗೆ ಕೊಡಲಿ; ಮತ್ತು ಸ್ಥಳಿಕ ಸಂಗತಿಗಳನ್ನು ಆಯಾ ಸ್ಥಳದ ಮಹಾಜನಗಳೇ ಮನಸ್ಸು ಬಂದ ಹಾಗೆ ನಡಿಸಿಕೊಳ್ಳಲೆಂದು ಈತನು ಬಿಟ್ಟರಲಿ; ಪ್ರಜೆಗಳಲ್ಲಿ ವಿವೇಕಿಗಳಾದ ಕೆಲವರನ್ನು ಆದುಕೊಂಡು ತನ್ನ ಸಭಿಕರನ್ನಾಗಿ ನೇಮಿಸಿಕೊಂಡಿರಲಿ: ಕಂದಾಯದ ವಿಷಯವನ್ನೂ ನ್ಯಾಯ ನಿಬಂಧನೆ ಮಾಡತಕ್ಕ ಅಧಿಕಾರವನ್ನೂ ಸರಕಾರದ ಕಾರ್ಯದ ನಡವಳಿಕೆಯ ಅಧಿಕಾರವನ್ನೂ ಇವು ಮಾತ್ರ ತನ್ನ ಕೈಯಲ್ಲಿಯೇ ಇರಿಸಿಕೊಂಡಿರಲಿ. ಹೀಗಾದ ಪಕ್ಷದಲ್ಲಿ ನಿರಂಕುಶಪ್ರಭುತ್ವದ ಅನೇಕ ಕೆಡುಕುಗಳು ಇಂಥಾ ದೊರೆಯ ಆಳಿಕೆಯಲ್ಲಿ ಇರುವುದಿಲ್ಲ. ರಾಜ್ಯಾಂಗ ವಿಚಾರವನ್ನು ಕುರಿತು ಆಲೋಚಿಸಿ ಅಭಿಪ್ರಾಯವನ್ನು ಹೇಳುವ ಮಟ್ಟಿಗೆ ಜನರು ಬಹಳ ಸುಟಿಯಾಗಿಯೂ ಶಕ್ತರಾಗಿಯೂ ಇರುವರು. ಪ್ರಜೆಗಳ ಅಭಿಪ್ರಾಯವು ಒಂದೊಂದು ಕಾಲದಲ್ಲಿ ಸರಕಾರಕ್ಕೆ ವಿರೋಧವಾಗಿಯೂ ಇರಬಹುದು. ಹೀಗಾದ ಪಕ್ಷದಲ್ಲಿ ಇನ್ನೊಂದು ಹೊಸ ಕಷ್ಟ ಪ್ರಾಪ್ತ

ನಾಗುವುದು. ಎಂಥಾ ಪ್ರಭುತ್ವವಾಗಲಿ ಸರಕಾರದವರ ಕೆಲಸವು ಎಲ್ಲರಿಗೂ ಸಂತೋಷವನ್ನುಂಟುಮಾಡುವುದು ಅಸಾಧ್ಯ. ಆದ್ದರಿಂದ ಕೆಲವು ಜನರು ಸರಕಾರಕ್ಕೆ ವಿರೋಧಪಕ್ಷವನ್ನು ವಹಿಸಿ, ಆ ಸರಕಾರದ ಅಭಿಪ್ರಾಯಕ್ಕೆ ವಿರೋಧವಾದ ಮಾತುಗಳನ್ನೇ ಹೇಳುತ್ತ ಬರುವರು. ಇಂಥಾ ವಿರೋಧವಾದ ಅಭಿಪ್ರಾಯವನ್ನು ಪ್ರಜೆಗಳಲ್ಲಿ ಅನೇಕರು ಇಟ್ಟುಕೊಂಡಿದ್ದರೆ ಆ ಧೊರೆಯು ಏನು ಮಾಡಬಹುದಾಗಿದೆ? ಏನೂ ಇಲ್ಲ. ಆ ಜನರ ಇಷ್ಟಾನುಸಾರವಾಗಿಯೇ ಆಳಬೇಕು; ಅಥವಾ ಅವರನ್ನು ಅಡಗಿಸಿ ನಾಶಮಾಡಬೇಕು. ಅಲ್ಪ ವಿಷಯಗಳಲ್ಲಿಯೂ ಅವರ ಇಷ್ಟಾನುಸಾರವಾಗಿಯೇ ಆಳಿದರೆ ಆ ಅರಸನು ನಿರಂಕುಶ ಪ್ರಭುವೆನ್ನಿಸಿಕೊಳ್ಳುವುದಿಲ್ಲ. ಆ ರಾಜ್ಯದಲ್ಲಿ ಪ್ರಜೆಗಳ ಅಭಿಪ್ರಾಯವನ್ನೇ ಧೊರೆಯ ಹಾಗೂ,ಅದನ್ನು ಜಾರೀಗೆ ತರುವ ಧೊರೆಯನ್ನೇ ಮಂತ್ರಿಯ ಹಾಗೂ ಭಾವಿಸಬೇಕಾಯಿತು.

ಹೀಗಿಲ್ಲದೆ ಪ್ರಜೆಗಳ ಅಭಿಪ್ರಾಯವು ತನಗೆ ವಿರೋಧವಾಗಿದೆ ಎಂದು ಧೊರೆಯು ಅದನ್ನು ಸಹಿಸಲಾರದೆ ಜನರನ್ನು ಹಲವು ಬಗೆಯಲ್ಲಿ ಹಿಂಸಿಸಿ ಅಡಗಿಸುವುದಕ್ಕೆ ಯತ್ನಿಸಿದರೆ, ಪ್ರಜೆಗಳಿಗೂ ಅರಸನಿಗೂ ಮಹಾದ್ವೇಷ ಹುಟ್ಟುವುದು. ಇದರಿಂದ ಇಲ್ಲಾ ರಾಜ್ಯ ನಷ್ಟವಾಗುವುದು, ಅಥವಾ ಪ್ರಜಾನಾಶವಾಗುವುದು.

ನಮ್ಮ ಹಿಂದೂಸ್ಥಾನದಲ್ಲಿ ಈಗ ಆಳುತ್ತಿರುವ ಇಂಗ್ಲಿಷ್ ಸರಕಾರದವರು ಸ್ವತಂತ್ರಾಧಿಕಾರಿಗಳೇ ಹೌದು. ಎಲ್ಲಾ ಬಗೆಯಲ್ಲಿಯೂ ಪ್ರಜೆಗಳಿಗೆ ಕ್ಷೇಮವನ್ನೇ ಕೋರತಕ್ಕ ಅವರ ಅಭಿಪ್ರಾಯವು ಶ್ಲಾಘ್ಯವಾದದ್ದೇ ಸರಿ; ಮತ್ತು ಇವರು ಸ್ವಲ್ಪಮಟ್ಟಿಗೆ ಪ್ರಜೆಗಳ ಅಭಿಪ್ರಾಯವನ್ನು ಅನುಸರಿಸಿಯೇ ರಾಜ್ಯಭಾರವನ್ನು ಮಾಡುತ್ತಾರೆಂದು ಹೆಸರು. ಆದರೆ ಇವರು ನಿರಂಕುಶರಾಗಿರುವ ಕಾರಣ ಪ್ರಜೆಗಳಿಗೆ ಹಲವು ಕಷ್ಟಗಳು ಸಂಭವಿಸಿವೆ. ಹ್ಯಾಗಂದರೆ—ಇಂಗ್ಲಂಡಿನಲ್ಲಿ ನ್ಯೂಸ್‌ಪೇಪರೆಂಬ ಸಮಾಚಾರ ಪತ್ರಿಕೆಗಳು ವಿಶೇಷವಾಗಿರುವವು. ಸೀಮೆಯಲ್ಲಿ ಘಟಕರಾದವರು ರಾಜ್ಯಾಂಗ ವಿಚಾರವನ್ನು ಕುರಿತು ಅನುಕೂಲವಾದ ಅಥವಾ ಪ್ರತಿಕೂಲವಾದ ತಮ್ಮ ಅಭಿಪ್ರಾಯಗಳನ್ನು ಇವುಗಳಲ್ಲಿ ಬರೆದು ಪ್ರಕಟಿಸುವರು; ಇದಕ್ಕೆ ಅಲ್ಲಿ ಯಾವ ನಿರ್ಬಂಧವೂ ಇಲ್ಲ. ಅದೇ ರೀತಿಯಾಗಿ ಈ ದೇಶದಲ್ಲಿಯೂ ಬೇಕಾದವರು ಇಂಗ್ಲಿಷ್ ಅಥವಾ ಕನ್ನಡವೇ ಮೊದಲಾದ ದೇಶಭಾಷೆಗಳಲ್ಲಿ ದೊಡ್ಡ ಸಂಗತಿಗಳನ್ನು ಕುರಿತು ತಮ್ಮ ಅಭಿಮತಗಳನ್ನು ಬರೆದು ಪ್ರಸಿದ್ಧಿ ಮಾಡಬಹುದೆಂದು ಇಂಗ್ಲಿಷ್ ಸರಕಾರದವರು ನಿಷ್ಕರ್ಷಿಸಿದರು. ಅದೇ ರೀತಿಯಲ್ಲಿ ನಾನಾ ದೇಶಭಾಷೆಗಳಲ್ಲಿಯೂ ಅನೇಕ ವರ್ತಮಾನ ಪತ್ರಿಕೆಗಳು ಹೊರಟವು. ಅವುಗಳಲ್ಲಿ ಇಂಗ್ಲಿಷ್ ಅಧಿಕಾರಿಗಳು ಮಾಡತಕ್ಕ ಅವಿವೇಕಗಳನ್ನು ಎತ್ತಿ ಹಾಕುತ್ತ ಬಂದರು. ಈ ಅಧಿಕಾರಿಗಳು ಇದನ್ನು ಸಹಿಸಲಾರದೆ, ದೇಶಭಾಷೆಗಳ ವರ್ತಮಾನ ಪತ್ರಿಕೆಯವರು ಸರಕಾರಕ್ಕೆ ವಿರೋಧವಾದ ಮಾತುಗಳನ್ನು ಬರೆದಲ್ಲಿ ಅವರಿಗೆ ವಿಶೇಷವಾದ ಶಿಕ್ಷೆ ಆಗಬೇಕೆಂದು, ಒಂದು ನಿಬಂಧನೆಯನ್ನು ಮಾಡಿಟ್ಟರು. ಮಹಾರಾಣಿಗೆ ಆಗ ಪ್ರತಿನಿಧಿಯಾಗಿದ್ದ ಲಾರ್ಡ್ ಲಿಟ್ಟನ್ ಎಂಬಾತನು ಕಣ್ಣನ್ನು ಮುಚ್ಚಿಕೊಂಡು, ಇದಕ್ಕೆ ತನ್ನ ಒಪ್ಪಿತವನ್ನು ಹಾಕಿದನು. ಇದೇ ಮೊದಲಾದ ಹಲವು ನಿರ್ಬಂಧಗಳನ್ನು ಪ್ರಜೆಗಳಿಗೆ ಇವನು ಉಂಟುಮಾಡಿದ ಕಾರಣ, ಜನರಿಗೆ ಸರಕಾರದವರಲ್ಲಿದ್ದ ನಂಬಿಕೆಯು ಕಡಮೆಯಾಯಿತು. ಆದರೆ ಈಗ ಸರ್ವಾಧಿಕಾರಿಯಾಗಿರುವ ಲಾರ್ಡ್ ರೈಪನ್ ಪ್ರಭುವಿನ ದಯದಿಂದ ಈ ಕೆಟ್ಟ ನಿಬಂಧನೆಗಳು ತಳ್ಳಲ್ಪಡಿಯಾಗಿ ಹೋದವು. ಆದಾಗ್ಯೂ ಸರಕಾರದವರೂ ಪ್ರಜೆಗಳೂ ಪರಸ್ಪರ ಅಪನಂಬಿಕೆ ಪಡುವ ಸೂಚನೆಗಳು ಇನ್ನೂ ಹೋಗಲಿಲ್ಲ.

ಪ್ರಜಾಪ್ರತಿನಿಧಿಗಳ ಸಭೆಯಿಂದ ಆಳಲ್ಪಡುವ ಇಂಗ್ಲಂಡ್ ಮೊದಲಾದ ದೇಶಗಳಲ್ಲಿ

ತುಂಟರಾದ, ಮೂರ್ಖರಾದ, ಅಥವಾ ಹೆಗ್ಗಣದಂತೆ ತಮ್ಮ ಪ್ರಯೋಜನದಲ್ಲಿಯೇ ನಿರತರಾಗಿ ಎಲ್ಲವನ್ನೂ ತಮ್ಮ ಕಡೆಗೇ ಎಳೆದುಕೊಳ್ಳತಕ್ಕ ಜನರನ್ನು ಅಡಗಿಸಿ ದೇಶವನ್ನು ಒಳ್ಳೇ ಸ್ಥಿತಿಗೆ ತರಬೇಕೆಂದು ಕೆಲವರು ಆತುರ ಪಡಬಹುದು. ಇದಕ್ಕಾಗಿ ನಿರಂಕುಶನಾದ ಒಬ್ಬ ಅರಸನನ್ನು ಅಪೇಕ್ಷಿಸಬಹುದು. ಆದರೆ ಲೋಕಕ್ಕೆ ಕ್ಷೇಮವನ್ನುಂಟುಮಾಡತಕ್ಕ ನಿರಂಕುಶ ಪ್ರಭುವು ನೂರರಲ್ಲಿ ಒಬ್ಬ. ಇದು ಹಾಗಿರಲಿ. ಹೀಗೆ ನಿರಂಕುಶ ಪ್ರಭುವನ್ನು ಅಪೇಕ್ಷಿಸತಕ್ಕವರು ಪ್ರಜೆಗಳ ಅಭಿವೃದ್ಧಿಯೇ ಒಳ್ಳೇ ರಾಜ್ಯಭಾರದ ಬೀಜವೆಂಬುವ ಅಭಿಪ್ರಾಯವನ್ನು ಮರೆತುಬಿಡುವರು. ಜನರಿಗೆ ಎಲ್ಲಾ ಭಾಗದಲ್ಲಿಯೂ ಸ್ವಾತಂತ್ರ್ಯವನ್ನು ಕೊಟ್ಟು ಆಳುವ ಸ್ವತಂತ್ರ ರಾಜ್ಯಭಾರದಲ್ಲಿ ಒಂದು ಅನುಕೂಲ್ಯವಿದೆ. ಜನರನ್ನೇ ಅಭಿವೃದ್ಧಿ ಮಾಡದೇ ಅವರ ಅಡಳಿತಗಳನ್ನು ಮಾತ್ರ ಕ್ರಮಪಡಿಸುವುದಕ್ಕಾಗುವದಿಲ್ಲ. ನಿರಂಕುಶ ಪ್ರಭುವು ಜನರೆಲ್ಲರಿಗೂ ವಿದ್ಯಾಭ್ಯಾಸ ಮಾಡಿಸಬಹುದು ; ಹೀಗೆ ಪ್ರಜೆಗಳ ಜ್ಞಾನಾಭಿವೃದ್ಧಿ ಮಾಡುತ್ತೇನೆಂಬುವದೇ ಪ್ರಜೆಗಳ ಹಿಂಸೆಗೆ ಒಂದು ಕಾರಣವಾಗಬಹುದು ಪ್ರಜೆಗಳು ಮಣ್ಣುಮುದ್ದೆಯ ಹಾಗೆ ಸುಮ್ಮನಿರದೆ ಸ್ವಲ್ಪ ಜ್ಞಾನವನ್ನು ಪಡೆಯುವಂತೆ, ಅವರಿಗೆ ಎಷ್ಟು ಸ್ವಲ್ಪ ವಿದ್ಯಾಭ್ಯಾಸವನ್ನು ಮಾಡಿಸಿದಾಗ್ಯೂ, ಅವರು ತಮ್ಮ ಕೆಲಸಗಳನ್ನು ತಾವೇ ನಡಿಸಿಕೊಳ್ಳುವ ಸ್ವಾತಂತ್ರ್ಯವನ್ನು ಅಪೇಕ್ಷಿಸುವರು. ಬುದ್ಧಿಯು ಕ್ರಮೇಣ ತೀಕ್ಷ್ಣವಾಗಿ ಒಂದೊಂದು ವಿಷಯದಲ್ಲಿ ಕುಶಲತೆಯು ಹೆಚ್ಚುತ್ತ ಬಂದರೆ, ಅದೇ ಬುದ್ಧಿಯನ್ನು ರಾಜ್ಯಭಾರವೇ ಮೊದಲಾದ ಎಲ್ಲಾ ವಿಷಯದಲ್ಲೂ ನಾವು ಪ್ರಯನಾಡುವದಕ್ಕೆ ನಮಗೆ ಆಶೆ ಹುಟ್ಟುವದು ಸ್ವಭಾವವಾಗಿಯೇ ಇದೆ. ಇದಕ್ಕೆ ನಿರ್ಬಂಧ ಮಾಡಿ ಪ್ರಜೆಗಳಿಗೆ ವಿದ್ಯಾಭ್ಯಾಸವನ್ನು ಮಾಡಿಸುತ್ತೇನೆಂಬ ನಟನೆಯು ವೇಶ್ಯಾಂಗನೆಯರ ನಟನೆ, ಮೋಸಗಾರರ ಆದರ, ಕಳ್ಳರ ಮೆಲ್ಲಮಾತು.

ಆದರೆ ಒಂದಾನೊಂದು ಸಮಯದಲ್ಲಿ ಜನರ ತುಂಟುತನವನ್ನು ಅಡಗಿಸುವದು ಅನಿವಾರ್ಯವಾದರೆ, ಒಬ್ಬ ದೊರೆಯು ನಿರಂಕುಶವಾದ ಅಧಿಕಾರವನ್ನು ವಹಿಸಕೂಡದೆಂಬುದು ನಮ್ಮ ತಾತ್ಪರ್ಯವಲ್ಲ. ಅಂಥಾ ಸಮಯಗಳಲ್ಲಿಯೂ ಪುರಾಣಪ್ರಸಿದ್ಧರಾದ ಭರತ ಮಹಾರಾಯ, ಜನಕ ಮಹಾರಾಯ, ಇವರೇ ಮೊದಲಾಗಿ ಅನೇಕ ಸತ್ಯಸಂಧರಾದ ನಮ್ಮ ದೊರೆಗಳ ಹಾಗೆ ಪ್ರಕೃತೋಚಿತವಾದ ನಿರಂಕುಶಾಧಿಕಾರವನ್ನು ವಹಿಸಿ, ಪ್ರಜಾಕ್ಷೇಮವನ್ನುಂಟುಮಾಡಿ, ತರುವಾಯ ರಾಜರ್ಷಿಗಳಾಗಿ ಯಾವ ದುರಾಶೆಗಳೂ ಇಲ್ಲದೆ ಸಾತ್ವಿಕರಾಗಿ ಸಾಧಾರಣ ಜನರಂತೆ ಇರಲು ಒಪ್ಪಿದ ಪಕ್ಷದಲ್ಲಿ ಸ್ವತಂತ್ರಾಧಿಕಾರವನ್ನು ಅಧಿಕಾರಿಯು ಸ್ವಲ್ಪ ಕಾಲದ ಮಟ್ಟಿಗೆ ವಹಿಸಬಹುದು. ನಿರಂತರವಾದ ಒಳ್ಳೇ ನಿರಂಕುಶಪ್ರಭುತ್ವವೆಂಬುವ ಮಾತು ಬರೀ ಕಾಮಹರಟೆ. ನಾಗರಿಕವುಳ್ಳ ಜನರಿಗೆ ಕೆಟ್ಟ ನಿರಂಕುಶ ಪ್ರಭುತ್ವಕ್ಕಿಂತಲೂ, ಒಳ್ಳೇ ನಿರಂಕುಶಪ್ರಭುತ್ವದಲ್ಲಿ ಕೇಡು ಹೆಚ್ಚು. ಯಾಕೆಂದರೆ ಸಜ್ಜನನಾದ ಸ್ವತಂತ್ರಾಧಿಕಾರಿಯ ಆಳಿಕೆಯಲ್ಲಿ ಜನರ ಹಮ್ಮೂ, ಯೋಗ್ಯತೆಯೂ, ಕ್ರಮೇಣ ಕಡಮೆಯಾಗಿ ಅವರು ಹೇಡಿಗಳಾಗುತ್ತ ಬರುವರು. ಮುಂದಕ್ಕೆ ನೀಚನಾದ ಅಧಿಕಾರಿ ಬಂದರೆ, ಅವನನ್ನು ಎದುರಿಸಲು ಸಾಮರ್ಥ್ಯವಿಲ್ಲದೆ ಹೋಗುವದು. ಇದರಿಂದ ಪ್ರಜಾಕ್ಷೋಭೆ ತಪ್ಪದು. ಹಾಗಿಲ್ಲದೆ ಜನರಲ್ಲಿ ಸ್ವಲ್ಪ ಸತ್ವವೂ, ಧೈರ್ಯವೂ ಉಳಿದಿದ್ದರೆ, ನೀಚನಾದ ಅಧಿಕಾರಿಯ ಹಿಂಸೆಯನ್ನು ತಡೆಯಲಾರದೆ ಕೂಡಲೆ ಅವನನ್ನು ಎದುರಿಸುತ್ತಿದ್ದರು. ಸಜ್ಜನನಾದ ಅಕ್ಬರ್ ಬಾದುಷಹಾ, ಇವನ ಮಗ ಜಹಾಂಗೀರ್, ಮೊಮ್ಮಗ ಷಹಜಿಹಾನ್, ಇವರ ರಾಜ್ಯಭಾರವು ಒಳ್ಳೇ ನಿರಂಕುಶ ರಾಜ್ಯಭಾರವಾದ್ದರಿಂದ ಜನಗಳ ಸಾಮರ್ಥ್ಯವು ದಿನೇ ದಿನೇ ಎಲ್ಲಾ ವಿಷಯದಲ್ಲೂ ಕಡಮೆಯಾಯಿತು. ವೀರರಾದ ರಾಜಪುತ್ರರೂ ಕೂಡ ಹೇಡಿಗಳಾಗುತ್ತ ಬಂದರು. ಇದರಿಂದ ನೀಚನಾದ ಅಲಂಘೀರನ ರಾಜ್ಯಭಾರದಲ್ಲಿ ಎಷ್ಟು ಹಿಂಸೆ ಉಂಟಾದರೂ ಜನರೆಲ್ಲರೂ ಕುರಿಗಳಂತೆ ಸಹಿಸಿಕೊಳ್ಳುತ್ತ ಬಂದರು. ಇದರಿಂದ ಪ್ರಜೆಗಳಿಗೂ, ದೇಶಕ್ಕೂ, ದೊರೆಗೂ, ಉಂಟಾದ ನಾಶದ ಪರಿಮಿತಿಯನ್ನು ಹೇಳುವುದು ಅಸಾಧ್ಯ!

ಪಹರುಗಳ ಸ್ವತಂತ್ರಾಡಳಿತ, ಅಥವಾ ಮ್ಯೂನಿಸಿಪ್ಯಾಲಿಟಿ

ನಮ್ಮ ಹಿಂದೂದೇಶವು ಬಹು ಪುರಾತನವಾದದ್ದು. ಇಲ್ಲಿನ ಪ್ರತಿ ಹಳ್ಳಿಯೂ ರಾಜನೆಂಬ ಒಬ್ಬ ಧೊರೆಗೆ ಸೇರಿಬಂದಿದೆ. ಈ ಗ್ರಾಮದಲ್ಲಿ ವಾಸವಾಗಿರುವ ಜನರು ಅದರ ಸುತ್ತಲೂ ಇರತಕ್ಕ ಭೂಮಿಗಳನ್ನು ವ್ಯವಸಾಯ ಮಾಡಿಕ್ಕೊಂಡು ಜೀವಿಸುವರು. ರಾಜ್ಯಾಂಗದ ಆಡಳಿತವನ್ನು ನಡಿಸುವುದಕ್ಕಾಗಿ ಧೊರೆಗೆ ಈ ಕುಳಗಳು ಕಂದಾಯವನ್ನು ಕೊಡುತ್ತಿರುವುದು ಸರಿಯಷ್ಟೆ. ಪ್ರತಿಯೊಬ್ಬ ರೈತನು ರಾಜನಿಗೆ ಕಂದಾಯವನ್ನು ತಲಪಿಸುತ್ತಿದ್ದಲ್ಲಿ ಜನಗಳಿಗೆ ಅನಾನುಕೂಲ್ಯವೂ, ಸರಕಾರದ ಹಣ ವಸೂಲಾಗುವದಕ್ಕೆ ಸಾವಕಾಶವೂ ಆಗುವದರಿಂದ, ಒಂದೊಂದು ಗ್ರಾಮದಲ್ಲಿ ಮುಖಂಡನಾದ ಒಬ್ಬ ಗೌಡನು ಏರ್ಪಟ್ಟು ಇವನ ಮೂಲಕ ಗ್ರಾಮದ ಒಟ್ಟು ಸುವರ್ಣಾದಾಯವು ಸಲ್ಲುತ್ತ ಬಂತು. ಆದರೆ ಹೀಗೆ ಮುಖಂಡನಾದ ಒಬ್ಬ ಗೌಡನನ್ನು ಗ್ರಾಮಸ್ಥರೆಲ್ಲಾ ಸೇರಿ ನೇಮಿಸಿಕ್ಕೊಂಡಿದ್ದರೇ ಹೊರತು, ಇವನು ಧೊರೆಯಿಂದ ನೇಮಕವಾದವನಲ್ಲ. ಈ ಕೆಲಸವು ಹಕ್ಕುದಾರೀ ಕೆಲಸವೆಂದು ಈಗಲೂ ಹೇಳುತ್ತಿರುವ ಮಾತೇ ಈ ಅರ್ಥವನ್ನು ತೋರಿಸುವುದು. ಇವನ ಮೂಲಕ ಗ್ರಾಮಸ್ಥರ ಸಾಧಾರಣ ವ್ಯಾಜ್ಯಗಳೆಲ್ಲಾ ತೀರುತ್ತಿದ್ದವು. ಇವನಂತೆಯೇ ಲೆಕ್ಕಾಚಾರಕ್ಕಾಗಿ ಒಬ್ಬ ಶಾನುಭಾಗ, ಜೋಯಿಸ, ಮುಂತಾದವರು ಇರುತ್ತಿದ್ದರು. ಸ್ವಲ್ಪ ದೊಡ್ಡ ಪಟ್ಟಣಗಳಲ್ಲಿ ಅನೇಕ ಜಾತಿಗಳೂ ವ್ಯಾಪಾರಸ್ಥರೂ ಹೆಚ್ಚಾಗಿದ್ದದ್ದರಿಂದ ಇವರಿಗೆಲ್ಲಾ ಪ್ರಮುಖರಾಗಿ ಸೆಟ್ಟಿ, ಯಜಮಾನರೆಂದು ನೇಮಕವಾಗಿದ್ದರು. ಸ್ವಲ್ಪ ಹಣಕಾಸಿನ ವ್ಯಾಜ್ಯಗಳೂ, ಜಾತೀ ಮತ್ತು ಮತಸಂಬಂಧವಾದ ಮಾತುಗಳೂ, ಗ್ರಾಮದ ಅಥವಾ ಷಹರಿನ ಇತರ ವಿಷಯಗಳೂ, ಸತ್ರದೇವಾಲಯಗಳೂ, ಗ್ರಾಮದ ಬಿಗಿ ಬಂದುಕಟ್ಟು, ಇವುಗಳ ವ್ಯವಸ್ಥೆಯೆಲ್ಲಾ ಪ್ರಮುಖರಾದ ಈ ಜನರಿಗೇ ಸೇರಿತ್ತು. ಎಲ್ಲಾ ಗ್ರಾಮದಲ್ಲಿಯೂ ಕಮ್ಮಾರ, ಕುಂಬಾರ, ಕ್ಷೌರಕ, ಅಗಸ, ಇವರೇ ಮೊದಲಾದ ೧೨ ಜನ ಕೆಲಸಗಾರರು ಇರುತ್ತಿದ್ದರು. ಇವರ ಮುಖಾಂತರ ಜನಗಳಿಗೆ ಆಗಬೇಕಾದ ಕೆಲಸಗಳನ್ನೆಲ್ಲಾ ಇವರು ನಡಿಸುವದಕ್ಕಾಗಿ ಗ್ರಾಮದ ಜನರು ಸುಗ್ಗೀಕಾಲದಲ್ಲಿ ತಮಗೆ ಬಂದ ಧಾನ್ಯದಿಂದ ಇವರಿಗೆ ಸ್ವಲ್ಪ ಹಸಿಗೆಯನ್ನು ಕೊಡುತ್ತಿದ್ದರು. ಶಾನವೆಂಬ ಒಂದು ಭಾಗವನ್ನು ಹೆಚ್ಚಾಗಿ ತೆಗೆದುಕೊಳ್ಳುತ್ತಿದ್ದ ಕರಣಿಕನಿಗೆ ಶಾನುಭಾಗನೆಂತಲೇ ಹೆಸರಾಯಿತು. ಸರಕಾರದ ಕಂದಾಯ ಕೌಳಿಗೆಗಳನ್ನು ಈ ಜನರು ವಸೂಲು ಮಾಡಿಕ್ಕೊಡುತ್ತಿದ್ದದ್ದರಿಂದ, ಸರಕಾರದ ಮಿರಾಸಿಯೂ ಇವರಿಗೆ ಸಲ್ಲುತ್ತ ಬಂತು.

ಹೀಗೆ ಗ್ರಾಮದ ಅಥವಾ ಷಹರಿನ ಆಡಳಿತಗಳನ್ನು ಅಲ್ಲಿನ ಜನರು ಸ್ವತಂತ್ರವಾಗಿ ನಡಸಿಕ್ಕೊಂಡು ಬರುತ್ತ ಸರಕಾರದ ಕೆಲಸಕ್ಕೂ ಅಪ್ರೋಹ ಬರದಂತೆ ನೋಡಿಕೊಳ್ಳುತ್ತಿದ್ದ ಕಾರಣ, ನಮ್ಮ ಹಿಂದೂ ಧೊರೆಗಳೂ, ಮುಸಲ್ಮಾನ್ ನವಾಬರೂ, ಇತರ ಪಾಳಯಗಾರರೂ ಈ ಪದ್ಧತಿಯನ್ನು ತೆಗೆಯದೇ ನಿಲ್ಲಿಸಿದ್ದರು. ಒಂದೊಂದು ಕಾಲದಲ್ಲಿ ತುರುಕರು ಇವರನ್ನು ಹಿಂಸೆ ಮಾಡುತ್ತಿದ್ದದ್ದೇ ಹೊರತು, ಉಳಿದ ಸಮಯದಲ್ಲಿ ಇವರ ಗೋಜಿಗೆ ಹೋಗದೇ ಇದ್ದ ಕಾರಣ, ಈ ತುರುಕ ಧೊರೆಗಳ ಮೇಲೆ ನಾಡು ಎದ್ದು ಇವರ ದುಷ್ಕೃತ್ಯವನ್ನು ಅಡಗಿಸದೇ ಇರುವದಕ್ಕೆ ಆಕರವಾಯಿತು. ಆದರೆ ದಿನಕ್ರಮೇಣ ರಾಜ್ಯಗಳು ಒಂದೊಂದಾಗಿ ಇಂಗ್ಲಿಷರ ಸ್ವಾಧೀನವಾಗಲು, ಇವರು ಈ ಗ್ರಾಮಾಂತರದವರ ಸ್ವಾತಂತ್ರ್ಯವನ್ನು ಸಹಿಸಲಾರದೆ ಹಲವು ಉಪಾಯಗಳನ್ನು ತೆಗೆದರು. ಈ ನ್ಯಾಯವಿಚಾರಣೆಗಾಗಿ ವಿಧವಿಧವಾದ ಕೋರ್ಟುಗಳನ್ನು ಏರ್ಪಡಿಸಿದರು. ಇದಕ್ಕಾಗಿ ಬಗೆಬಗೇ ಕೋಡುಗಳನ್ನೂ ಲಾಗಳನ್ನೂ ನೇಮಿಸಿದರು. ಗ್ರಾಮದ ಪಂಚಾಯಿತರೂ ಸೆಟ್ಟಿವರ್ತಕರೂ ಮಾಡಿದ್ದ ತೀರ್ಮಾನದ ಮೇಲೆ ವ್ಯಾಜ್ಯಗಳನ್ನು ಹಿಡಿದು ಅವರ ವ್ಯವಸ್ಥೆಗಳನ್ನು ತಳ್ಳಪಡಿ ಮಾಡುತ್ತ ಬಂದರು. ಇದರಿಂದ ಜನರಿಗೆ ಆ ಪಂಚಾಯಿತರ ಮಾತಿನಲ್ಲಿ ಪಥ್ಯ

ಕಡಮೆಯಾಗಿ ಸ್ವಲ್ಪ ವ್ಯಾಜ್ಯಗಳನ್ನೂ ಕೋರ್ಟಿಗೆ ತರುತ್ತ ಬಂದರು. ಇದರ ವಿಚಾರಕ್ಕಾಗಿ ನೂರಾರು ಕೋರ್ಟುಗಳು ಹುಟ್ಟಿದವು. ಕ್ರಮೇಣ ಸಾರಗಕ್ಕೆ ಹುಟ್ಟುವಂತೆ ಈ ಕೋರ್ಟಿಗೆ ಕೋರ್ಟುಗಳೂ ವಕೀಲುಗಳೂ ಆದವು. ಇವುಗಳನ್ನು ತಿಳಿದ ಜನರು ವ್ಯಾಜ್ಯವನ್ನು ನಡಿಸುವದರಲ್ಲಿ ನಿಸ್ಸೀಮರೆನಿಸಿಕೊಂಡು, ಕುಕ್ಕುಟ ಸ್ವಭಾವವನ್ನು ತೋರಿಸುತ್ತ, ಪರಪ್ರಯೋಜನವನ್ನು ಮರೆತು ತಮ್ಮ ಆಶೆ ಎಂಬ ದೇವತೆಗೆ ಬೇಕಾದ ಬಲಿಯನ್ನು ಕೊಡುತ್ತ ವ್ಯಾಜ್ಯಗಳನ್ನು ಪ್ರೋತ್ಸಾಹಿಸುತ್ತ ಬಂದರು. ಈ ಕಾರಣಗಳಿಂದ ಕೋರ್ಟುಗಳಲ್ಲಿ ವ್ಯಾಜ್ಯಗಳು ಹೆಚ್ಚಿದ್ದಲ್ಲದೆ ಕೋರ್ಟುಗಳೂ ಹೆಚ್ಚಿದವು. ಅಧಿಕಾರಿಗಳು ಲಂಚ ಮುಂತಾದದ್ದನ್ನು ತಿನ್ನದೇ ಇರುವಂತೆ ಅವರಿಗೆ ಸಂಬಳವೂ ಹೆಚ್ಚಿತು. ಕೂಡಲೇ ಸರಕಾರದ ವೆಚ್ಚ ಹೆಚ್ಚಿತು. ಇದರಿಂದ ಪ್ರಜೆಗಳು ಕೊಡುತ್ತಿದ್ದ ಕಂದಾಯವೂ ಹೆಚ್ಚಿತು. ಒಳಗುಟ್ಟನ್ನು ಕಂಡ ಪಂಚಾಯಿತರ ಮುಂದೆ ಸಾಗದೆ ಇರತಕ್ಕ ಅನ್ಯಾಯಗಳೂ ತಳತಂತ್ರಗಳೂ ಹೆಚ್ಚಿ, ಹರಪ್ರಯತ್ನದಲ್ಲಿ ತಮ್ಮ ವ್ಯಾಜ್ಯವನ್ನು ಗೆಲ್ಲಬೇಕೆಂಬ ಆಶೆಯು ಜನರನ್ನು ವಿಶೇಷವಾಗಿ ದುರ್ಮಾರ್ಗಕ್ಕೆ ಎಳೆದು, ಅವರ ನೀತಿಯನ್ನು ಕೆಡಿಸುತ್ತಿದೆಯೋ ಎಂದು ಕೆಲವು ವೃದ್ಧರು ಶಂಕಿಸುತ್ತಾರೆ. ಹೀಗೆ ತಾವು ಮಾಡಿದ ಮಾಟದಿಂದ ಹುಟ್ಟಿದ ಮಾಯಾಪ್ರತಿಮೆಯು ಇಂಥಾ ಗಲಭೆಯನ್ನು ತಂದುಬಿಟ್ಟಿತೆಂದು ತಿಳಿಯದೆ, ನಮ್ಮ ಹಿಂದೂ ದೇಶದ ಜನರಲ್ಲಿ ಜಗಳಗಂಟತನವೂ ಹೆಚ್ಚಾಗಿದೆ, ಎಂದು ಇಂಗ್ಲಿಷ್ ಜನರು ನಮ್ಮ ಮೇಲೆ ಮಾಡತಕ್ಕ ದೋಷಾರೋಪಣೆಗೆ ಎಷ್ಟರ ಮಟ್ಟಿಗೆ ಆಧಾರವಿದೆಯೋ ತಿಳಿಯದು.

ಪೂರ್ವದಿಂದಲೂ ನಡೆದುಬಂದ ಈ ಸೆಟ್ಟಿ, ವರ್ತಕ, ಚೌದ್ರಿ, ಗೌಡ, ಗ್ರಾಮ ಪಂಚಾಯಿತ, ಮೊದಲಾದ ಪದ್ಧತಿಗಳಿಂದ ಜನರ ಐಕಮತ್ಯಕ್ಕೂ ಸ್ವಾತಂತ್ರ್ಯಕ್ಕೂ ಇದ್ದ ಪ್ರಯೋಜನವನ್ನು ಅರಿಯದೆ ಕೆಲವು ಹಿಂದೂ ಅಧಿಕಾರಿಗಳು, ಇಂಗ್ಲಿಷರ ದಯಕ್ಕೆ ಪಾತ್ರರಾಗಬೇಕೆಂದು, ಈ ಪದ್ಧತಿಗಳನ್ನು ಒಂದೊಂದಾಗಿ ನಾಶ ಮಾಡುತ್ತ ಬಂದರು. ಮೇಲೆ ಹೇಳಿದ ರೀತಿಯಲ್ಲಿ ಗ್ರಾಮಪಂಚಾಯಿತ ಪದ್ಧತಿಯು ಹಾಳಾಯಿತು. ಭೂಮಿಯನ್ನು ಪೈಮಾಯಿಷಿ ಮಾಡಿಸಿ ಕಂದಾಯವನ್ನು ಹೊಸದಾಗಿ ಏರ್ಪಡಿಸುವ ಸರ್ವೇ ಇಲಾಖೇ ವಿಷಯವು ಎಲ್ಲರಿಗೂ ಗೊತ್ತೇ ಇದೆ. ಈ ಸರ್ವೆಯವರು ಗೌಡ, ಶಾನುಭೋಗರಿಗೆ ಮಿರಾಸೆ ಮೊದಲಾದ್ದನ್ನು ತಪ್ಪಿಸಿ, ಸಂಬಳವನ್ನು ಏರ್ಪಡಿಸುತ್ತ ಬರಲು, ಈ ಗೌಡನ ಗಣ್ಯವು ಗ್ರಾಮದಲ್ಲಿ ಕಡಮೆಯಾಗುತ್ತ ಬಂತು. ಮಾಸ್ಯವಾಗಿ ಬರತಕ್ಕ ಮೂರುಕಾಸು ಹತ್ತು ರೂಪಾಯಿನ ಸಂಬಳಕ್ಕೆ ಸರಿಯಾದೀತೆ? ಸಂಬಳದವನು ಚಾಕರನಾದ; ಮಿರಾಸೆಯವನು ಗಣ್ಯನಾದ ಅಧಿಕಾರಿಯೆನ್ನಿಸಿಕೊಂಡ. ಈ ಭಾಗದಲ್ಲಿಯೂ ಇಂಗ್ಲಿಷ್ ಸರಕಾರದವರ ಚೇಷ್ಟೆಯಿಂದ ಜನರ ಸ್ವಾತಂತ್ರ್ಯ ಹೀಗೂ ಕೆಟ್ಟಿತು. ಪ್ರಾಚೀನ ಇವನ್ನೆಲ್ಲಾ ಯೋಚಿಸಿಯೇ ಮೈಸೂರು ದಿವಾನರವರು ಸರ್ವೇ ಇಲಾಖೆ ಸಂಬಳದ ಏರ್ಪಾಡನ್ನು ಕಿತ್ತು, ಮಾಸ್ಯದ ಭೂಮಿಯನ್ನು ಗೌಡ ಮುಂತಾದವರಿಗೆ ಕೊಡಬೇಕೆಂದು ಮಾಡಿರುವ ನಿಷ್ಕರ್ಷೆಯು ಅನೇಕ ಭಾಗದಲ್ಲಿ ಉತ್ತಮವಾಗಿದೆ.

ಪ್ರತಿ ಪಟ್ಟಣದಲ್ಲಿಯೂ ಸೆಟ್ಟಿ, ವರ್ತಕ, ಚೌದ್ರಿಗಳು ಇರುತ್ತಿದ್ದರು. ನಾನಾ ಜಾತಿಗಳೂ, ನಾನಾ ವ್ಯಾಪಾರಸ್ಥರೂ ಇವರ ಪಣಕಟ್ಟಿಗೆ ಸೇರಿದ್ದರು. ಪಟ್ಟಣಗಳಲ್ಲಿ ಇದ್ದ ಇಂಥಾ ಪಣಕಟ್ಟಿಗೆ ದೇಶವೆಂತಲೂ ಗ್ರಾಮಾಂತರದಲ್ಲಿರುವ ಪಣಕಟ್ಟಿಗೆ ನಾಡೆಂತಲೂ ಹೆಸರು. ಸೆಟ್ಟಿ, ಯಜಮಾನ, ಚೌದ್ರಿಗಳಿಗೆ ಪತ್ತರ ಮನುಷ್ಯರೆಂದು ಹೆಸರು. ಇವರ ಅಪ್ಪಣೆಯಿಲ್ಲದೆ ಪಟ್ಟಣದ ಕೆಲಸಗಳು ಯಾವದೂ ನಡೆಯುತ್ತಿರಲಿಲ್ಲ. ಕೃಷ್ಣರಾಜವಡೆಯರವರ ದಿವಸದಲ್ಲಿ ಈ ಮೈಸೂರು ದೇಶದ ಸೆಟ್ಟಿಯು ಧೊರೆಗಳೊಡನೆ ಕೆಲವು ಸುಂಕದ ವಿಚಾರವಾಗಿ ಚರ್ಚೆಮಾಡಿ, ಅದು ಪ್ರಜೆಗಳಿಗೆ ಅನುಕೂಲವಾಗಿ ಸಾಗದೇ ಇರಲು, ಊರು ಅಂಗಡಿಯೆಲ್ಲವನ್ನೂ ಪಟ್ಟಣದ ಹೊರಗೆ ಹಾಕಬೇಕೆಂದು ಹೇಳಿದನಂತೆ. ಅದೇ ಪ್ರಕಾರ ಮೂರು ದಿವಸದವರಿವಿಗೂ ಅಂಗಡಿಗಳೆಲ್ಲಾ ಊರು

ಹೊರಗೆ ಇದ್ದವು. ಕೊನೆಗೆ ಮಹಾರಾಜರು ಪ್ರಜೆಗಳ ಇಷ್ಟಪ್ರಕಾರ ನಡಿಸಿಕೊಟ್ಟಮೇಲೆ ಮೈಸೂರು ಎಂದಿನ ಹಾಗೆ ಊರಾಯಿತಂತೆ. ಮಹಾರಾಜರ ಮೇಲೆ ಜನರು ಹೀಗೆ ಎದುರು ಬಿದ್ದದ್ದು ಒಂದು ಅಪರಾಧವಾದಾಗ್ಯೂ, ಜನರಲ್ಲಿದ್ದ ಐಕಮತ್ಯವೂ ಪ್ರಮುಖರಾದ ಸೆಟ್ಟಿ, ಯಜಮಾನರ ಗೌರವವೂ ಇದರಿಂದ ವ್ಯಕ್ತವಾಗುವದು. ಆದರೆ ಇಂಗ್ಲೀಷ್ ಸರಕಾರದವರು ಈ ಪದ್ಧತಿಗಳನ್ನೆಲ್ಲಾ ಮುರಿದು ಜನಾಂಗದ ಬಿಗಿಯನ್ನೇ ತಪ್ಪಿಸಿ ನಾಶಮಾಡಿದರು. ಈಗ ಈ ಸೆಟ್ಟಿ ಯಜಮಾನರನ್ನು ಕೇಳುವರೇ ಇಲ್ಲ. ಸೆಟ್ಟಿ, ಯಜಮಾನ, ಚೌದ್ರಿ ಎಂಬುವ ಮಾತನ್ನು ಬಾಯಲ್ಲಿ ಆಡಿದವರಿಗೆಲ್ಲಾ ಅವಮಾನ ಬಂತು ಎನ್ನುವ ಮಟ್ಟಿಗೂ ಈ ಅಧಿಕಾರದ ವಕ್ರವು ಕೆಟ್ಟುಹೋಯಿತು.

ಕಟ್ಟು ಹರಿದ ಪಂಜಿನಂತೆ ಆದ ನಮ್ಮ ಜನಾಂಗದ ಸ್ಥಿತಿಯು ಪೂರ್ವಕ್ಕಿಂತಲೂ ಈಗ ಕೆಟ್ಟುಹೋದದ್ದರಿಂದ, ಇದು ವೃದ್ಧಿಯಾಗುವದಕ್ಕೆ ಮಾರ್ಗವೇನೆಂದು ದಯಾಶಾಲಿಗಳಾದ ಕೆಲವು ಇಂಗ್ಲಿಷ್ ಸರದಾರರು ಯೋಚಿಸುತ್ತ ಬಂದರು. ಈಗ ಇಂಡಿಯಾ ವೈಸ್‌ರಾಯಿಯಾಗಿರುವ ಲಾರ್ಡ್ ರೈಪನ್ ಎಂಬುವರು ನಮ್ಮ ಜನರ ಅವಸ್ಥೆಯನ್ನು ನೋಡಿ, ಇವರಿಗೆ ಸ್ವಾತಂತ್ರ್ಯವನ್ನು ಕೊಟ್ಟು ಒಳ್ಳೇ ಸ್ಥಿತಿಗೆ ತರಬೇಕೆಂದು ಅನೇಕ ಪ್ರಯತ್ನವನ್ನು ಮಾಡುತ್ತಿದಾರೆ. ತಾಲ್ಲೋಕು ಮುಂತಾದ ಸ್ಥಳಗಳಲ್ಲಿ ಲೋಕಲ್‌ಫಂಡ್ ಬೋರ್ಡುಗಳೆಂಬ ಸಭೆಯನ್ನೂ, ಷಹರುಗಳಲ್ಲಿ ಮ್ಯುನಿಸಿಪಲ್ ಬೋರ್ಡುಗಳೆಂಬ ಸಭೆಯನ್ನೂ ಏರ್ಪಡಿಸಿ, ಇವರುಗಳ ಮೂಲಕ ಆಯಾಸ್ಥಳದ ಆದಾಯ ವೆಚ್ಚಗಳೆಂದರೆ—ಸತ್ರ, ದೇವಸ್ಥಾನ, ಬಾಲಶಿಕ್ಷೆ, ಗ್ರಾಮದ ಕಚರಾ ವಿಚಾರ, ಸಾಧಾರಣವಾದ ಕಟ್ಟಣಗಳು, ಮುಸಾಫರ್‌ಖಾನೆ, ಧರ್ಮಶಾಲೆ ಮೊದಲಾದವುಗಳು, ಇವೆಲ್ಲವನ್ನು ನೋಡಿಕ್ಕೊಳ್ಳುವಂತೆ ನಿಶ್ಚೈಸುತ್ತಿದಾರೆ. ಇದು ಒಳ್ಳೇ ಏರ್ಪಾಡೇ ಸರಿ; ಆದರೆ ಸರಕಾರದವರಾಗಿ ಇದನ್ನು ನೇಮಕ ಮಾಡುವದಕ್ಕೆ ಉದ್ಯುಕ್ತಪಟ್ಟಿರುವ ಕಾರಣ, ನಮ್ಮ ಜನರು ಇದನ್ನು ತಮ್ಮ ಸ್ವಂತ ಕೆಲಸವೆಂದು ತಿಳಿಯದೆ ಸರಕಾರದವರ ಕೆಲಸವೇ ಎಂತಲೂ, ಇದರಿಂದ ಸರ್ಕಾರದವರಿಗೆ ಪ್ರಯೋಜನ ಉಂಟೆಂತಲೂ ಭಾವಿಸಿ, 'ಲೋಕಲ್ ಫಂಡ್ ಬೋರ್ಡ್' 'ಮ್ಯೂನಿಸಿಪಲ್ ಬೋರ್ಡ್' ಎಂಬ ಮಾತನ್ನು ಕೇಳಿ ಹೆದರಿಕ್ಕೊಂಡು ಇದರ ಗೋಜಿಗೆ ಬರದೆ ತಟಸ್ಥರಾಗಿದಾರೆ. ಈ ಜನರು ಹೀಗೆ ತಮ್ಮ ಕಾರ್ಯವನ್ನು ತಾವುಗಳೇ ನಿಂತು ನಿರ್ವಹಿಸಿಕ್ಕೊಳ್ಳುವಂತೆ ಮಾಡಬೇಕಾಗಿದ್ದರೆ, ಸರಕಾರದವರು ಒಂದು ಉಪಾಯವನ್ನು ಮಾಡುವದುತ್ತಮ. "ಈಗ ಮಾಡುವ ಏರ್ಪಾಡು ಹೊಸದಲ್ಲ; ದೇಶದ ಪೂರ್ವಪದ್ಧತಿಯನ್ನೇ ಅನುಸರಿಸಿದೆ." ಎಂದು ಜನರಿಗೆ ವ್ಯಕ್ತ ಮಾಡಬೇಕು; ಲೋಕಲ್ಫಂಡ್ ಬೋರ್ಡ್ ಎಂಬುವದು ತಮ್ಮ ಪೂರ್ವದ ಗೌಡಾಳಿಕೆ, ಗ್ರಾಮ ಪಂಚಾಯಿತರ ಸಭೆಯ ಹಾಗಿರತಕ್ಕದ್ದು ಎಂತಲೂ, ಮತ್ತು ಮ್ಯೂನಿಸಿಪಲ್ ಬೋರ್ಡ್ ಎಂಬುವದು ಷಹರಿನ ಸೆಟ್ಟಿ, ಯಜಮಾನ, ಚೌದ್ರಿ, ಮತ್ತೂ ಹತ್ತೂಜನ, ಇವರುಗಳ ಸಭೆಯೆಂತಲೂ ಸ್ಪಷ್ಟ ಮಾಡಬೇಕು. ತರುವಾಯ ಇದಕ್ಕೆ ಸಂಬಂಧಪಟ್ಟ ಮಾತುಗಳೆಲ್ಲವನ್ನೂ ಇಂಗ್ಲಿಷ್ ಅಥವಾ ಹಿಂದೂಸ್ಥಾನೀ ಮಾತಾಗಿಡದೆ, ಪೂರ್ವಪದ್ಧತಿಯ ಮಾತುಗಳಾಗಿ ಆಯಾ ದೇಶಭಾಷೆಯಲ್ಲಿ ಇರಬೇಕು. ಈ ಇಂಗ್ಲಿಷ್ ಮಾತುಗಳು ಇಂಗ್ಲಿಷನ್ನು ಓದಿದವರಿಗೇ ಅರ್ಥವಾಗಿ ಅವರಿಗೆ ಈ ಪದ್ಧತಿಗಳ ಪ್ರಯೋಜನವು ತೋರಿಬರುವುದೇ ಹೊರತು, ಇಂಗ್ಲಿಷ್ ತಿಳಿಯದ ಇತರ ಜನರು ಇವುಗಳ ವಿಷಯವಾಗಿ ಅನುಮಾನಪಟ್ಟು—ಸರಕಾರದವರು ನಮ್ಮಮೇಲೆ ಒಂದು ಹೊಸ ತೆರಿಗೆಯನ್ನು ಹಾಕುವುದಕ್ಕೆ ಇದೊಂದು ಹೊಸ ಉಪಾಯವನ್ನು ಮಾಡಿದಾರೆಂದು ಯೋಚಿಸುವರು. ಅದಲ್ಲದೆ ಅವರ ಹಳೇ ಪದ್ಧತಿಯೂ ಈ ಹೊಸ ಪದ್ಧತಿಯೂ ಇವೆರಡೂ ಒಂದೇ ಎಂದು ಅವರಿಗೆ ತೋರ್ಪಡಿಸಿದರೆ, ಪೂರ್ವಾಚಾರವನ್ನು ಅನುಸರಿಸಿ ನಡೆಯುವುದರಲ್ಲಿ ಬಹಳ ಪ್ರೀತಿಯುಳ್ಳ ನಮ್ಮ ಜನರು ಈ ಕಾರ್ಯಗಳಿಗೆ ಶ್ರದ್ಧೆಯಿಂದ ಉದ್ಯುಕ್ತರಾಗುವರು.

ಮತ್ತು ಸರಕಾರದವರಾಗಿ ನಿಂತು ಈ ಏರ್ಪಾಡನ್ನು ಮಾಡದೆ, ಪ್ರಜೆಗಳಾಗಿ ಇಂಥಾ ಕಟ್ಟಳೆ ಗಳನ್ನು ಏರ್ಪಡಿಸಿಕೊಂಡಲ್ಲಿ, ಅವರು ಪೂರ್ವದಂತೆ ಎಲ್ಲಾ ಸ್ವಾತಂತ್ರ್ಯವನ್ನೂ ವಹಿಸಬಹುದು. ಮತ್ತು ಅವರ ಅಧಿಕಾರಕ್ಕೆ ತಕ್ಕ ಗೌರವವನ್ನೂ ತೋರಿಸುವೆವೆಂದು ಪ್ರಕಟಿಸಬೇಕು. ಮೇಲಾಗಿ ಈ ಗ್ರಾಮಪಂಚಾಯಿತ, ಷಹರಿನ ಸೆಟ್ಟಿವರ್ತಕರು, ಸಾಧಾರಣವಾದ ವ್ಯಾಜ್ಯಗಳನ್ನು ತೀರ್ಮಾನ ಮಾಡಿದರೆ, ಅವುಗಳನ್ನು ಸರಕಾರದವರು ತಳ್ಳಿಪಡಿ ಮಾಡುವದಿಲ್ಲವೆಂಬ ಭರವಸವನ್ನು ಕೊಡ ಬೇಕು. ಇಂಥಾ ಏರ್ಪಾಡನ್ನು ಮಾಡಿಕೊಂಡು ಗ್ರಾಮದ ಅಥವಾ ಷಹರಿನ ಆಡಳಿತವನ್ನು ನಡಿಸಿಕೊಳ್ಳುವದಕ್ಕೆ ನಮ್ಮ ಜನರಿಗೆ ಯೋಗ್ಯತೆ ಇಲ್ಲವೆಂತಲೂ, ಆದಕಾರಣ ಎಲ್ಲಾ ಮಾತಿಗೂ ಸರಕಾರದವರು ಪ್ರವೇಶಿಸಬೇಕೆಂತಲೂ, ಶ್ರೀಕಾರದ ತಲೇ ತಿಳಿಯದ ರೈತರಿಗೆ ಇಂಥಾ ದೊಡ್ಡ ವಿಷಯವು ಗೊತ್ತಾಗಲಾರದೆಂತಲೂ ಹೇಳುವ ಮಾತು ನಿಶ್ಚಯವಾಗಿ ತೋರುವದಿಲ್ಲ. ಓದು ಬರಹವನ್ನು ಕಲಿಯದೇ ಇದ್ದಾಗ್ಯೂ ರೈತರಿಗೂ ಸಾಧಾರಣ ಜನರಿಗೂ ತಮ್ಮ ಮತ್ತೂ ತಮ್ಮ ಗ್ರಾಮದ ಆಡಳಿತವನ್ನು ಸ್ವತಂತ್ರವಾಗಿ ನಡಿಸಿಕೊಳ್ಳುವ ಯೋಗ್ಯತೆಯು ಉಂಟೆಂಬುವ ಮಾತು ಷಹರುಗಳಲ್ಲಿಯೇ ಕೂತು ಲೋಲೋಪ್ತಿ ಪಡತಕ್ಕವರಿಗೆ ನಿಶ್ಚಯವೆಂದು ತೋರಲಾರದು. ಈ ವಿಷಯವನ್ನು ಪರೀಕ್ಷಿಸಿ ನೋಡಬಹುದು. ಸತ್ರ ದೇವಸ್ಥಾನಗಳ ಧರ್ಮಕರ್ತರೂ, ಗ್ರಾಮದ ಇತರ ಒಳಾಡಳಿತದವರೂ, ತಮ್ಮ ಕಾರ್ಯವನ್ನು ನಡಿಸತಕ್ಕ ವಿಷಯದಲ್ಲಿ ತೋರಿಸುವ ವಿವೇಕವೂ, ದೂರಾಲೋಚನೆಯೂ, ಮತ್ತು ನವರಾತ್ರಿಯ ಹಬ್ಬದಲ್ಲಿ ನಡೆಯುವ ಮೈಸೂರು ಮಹಾರಾಜ ರವರ ಪ್ರಜಾಪ್ರತಿನಿಧಿಗಳ ಸಭೆಗೆ ಬರತಕ್ಕ ರೈತರ ಮತ್ತು ವರ್ತಕರ ರಾಜ್ಯಾಂಗ ವಿಚಾರದ ಜಾಣ್ಮೆಯೂ, ನಾವು ಹೇಳುವ ಮಾತನ್ನು ದೃಢಪಡಿಸುವವು. ಸರಕಾರದವರು ಪ್ರವೇಶಿಸಿದ ಕಾರ್ಯದಲ್ಲೆಲ್ಲಾ ಅವರ ಸ್ವಪ್ರಯೋಜನವೂ ತಮ್ಮಗಳ ನಷ್ಟವೂ ಸೇರಿಕೊಂಡಿದೆಯೆಂದು ತಿಳಿದಿರಬಹುದಾದ ನಮ್ಮ ಜನರ ಅಭಿಪ್ರಾಯವೂ ನ್ಯಾಯವಾದದ್ದಲ್ಲ. ಆದರೂ ಪ್ರಜೆಗಳಿಗೆ ಇರುವ ಈ ಅಭಿಪ್ರಾಯವನ್ನು ಹೋಗಲಾಡಿಸಿ, ಪ್ರಜೆಗಳಾಗಿ ನಿಂತು ಮಾಡಿದ ಕಾರ್ಯವನ್ನು ತಾವು ಒಪ್ಪಿಕೊಳ್ಳುವೆವೆಂದು ಅವರಿಗೆ ಸರಕಾರದವರು ತಕ್ಕ ಭರವಸವನ್ನು ಕೊಡಬೇಕು. ಹೀಗಲ್ಲದೆ ಪ್ರಜೆಗಳ ಸ್ವಾತಂತ್ರ್ಯವು ವೃದ್ಧಿಯಾಗಬೇಕೆಂದು ಸರಕಾರದವರೇ ತಾವಾಗಿ ನಿಂತು ಮಾಡುವ ಕಾರ್ಯಕ್ಕೆ, ಅವರು ನಿರೀಕ್ಷಿಸಿದ ಫಲವು ಉಂಟಾಗಲಾರದೋ ಎಂದು ನಮಗೆ ಮನಸ್ಸು ಬೆದರುವುದು.

ಇದೂ ಅಲ್ಲದೆ ನಮ್ಮ ಇಂಡಿಯಾ ಸರಕಾರದವರು ಗ್ರಾಮಪಂಚಾಯಿತರ ಪದ್ಧತಿಯನ್ನೂ, ಅವರ ತೀರ್ಮಾನಗಳನ್ನೂ, ಕೋರ್ಟಿನವರು ಕೆಲವು ಸಂದರ್ಭಗಳಲ್ಲಿ ಒಪ್ಪಿಕೊಳ್ಳಬೇಕೆಂದು ತಕ್ಕ ಅಪ್ಪಣೆಯನ್ನು ಕೊಟ್ಟಲ್ಲಿ, ಸ್ಥಳಿಕ ಸ್ವತಂತ್ರಾಧಿಕಾರವು ಸಾಂಗವಾಗಿ ನಡೆದ ಹಾಗಾಗುವುದು. ಇದನ್ನು ಕುರಿತು ಮುಂದೆ ನಾವು ತಿಳಿಯಪಡಿಸುವೆವು.

ಮೈಸೂರು ವಿಶ್ವವಿದ್ಯಾನಿಲಯದ ತ್ರೈಮಾಸಿಕಗಳು

★ ಮಾನವಿಕ ಕರ್ಣಾಟಕ

★ ವಿಜ್ಞಾನ ಕರ್ಣಾಟಕ

★ ಪ್ರಬುದ್ಧ ಕರ್ಣಾಟಕ

ವಾರ್ಷಿಕ ಚಂದಾ

(ಪ್ರತಿಯೊಂದಕ್ಕೂ ಅಂಚೆ ವೆಚ್ಚ ಸೇರಿ)

ವಿದ್ಯಾರ್ಥಿಗಳಿಗೆ	....	ನಾಲ್ಕು ರೂಪಾಯಿ
ಇತರರಿಗೆ	....	ಆರು ರೂಪಾಯಿ
ಸಂಸ್ಥೆಗಳಿಗೆ	....	ಎಂಟು ರೂಪಾಯಿ

(ಆಜೀವ ಸದಸ್ಯತ್ವ : ನೂರು ರೂಪಾಯಿಗಳು)
(ಪ್ರತಿಯೊಂದಕ್ಕೂ)

ಡೈರೆಕ್ಟರ್
'ಪ್ರಸಾರಾಂಗ'
ಮಾನಸಗಂಗೋತ್ರಿ ಮೈಸೂರು–೫೭೦ ೦೦೬

ಮೈಸೂರು ವಿಶ್ವವಿದ್ಯಾನಿಲಯದ ಈಚಿನ ಪ್ರಕಟಣೆಗಳು

		ಬೆಲೆ
1.	ಕನ್ನಡ ಗ್ರಂಥಸೂಚಿ, ಸಂಪುಟ 4 (ಗದ್ಯ, ನಾಟಕ, ಸಣ್ಣಕತೆ, ಪ್ರಬಂಧ)	60-00
2.	ಕನ್ನಡ ಗ್ರಂಥಸೂಚಿ, ಸಂಪುಟ 5 (ಕಾದಂಬರಿ)	50-00
3.	ಜೈಮಿನಿ ಭಾರತ ಸಂಗ್ರಹ	13-00
4.	ಉತ್ತರ ಕನ್ನಡ ಜಿಲ್ಲೆಯ ಹವ್ಯಕರ ಹಾಡುಗಳು	9-00
5.	ವಿದ್ಯುತ್ಕಾಂತ ಸಿದ್ಧಾಂತ	21-00
6.	ಕನ್ನಡ ಒಡಪುಗಳು	3-50
7.	ಬಿಜಾಪುರ ಜಿಲ್ಲೆಯ ಲಾವಣಿಗಳು	7-00
8.	ಕೋಡಗದ ಮಾರಯ್ಯನ ವಚನಗಳು	5-00
9.	ಕಲೆಯ ನೆಲೆ	5-00
10.	ಬ್ರಿಟಿಷ್ ಪತ್ರಿಕೋದ್ಯಮ	3-00
11.	ಜೇನು ಸಾಕಣೆ	14-00
12.	ಜೇನ್ ಆಸ್ಟಿನ್	5-00
13.	ದ್ವಿತೀಯ ಭಾಷಾ ಬೋಧನೆ	9-00
14.	ವ್ಯವಸಾಯ ಪ್ರಗತಿ ಸಾಧನೆಯ ಸೂತ್ರಗಳು	5-00
15.	ಭಾರತೀಯ ನ್ಯಾಯ ಪದ್ಧತಿ	15-00
16.	ಮೌಲ್ಯ ಮತ್ತು ಬಂಡವಾಳ	25-00
17.	ಭೂಗೋಳ ವಿಜ್ಞಾನಕೋಶ	60-00
18.	ಸಂಪ್ರದಾಯದ ಹಾಡುಗಳು	20-00
19.	ಜಡವಸ್ತುವಿನ ಗುಣಧರ್ಮಗಳು	9-00
20.	ವಿಕಾಸ ಮನೋವಿಜ್ಞಾನ	40-00
21.	Current trends in Folklore	20-00
22.	Poverty of intellectualism in India	6-00
23.	Archaeology of Karnataka	23-00
24.	Problems of Rural industrialisation and Recenstruction	6-00
25.	Epigraphia Carnatica, Vol. VII	100-00